ವಿಶ್ವವಾಣಿ
ವಿಶ್ವಾಸವೇ ವಿಶ್ವ

ಮತ್ತೆ ಫ್ರಾನ್ಸ್‌ನಿಂದ 114 ರಫೇಲ್ ಕೊಳ್ಳಲಿದೆ ಭಾರತ

ಫ್ರಾನ್ಸ್ ದೇಶದಿಂದ ಮತ್ತೆ ಭಾರತ 114 ರಫೇಲ್ ಯುದ್ಧವಿಮಾನಗಳನ್ನು ಖರೀದಿಸಲು ನಿರ್ಧರಿಸಿದೆ. ಈ ಸಂಬಂಧ 3.25 ಲಕ್ಷ ಕೋಟಿ ರು. ಒಪ್ಪಂದಕ್ಕೆ ಫ್ರಾನ್ಸ್ ಮತ್ತು ಭಾರತ ಸರಕಾರಗಳು ಸದ್ಯದಲ್ಲೇ ಸಹಿ ಹಾಕಲಿವೆ ಎಂದು ತಿಳಿಸಲಾಗಿದೆ.

ಸೊಂಪಾದ ಪುಟಗಳು

ಮತದಾರರ ಪಟ್ಟಿ ಪರಿಷ್ಕರಣೆ ವಿರೋಧದ ಹಿಂದಿನ ಗುಟ್ಟೇನು?
ಜನಪಥ
ರಾಘವಶರ್ಮ ನಿಡ್ಲೆ 6

ನಮ್ಮ ಮೆಟ್ರೋ, ನಿಮ್ಮದೂ ಆಗುವುದು ಯಾವಾಗ ?
ಲೋಕಮತ
ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ

ನೀವು ಜೀವನದಲ್ಲಿ ಎಷ್ಟು ಎತ್ತರಕ್ಕೆ ಏರಿದ್ದೀರಿ ಎಂಬುದು ನಿಮ್ಮ ಯಶಸ್ಸಲ್ಲ. ನಿಮ್ಮ ಜತೆ ಎಷ್ಟು ಜನರನ್ನು ಕರೆದುಕೊಂಡು ಹೋಗಿದ್ದೀರಿ ಎಂಬುದು ನಿಮ್ಮ ನಿಜವಾದ ಗೆಲುವು ಮತ್ತು ಯಶಸ್ಸು.

ವಕ್ರತುಂಡೋಕ್ತಿ

ನಮ್ಮ ಸಮಾಧಿಯನ್ನು ನಾವೇ ಸಿದ್ಧಪಡಿಸಿಕೊಳ್ಳುವುದು ಉತ್ತಮ ಕ್ರಮವೇ. ಹಾಗಂತ ಸಾಯಲು ಹೋಗಬಾರದು.

ಹಿರಿಯ ಪತ್ರಕರ್ತ, ಪರಿಷತ್ ಮಾಜಿ ಸದಸ್ಯ ಪಿ.ರಾಮಯ್ಯ ನಿಧನ

ಬೆಂಗಳೂರು: ಹಿರಿಯ ಪತ್ರಕರ್ತ ಹಾಗು ವಿಧಾನ ಪರಿಷತ್ತಿನ ಮಾಜಿ ಸದಸ್ಯ ಪಿ. ರಾಮಯ್ಯ (93)ಅವರು ಮಂಗಳವಾರ ನಿಧನರಾಗಿದ್ದಾರೆ .ಬೆಂಗಳೂರಿನ ಮಲ್ಲಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ರಾಮಯ್ಯ ಅವರು ವಿವಿಧ ಅಂಗಾಂಗ ವೈಫಲ್ಯದಿಂದಾಗಿ ರಾತ್ರಿ 9 ಗಂಟೆಗೆ ಆಸ್ಪತ್ರೆಯಲ್ಲಿ ಅಸುನೀಗಿದರು. 1933 ಸೆಪ್ಟೆಂಬರ್ 12ರಂದು ಜನಿಸಿದ ರಾಮಯ್ಯ, ದಿ ಹಿಂದೂ ಪತ್ರಿಕೆಯಲ್ಲಿ ಐದು ದಶಕಗಳ ಕಾಲ ವಿವಿಧ ಹುದ್ದೆಗಳಲ್ಲಿ ಪತ್ರಕರ್ತರಾಗಿ ಕರ್ತವ್ಯ ನಿರ್ವಹಿಸಿದ್ದರು. ಕರ್ನಾಟಕ ರಾಜ್ಯೋತ್ಸವ, ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪಡೆದಿದ್ದರು.

ಫೆ.17ರಿಂದ 19 ಫ್ರಾನ್ಸ್ ಅಧ್ಯಕ್ಷ ಭಾರತ ಪ್ರವಾಸ

ದೆಹಲಿ: ಫ್ರಾನ್ಸ್ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರಾನ್ ಫೆ.17ರಿಂದ ಮೂರು ದಿನಗಳ ಕಾಲ ಭಾರತಕ್ಕೆ ಆಗಮಿಸಲಿದ್ದಾರೆ ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮಂಗಳವಾರ ತಿಳಿಸಿದೆ. ಫೆ.19ರವರೆಗಿನ ಅಧಿಕೃತ ಭೇಟಿ ವೇಳೆ ರಕ್ಷಣಾ ಕ್ಷೇತ್ರದಲ್ಲಿ ಪರಸ್ಪರ ಸಹಕಾರ, 2047ರ ಹೊಸದಿಗಂತ ಮಾರ್ಗಸೂಚಿ, ಇಂಡೋ-ಫೆಸಿಫಿಕ್ ವಲಯದಲ್ಲಿ ಸಹಕಾರ ಸೇರಿದಂತೆ ಪ್ರಧಾನಿ ನರೇಂದ್ರ ಮೋದಿ ಅವರ ಜತೆ ದ್ವಿಪಕ್ಷೀಯ ಚರ್ಚೆ ನಡೆಸಲಿದ್ದಾರೆ. ಮ್ಯಾಕ್ರಾನ್ ಎಐ ಸಭೆಯಲ್ಲೂ ಭಾಗಿಯಾಗಲಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಅಧ್ಯಯನದ ನೆಪದಲ್ಲಿ ರಾಜ್ಯದ ಶಾಸಕರಿಗೆ ಫಾರಿನ್ ಪ್ರವಾಸ ಭಾಗ್ಯ

ಸುದ್ದಿ



ಬಹುತೇಕ ಮನುಷ್ಯನ ಪ್ರಚೋದನೆಯಿಂದಲೇ ಹುಲಿಗಳ ದಾಳಿ | ಸಫಾರಿ ಭಾಗದಲ್ಲಿ ಹುಲಿಗಳು ದಾಳಿ ಮಾಡಲ್ಲ

ಅಮಾಯಕ ಹುಲಿಗಳು ಮಾಡಿದ ತಪ್ಪಾದರೂ ಏನು?

ರಂಜಿತ್ ಎಚ್.ಅಶ್ವತ್ಥ, ಬೆಂಗಳೂರು

ಹುಲಿಯಷ್ಟೇ ಅಲ್ಲದೇ ಬಹುತೇಕ ಕಾಡುಪ್ರಾಣಿಗಳು ಮನುಷ್ಯ ಎನ್ನುವ 'ಪ್ರಾಣಿ'ಯಿಂದ ಅಂತರ ಕಾಯ್ದುಕೊಳ್ಳಲು ಪ್ರಯತ್ನಿಸುತ್ತವೆ. ಆದರೆ ಮನುಷ್ಯನೇ ಪ್ರಚೋದಿಸಿ, ಅವುಗಳ ಹೊಡೆತಕ್ಕೆ ಬಲಿಪಶುವಾಗುತ್ತಾನೆ. ಆದರೂ, ಮಾನವ ತನ್ನ ತಪ್ಪನ್ನು ಒಪ್ಪಿಕೊಳ್ಳದೇ ವನ್ಯಜೀವಿಗಳನ್ನು 'ಶಿಕ್ಷಿಸಲು' ಮುಂದಾಗುತ್ತಾನೆ. ಸದ್ಯ ಸಫಾರಿ ವಿಷಯದಲ್ಲಿ ಹುಲಿಗಳ ತಪ್ಪಿಲ್ಲದಿದ್ದರೂ, ಹುಲಿಗಳ ದಾಳಿಯನ್ನು ತೋರಿಸಿ ಅರಣ್ಯ ಇಲಾಖೆ ಇದೇ ಅವೈಜ್ಞಾನಿಕ ತೀರ್ಮಾನ ಕೈಗೊಂಡಿದೆ.

ಬಂಡೀಪುರ, ನಾಗರಹೊಳೆ ಭಾಗದಲ್ಲಾಗಿರುವ ಹುಲಿ ದಾಳಿಗೂ, ಸಫಾರಿಗೂ ಸಂಬಂಧವಿಲ್ಲದಿದ್ದರೂ ಎರಡಕ್ಕೂ ಸಂಬಂಧ ಕಲ್ಪಿಸಿ ಅರಣ್ಯ ಇಲಾಖೆ ಸಫಾರಿಯನ್ನು ಸ್ಥಗಿತಗೊಳಿಸಿದೆ. ಆದರೆ ಈ ಭಾಗದಲ್ಲಿ ಹುಲಿ ದಾಳಿಯ ಹಿಂದಿನ ಉದ್ದೇಶ

ವೇನು? ಮನುಷ್ಯರಿಂದ ಹುಲಿಗಳಿಗೆ ಆಗಿರುವ ತೊಂದರೆ ಏನು ಎನ್ನುವ ಬಗ್ಗೆ ಅರಣ್ಯ ಇಲಾಖೆ ಪರಿಶೀಲಿಸುತ್ತಿಲ್ಲ. ಒಂದು ವೇಳೆ ವೈಜ್ಞಾನಿಕ ಕಾರಣ ಹುಡುಕಿ ನೋಡಿದ್ದರೆ, ಸಫಾರಿಯನ್ನು ನಿರ್ಬಂಧಿಸುವ ಬದಲು ಹುಲಿಗಳನ್ನು ಪ್ರಚೋದಿಸುವ ಜನರನ್ನು ನಿಯಂತ್ರಿಸುವ ಕೆಲಸವನ್ನು ಮಾಡುತ್ತಿತ್ತು. → 4

ಏನಿದು ಹುಲಿ ಗುಮ್ಮ?

- ಹುಲಿಗಳ ವಿಚಾರದಲ್ಲಿ ಗುಮ್ಮ ಬಂತು ಗುಮ್ಮ ಎಂಬ ರೀತಿಯ ಅಭಿಪ್ರಾಯವೊಂದಿದೆ
- ಹುಲಿಗಳು ಕಂಡಕಂಡಲ್ಲೆಲ್ಲ ದಾಳಿ ಮಾಡುತ್ತವೆ ಎಂಬುದೇ ಅವೈಜ್ಞಾನಿಕ
- ಅನಿವಾರ್ಯವಾದರೆ, ಮನುಷ್ಯನಿಂದ ಭೀತಿಗೊಳಗಾದರೆ ಮಾತ್ರ ದಾಳಿ
- ಸಫಾರಿ ನಡೆಯುವ ಭಾಗದಲ್ಲಿ ಹುಲಿಗಳು ಮನುಷ್ಯನ ನಿತ್ಯ ಪರಿಚಯದಿಂದ ವಾಹನ ಸಂಚಾರಕ್ಕೆ ಹೊಂದಿಕೊಂಡಿರುತ್ತವೆ
- ಅವುಗಳಿಗೆ ಆಹಾರದ ಸಮಸ್ಯೆಯೂ ಇಲ್ಲದಿರುವುದರಿಂದ, ಸಫಾರಿಗೆ ಬರುವವರ ಮೇಲೆ ದಾಳಿ ಪ್ರಮೇಯವೂ ಇಲ್ಲ

ಸಫಾರಿ ಹುಲಿಗಳ ಸವಾರಿ ಸ್ನೇಹ

ಇನ್ನು ದೇಶದಲ್ಲಿ 50ಕ್ಕೂ ಹೆಚ್ಚು ಹುಲಿ ಸಫಾರಿಗಳಿವೆ. ಈ ಯಾವ ಸಫಾರಿಯಲ್ಲಿಯೂ ಹುಲಿಗಳು ಪ್ರವಾಸಿಗರ ಮೇಲೆ ದಾಳಿ ಮಾಡಿರುವ ಉದಾಹರಣೆ ಇಲ್ಲ. ಅಷ್ಟಕ್ಕೂ ಸಫಾರಿ ಪ್ರದೇಶದಲ್ಲಿರುವ ಹುಲಿಗಳು ಸಫಾರಿ ವಾಹನಗಳ ಸಂಚಾರಕ್ಕೆ 'ಹೊಂದಿಕೊಂಡಿರುತ್ತವೆ'. ಆ ವಾಹನಗಳು ನಮಗೆ ಮಾರಕವಲ್ಲ ಎನ್ನುವುದು ಖಾತ್ರಿಯಾಗಿರುವುದರಿಂದ, ರಸ್ತೆ ಪಕ್ಕದಲ್ಲಿಯೇ ಮಲಗಿದ್ದರೂ, ಕೆಲವೊಮ್ಮೆ ಸಫಾರಿ ವಾಹನಗಳು ಹುಲಿಗಳಿಗೆ ತೀರಾ ಹತ್ತಿರ ಎನ್ನುವಷ್ಟರ ಮಟ್ಟಿಗೆ ಹೋದರೂ ಅವು ದಾಳಿ ಮಾಡುವುದಿಲ್ಲ. ಹಾಗೇ ನೋಡಿದರೆ, ಬಂಡೀಪುರ ಸಫಾರಿಯಲ್ಲಿದ್ದ 'ಪ್ರಿನ್ಸ್' ಎನ್ನುವ ಬಂಗಾಳಿ ಹುಲಿ 2007ರಿಂದ 2017ರ ಆಸುಪಾಸಿನವರೆಗೂ ಸಫಾರಿಗೆ ತೆರಳುವ ಪ್ರವಾಸಿಗರಿಗೆ ದರ್ಶನ ನೀಡುವುದಷ್ಟೇ ಅಲ್ಲದೇ, ಫೋಟೋ ತೆಗೆಯುವ ಅದೆಷ್ಟೋ ಪ್ರವಾಸಿಗರಿಗೆ 'ಪೋಸ್' ಕೊಡುತ್ತಿತ್ತು. ಪ್ರಿನ್ಸ್ ಹುಲಿ ಕೊಡುವ ಫೋಟೋ ಪೋಸ್‌ಗೆ ವಿಶ್ವವಿಖ್ಯಾತಿಯಾಗಿತ್ತು. ಕೇವಲ ಪ್ರಿನ್ಸ್ ಒಂದೇ ಅಲ್ಲದೇ ಸಫಾರಿ ಭಾಗದಲ್ಲಿರುವ ಅನೇಕ ಹುಲಿಗಳು ಸಫಾರಿ ವಾಹನಸ್ನೇಹಿ ಆಗಿರುತ್ತದೆ ಎನ್ನುವುದು ವಾಸ್ತವ.

ಕರ್ನಾಟಕ ಸರಕಾರದಲ್ಲಿ ನಾಯಕತ್ವ ಬದಲಾವಣೆ ಇದೆಯೋ, ಇಲ್ಲವೋ? ಇದ್ದರೆ ಯಾವಾಗ? ಮಾಡುವುದಿಲ್ಲವಾದರೆ ಮತ್ತೆ ಕೇಳಲ್ಲ: ಡಿಕೆಶಿ ಪಟ್ಟು ಎರಡೆರಡು ಬಾರಿ ವಿಮಾನ ಟಿಕೆಟ್ ರದ್ದು; ಕಡೆಗೂ ದೆಹಲಿಗೆ ಪ್ರವಾಸ

ಏನು ಮಾಡ್ತೀರಿ ಹೇಳಿ: ಹೈಗೆ ಡಿಕೆ ಖಡಕ್ ಪ್ರಶ್ನೆ?

ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ ಶುರುವಾಗಿರುವ 'ನಾಯಕತ್ವ' ಗೊಂದಲಕ್ಕೆ ಸಂಬಂಧಿಸಿದಂತೆ 'ಸ್ಪಷ್ಟನೆ' ಪಡೆಯಲು ಮತ್ತೊಂದು ಸುತ್ತಿನ ದೆಹಲಿ ಯಾತ್ರೆಯನ್ನು ಮಂಗಳವಾರ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೈಗೊಂಡಿದ್ದಾರೆ. ಮುಖ್ಯ ಮಂತ್ರಿ ಬದಲಾವಣೆಗೆ ಸಂಬಂಧಿಸಿದ್ದಂತೆ ತಣ್ಣಗಾಗಿದ್ದ ಗೊಂದಲ ಯತೀಂದ್ರ ಅವರ 'ನಮ್ಮಪ್ಪನೇ ಐದು ವರ್ಷ

ಸಿಎಂ' ಎನ್ನುವ ಹೇಳಿಕೆಯಿಂದ ಮತ್ತೆ ಶುರುವಾಗಿದೆ. ಇದರ ಬೆನ್ನಲ್ಲೇ ರಾಜ್ಯ ಬಜೆಟ್ ಸಭೆಯನ್ನೂ ಬಿಟ್ಟು ಅಸ್ಸಾಂ ಚುನಾವಣೆಯ ನೆಪದಲ್ಲಿ ಡಿ.ಕೆ.ಶಿವಕುಮಾರ್ ದೆಹಲಿಗೆ ತೆರಳಿರುವುದು, ಅಲ್ಲಿ ನಾಯಕರನ್ನು ಭೇಟಿಯಾಗುವುದಾಗಿ ಹೇಳಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆಯುತ್ತಿರುವ ಬಜೆಟ್ ಸಭೆಯಲ್ಲಿ ಮಂಗಳವಾರ ನೀರಾವರಿ ಹಾಗೂ ಬೆಂಗಳೂರು ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ಸಭೆ ನಿಗದಿಯಾಗಿತ್ತು. ಆದರೆ ಈ ಪ್ರಮುಖ ಸಭೆಗೂ ಗೈರಾಗಿ ದೆಹಲಿಗೆ ಡಿ.ಕೆ.ಶಿವಕುಮಾರ್ ತೆರಳಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ. ಮೂಲಗಳ ಪ್ರಕಾರ, ದೆಹಲಿ ಪ್ರವಾಸದಲ್ಲಿ ಪಕ್ಷದ ಹೈಕಮಾಂಡ್‌ನಿಂದ ನಾಯಕತ್ವ ಬದಲಾವಣೆ ಇದೆಯೋ ಇಲ್ಲವೋ? ಇದ್ದರೂ ಯಾವಾಗ ಬದಲಾವಣೆ ಎನ್ನುವ ದಿನಾಂಕವನ್ನು ಕೇಳಿಕೊಂಡು ಬರಲು ತೀರ್ಮಾನಿಸಿದ್ದಾರೆ ಎನ್ನಲಾಗಿದೆ. → 4

ಹೈಕಮಾಂಡ್ ಕರೆದರೆ ಹೋಗ್ತೀನಿ: ಸಿಎಂ ಸಿದ್ದು

ಶಿವಕುಮಾರ್ ದೆಹಲಿ ಪ್ರವಾಸಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದು, ಹೈಕಮಾಂಡ್ ಹೇಳಿದಂತೆ ನಡೆದುಕೊಳ್ಳುತ್ತೇನೆ ಎಂದು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ಶಿವಕುಮಾರ್ ಹೇಳಿರುವ 'ನಾನು ಸಿದ್ದರಾಮಯ್ಯ ಕದ್ದುಮುಚ್ಚಿ ಮಾತನಾಡಿಲ್ಲ' ಎಂಬ ಬಗ್ಗೆ ನಾನು ಪ್ರತಿಕ್ರಿಯಿಸುವುದಿಲ್ಲ. ಅವರನ್ನೇ ಕೇಳಿ ಎಂದರು. ರಾಜ್ಯದ ಬಜೆಟ್‌ಗೆ ಸಂಬಂಧಿಸಿದಂತೆ ಸಭೆಗಳಿವೆ. ಆದ್ದರಿಂದ ಹೈಕಮಾಂಡ್ ಕರೆದರೆ ಮಾತ್ರ ದೆಹಲಿಗೆ ಹೋಗುವೆ. ಇಲ್ಲದಿದ್ದರೆ ನಾನೇಕೆ ದೆಹಲಿಗೆ ಹೋಗಲಿ? ಎಂದು ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

VS

ನಾನು ಸಿಎಂ ಕದ್ದುಮುಚ್ಚಿ ಮಾತಾಡಿಲ್ಲ: ಡಿಸಿಎಂ ಡಿಕೆ

ದೆಹಲಿಗೆ ತೆರಳುವ ಮೊದಲು ಸುದ್ದಿಗಾರರೊಂದಿಗೆ ಮಾತನಾಡಿದ ಡಿಸಿಎಂ ಶಿವಕುಮಾರ್, ಅಧಿಕಾರ ಹಂಚಿಕೆಯ ವಿಚಾರದಲ್ಲಿ ನನಗೆ ಯಾವುದೇ ಗೊಂದಲ ಇಲ್ಲ. ಗೊಂದಲ ಬೇರೆಯವರಿಗೆ ಇರಬಹುದು. ನಾನು ಸಿದ್ದರಾಮಯ್ಯ ಏನು ಮಾತನಾಡಿಕೊಂಡಿದ್ದೇವೆ ಎಂಬುದು ನಮಗೆ ಗೊತ್ತು. ಕದ್ದುಮುಚ್ಚಿ ಮಾತನಾಡಿಕೊಂಡಿಲ್ಲ. ವರಿಷ್ಠರ ಸಮ್ಮುಖದಲ್ಲೇ ಮಾತನಾಡಿದ್ದೇವೆ. ದೆಹಲಿಯಲ್ಲಿ ಎಐಸಿಸಿ ನಾಯಕರ ಜತೆ ಸಭೆ ಇದೆ. ದೆಹಲಿಗೆ ಹೋದ ಮೇಲೆ ಎಲ್ಲ ನಾಯಕರನ್ನು ಭೇಟಿ ಮಾಡೋ ಮಾಡುತ್ತೇನೆ. ಯಾರ್‍ಯಾರು ಸಿಗುತ್ತಾರೋ ಎಲ್ಲರನ್ನು ಭೇಟಿ ಮಾಡುತ್ತೇನೆ ಎಂದರು.

ಲೋಕಸಭೆಯಲ್ಲಿ ರಾಹುಲ್‌ಗೆ ಮಾತನಾಡಲು ಅವಕಾಶ ನೀಡಿಲ್ಲ ಕಾಂಗ್ರೆಸ್ ಆಕ್ರೋಶ, ನೋಟಿಸ್, ಸಹಿ ಹಾಕಿಲ್ಲ ಮಿತ್ರ ಟಿಎಂಸಿ! ಇತ್ಯರ್ಥವಾಗುವವರೆಗೆ ಕಲಾಪಕ್ಕೆ ಸ್ಪೀಕರ್ ಬಿರ್ಲಾ ಬರುವುದಿಲ್ಲ?

ಸ್ಪೀಕರ್ ಬಗ್ಗೆ ವಿಶ್ವಾಸ ಇಲ್ರೀ: ಕೈ ನೋಟಿಸ್

ದೆಹಲಿ: ಜ.ನರವಣೆಯವರ ಪುಸ್ತಕದ ಸಾಲುಗಳನ್ನು ಲೋಕಸಭೆಯಲ್ಲಿ ಉಲ್ಲೇಖಿಸಲು ರಾಹುಲ್ ಗಾಂಧಿ ಯತ್ನಿಸಿದ್ದು, ಅದಕ್ಕೆ ಸ್ಪೀಕರ್ ಓಂ ಬಿರ್ಲಾ ಅವಕಾಶ ನೀಡದೇ ಇದ್ದದ್ದು ಈಗ ತಾರಕ್ಕೇರಿದೆ. ಸತತವಾಗಿ ರಾಹುಲ್‌ಗೆ ಅವಕಾಶ ನೀಡದಿದ್ದಾಗ ಅದನ್ನು ಪ್ರತಿಭಟಿಸಿದ 8 ಕಾಂಗ್ರೆಸ್ ಸಂಸದರು ಅಮಾನತಾದರು. ಇದರ ಬೆನ್ನಲ್ಲೇ ಮಂಗಳವಾರ ಕಾಂಗ್ರೆಸ್ ಓಂ ಬಿರ್ಲಾ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ನಿರ್ಧರಿಸಿ, ನೋಟಿಸ್ ನೀಡಿದೆ. ಇದರ ಪರಿಣಾಮ ಓಂ ಬಿರ್ಲಾ ಈ ವಿಷಯ ಇತ್ಯರ್ಥವಾಗುವವರೆಗೆ ಸದನಕ್ಕೆ ಬರದೇ ಇರಲು ತೀರ್ಮಾನಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಸ್ಪೀಕರ್ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸಬೇಕಾದರೆ ಕನಿಷ್ಠ 100 ಸಂಸದರ ಸಹಿ ಬೇಕು. ಈಗಾಗಲೇ 120 ಸಂಸದರು ಸಹಿ ಹಾಕಿದ್ದಾರೆ. ಮಂಗಳವಾರವೂ ಅವಿಶ್ವಾಸ ಮಂಡಿಸುವ ವಿಚಾರದಲ್ಲಿ ದೀರ್ಘ ಮಾತುಕತೆ ನಡೆದು, ನೋಟಿಸ್ ನೀಡಲಾಗಿದೆ. ಗಮನಾರ್ಹ ಸಂಗತಿಯೆಂದರೆ ಕಾಂಗ್ರೆಸ್ ಮಿತ್ರಪಕ್ಷ ಟಿಎಂಸಿ ಈ ನಿರ್ಣಯಕ್ಕಿನ್ನು ಸಹಿ ಹಾಕಿಲ್ಲ. ಈ ಕುರಿತು ಪ್ರತಿಕ್ರಿಯಿಸಿರುವ ಅಭಿಷೇಕ್ ಬ್ಯಾನರ್ಜಿ, ಸ್ಪೀಕರ್ ವಿರೋಧಪಕ್ಷಗಳ ಮನವಿಗೆ ಬೆಂಬಲ ನೀಡದಿದ್ದರೆ ಮಾತ್ರ ನಾವು ಸಹಿ ಹಾಕುತ್ತೇವೆ ಎಂದು ಹೇಳಿದ್ದಾರೆ. → 4

ಹೇಗಿದೆ ಬಲಾಬಲ?	ಎನ್‌ಡಿಎ ಸಂಸದರು	ವಿಪಕ್ಷ ಬಲಾಬಲ	ಬಹುಮತ ಸಂಖ್ಯೆ
	293	238	272

ವಿರೋಧಪಕ್ಷಗಳು ಅನಿವಾರ್ಯ ಪರಿಸ್ಥಿತಿಯಲ್ಲಿ ಇಂತಹ ನಿರ್ಧಾರಕ್ಕೆ ಬಂದಿವೆ. ನಮಗೆ ಸಾಂವಿಧಾನಿಕ ಶಿಷ್ಟಾಚಾರದ ಮೇಲೆ ನಂಬಿಕೆಯಿದೆ. ಸ್ಪೀಕರ್ ವಿರುದ್ಧ ಇಂತಹ ನಿರ್ಣಯ ಮಾಡುವುದಕ್ಕೆ ನಮಗೆ ನೋವಿದೆ. ಆದರೆ ಸಾರ್ವಜನಿಕ ಹಿತವಿರುವ ಸಂಗತಿಗಳನ್ನು ಪ್ರಸ್ತಾಪಿಸಲು ವಿರೋಧಪಕ್ಷಗಳ ನಾಯಕರಿಗೆ ಸತತವಾಗಿ ಅವಕಾಶ ನಿರಾಕರಿಸುತ್ತಿರುವ ಬಗ್ಗೆ ನಮಗೆ ಆಕ್ರೋಶವಿದೆ.
-ಮಾಣಿಕ್ಕಂ ಟಾಗೋರ್, ಕಾಂಗ್ರೆಸ್ ಸಂಸದ

ಪ್ರಧಾನಿ ಸ್ಥಾನದ ಬಳಿ ಕೈ ಮಹಿಳಾ ಸಂಸದರ ಪ್ರತಿಭಟನೆ

ಫೆ.4ರಂದು ಹಲವು ಕಾಂಗ್ರೆಸ್ ಮಹಿಳಾ ಸಂಸದೆಯರು ಪ್ರಧಾನಿ ಸ್ಥಾನದ ಬಳಿ ಬಂದು ಪ್ರತಿಭಟನೆ ನಡೆಸಿದ್ದಾರೆ. ಇಂತಹ ಅತಿ ಅವಮಾನಕರ ನಡವಳಿಕೆಯ ಬಗ್ಗೆ ಕಾಂಗ್ರೆಸ್ ಮಾತ್ರ ಹೆಮ್ಮೆ ಪಡಬೇಕು ಎಂದು ಕಿರಣ್ ರಿಜಿಜು ಟ್ವೀಟ್ ಮಾಡಿ ವಿಡಿಯೋ ಬಿಡುಗಡೆ ಮಾಡಿದ್ದಾರೆ. ಒಂದು ವೇಳೆ ಬಿಜೆಪಿ ಮಹಿಳಾ ಸಂಸದೆಯರಿಗೆ ಪರಿಸ್ಥಿತಿ ನಿಭಾಯಿಸಲು ಬಿಟ್ಟಿದ್ದರೆ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿತ್ತು. ನಾವು ಸಂಸತ್ತಿನ ಘನತೆ ಕಾಪಾಡಲು ಬಯಸುತ್ತೇವೆ ಎಂದು ರಿಜಿಜು ಹೇಳಿದ್ದಾರೆ.

ಅಸ್ತಿತ್ವದಲ್ಲಿಲ್ಲ ಎನ್ನಲಾಗಿದ್ದ ಪುಸ್ತಕದ ಪ್ರತಿ ತೋರಿಸಿದ ರಾಹುಲ್ ಪುಸ್ತಕ ಪ್ರಕಟಿಸಿಲ್ಲ: ಪೆಂಗ್ವಿನ್ | ಸುಳ್ಳು ಹೇಳಿದ್ಯಾರು?: ಗಾಂಧಿ

ಜನರಲ್ ನರವಣೆ ಪುಸ್ತಕ ವಿವಾದಕ್ಕೆ ಅಚ್ಚರಿ ತಿರುವು



ನವದೆಹಲಿ: ಮಾಜಿ ಭೂಸೇನಾ ಮುಖ್ಯಸ್ಥ ಜನರಲ್ ಎಂ.ಎಂ.ನರವಣೆ ಅವರ ಅಪ್ರಕಟಿತ ಆತ್ಮಚರಿತ್ರೆ ಫೋರ್ ಸ್ಟಾರ್ಸ್ ಆಫ್ ಡೆಸ್ಟಿನಿ ಪುಸ್ತಕ ಈಗ ವಿವಾದದ ಕೇಂದ್ರವಾಗಿದೆ. ಪುಸ್ತಕದ ಬಿಡುಗಡೆ ಹಕ್ಕನ್ನು ಹೊಂದಿರುವ ಪೆಂಗ್ವಿನ್ ರ್‍ಯಾಂಡಮ್ ಹೌಸ್ ಪ್ರಕಾಶನ, ನಾನು ಪುಸ್ತಕವನ್ನು ಮುದ್ರಿಸಿಲ್ಲ, ಡಿಜಿಟಲ್, ಪಿಡಿಎಫ್ ಸೇರಿ ಯಾವುದೇ ರೂಪದಲ್ಲಾಗಲೀ ಅದನ್ನು ವಿತರಿಸಿಲ್ಲ. ಅದಕ್ಕೆಲ್ಲ ಒಂದು ಕ್ರಮವಿದೆ. ನಾವದನ್ನು ಅನುಸರಿಸಿದ್ದೇವೆ ಎಂದು ಸ್ಪಷ್ಟನೆ ನೀಡಿದೆ. ಇದೇ ವಿಚಾರವನ್ನು ದೆಹಲಿ ಪೊಲೀಸರು ಎಫ್‌ಐಆರ್ ದಾಖಲಿಸಿ ತನಿಖೆ ಮಾಡುತ್ತಿದ್ದಾರೆ.

ಪೆಂಗ್ವಿನ್ ಹೇಳಿಕೆ ಬೆನ್ನಲ್ಲೇ ಇದುವರೆಗೆ ಸುಮ್ಮನಿದ್ದ ಜ.ನರವಣೆ ಟ್ವೀಟ್ ಮಾಡಿ, ಅಲ್ಲಿ ಪೆಂಗ್ವಿನ್ ಹೇಳಿಕೆಯನ್ನೇ ಯಥಾವತ್ ಹಾಕಿ, ಇದೇ ಸದ್ಯದ ಸ್ಥಿತಿ ಎಂದು ಹೇಳಿದ್ದಾರೆ. ಅದರ ಹೊರತು ಅವರು ಪುಸ್ತಕ ಮುದ್ರಣವಾಗಿದ್ದು ಹೇಗೆ, ಪಿಡಿಎಫ್ ಸಿಕ್ಕಿರುವುದು ಹೇಗೆ ಎನ್ನುವುದಕ್ಕೆ ಯಾವುದೇ ವಿವರಣೆ ನೀಡಿಲ್ಲ. ಈ ವಿಚಾರ ರಾಷ್ಟ್ರಾದ್ಯಂತ ಚರ್ಚೆ ಗೊಳಗಾಗಲು ಕಾರಣವಾಗಿರುವ ರಾಹುಲ್ ಗಾಂಧಿ ಪ್ರತಿಕ್ರಿಯಿಸಿ ಇಡೀ ವಿಚಾರಕ್ಕೆ ಇನ್ನೊಂದು ತಿರುವು ನೀಡಿದ್ದಾರೆ. → 4

ಪೆಂಗ್ವಿನ್ ಹೇಳಿದ್ದು

ಈ ಪುಸ್ತಕದ ಪ್ರಕಟಣೆ ಹಕ್ಕನ್ನು ನಾವು ಹೊಂದಿದ್ದೇವೆ. ಆದರೆ ಅದನ್ನು ಮುದ್ರಿಸಿಲ್ಲ, ಯಾವುದೇ ರೂಪದಲ್ಲಿ ಬಿಡುಗಡೆ ಮಾಡಿಲ್ಲ. ಮುದ್ರಣ, ಪಿಡಿಎಫ್ ಅಥವಾ ಡಿಜಿಟಲ್ ಸ್ವರೂಪದಲ್ಲಿ ಪ್ರಸ್ತುತ ಚಲಾವಣೆಯಲ್ಲಿರುವ ಪುಸ್ತಕದ ಯಾವುದೇ ಆವೃತ್ತಿಯು ಹಕ್ಕುಸ್ವಾಮ್ಯ ಉಲ್ಲಂಘನೆಯಾಗಿದೆ.

ಜ.ನರವಣೆ ಹೇಳಿದ್ದು

ಪೆಂಗ್ವಿನ್ ಸಂಸ್ಥೆ ಏನು ಸ್ಪಷ್ಟೀಕರಣ ನೀಡಿದೆಯೋ, ಅದನ್ನೇ ನರವಣೆಯವರು ಮತ್ತೊಮ್ಮೆ ಟ್ವೀಟ್ ಮಾಡಿದ್ದಾರೆ. ಈ ಕುರಿತು ಸದ್ಯದ ಸ್ಥಿತಿ ಇಷ್ಟು ಮಾತ್ರ ಎಂದಿದ್ದಾರೆ. ಅವರು ಹೆಚ್ಚುವರಿಯಾಗಿ ಏನನ್ನೂ ಹೇಳಿಲ್ಲ.

ರಾಹುಲ್ ಹೇಳಿದ್ದು

2023ರಲ್ಲೇ ನರವಣೆಯವರು ಈ ಪುಸ್ತಕವನ್ನು ಕೊಳ್ಳಲು ಈ ಲಿಂಕ್ ಅನ್ನು ಒತ್ತಿ ಎಂದು ಟ್ವೀಟ್ ಮಾಡಿದ್ದರು. ಈ ಪುಸ್ತಕ ಮುದ್ರಣವೇ ಆಗಿಲ್ಲ ಎಂದು ಕೇಂದ್ರ ಸರಕಾರ ಹೇಳಿದೆ. ಅದು ಇದೇ ಎನ್ನುವುದಕ್ಕೆ ನನ್ನ ಕೈಯಲ್ಲಿರುವ ಪುಸ್ತಕವೇ ಸಾಕ್ಷಿ. ನಾನು ಮುದ್ರಿಸಿಲ್ಲ ಎಂದು ಪೆಂಗ್ವಿನ್ ಹೇಳುತ್ತಿದೆ. ನನಗೆ ನರವಣೆ ಸತ್ಯ ಹೇಳುತ್ತಾರೆಂಬ ನಂಬಿಕೆಯಿದೆ. ನೀವು ಪೆಂಗ್ವಿನ್ ಅನ್ನು ನಂಬುತ್ತೀರಾ?

ವಿಧಾನಸೌಧದಲ್ಲೇ ಚಿನ್ನ, ಹಣ ಕಳವು

ಬೆಂಗಳೂರು: ರಾಜ್ಯದ ಶಕ್ತಿ ಕೇಂದ್ರ ವಿಧಾನ ಸೌಧದಲ್ಲಿನ ಸಚಿವರ ಕಚೇರಿಯಲ್ಲಿಯೇ ಸರಕಾರಿ ಸಿಬ್ಬಂದಿಯೊಬ್ಬ ಕಳ್ಳತನ ಮಾಡಿ ಸಿಕ್ಕಿಬಿದ್ದಿದ್ದಾನೆ. ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರ ಕಚೇರಿಯಲ್ಲಿನ ನಗದು ಹಾಗೂ ಚಿನ್ನಾಭರಣ ಕಳವು ಮಾಡಿದ್ದ ಡಿ ಗ್ರೂಪ್ ನೌಕರನೊಬ್ಬನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ನವೀನ್ ಎಂಬಾತ ಸುರೇಶ್‌ರನ್ನು ಭೇಟಿ ಮಾಡಲು ವಿಧಾನಸೌಧಕ್ಕೆ ಬಂದಿದ್ದಾಗ ಕೈಚೀಲದಲ್ಲಿ ತಂದು ಮರೆತು ಬಿಟ್ಟು ಹೋಗಿದ್ದ 300 ಗ್ರಾಂ ಚಿನ್ನ, 1.50 ಲಕ್ಷ ರು. ಹಣವನ್ನು ಅಲ್ಲೇ ಬಿಟ್ಟಿದ್ದರು.

ಬೈರತಿ ಬಸವರಾಜ್‌ಗೆ ಮತ್ತೆ ಬಂಧನ ಭೀತಿ

ಬೆಂಗಳೂರು: ಬಿಕ್ಲು ಶಿವು ಅಲಿಯಾಸ್ ಶಿವಕುಮಾರ್ ಕೊಲೆ ಪ್ರಕರಣದಲ್ಲಿ ಮಾಜಿ ಸಚಿವ, ಶಾಸಕ ಬೈರತಿ ಬಸವರಾಜ ಅವರಿಗೆ ಜಾಮೀನು ನೀಡಲು ಹೈಕೋರ್ಟ್ ಎರಡನೇ ಬಾರಿ ನಿರಾಕರಿಸಿದೆ. ಬಿಕ್ಲು ಶಿವಕುಮಾರ್ ಕೊಲೆ ಪ್ರಕರಣದಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ಐದನೇ ಆರೋಪಿಯಾಗಿರುವ ಬೈರತಿ ಬಸವರಾಜ ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸುನೀಲ್ ದತ್ತ ಯಾದವ್ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ. ಸಿಐಡಿ ಪೊಲೀಸರಿಂದ ಬಸವರಾಜ ಅವರಿಗೆ ಬಂಧನ ಮಾಡುವ ಸಾಧ್ಯತೆಯಿದೆ.

134 ಪ್ರಕರಣಗಳಿಗೆ ಲೋಕಾಯುಕ್ತ ಮರುಜೀವ

ಮುಡಾ: 40 ಮಂದಿಗೆ ನೋಟಿಸ್

ಮೈಸೂರು: ಮುಡಾದಲ್ಲಿನ 50:50 ನಿವೇಶನ ಹಂಚಿಕೆ ಹಗರಣಕ್ಕೆ ಸಂಬಂಧಿಸಿದಂತೆ ದೊಡ್ಡ ತಿರುವು ಸಿಕ್ಕಿದ್ದು, 134 ಪ್ರಕರಣಗಳಿಗೆ ಮತ್ತೆ ಮರುಜೀವ ಬಂದಿದೆ. ಈ ನಡುವೆ 50:50 ಅನುಪಾತದಲ್ಲಿ ನಿವೇಶನ ಪಡೆದಿದ್ದ 40ಕ್ಕೂ ಹೆಚ್ಚು ಮಂದಿಗೆ ಲೋಕಾಯುಕ್ತ ಅಧಿಕಾರಿಗಳು ನೋಟಿಸ್ ನೀಡಿ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದಾರೆ.

1055 ಸೈಟ್‌ಗಳಿಂದ ಸಾವಿರಾರು ಕೋಟಿ ರು. ಅಕ್ರಮ ನಡೆದಿರುವ ಆರೋಪ ಕೇಳಿ ಬಂದಿತ್ತು. ಪ್ರಕರಣ ಕುರಿತು ಲೋಕಾಯುಕ್ತ ತನಿಖೆ ಮುಂದುವರಿಸಿದ್ದು ಇದೀಗ ಮಾಜಿ ಮುಡಾ ಆಯುಕ್ತ ದಿನೇಶ್, ನಟೇಶ್ ಸೇರಿ ಅನೇಕರಿಗೆ ಮತ್ತೆ

ನೋಟಿಸ್ ನೀಡಿದೆ. ಕಾನೂನು ಗಾಳಿಗೆ ತೂರಿ ಸೈಟ್ ಹಂಚಿದವರಿಗೆ, ಸೈಟ್ ಪಡೆದಿದ್ದವರೆಗೂ ನೋಟಿಸ್ ಜಾರಿ ಮಾಡಲಾಗಿದ್ದು, ವಿಚಾರಣೆಗೆ ಹಾಜರಾಗಿ ಉತ್ತರ ಕೊಡುವಂತೆ ಲೋಕಾಯುಕ್ತ ಎಸ್ಪಿ ಉದೇಶ್ ನೋಟಿಸ್ ನೀಡಿದ್ದಾರೆ ಎನ್ನಲಾಗಿದೆ.

ಕಂಪನಿಯ ಉತ್ಪನ್ನವನ್ನು ದೇಶಾದ್ಯಂತ ಬೆಳೆಸಲು ದೇಶಾದ್ಯಂತ ಪರಿಚಿತವಿರುವ ನಟಿ ಭಾಟಿಯಾ ಆಯ್ಕೆ ಬಾಲಿವುಡ್ನಲ್ಲೂ ಚಿರಪರಿಚಿತ ದ.ಭಾರತದ ಜನಪ್ರಿಯ ನಟಿಗೆ ಮನ್ನಣೆ | ವಿರೋಧಕ್ಕೇ ಹಲವರ ವಿರೋಧ

ಮೈಸೂರು ಸ್ಯಾಂಡಲ್‌ಗೆ ತಮನ್ನಾ ರಾಯಭಾರಿ: ತಪ್ಪೇನು?

ವಿಶ್ವವಾಣಿ ವಿಶೇಷ ಬೆಂಗಳೂರು

ದ.ಭಾರತದ ಖ್ಯಾತ ನಟಿ, ಇತ್ತೀಚೆಗೆ ಬಾಲಿವುಡ್‌ನಲ್ಲೂ ಜನಪ್ರಿಯವಾಗಿರುವ ತಮನ್ನಾ ಭಾಟಿಯಾ ಅವರನ್ನು ಮೈಸೂರು ಸ್ಯಾಂಡಲ್ ಸೋಪ್‌ಗೆ ರಾಯಭಾರಿಯನ್ನಾಗಿ ನೇಮಿಸುತ್ತಿದ್ದಂತೆ ಕರ್ನಾಟಕದಲ್ಲಿ ಕೆಲವರ 'ವಿರೋಧ' ಶುರುವಾಗಿದೆ. ತಮನ್ನಾ ನೇಮಕದಿಂದ ಕರ್ನಾಟಕದ ಅಸ್ಮಿತೆಗೆ ಧಕ್ಕೆಯಾಗಿದೆ ಎನ್ನುವುದು ಅವರು ನೀಡುತ್ತಿರುವ ಕಾರಣ. ಆದರೆ ತಮನ್ನಾ ಆಯ್ಕೆಗೂ, ಕನ್ನಡದಿಂದ ಅಸ್ಮಿತೆಗೂ ಎಲ್ಲಿಂದೆಲ್ಲಿಗೆ ಸಂಬಂಧ ಎನ್ನುವುದಕ್ಕೆ ಉತ್ತರ ಮಾತ್ರ ಸಿಗುತ್ತಿಲ್ಲ.

ಕರ್ನಾಟಕ ಸರಕಾರಿ ಸ್ವಾಮ್ಯದ ಕೆಎಸ್‌ಡಿಎಲ್ ತಮ್ಮ ವ್ಯಾಪಾರವನ್ನು ವಿಸ್ತರಿಸಿಕೊಳ್ಳುವ, 2030ರ ವೇಳೆಗೆ 5000 ಕೋಟಿ ರು. ಮಾರುಕಟ್ಟೆ ಮಾಡಬೇಕೆಂಬ ಉದ್ದೇಶದಿಂದ ತಮನ್ನಾ ಅವರನ್ನು ರಾಯಭಾರಿಯನ್ನಾಗಿ ನೇಮಿಸಿ ಕೊಂಡಿದೆ. ಆದರೆ ತಮನ್ನಾ ಬದಲಿಗೆ ಕರ್ನಾಟಕದ 'ಬೆಡಗಿ'ಯರನ್ನು

ರಾಯಭಾರಿಯನ್ನಾಗಿ ಮಾಡಿಕೊಳ್ಳಬೇಕಿತ್ತು. ಕರ್ನಾಟಕದಲ್ಲಿ ತಮನ್ನಾಗಿಂತ ಸುಂದರಿಯರು ಇಲ್ಲವೇ ಎನ್ನುವ ಕೊಂಕನ್ನು ರಾಜ್ಯದ ಕೆಲವರು ಎತ್ತಿದ್ದಾರೆ.

ಕರ್ನಾಟಕದಲ್ಲಿ ತಮನ್ನಾ ಮೀರಿದ ಬೆಡಗಿಯರು ಇದ್ದಾರೆ, ಇಲ್ಲ ಎನ್ನುವುದು ಮೈಸೂರು ಸ್ಯಾಂಡಲ್ ವಿಷಯದಲ್ಲಿ ಅಪ್ರಸ್ತುತ. ಕೆಎಂಎಫ್ ಸೇರಿದಂತೆ ವಿವಿಧ ಸರಕಾರಿ ಸ್ವಾಮ್ಯದ ಸಂಸ್ಥೆಗಳು ಕರ್ನಾಟಕ ರಾಜ್ಯದ ಮಾರುಕಟ್ಟೆಯನ್ನು ಆದ್ಯತೆಯಾಗಿ ತೆಗೆದುಕೊಂಡು 'ರಾಯಭಾರಿ'ಗಳನ್ನು ನೇಮಿಸಿಕೊಂಡಿದ್ದರಿಂದ ಕನ್ನಡಿಗರಿಗೆ ಆದ್ಯತೆ ನೀಡಿವೆ. → 4

ವಿರೋಧಿಸುವವರ ನಿಲುವಲ್ಲೇ ವಿರೋಧಾಭಾಸ

ಬಿಜೆಪಿಯ ಹಲವು ನಾಯಕರು ನಟಿ ತಮನ್ನಾ ಅವರ ಆಯ್ಕೆಯನ್ನು ವಿರೋಧಿಸುವುದಕ್ಕೆ ಪ್ರಮುಖ ಕಾರಣ ಆಕೆ ಕರ್ನಾಟಕದವರಲ್ಲ ಎನ್ನುವುದಾಗಿದೆ. ಈ ಹಿಂದೆಯೂ ಇದೇ ವಿಷಯಕ್ಕೆ ಪ್ರತಿಪಕ್ಷಗಳು ಸರಕಾರದ ವಿರುದ್ಧ ತಿರುಗಿಬಿದ್ದಿದ್ದವು. ಕರ್ನಾಟಕದಲ್ಲಿರುವ ನಟ-ನಟಿಯರನ್ನು ರಾಯಭಾರಿಗಳನ್ನಾಗಿ ಮಾಡಿಕೊಳ್ಳಬೇಕು ಎನ್ನುವುದು ಪ್ರತಿಪಕ್ಷಗಳ ಆಗ್ರಹ. ಆದರೆ ಮೈಸೂರು ಸ್ಯಾಂಡಲ್ ಸರಕಾರಿ ಸ್ವಾಮ್ಯದ ಸಂಸ್ಥೆಯಾಗಿದ್ದರೂ, ಅದನ್ನು ಅಂತಾ ರಾಷ್ಟ್ರೀಯ ಮಟ್ಟಕ್ಕೆ ಏರಿಸುವ ಉದ್ದೇಶದಿಂದ ಬಾಲಿವುಡ್‌ನಲ್ಲೂ ಗುರ್ತಿಸಿಕೊಂಡಿರುವ ತೆಲುಗು, ತಮಿಳು, ಮಲಯಾಳಂ ಸಿನಿಮಾಗಳ ಮೂಲಕ ಭಾರೀ ಜನಪ್ರಿಯತೆ ಹೊಂದಿರುವ ನಟಿಯನ್ನು ನೇಮಿಸಿಕೊಳ್ಳಲಾಗಿದೆ. ಹೀಗಿರುವಾಗ, ಉತ್ತರ ಭಾರತ, ಹೊರದೇಶದಲ್ಲಿಯೂ ಪರಿಚಯವಿರುವ ನಟಿಯನ್ನೇ ಆಯ್ಕೆ ಮಾಡಿಕೊಳ್ಳುವುದು ಅನಿವಾರ್ಯ. ಈ ವಿಷಯದಲ್ಲಿ ಕರ್ನಾಟಕ ಅಸ್ಮಿತೆ ಎನ್ನುವುದಕ್ಕಿಂತ ಮುಖ್ಯವಾಗಿ, 'ವ್ಯವಹಾರಿಕ'ವಾಗಿ ಲಾಭ-ನಷ್ಟವನ್ನು ನೋಡಬೇಕಾಗುತ್ತದೆ.

ಸಮಾಚಾರ ಸಣ್ಣದಲ್ಲ

ಸರ್ವೋತ್ತಮ ಸೇವಾ ಪ್ರಶಸ್ತಿಗೆ ಅರ್ಜಿ ಆಹ್ವಾನ

ಚಿತ್ರದುರ್ಗ: ರಾಜ್ಯ ಸರಕಾರಿ ಅಧಿಕಾರಿಗಳು ಮತ್ತು ನೌಕರರ ಕಾರ್ಯದಕ್ಷತೆ ಗುರುತಿಸಿ ಗೌರವಿಸುವ ಸಲುವಾಗಿ ನೀಡಲಾಗುವ 2026ನೇ ಸಾಲಿನ ಜಿಲ್ಲಾ ಮಟ್ಟದ 'ಸರ್ವೋತ್ತಮ ಸೇವಾ ಪ್ರಶಸ್ತಿ'ಗಾಗಿ ನಾಮನಿರ್ದೇಶನಗಳನ್ನು ಆಹ್ವಾನಿಸಿದೆ. ನಾಮ ನಿರ್ದೇಶನಗಳನ್ನು ಸಲ್ಲಿಸಲು ಇದೇ ಫೆ.25 ರವರೆಗೆ ಅವಕಾಶ ಕಲ್ಪಿಸಲಾಗಿದೆ. ರಾಜ್ಯ ಸರಕಾರದ ಗ್ರೂಪ್ ಎ, ಬಿ, ಸಿ ಮತ್ತು ಡಿ ವೃಂದದ ಅಧಿಕಾರಿ ಹಾಗೂ ನೌಕರರು ಈ ಪ್ರಶಸ್ತಿಗೆ ಅರ್ಹರಾಗಿರುತ್ತಾರೆ. ಜಿಲ್ಲಾ, ರಾಜ್ಯ ಮಟ್ಟದ ಪ್ರಶಸ್ತಿ ಆಯ್ಕೆಗೆ ನಾಮನಿರ್ದೇಶನಗಳನ್ನು ಫೆ.26ರೊಳಗಾಗಿ ಆನ್ಲೈನ್ ಜಾಲತಾಣ https://dparar.karnataka.gov.inq ಅಥವಾ https://sarvothamaawards.karnataka.gov.in ಮೂಲಕ ಮಾತ್ರವೇ ಅರ್ಜಿ ಸಲ್ಲಿಸಬೇಕು. ಭೌತಿಕವಾಗಿ ಸಲ್ಲಿಸಿದ ಯಾವುದೇ ಮನವಿ ಹಾಗೂ ಪ್ರಸ್ತಾವನೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ತಿಳಿಸಿದ್ದಾರೆ.

ಮಾತೃ ವಂದನಾ ಯೋಜನೆಯಲ್ಲಿ ವಂಚನೆ

ಚಿತ್ರದುರ್ಗ: ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆಯ ಫಲಾನುಭವಿಗಳನ್ನು ಗುರಿಯಾಗಿಸಿಕೊಂಡು ಫೋನ್ ಮೂಲಕ ಕರೆ ಮಾಡಿ ಓಟಿಪಿ ಪಡೆದು ವಂಚಿಸುವ ಪ್ರಕರಣ ಬೆಳಕಿಗೆ ಬಂದಿದೆ. ಮೊಬೈಲ್ ಸಂಖ್ಯೆ 9153257976 ಮೂಲಕ ತಾಲೂಕಿನ ಕಡಬನಹಳ್ಳಿ ಗ್ರಾಮದ ಅಂಗನವಾಡಿ ವ್ಯಾಪ್ತಿಯ ಗರ್ಭಿಣಿಯರು ಮತ್ತು ಬಾಣಂತಿಯರಿಗೆ ಕರೆ ಮಾಡಿ, ಅಂಗನವಾಡಿ ಕಾರ್ಯಕರ್ತೆ ಅಥವಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಿಬ್ಬಂದಿ ಎಂದು ಪರಿಚಯಿಸಿಕೊಂಡು, ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆಯ ಹಣ ಜಮಾ ಮಾಡುವ ನೆಪದಲ್ಲಿ ಫಲಾನುಭವಿಗಳಿಂದ ಒಟಿಪಿ ಪಡೆದು, ಅವರ ಬ್ಯಾಂಕ್ ಖಾತೆಗಳಿಂದ ಹಣವನ್ನು ದೋಚುತ್ತಿದ್ದಾರೆ. ಸೋಮವಾರ ಫಲಾನುಭವಿಯೊಬ್ಬರ ಖಾತೆಯಿಂದ ಸುಮಾರು 50,000 ರು. ಗಳಿಗೂ ಹೆಚ್ಚು ಹಣವನ್ನು ಅನಧಿಕೃತವಾಗಿ ವರ್ಗಾವಣೆ ಮಾಡಿಕೊಳ್ಳಲಾಗಿದೆ. 9153257976 ಮೊಬೈಲ್ ಸಂಖ್ಯೆ ಅಥವಾ ಸಂಶಯಾಸ್ಪದ ಮೊಬೈಲ್ ಸಂಖ್ಯೆಯಿಂದ ಕರೆ ಮಾಡಿ ಬ್ಯಾಂಕ್ ವಿವರ ಅಥವಾ ಒಟಿಪಿ ವಿವರ ಕೇಳಿದರೆ ಯಾರು ಕೂಡ ಹಂಚಿಕೊಳ್ಳಬಾರದು. ಒಂದು ವೇಳೆ ಇಂತಹ ಕರೆಗಳು ಬಂದರೆ ಸಾರ್ವಜನಿಕರು ತಕ್ಷಣ ಜಾಗೃತರಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಚೇರಿ ಮಾಹಿತಿ ನೀಡುವಂತೆ ಉಪನಿರ್ದೇಶಕ ವಿಜಯ್ ಕುಮಾರ್‌ಕೆ.ಹೆಚ್ ಕೋರಿದ್ದಾರೆ.

ಶಾಲಾ ನವೀಕರಣ: ಗಡುವು ವಿಸ್ತರಣೆ

ಚಿತ್ರದುರ್ಗ: ಚಿತ್ರದುರ್ಗ ತಾಲೂಕಿನ ವ್ಯಾಪ್ತಿಯಲ್ಲಿರುವ ಎಲ್ಲಾ ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮಾನ್ಯತೆ ನವೀಕರಣಕ್ಕೆ ಇದೇ ಫೆಬ್ರವರಿ 16ರ ವರೆಗೆ ಕಾಲಾವಕಾಶ ವಿಸ್ತರಿಸಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ. ಪ್ರತಿ ಶೈಕ್ಷಣಿಕ ವರ್ಷದಲ್ಲಿ ಶಾಲೆಗಳನ್ನು ನಡೆಸಲು ಸಕ್ಷಮ ಪ್ರಾಧಿಕಾರದಿಂದ ಮಾನ್ಯತೆ ಪಡೆಯುವುದು ಕಡ್ಡಾಯವಾಗಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರು ಮಾನ್ಯತೆ ನವೀಕರಿಸಲು 2026ರ ಫೆಬ್ರವರಿ 16 ರವರೆಗೆ ಅವಧಿ ವಿಸ್ತರಿಸಿ ಆದೇಶಿಸಿದ್ದಾರೆ. ಚಿತ್ರದುರ್ಗ ತಾಲೂಕಿನ ಅರ್ಹ ಶಾಲಾ ಆಡಳಿತ ಮಂಡಳಿಗಳು ನಿಗದಿತ ದಿನಾಂಕದೊಳಗೆ ಅಗತ್ಯ ದಾಖಲೆಗಳೊಂದಿಗೆ ಆನ್ಲೈನ್ ಮೂಲಕವೇ ಅರ್ಜಿಯನ್ನು ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನ

ಚಿತ್ರದುರ್ಗ: ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ದೇವದಾಸಿ ಪುನರ್ವಸತಿ ಯೋಜನೆಯಡಿ ಖಾಲಿ ಇರುವ ಯೋಜನಾ ಅನುಷ್ಠಾನಾಧಿಕಾರಿ, ಲೆಕ್ಕಿಗರು(ಗುಮಾಸ್ತ) ಹಾಗೂ ಕಚೇರಿ ಸಹಾಯಕರ ತಲಾ ಒಂದು ಹುದ್ದೆಗಳನ್ನು ಗೌರವಧನದ ಆಧಾರದ ಮೇಲೆ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಯೋಜನಾ ಅನುಷ್ಠಾನಾಧಿಕಾರಿ ಹುದ್ದೆಗೆ ಅರ್ಜಿ ಸಲ್ಲಿಸುವವರು ಪದವಿಯಲ್ಲಿ ಬಿ.ಎಸ್.ಡಬ್ಲ್ಯೂ. ಅಥವಾ ಸಮಾಜಶಾಸ್ತ್ರವನ್ನು ಅಭ್ಯಸಿಸಿರಬೇಕು. ಸ್ನಾತಕೋತ್ತರ ಪದವಿಯಲ್ಲಿ ಸಮಾಜಶಾಸ್ತ್ರ ಅಥವಾ ಮನೋವಿಜ್ಞಾನ ಅಭ್ಯಸಿಸಿರಬೇಕು. ಇದರೊಂದಿಗೆ ಕಡ್ಡಾಯವಾಗಿ ಕಂಪ್ಯೂಟರ್‌ಜ್ಞಾನ ಮತ್ತು ಸರ್ಕಾರಿ ಅಧೀನ ಸಂಸ್ಥೆಗಳಲ್ಲಿ ಕನಿಷ್ಠ 3 ವರ್ಷಗಳ ಕೆಲಸದ ಅನುಭವವಿರಬೇಕು. ಮೊಳಕಾಲ್ಮೂರು ತಾಲೂಕಿನ ನಿವಾಸಿಯಾಗಿರಬೇಕು. ಈ ಹುದ್ದೆಗೆ ಮಾಸಿಕ 9,000 ರು. ಗೌರವಧನ ನೀಡಲಾಗುವುದು. ಲೆಕ್ಕಿಗರು(ಗುಮಾಸ್ತ) ಹುದ್ದೆಗೆ ದ್ವಿತೀಯ ಪಿಯುಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿಗಳನ್ನು ಪಡೆದು, ಫೆ.20ರ ಸಂಜೆ 5 ಗಂಟೆಯ ಒಳಗಾಗಿ ಇದೇ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 6360991070 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

{ಸಿ.ಟಿ.ರವಿ} ಮಾಜಿ ಸಚಿವ

ತೇಜಸ್ವಿ ಸೂರ್ಯ ಅವರು ಜನರ ಪರವಾಗಿ ಧ್ವನಿ ಎತ್ತಿದ್ದಕ್ಕೆ ಅವರನ್ನು ಬಂಧಿಸಿರುವುದು ಈ ಸರಕಾರದ ಸರ್ವಾಧಿಕಾರಿ ಧೋರಣೆ ಹಾಗೂ ಜನವಿರೋಧಿ ನೀತಿಯನ್ನ ಎತ್ತಿ ತೋರಿಸುತ್ತಿದೆ. ಇಂತಹ ಜನವಿರೋಧಿ ನೀತಿಗಳು ಮತ್ತು ಸರ್ವಾಧಿಕಾರಿ ನಡವಳಿಕೆಗಳು ಪ್ರಜಾಪ್ರಭುತ್ವದಲ್ಲಿ ಬಹಳ ದಿನ ನಡೆಯುವುದಿಲ್ಲ.

ಜೀತ ಪದ್ಧತಿ ನಿರ್ಮೂಲನೆ ಜಾಗೃತಿ ಜಾಥ | ನ್ಯಾಯಾಧೀಶ ಎಂ.ವಿಜಯ್ ಕಳವಳ

ಜೀತ ವ್ಯವಸ್ಥೆ ಹೊಸ ರೂಪ ಹತ್ತಿಕ್ಕಲು ಮುಂದಾಗಿ

ಚಿತ್ರದುರ್ಗ: ಬದಲಾಗುತ್ತಿರುವ ಕಾಲಘಟ್ಟಕ್ಕೆ ತಕ್ಕಂತೆ ಜೀತ ಪದ್ಧತಿಯ ಹೊಸ ಸ್ವರೂಪಗಳನ್ನು ಗುರುತಿಸಿ, ಅವುಗಳನ್ನು ಹತ್ತಿಕ್ಕುವ ಅಗತ್ಯವಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ. ವಿಜಯ್ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ಪಂಚಾಯತ್, ಪೊಲೀಸ್ ಇಲಾಖೆ, ಕಾರ್ಮಿಕ ಇಲಾಖೆ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಲ್ಲಿ ಜೀತ ಪದ್ಧತಿ ನಿರ್ಮೂಲನಾ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಜೀತ ಪದ್ಧತಿ ನಿರ್ಮೂಲನಾ ಕಾಯಿದೆ-1976 ಜಾರಿಗೆ ಬಂದು 50 ವರ್ಷಗಳು ಪೂರೈಸಿರುವ ಹಿನ್ನೆಲೆಯಲ್ಲಿ ಕಾಯ್ದೆಯ ಮಹತ್ವ ತಿಳಿಸುವ ನಿಟ್ಟಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಹೆಚ್ಚಿನ ಅರಿವು ಮೂಡಿಸಲಾಗುತ್ತಿದೆ. ಪ್ರಸ್ತುತ ಸಮಾಜದಲ್ಲಿ ಜೀತ ಪದ್ಧತಿಯು 'ಆಧುನಿಕ ಗುಲಾಮಗಿರಿ' ಸ್ವರೂಪ ಪಡೆದುಕೊಳ್ಳುತ್ತಿದೆ ಎಂದು ನ್ಯಾಯಾಧೀಶರು ಕಳವಳ ವ್ಯಕ್ತಪಡಿಸಿದರು.

ಹಲವು ಸರ್ವಿಸ್ ಪೆಲ್‌ರ್ವೈಡರ್‌ಕಂಪನಿಗಳು ಮತ್ತು ಡಿಜಿಟಲ್ ಸಂಸ್ಥೆಗಳು ಉದ್ಯೋಗಿಗಳಿಗೆ ಸಾಲದ ರೂಪದಲ್ಲಿ ಹಣ ನೀಡಿ, ಆ ನೆಪದಲ್ಲಿ ಅವರನ್ನು ದೀರ್ಘಕಾಲದವರೆಗೆ ಕೆಲಸಕ್ಕೆ ಕಟ್ಟುಬೀಳುವಂತೆ ಮಾಡುತ್ತಿವೆ.

ಜೀತ ಪದ್ಧತಿ ನಿರ್ಮೂಲನಾ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಜಾಗೃತಿ ಜಾಥಾಕ್ಕೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ವಿಜಯ್ ಚಾಲನೆ ನೀಡಿದರು.

ಇಂದಿನ ದಿನಗಳಲ್ಲಿ ಹೊಸ ರೂಪದಲ್ಲಿ ಶೋಷಣೆ

ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಮಾತನಾಡಿ, ಜೀತ ಪದ್ಧತಿಯು ಯಾವುದೇ ಪ್ರತಿಫಲವಿಲ್ಲದೇ ದುಡಿಸಿಕೊಳ್ಳುವ ಒಂದು ಅನಿಷ್ಟ ಪದ್ಧತಿಯಾಗಿದೆ. ಈ ಹಿಂದೆ ಇದ್ದ ಜೀತ ಪದ್ಧತಿಯ ಸ್ವರೂಪ ಈಗ ಬದಲಾಗಿದ್ದು, ಇಂದಿನ ದಿನಗಳಲ್ಲಿ ಹೊಸ ರೂಪದಲ್ಲಿ ಶೋಷಣೆ ನಡೆಯುತ್ತಿದೆ. ಈ ಅನಿಷ್ಟ ಪದ್ಧತಿಯನ್ನು ಸಮಾಜದಿಂದ ಸಂಪೂರ್ಣವಾಗಿ ತೊಡೆದುಹಾಕಬೇಕಿದೆ. ಪ್ರತಿಯೊಬ್ಬ ಶ್ರಮಿಕ, ಕಾರ್ಮಿಕ ಮತ್ತು ರೈತರು ಸುರಿಸುವ ಬೆವರಿನ ಹನಿಗೂ ತಕ್ಕ ಪ್ರತಿಫಲ ಸಿಗಬೇಕು ಮತ್ತು ಅವರ ಹಕ್ಕುಗಳನ್ನು ರಕ್ಷಿಸುವುದು ಸರಕಾರ ಹಾಗೂ ಸಾರ್ವಜನಿಕರ ಕರ್ತವ್ಯವಾಗಿದೆ ಎಂದು ಹೇಳಿದರು.

ಸಾಲ ತೀರಿಸುವ ನೆಪದಲ್ಲಿ ಉದ್ಯೋಗಿಗಳನ್ನು ಕಷ್ಟಕ್ಕೆ ದೂಡುವುದು ಆಧುನಿಕ ಜೀತ ಪದ್ಧತಿಯ ಭಾಗ ಎಂದು ಅಭಿಪ್ರಾಯಪಟ್ಟ ಅವರು, ಈ ಬದಲಾದ ಸನ್ನಿವೇಶ ಎದುರಿಸಲು ಕಾರ್ಮಿಕ ಇಲಾಖೆಯು ತನ್ನ ಕಾರ್ಯವೈಖರಿ ಬದಲಿಸಿಕೊಳ್ಳಬೇಕಿದೆ. ಕೇವಲ ಹಳೆಯ ಪದ್ಧತಿಯ ಮೇಲೆ ನಿಗಾ ಇಡುವುದರ ಜೊತೆಗೆ, ಡಿಜಿಟಲ್ ಪ್ಲಾಟ್ಫಾರ್ಮ್‌ಗಳ ಮೇಲೂ ಕಣ್ಣಾವಲು ಇಡಬೇಕು. ಅಧಿಕಾರಿಗಳಿಗೆ ತಾಂತ್ರಿಕ ತರಬೇತಿ ನೀಡಿ, ಈ 'ಮಾಡ್ರನ್ ಸ್ಲೇವರಿ'ಯನ್ನು ಪತ್ತೆಹಚ್ಚಿ ನಿರ್ಮೂಲನೆ ಮಾಡಲು ಇಲಾಖೆ ಮುಂದಾಗಬೇಕು ಎಂದು ಸಲಹೆ ನೀಡಿದರು.

> ಹಿಂದಿನ ಕಾಲದಲ್ಲಿ ಕೃಷಿ ವಲಯ, ಇಟ್ಟಿಗೆ ಗೂಡುಗಳು ಮತ್ತು ಕೋಳಿ ಫಾರಂಗಳಲ್ಲಿ ಕಂಡುಬರುತ್ತಿದ್ದ ಸಾಂಪ್ರದಾಯಿಕ ಜೀತ ಪದ್ಧತಿ ಈಗ ಕಡಿಮೆಯಾಗಿದೆ. ಆದರೆ, ಬದಲಾದ ಕಾಲಘಟ್ಟದಲ್ಲಿ ಡಿಜಿಟಲ್ ಪ್ಲಾಟ್ಫಾರ್ಮ್‌ಗಳು ಹಾಗೂ 'ಗಿಗ್ ಎಕಾನಮಿ' ವಲಯಗಳಲ್ಲಿ ಹೊಸ ಮಾದರಿಯ ಶೋಷಣೆ ಶುರುವಾಗಿದೆ.
>
> -ಎಂ.ವಿಜಯ್, ಹಿರಿಯ ಸಿವಿಲ್ ನ್ಯಾಯಾಧೀಶ

ಜೀತ ಪದ್ಧತಿ ನಿರ್ಮೂಲನಾ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಜಾಗೃತಿ ಜಾಥಾವು ಚಿತ್ರದುರ್ಗ ನಗರದ ಜಿಲ್ಲಾಧಿಕಾರಿಗಳ ಕಚೇರಿ ಆವರಣದಿಂದ ಪ್ರಾರಂಭವಾಗಿ ಒನಕೆ ಓಬವ್ವ ವೃತ್ತ, ಮದಕರಿ ವೃತ್ತ, ಡಾ.ಬಿ.ಆರ್. ಅಂಬೇಡ್ಕರ್‌ವೃತ್ತದ ಮಾರ್ಗದವಾಗಿ ಪುನಃ ಒನಕೆ ಓಬವ್ವ ವೃತ್ತಕ್ಕೆ ಆಗಮಿಸಿ, ಮಾನವ ಸರಪಳಿ ನಿರ್ಮಿಸಿ, "ಜೀತ ಬಿಡಿಸಿ ಶಾಲೆಗೆ ಕಳುಹಿಸಿ", "ನಿಲ್ಲಿಸಿ ನಿಲ್ಲಿಸಿ ಜೀತಪದ್ಧತಿ ಕೊನೆಗೊಳಿಸಿ", "ಜೀತಮುಕ್ತ ಕರ್ನಾಟಕ ಸುಂದರ ಕರ್ನಾಟಕ", ಜೀತದಿಂದ ಮುಕ್ತಿ ಬದುಕಿಗೆ ಶಕ್ತಿ", ಜೀತ ಆಧುನಿಕ ಕಾಲದ ಗುಲಾಮಿ ಪದ್ಧತಿ, ಇದಕ್ಕೆ ಬಡತನ, ಅನಕ್ಷರತೆ, ಅಸ್ಪೃಶ್ಯತೆ ಕಾರಣ, "ಜೀತ ಪದ್ಧತಿ ತಡೆಗಟ್ಟಲು ಕೈಜೋಡಿಸಿ ಜೀತದಾಳುಗಳಿಗೆ ಮುಕ್ತಿ ನೀಡಿ", "ಜೀತ ಪದ್ಧತಿ ಮಾನವ ಕುಲಕ್ಕೆ ಅಂಟಿದ ಶಾಪ ಬನ್ನಿ ಅದನ್ನು ಹೋಗಲಾಡಿಸಲು ಶ್ರಮಿಸೋಣ" ಎಂಬಿತ್ಯಾದಿ ಘೋಷಣೆಗಳನ್ನು ಕೂಗುವ ಮೂಲಕ ವಿದ್ಯಾರ್ಥಿಗಳು ಜಾಗೃತಿ ಮೂಡಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಕಾರ್ಮಿಕ ಅಧಿಕಾರಿ ಅನಿಲ್ ಬಗಟಿ ಅವರು ಅಧಿಕಾರಿಗಳಿಗೆ, ನೌಕರರಿಗೆ ಹಾಗೂ ಶಾಲಾ ವಿದ್ಯಾರ್ಥಿಗಳಿಗೆ ಜೀತ ಪದ್ಧತಿ ನಿರ್ಮೂಲನಾ ದಿನಾಚರಣೆಯ ಪ್ರತಿಜ್ಞೆ ಬೋಧಿಸಿದರು.

ಜಾಥಾದಲ್ಲಿ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ಆರ್.ಮಂಜುನಾಥ್, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಚಿದಾನಂದಸ್ವಾಮಿ, ಆಹಾರ ಇಲಾಖೆ ಜಂಟಿ ನಿರ್ದೇಶಕ ಶಿದ್ರಾಮ ಮಾರಿಹಾಳ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಯೋಜನಾ ನಿರ್ದೇಶಕ ಪಿ.ಸತೀಶ್ ಕುಮಾರ್‌ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಇದ್ದರು.

ಶಿಕ್ಷಣದ ಜತೆ ಮಕ್ಕಳು ಕ್ರೀಡೆಯಲ್ಲಿ ಪಾಲ್ಗೊಳ್ಳಿ

ಚಿತ್ರದುರ್ಗ: ಶಿಕ್ಷಣದ ಜತೆ ಮಕ್ಕಳು ಕ್ರೀಡೆಯಲ್ಲಿ ತೊಡಗಿಕೊಂಡಾಗ ಮಾನಸಿಕ ಹಾಗೂ ದೈಹಿಕವಾಗಿ ಸದೃಢರಾಗಿರಬಹುದೆಂದು ಬಾಪೂಜಿ ಪಬ್ಲಿಕ್ ಸ್ಕೂಲ್ನ ಕಾರ್ಯದರ್ಶಿ ಡಾ.ಕೆ.ಎಂ.ವೀರೇಶ್ ತಿಳಿಸಿದರು.

ಖೇಲೋ ಬಾಪೂಜಿ ಹೆಸರಿನಲ್ಲಿ ಮೂರು ದಿನಗಳ ಕಾಲ ನಡೆದ ವಾರ್ಷಿಕ ಕ್ರೀಡೋತ್ಸವವನ್ನು ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ಕ್ರೀಡೆ ಮಕ್ಕಳಲ್ಲಿ ಒತ್ತಡ ಕಡಿಮೆಗೊಳಿಸಿ ಶೈಕ್ಷಣಿಕ ಚಟುವಟಿಕೆಗಳಿಗೆ ಉತ್ತೇಜನ ನೀಡುತ್ತದೆ. ಪೋಷಕರು ಹಾಗೂ ದೈಹಿಕ ಶಿಕ್ಷಕರುಗಳು ಮಕ್ಕಳಿಗೆ ಪ್ರೋತ್ಸಾಹಿಸುವಂತೆ ಮನವಿ ಮಾಡಿದರು.

ತಾಲೂಕು ಕ್ರೀಡಾಧಿಕಾರಿ ಸುರೇಶ್ ಮಾತನಾಡುತ್ತ ಕ್ರೀಡಾ ಮನೋಭಾವನೆ ಮಕ್ಕಳಲ್ಲಿ ಹೆಚ್ಚಾಗಬೇಕು. ಆಗ ಮಾತ್ರ ಲವಲವಿಕೆಯಿಂದ ಇರಲು ಸಾಧ್ಯ. ಸೋಲು-ಗೆಲುವಿಗಿಂತ ಪ್ರತಿಯೊಬ್ಬರು ಕ್ರೀಡೆಯಲ್ಲಿ ತೊಡಗಬೇಕೆಂದು ಹೇಳಿದರು.

ಬಾಪೂಜಿ ಪಬ್ಲಿಕ್ ಸ್ಕೂಲ್ನ ನಡೆದ ಖೇಲೋ ಬಾಪೂಜಿ ಹೆಸರಿನಲ್ಲಿ ಮೂರು ದಿನಗಳ ಕಾಲ ನಡೆದ ವಾರ್ಷಿಕ ಕ್ರೀಡೋತ್ಸವಕ್ಕೆ ಕಾರ್ಯದರ್ಶಿ ಡಾ.ಕೆ.ಎಂ.ವೀರೇಶ್ ಧ್ವಜಾರೋಹಣ ನೆರವೇರಿಸಿದರು.

ಬಾಪೂಜಿ ಶಿಕ್ಷಣ ಸಂಸ್ಥೆ ನಿರ್ದೇಶಕರಾದ ಕೆ.ಎಂ.ಚೇತನ್ ಮಾತನಾಡಿ, ಪಠ್ಯದ ಜತೆ ಪಠ್ಯೇತರ ಚಟುವಟಿಕೆಗಳು ಮುಖ್ಯವಾಗಿರುವುದರಿಂದ ಕಡ್ಡಾಯವಾಗಿ ಮಕ್ಕಳು ಕ್ರೀಡೆಯಲ್ಲಿ ಭಾಗವಹಿಸುವಂತೆ ಕರೆ ನೀಡಿದರು.

ಬಾಪೂಜಿ ನಗರದಲ್ಲಿರುವ ಗಣೇಶ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಬೈಕ್ ರ್ಯಾಲಿ ಮೂಲಕ ಕ್ರೀಡಾ ಜ್ಯೋತಿಯನ್ನು ಪ್ರಮುಖ ರಸ್ತೆ ಮೂಲಕ ಬಾಪೂಜಿ ಪಬ್ಲಿಕ್ ಸ್ಕೂಲ್ ಆವರಣಕ್ಕೆ ತರಲಾಯಿತು.

ಬಾಪೂಜಿ ಶಿಕ್ಷಣ ಸಂಸ್ಥೆಯ ಸಂಯೋಜಕ ಹನುಮಂತರೆಡ್ಡಿ, ಎಲ್ಲಾ ಅಂಗ ಸಂಸ್ಥೆಗಳ ಮುಖ್ಯೋಪಾಧ್ಯಾಯರುಗಳು, ಪ್ರಾಂಶುಪಾಲರು, ಶಿಕ್ಷಕ-ಶಿಕ್ಷಕಿಯರು, ಬೋಧಕೇತರ ಸಿಬ್ಬಂದಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಎಂಎಸ್‌ಪಿಎಸ್ ಚುನಾವಣೆ ಯಶಸ್ವಿ

ಹೊನ್ನಾಳಿ: ತಾಲೂಕಿನ ಹೊಳೆಹರಳಹಳ್ಳಿಯ ಹಾಲು ಉತ್ಪಾದಕರ ಸಹಕಾರ ಸಂಘದ 12 ಕ್ಷೇತ್ರಗಳಿಗೆ ಮುಂದಿನ 5 ವರ್ಷಗಳ ಅವಧಿಗೆ ಆಡಳಿತ ಮಂಡಳಿಯ ಚುನಾವಣೆಯು ನಡೆಯಿತು.

12 ಕ್ಷೇತ್ರಗಳಿಗೆ ನಡೆದ ಚುನಾವಣೆಯಲ್ಲಿ 288 ಮತದಾರರಲ್ಲಿ 268 ಜನ ಸದಸ್ಯರು ತಮ್ಮ ಮತ ಚಲಾಯಿಸಿದರು.

ಎಚ್.ಡಿ.ಜಿನದತ್ತ, ರಮೇಶ, ಎಚ್.ಸಿ.ರಾಘವೇಂದ್ರ, ಎಚ್.ಎನ್. ವೆಂಕಟೇಶ, ಚನ್ನೇಶ, ಎಚ್.ಟಿ.ರಾಜಪ್ಪ, ಎಚ್.ಎಚ್.ಶೇಖರಪ್ಪ, ಎಚ್.ಬಿ.ನಾಗರಾಜಪ್ಪ, ಸಂಗೀತಾ ದೇಶಿ, ಎಚ್.ಪ್ರೇಮ ನಿರ್ದೇಶಕರಾಗಿ ಆಯ್ಕೆಯಾದರು. ಎಸ್.ಸಿ.ಮೀಸಲು ಕ್ಷೇತ್ರದಿಂದ ಎ.ಕೆ.ಹನುಮಂತಪ್ಪ ಅವಿರೋಧವಾಗಿ ಆಯ್ಕೆಯಾದರು. ಚುನಾವಣಾಧಿಕಾರಿ ಎ.ಜಿ.ನವೀನ್ ಕುಮಾರ್‌ಚುನಾವಣಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಿ ವಿಜೇತರಾದವರಿಗೆ ಪ್ರಮಾಣ ಪತ್ರ ವಿತರಿಸಿದರು.

ಹೊಳೆಹರಳಹಳ್ಳಿಯ ಹಾಲು ಉತ್ಪಾದಕರ ಸಹಕಾರ ಸಂಘದ ಕಾರ್ಯದರ್ಶಿ ಎಚ್.ಬಿ.ಸುರೇಶ್, ಹಾಲು ಪರಿವೀಕ್ಷಕ ಎಚ್.ಟಿ.ಶೇಖರಪ್ಪ ಉಪಸ್ಥಿತರಿದ್ದರು. ಹೊನ್ನಾಳಿ ಠಾಣೆಯ ಸಿ.ಎಂ. ಮಹೇಶ್, ಎನ್.ರವಿ ಪೊಲೀಸ್ ಬಿಗಿ ಬಂದೋಬಸ್ತ್ ಕಲ್ಪಿಸಿದ್ದರು.

ಚುನಾವಣಾಧಿಕಾರಿ ಎ.ಜಿ.ನವೀನ್ ಕುಮಾರ್‌ಚುನಾವಣಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಿ ವಿಜೇತರಾದವರಿಗೆ ಪ್ರಮಾಣ ಪತ್ರ ವಿತರಿಸಿದರು.

ಜನಪರ ಆಡಳಿತ ನೀಡಲು ಕೇಂದ್ರ ವಿಫಲ: ಸಚಿವ

ಹಿರಿಯೂರು: ಕೇಂದ್ರ ಬಿಜೆಪಿ ಸರಕಾರ ಜನಪರ ಆಡಳಿತ ನೀಡಲು ಸಾಧ್ಯವಾಗದೆ ವಿಫಲವಾಗಿದೆ ಎಂದು ಕೇಂದ್ರ ಸರಕಾರದ ವಿರುದ್ಧ ಸಚಿವರಾದ ಡಿ.ಸುಧಾಕರ್ ಅವರು ವಾಗ್ದಾಳಿ ನಡೆಸಿದರು.

ನಗರದ ನೆಹರು ಮೈದಾನದಲ್ಲಿ ತಾಲೂಕು ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಆಯೋಜಿಸಿದ್ದ ಜನ ಜಾಗೃತಿ ಪಾದಯಾತ್ರೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಹೆಸರನ್ನು ಬಿಜೆಪಿ ನೇತೃತ್ವದ ಎನ್ ಡಿ ಎ ಸರಕಾರ ಮರಳಿ ನರೇಗಾ ಯೋಜನೆಯನ್ನು ಯಥಾವತ್ತಾಗಿ ಜಾರಿಗೊಳಿಸುವ ತನಕ ಹೋರಾಟ ಮಸ್ಕಲ್ ಗ್ರಾಮದಿಂದ ಹಿರಿಯೂರಿನವರೆಗೆ ವಿಜಿ -ಬಿ ರಾಮ್ ಜಿ ವಿರೋಧಿಸಿ ಜನಜಾಗೃತಿ ಪಾದಯಾತ್ರೆ ಬೃಹತ್ ಆಂದೋಲನ ನಡೆಸಿದರು.

ಬಿಜೆಪಿ ಪಕ್ಷದ ಸರಕಾರ ಅಭಿವೃದ್ಧಿಗೆ ಆಸಕ್ತಿ ಇಲ್ಲ ಜನಪರ ಸರಕಾರ ಅಲ್ಲ ಎಂದರು ಎಷ್ಟು ಜನಕ್ಕೆ ಕೆಲಸ ಕೊಟ್ಟಿದ್ದಾರಾ ? ಜನತೆ ಅನುಕೂಲ ಆಗುವಂತೆ ಕೆಲಸ ಆಗಿಲ್ಲ ಎಂದು ಸಚಿವರು ಆರೋಪಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ತಾಜ್ ಪೀರ್,ನಿಖಿಲ್ ಮೌರ್ಯ,ತೆಲಂಗಾಣ ಉಸ್ತುವಾರಿ ಶಕೀಲ್ ನವಾಜ್, ಶಿವಣ್ಣ, ಸಂಪತ್ ಕುಮಾರ್, ಶಶಿಕಲಾ ಸುರೇಶ್ ಬಾಬು, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಗೀತಾ ನಂದಿನಿ ಗೌಡ, ನಗರಸಭೆ ಮಾಜಿ ಅಧ್ಯಕ್ಷರಾದ ಎ ಮಂಜುನಾಥ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಖಾದಿ ರಮೇಶ್, ಬ್ಲಾಕ್ ಕಾಂಗ್ರೆಸ್ ಗ್ರಾಮಾಂತರ ಅಧ್ಯಕ್ಷ ಈರಲಿಂಗೇಗೌಡ,ಅಬ್ದುಲ್, ಡಾ. ಸುಜಾತಾ,ಆಯುಬ್, ಕೆಡಿಪಿ ಸದಸ್ಯ ಶಿವಕುಮಾರ್‌ದಡ್ಡಘಟ್ಟ ನಗರಸಭೆ ಮಾಜಿ ಅಧ್ಯಕ್ಷೆ ಶಿವರಂಜಿನಿ, ಮಾನಸ ಮಂಜುನಾಥ್, ಡಿಶ್ ಮಂಜುನಾಥ್, ಚಂದ್ರಶೇಖರ್,ಗುರುಪ್ರಸಾದ್, ವಿವಿಧ ಸೆಲ್ ಗಳ ಅಧ್ಯಕ್ಷರು, ಪದಾಧಿಕಾರಿಗಳು, ಕಾಂಗ್ರೆಸ್ ಪಕ್ಷದ ಮುಖಂಡರು ಕಾರ್ಯಕರ್ತರು ಸೇರಿದಂತೆ ಇತರರಿದ್ದರು.

ನಗರದ ನೆಹರು ಮೈದಾನದಲ್ಲಿ ತಾಲೂಕು ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಆಯೋಜಿಸಿದ್ದ ಜನ ಜಾಗೃತಿ ಪಾದಯಾತ್ರೆ ನಡೆಯಿತು.

ನರೇಗಾ ಕಾಮಗಾರಿಗೆ ಕಡಿವಾಣ

ಸಿಲಿಂಡರ್‌ಒಂದಕ್ಕೂದು ಫ್ರೀ ಆಂದ್ದು ಬೆಲೆ ಏರಿಕೆ ಈಗ ಡಬಲ್ ಆಗಿದೆ ಗೊಬ್ಬರ ದುಬಾರಿಯಾಗಿದೆ ಇಡಿ, ಇನ್ ಕಂಮ್ ಟ್ಯಾಕ್ಸ್ ಎಂದು ಹೇಳಿಕೊಂಡು ಪೊಲೀಸರನ್ನು ಬಿಟ್ಟು ನಮ್ಮ ರಾಜಕಾರಣಿಗಳ ಮನಸ್ಸು ಕುಗ್ಗಿಸುವ ಪ್ರಯತ್ನ ಮಾಡುತ್ತಿದೆ. 32 ಸಾವಿರ ಕೋಟಿ ಬೇಕಿದೆ ಮಹಾತ್ಮ ಗಾಂಧಿ ನರೇಗಾ ಯೋಜನೆಗೆ ಬಿಜೆಪಿ ಸರಕಾರ ಎಳ್ಳು ನೀರು ಬಿಟ್ಟಿದೆ. ತಾಲೂಕಿನಲ್ಲಿ ಸುಮಾರು 200 ನರೇಗಾ ಕಾಮಗಾರಿಗೆ ಕಡಿವಾಣ ಹಾಕಿದೆ ಇನ್ನು ಮುಂದೆ ಕೇಂದ್ರ ಸರಕಾರ ನಿರ್ಧಾರ ಮಾಡಬೇಕು ಕೂಲಿ ಕಾಮಿ9ಕರ ಅಭಿಪ್ರಾಯ ಸಂಗ್ರಹಿಸಿ ಎಂದು ಸಚಿವರಾದ ಡಿ.ಸುಧಾಕರ್‌ಬೂತ್ ಮಟ್ಟದ ಕಾರ್ಯಕರ್ತರಿಗೆ ಹೇಳಿದರು.

ಸಮಗ್ರ ನೀರಾವರಿ ಸೌಲಭ್ಯ ಕಲ್ಪಿಸಿ

ಹೊಳಲ್ಕೆರೆ: ತಾಲೂಕಿಗೆ ಸಮಗ್ರ ನೀರಾವರಿ ಹಾಗೂ ಮೈಕ್ರೋ ಪೈಪ್ ಲೈನ್ ನೀರಾವರಿ ಸೌಲಭ್ಯ ಕಲ್ಪಿಸಲು ಒತ್ತಾಯಿಸಿ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ತಾಲೂಕು ವಿವಿಧ ಜನಪರ ಸಂಘಟನೆ ಸಹಯೋಗದೊಂದಿಗೆ ಮಂಗಳವಾರ ಕೈಗೊಂಡಿದ್ದ ಹೊಳಲ್ಕೆರೆ ಬಂದ್ ಸಂಪೂರ್ಣ ಯಶಸ್ವಿಯಾಗಿದೆ.

ಮುಂಜಾನೆಯಿಂದಲೇ ಬಂದ್ ಆರಂಭಿಸಿದ ರೈತ ಸಂಘಕ್ಕೆ ಬೆಂಬಲಿಸಿ ತಾಲೂಕಿನ ವರ್ತಕರ ಸಂಘ ಸ್ವಯಂ ಪ್ರೇರಿತವಾಗಿ ಅಂಗಡಿ ಮುಂಗಟ್ಟು ಬಂದ್ ಮಾಡಿ ಬೆಂಬಲಿಸಿದರು. ಬಳಿಕ ಪ್ರತಿಭಟನೆಯಲ್ಲಿ ತಾಲೂಕು ವಕೀಲರು, ವರ್ತಕರು, ಕನ್ನಡಪರ, ಸಾಮಾಜಿಕ ಹಾಗೂ ವಿವಿಧ ಸಂಘಟನೆಯ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಹೊಳಲ್ಕೆರೆ ತಾಲೂಕಿನ ಬಂದ್ ಗೆ ಬೆಳಿಗ್ಗೆಯಿಂದಲೇ ಅಂಗಡಿ ಮುಂಗಟ್ಟುಗಳು ತರಕಾರಿ ಅಂಗಡಿಗಳು, ಊಟದ ಹೋಟೆಲ್ ಗಳು, ಬೀದಿಬದಿ ವ್ಯಾಪಾರಸ್ಥರು, ಫೋಟೋ ಸ್ಟುಡಿಯೋಗಳು, ಶೋ ರೂಂಗಳು ಆಟೋ, ಟ್ಯಾಕ್ಸಿ ಚಾಲಕರು, ವಕೀಲರಸಂಘ, ವರ್ತಕರ ಸಂಘ, ರೋಟರಿ ಕ್ಲಬ್ ಸಂಘ,ಪ್ರಸನ್ನ ಗಣಪತಿ ಸೇವಾ ಸಮಿತಿ, ಮಹಿಳಾ ಸ್ವಸಹಾಯ ಸಂಘಗಳು, ಬಂದ್ ಗೆ ಬೆಂಬಲಿಸುವ ಮೂಲಕ ತಾಲೂಕಿಗೆ ಆಗಿರುವ ಅನ್ಯಾಯಕ್ಕೆ ಧ್ವನಿಯಾದರು. ಪ್ರತಿಭಟನೆ ಪ್ರಾರಂಭವಾಗುತ್ತಿದ್ದಂತೆ ತಾಲೂಕು ಅಧ್ಯಕ್ಷ ರಂಗಸ್ವಾಮಿ ನೇತೃತ್ವದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು. ಬಂದ್ ಹಿನ್ನೆಲೆಯಲ್ಲಿ ಪೊಲೀಸರ ನಡುವೆ ಮಾತಿನ ಚಕಮಕಿ ನಡೆದು ಕೆಲವರನ್ನು ಬಂಧಿಸಿ ಬಿಡುಗಡೆ ಮಾಡಲಾಯಿತು. ಹಳ್ಳಿಗಳಿಂದ ಎತ್ತಿನ ಗಾಡಿಯಲ್ಲಿ ಬರುತ್ತಿದ್ದ ರೈತರು ಮುಖ್ಯವೃತ್ತದಲ್ಲಿ ಜಮಾವಣೆಗೊಂಡು ಸ್ವಲ್ಪ ಹೊತ್ತು ಹೆದ್ದಾರಿಯನ್ನು ಬಂದ್ ಮಾಡಿ ಟ್ರಾಫಿಕ್ ಜಾಮ್ ಮಾಡಲಾಯಿತು. ಬಂದ್ ನೇತೃತ್ವ ವಹಿಸಿದ್ದ ರೈತ ಸಂಘದ ರಾಜ್ಯಾಧ್ಯಕ್ಷ ಈಚಘಟ್ಟ ಸಿದ್ದವೀರಪ್ಪ ಮಾತನಾಡಿ, ಭದ್ರಾ ನೀರಾವರಿ ಯೋಜನೆಯಲ್ಲಿ ಚಿತ್ರದುರ್ಗ ಜಿಲ್ಲೆಯನ್ನು ಸಂಪೂರ್ಣವಾಗಿ ನೀರಾವರಿಗೊಳಿಸಬೇಕು ಎನ್ನುವ ಉದ್ದೇಶ ಹೊಂದಿದ್ದರೂ, ಸರಕಾರ ರೈತರ ಹೋರಾಟಕ್ಕೆ ಮನ್ನಣೆ ನೀಡದೆ ಇದುವರೆಗೂ ಅಪ್ಪರ್‌ಭದ್ರಾ ನೀರಾವರಿ ಯೋಜನೆಯನ್ನು ಜಾರಿಗೊಳಿಸದೆ ಕಾಲಹರಣ ಮಾಡುತ್ತಿದೆ.ಇದರಿಂದ ರೈತಾಪಿ ವರ್ಗ ತೀವ್ರ ಸಂಕಷ್ಟ ಎದುರಿಸುತ್ತಿದೆ. ಕೃಷಿಗೆ ನೀರಿಲ್ಲದೆ ಬರ ಅನುಭವಿಸುತ್ತಿದೆ. ತೋಟಗಾರಿಕೆ ನೀರಿಲ್ಲದೆ ಒಣಗುವ ಸ್ಥಿತಿ ತಲುಪಿದೆ. ರೈತರು ದಿನೇ ದಿನೇ ಆರ್ಥಿಕ ಸ್ಥಿತಿಗತಿಯಲ್ಲಿ ಕುಗ್ಗಿ ಹೋಗುತ್ತಿದ್ದಾರೆ. ರಾಜಕಾರಣಿಗಳು ಸುಳ್ಳು ಭರವಸೆ ನೀಡಿ ರೈತರಿಗೆ ದ್ರೋಹ ಬಗೆಯುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಹೊಳಲ್ಕೆರೆ ತಾಲೂಕು ರೈತ ಸಂಘದ ಅಧ್ಯಕ್ಷ ರಂಗಸ್ವಾಮಿ, ವಕೀಲರ ಸಂಘದ ಅಧ್ಯಕ್ಷ ಎಸ್ ಜೆ. ರಂಗಸ್ವಾಮಿ, ಉಪಾಧ್ಯಕ್ಷ ಶಾಂತವೀರಪ್ಪ, ಕಾರ್ಯದರ್ಶಿ ಶಶಿಧರ್,ವಕೀಲರಾದ ಎಸ್ ವೇದಮೂರ್ತಿ,ಬಿ.ಎನ್. ಪ್ರಶಾಂತ್, ಎಸ್. ವಿಜಯ್, ಕುಮಾರಪ್ಪ, ಶಿವಮೂರ್ತಿ,ಎಸ್.ಜಗದೀಶ್, ನಿವೃತ್ತ ನೌಕರರ ಸಂಘದ ಶಂಕ್ರಪ್ಪ ಗಣಪತಿ ಸೇವಾ ಸಮಿತಿ ಸಂಘದ ನಟರಾಜು ಪುರಸಭೆ ಮಾಜಿ ಉಪಾಧ್ಯಕ್ಷ ಕೆಆರ್ ರಾಜಪ್ಪ ಇದ್ದರು.

ಹೊಳಲ್ಕೆರೆ ತಾಲೂಕಿಗೆ ಸಮಗ್ರ ನೀರಾವರಿ ಕಲ್ಪಿಸಬೇಕೆಂದು ಆಗ್ರಹಿಸಿ ಹೊಳಲ್ಕೆರೆ ಪಟ್ಟಣವನ್ನು ಬಂದ್ ಮಾಡಿ ಗಣಪತಿ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ರೈತರು.

ಮುಷ್ಕರದಲ್ಲಿ ಬ್ಯಾಂಕ್ ನೌಕರರ ಭಾಗಿ

ದಾವಣಗೆರೆ: ಕೇಂದ್ರ ಸರಕಾರವು ನೂತನವಾಗಿ ಜಾರಿಗೆ ತಂದಿರುವ ಕಾರ್ಮಿಕ ವಿರೋಧಿ 4 ಲೇಬರ್‌ಕೋಡ್‌ಗಳು ಹಾಗೂ ಜನ ವಿರೋಧಿ ಮಸೂದೆ ವಾಪಾಸ್ ಪಡೆಯುವಂತೆ ಆಗ್ರಹಿಸಿ, ಕಾರ್ಮಿಕರ ಉದ್ಯೋಗ ಮತ್ತು ಉದ್ಯೋಗ ಭದ್ರತೆಯ ಮೇಲೆ ತಿದ್ದುಪಡಿ ನೆಪದಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ದಾಳಿ ಖಂಡಿಸಿ ಕೇಂದ್ರ ಕಾರ್ಮಿಕ ಸಂಘಟನೆಗಳು, ರೈತ ಸಂಘಟನೆಗಳು ಫೆ. 12 ರಂದು ಕರೆ ನೀಡಿರುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಬ್ಯಾಂಕಿಂಗ್ ವಲಯದ ಪ್ರಮುಖ ನೌಕರರ ಸಂಘಟನೆಗಳಾದ ಅಖಿಲ ಭಾರತ ಬ್ಯಾಂಕ್ ನೌಕರರ ಸಂಘ, ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಸಂಘ ಹಾಗೂ ಬ್ಯಾಂಕ್ ಎಂಪ್ಲಾಯೀಸ್ ಫೆಡರೇಶನ್ ಆಫ್ ಇಂಡಿಯಾ ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿ ಮುಷ್ಕರದಲ್ಲಿ ಪಾಲ್ಗೊಳ್ಳುತ್ತಿವೆ. ಈ ಕುರಿತು ಪ್ರಕಟಣೆ ನೀಡಿರುವ ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಕರ್ನಾಟಕ ಪ್ರದೇಶ ಬ್ಯಾಂಕ್ ಎಂಪ್ಲಾಯೀಸ್ ಫೆಡರೇಶನ್ನ ಜಂಟಿ ಕಾರ್ಯದರ್ಶಿ ಕೆ.ರಾಘವೇಂದ್ರ ನಾಯರಿ, ಕೇಂದ್ರ ಸರಕಾರದ ಕಾರ್ಮಿಕ ಮತ್ತು ರೈತ ವಿರೋಧಿ ಧೋರಣೆ ಖಂಡಿಸಿ ಅಖಿಲ ಭಾರತ ಮಟ್ಟದಲ್ಲಿ ಫೆ. 12 ರಂದು ಕಾರ್ಮಿಕ ಮತ್ತು ರೈತ ಸಂಘಟನೆಗಳಿಗೆ ಸೇರಿದ ಸಂಘಟನೆಗಳ ಸುಮಾರು 25 ಕೋಟಿಗೂ ಹೆಚ್ಚಿನ ಸಂಖ್ಯೆಯ ರೈತರು, ಕಾರ್ಮಿಕರು ಮುಷ್ಕರದಲ್ಲಿ ಪಾಲ್ಗೊಳ್ಳುತ್ತಿದ್ದಾರೆ ಎಂದಿದ್ದಾರೆ.

ಜೀತಪದ್ಧತಿ ಮಾನವೀಯತೆಗೆ ವಿರುದ್ಧವಾಗಿದೆ

ದಾವಣಗೆರೆ: ಜೀತಪದ್ಧತಿಯೂ ಮಾನವೀಯತೆಗೆ ವಿರುದ್ಧವಾದ ಪದ್ಧತಿ, ಇದರಿಂದ ಮನುಷ್ಯ ಮನುಷ್ಯನನ್ನೇ ಪ್ರಾಣಿಯ ರೀತಿಯಲ್ಲಿ ನೋಡಿಕೊಳ್ಳುತ್ತಿದ್ದಾರೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಎಂ. ಕರೆಣ್ಣವರ ಹೇಳಿದರು.

ಜಿಲ್ಲಾಡಳಿತ ಭವನದ ಆವರಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪೊಲೀಸ್ ಇಲಾಖೆ, ಕಾರ್ಮಿಕ ಇಲಾಖೆ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಸ್ಥೆ, ಮುಕ್ತಿ ಅಲೈಯನ್ಸ್ ಬೆಂಗಳೂರು, ಇವರ ಸಹಯೋಗದಲ್ಲಿ ಜೀತ ಕಾರ್ಮಿಕ ಪದ್ಧತಿ ಹಾಗೂ ಬಾಲ ಮತ್ತು ಕಿಶೋರ ಕಾರ್ಮಿಕ ಪದ್ಧತಿ ಕುರಿತು ಜಾಗೃತಿ ರಥ ಉದ್ಘಾಟಿಸಿ ಚಾಲನೆ ನೀಡಿ ಬಳಿಕ ಮಾತನಾಡಿದರು.

ನಮ್ಮಲ್ಲಿ ಜೀತ ಪದ್ಧತಿಯು ಸುಮಾರು 50 ವರ್ಷದ ಹಿಂದೆ ಕಳೆದು ಹೋಗಿದ್ದರೂ ಸಹ ಈಗಲೂ ಸಂಪೂರ್ಣವಾಗಿ ನಾಶವಾಗಿಲ್ಲ. ಈ ರಥವು ಮಾಹಿತಿಯ ಕಣಜವಾಗಿರುತ್ತದೆ. ಜಾಥ ಮೂಲಕ 13 ದಿನ 194 ಗ್ರಾಮ ಪಂಚಾಯಿತಿಯ ಎಸ್ಸಿ, ಎಸ್ಟಿ ಜನಾಂಗದವರು ವಾಸಿಸುವ ಕಾಲೋನಿಗಳಲ್ಲಿ ಬಾಲ ಕಾರ್ಮಿಕ ಪದ್ಧತಿ ಕುರಿತು ಮಾಹಿತಿ ನೀಡಲಾಗುತ್ತದೆ ಎಂದರು. ಜೀತ ಕಾರ್ಮಿಕ ಪದ್ಧತಿ ಹಾಗೂ ಬಾಲ ಮತ್ತು ಕಿಶೋರ ಕಾರ್ಮಿಕ ಪದ್ಧತಿಯ ಕುರಿತು ಪ್ರತಿಜ್ಞಾವಿಧಿ ಭೋಧಿಸಿದರು. ಹಾಗೂ ಬಿತ್ತಿ ಪತ್ರಗಳನ್ನು ಬಿಡುಗಡೆಗೊಳಿಸಿದರು. ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನಲ್ಲಿ ಲಲಿತಾ ರಾಜೇಂದ್ರ ಎಂಬ ದಂಪತಿ ಸುಮಾರು ವರ್ಷಗಳಿಂದ ಕೆಲಸಮಾಡಿಸಿ ಕೊಳ್ಳುತ್ತಿದ್ದ ಕೂಲಿ ಕಾರ್ಮಿಕರನ್ನು ಜೀತಪದ್ಧತಿಯಿಂದ ವಿಮುಕ್ತಿಗೊಳಿಸಿದ್ದಾರೆ. ಅಪರ ಜಿಲ್ಲಾಧಿಕಾರಿ ಶೀಲವಂತ ಶಿವಕುಮಾರ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಹಾಂತೇಶ್, ಕಾರ್ಮಿಕ ಇಲಾಖೆಯ ಅಧಿಕಾರಿ ಪ್ರಸನ್ನಕುಮಾರ್‌ಉಪಸ್ಥಿತರಿದ್ದರು.

ಜೀತ ಕಾರ್ಮಿಕ ಪದ್ಧತಿ ಹಾಗೂ ಬಾಲ ಮತ್ತು ಕಿಶೋರ ಕಾರ್ಮಿಕ ಪದ್ಧತಿ ಕುರಿತು ಜಾಗೃತಿ ರಥಕ್ಕೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಎಂ. ಕರೆಣ್ಣವರ ಚಾಲನೆ ನೀಡಿದರು.

> ಜೀತ ಕಾರ್ಮಿಕ ಪದ್ಧತಿಯ ಪ್ರಕರಣಗಳನ್ನು ಸಹ ಪತ್ತೆ ಹಚ್ಚಿ ಜೀತಪದ್ಧತಿ ಸಂಪೂರ್ಣ ನಿರ್ಮೂಲನೆಗೆ ಎಲ್ಲರೂ ಸಂಕಲ್ಪ ಮಾಡೋಣ. ಜೀತಪದ್ಧತಿಯಿಂದ ಮುಕ್ತಗೊಳಿಸಿ ಆತ್ಮಸ್ಥೈರ್ಯ ತುಂಬಬೇಕು. ಜೀತ ಪದ್ಧತಿಯು ನಗರ ಹಾಗೂ ನಗರಹೊರವಲಯದ ಪ್ರದೇಶಗಳಲ್ಲೇ ಹೆಚ್ಚಿಗೆ ಕಂಡುಬರುತ್ತಿದೆ. ಇಟ್ಟಿಗೆ ನಿರ್ಮಾಣ, ಸಣ್ಣ ಕೈಗಾರಿಕೆ, ಕಲ್ಲು ಕ್ವಾರಿ ಸೇರಿ ನಾನಾ ಕಡೆ ಈ ಪದ್ಧತಿಯು ಇರುತ್ತದೆ. ಮುಖ್ಯವಾಗಿ ಹೊರಜಿಲ್ಲೆಗಳಿಂದ ಆಗಮಿಸುವ ಕೂಲಿ ಕಾರ್ಮಿಕರೇ ಈ ಪದ್ಧತಿಗೆ ಬಲಿಯಾಗುತ್ತಿದ್ದಾರೆ.
>
> - ಮಹಾವೀರ ಎಂ. ಕರೆಣ್ಣವರ, ಹಿರಿಯ ಸಿವಿಲ್ ನ್ಯಾಯಾಧೀಶ

ಪಾತಲಿಂಗೇಶ್ವರಸ್ವಾಮಿ ಜಾತ್ರೆ ಫೆ.21ರಿಂದ

ಚಳ್ಳಕೆರೆ: ತಾಲೂಕಿನ ಪರಶುರಾಮಪುರ ಹೋಬಳಿಯ ಚನ್ನಮ್ಮನಾಗತಿಹಳ್ಳಿಯ ಶ್ರೀಪಾತಲಿಂಗೇಶ್ವರ ಜಾತ್ರಾ ಮಹೋತ್ಸವವನ್ನು ಫೆ.21 ಮತ್ತು 22 ಎರಡು ದಿನಗಳು ಭಕ್ತಿಶ್ರದ್ಧೆಯಿಂದ ನಡೆಸಲು ಜಾತ್ರಾ ಸಮಿತಿ ನಿರ್ಧರಿಸಿದೆ.

ನಗರದ ಪ್ರವಾಸಿಮಂದಿರದಲ್ಲಿ ಜಾತ್ರಾ ಸಮಿತಿ ಸದಸ್ಯರು ಸಭೆ ನಡೆಸಿ, ಜಾತ್ರೆಯನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕಾರ್ಯಗಳ ಬಗ್ಗೆ ಚರ್ಚಿಸಿದರು. ಜಾತ್ರಾ ಸಮಿತಿ ಸದಸ್ಯರಲ್ಲದೆ, ಸಮುದಾಯದ ಮುಖಂಡರು ಗೊರವಿನಕೆರೆ ವಂಶಸ್ಥರು ಪೂರ್ವಬಾವಿಸಭೆಯಲ್ಲಿ ಪಾಲ್ಗೊಂಡು ಮಾಹಿತಿ ನೀಡಿದರು. ಜಾತ್ರೆಯನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಎಲ್ಲರೂ ಸಹಕಾರ ನೀಡುವಂತೆ ಮನವಿ ಮಾಡಲಾಯಿತು. ಜಾತ್ರಾ ಸಮಿತಿ ಅಧ್ಯಕ್ಷ ಆರ್.ಮಲ್ಲಯ್ಯ,ಕಾರ್ಯದರ್ಶಿ ಕರೀಕೆರೆ ನಾಗರಾಜ, ಹಿರಿಯೂರು ಚಂದ್ರಣ್ಣ, ಪಾತಲಿಂಗಪ್ಪ, ಗೊಲ್ಲಹಳ್ಳಿ ನಿಂಗಣ್ಣ, ನರೇಂದ್ರಕುಮಾರ್,ಪ್ರಕಾಶ್ಜಂಜರಗುಂಟೆ, ನಾಗರಾಜು, ತಿಪ್ಪೇಸ್ವಾಮಿ, ವೇದಮೂರ್ತಿ, ಗುರುಸಿದ್ದಪ್ಪ, ಮಲ್ಲಿಕಾರ್ಜುನ್, ನಗರಂಗೆರೆ ಮಹೇಶ್ ಮುಂತಾದವರು ಸಭೆಯಲ್ಲಿ ಭಾಗವಹಿಸಿದ್ದರು.

ನಗರದ ಪ್ರವಾಸಿಮಂದಿರದಲ್ಲಿ ಜಾತ್ರಾ ಸಮಿತಿ ಸದಸ್ಯರು ಸಭೆ ನಡೆಸಿದರು.

ಸಮಾಚಾರ ಸಣ್ಣದಲ್ಲ

ಪತ್ರಕರ್ತರಿಗೆ ಉಚಿತ ಬಸ್ ಪಾಸ್: ಆಹ್ವಾನ

ಮಂಗಳೂರು: ವಾರ್ತಾ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಾ.ಮಟ್ಟದ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ಸೌಲಭ್ಯ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಪತ್ರಕರ್ತರು ಸೇವಾ ಪ್ರಮಾಣಪತ್ರ, 11 ತಿಂಗಳ ವೇತನದ ದಾಖಲೆಗಳೊಂದಿಗೆ 'ಸೇವಾಸಿಂಧು' ಪೋರ್ಟಲ್ ಮೂಲಕ ಆನ್ಲೈನ್ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್ಲೈನ್ ಅರ್ಜಿಯ ಪ್ರತಿಯನ್ನು ಜಿಲ್ಲಾ ವಾರ್ತಾಧಿಕಾರಿಗಳ ಕಚೇರಿಗೂ ಸಲ್ಲಿಸಬೇಕು ಎಂದು ಇಲಾಖೆ ತಿಳಿಸಿದೆ.

ಯುವತಿ ಕಾಣೆ: ಪತ್ತೆಗೆ ಪೊಲೀಸರ ಮನವಿ

ಬೆಳ್ತಂಗಡಿ: ಉರುವಾಲು ಗ್ರಾಮದ ಮಜಿಕುಡೇಲು ನಿವಾಸಿ ಸುಪ್ರೀತಾ (20) ಎಂಬವರು ಫೆಬ್ರವರಿ 3 ರಿಂದ ಕಾಣೆಯಾಗಿದ್ದು, ಉಪ್ಪಿನಂಗಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 4 ಅಡಿ 6 ಇಂಚು ಎತ್ತರವಿರುವ ಇವರು ಕನ್ನಡ ಮತ್ತು ತುಳು ಮಾತನಾಡುತ್ತಾರೆ. ಕಾಣೆಯಾದ ದಿನ ಕಪ್ಪು ಬಣ್ಣದ ಚೂಡಿದಾರ ಧರಿಸಿದ್ದರು. ಇವರ ಬಗ್ಗೆ ಮಾಹಿತಿ ಸಿಕ್ಕಲ್ಲಿ ಕೂಡಲೇ ಉಪ್ಪಿನಂಗಡಿ ಪೊಲೀಸರನ್ನು ಸಂಪರ್ಕಿಸಲು ಕೋರಲಾಗಿದೆ.

ಬೇಡಿಕೆ ಈಡೇರಿಕೆಗೆ ದಸಂಸ ಪ್ರತಿಭಟನೆ

ಶಿವಮೊಗ್ಗ: ಪರಿಶಿಷ್ಟರಿಗೆ ಮೀಸಲಾಗಿಟ್ಟಿದ್ದ ಹಣವನ್ನು ಇತರೆ ಯೋಜನೆಗಳಿಗೆ ವರ್ಗಾಯಿಸಿರುವುದನ್ನು ವಿರೋಧಿಸಿ ದಲಿತ ಸಂಘರ್ಷ ಸಮಿತಿ ಮುಖಂಡರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಸಮುದಾಯಗಳ ಕಲ್ಯಾಣಕ್ಕಾಗಿ ಮೀಸಲಿಟ್ಟಿದ್ದ ಸುಮಾರು 42,000 ಕೋಟಿಯಷ್ಟು ಬೃಹತ್ ಮೊತ್ತದಲ್ಲಿ 25 ಸಾವಿರ ಕೋಟಿ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ವರ್ಗಾಯಿಸುವ ಮೂಲಕ ಸರಕಾರ ಸಾಮಾಜಿಕ ನ್ಯಾಯದ ವಿರುದ್ಧ ನಡೆದುಕೊಂಡಿದೆ. ಅಷ್ಟೇ ಅಲ್ಲ ತಾನೇ ರೂಪಿಸಿರುವ ಕಾಯಿದೆಯನ್ನು ಅನುಚಿತ ಕ್ರಮದ ಮೂಲಕ ಅದು ಉಲ್ಲಂಘಿಸಿದೆ ಎಂದು ಆರೋಪಿಸಿದರು. ಸಮಾಜ ಕಲ್ಯಾಣ ಇಲಾಖೆಯ ವಸತಿ ಶಾಲೆಗಳನ್ನು ವಸತಿ ಕಾಲೇಜುಗಳನ್ನಾಗಿ ಮೇಲ್ದರ್ಜೆಗೇರಿಸಬೇಕು. ಬೆಲೆ ಏರಿಕೆಗೆ ತಕ್ಕಂತೆ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಮಾಸಿಕ ಭೋಜನ ವೆಚ್ಚ 3000 ರೂ.ಗಳ ವರೆಗೆ ಹೆಚ್ಚಳ ಮಾಡಬೇಕು. ಸಮಾಜ ಕಲ್ಯಾಣ ಇಲಾಖೆ ವಸತಿ ನಿಲಯಗಳ ಗುತ್ತಿಗೆ-ಹೊರಗುತ್ತಿಗೆ ನೌಕರರನ್ನು ಕಾಯಂ ಗೊಳಿಸಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಮನವಿಯಲ್ಲಿ ಒತ್ತಾಯಿಸಲಾಗಿದೆ. ಈ ವೇಳೆ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಎಂ. ಗುರುಮೂರ್ತಿ, ಜಿಲ್ಲಾ ಸಂಚಾಲಕ ಏಳುಕೋಟಿ, ಪ್ರಮುಖರಾದ ಶಿವಬಸಪ್ಪ, ಹರಿಗೆ ರವಿ, ಚಂದ್ರಪ್ಪ ಜೋಗಿ, ಕೃಷ್ಣ ಬೊಮ್ಮನಕಟ್ಟೆ, ಎಂ. ರಮೇಶ್ ಚಿಕ್ಕಮರಡಿ, ನಾಗರಾಜ್ ಕಾಚಗೊಂಡನಹಳ್ಳಿ, ಜಗದೀಶ್ ಚರ್ಚಿಗುಂಡಿ, ಬಸವರಾಜ್ ಹಸ್ವಿ, ನಾಗರಾಜ್, ಯಡವಾಲ ಹನುಮಂತಪ್ಪ, ಮನ್ಸೂರ್ ಲಕ್ಕವಳ್ಳಿ, ಚೇತನ್ಕುಮಾರ್ಹಸೂಡಿ, ಇದ್ದರು.

ಇಂಡುವಳ್ಳಿ ಗ್ರಾಪಂ ಕಾರ್ಯ ಮಾದರಿ

ಸೊರಬ: ಮನೆ ನಿರ್ಮಿಸಿಕೊಳ್ಳಲು ಗ್ರಾಮೀಣ ಪ್ರದೇಶದಲ್ಲಿ ಜಾಗವನ್ನು ಗುರುತಿಸಿ ಹಂಚಿಕೆ ಮಾಡಲು ಮುಂದಾಗಿರುವ ಇಂಡುವಳ್ಳಿ ಗ್ರಾಮ ಪಂಚಾಯಿತಿಯ ಕಾರ್ಯ ಇತರೆ ಗ್ರಾಪಂಗಳಿಗೆ ಮಾದರಿ ಎಂದು ತಾಪಂ ಮಾಜಿ ಅಧ್ಯಕ್ಷ ಗಣಪತಿ ಮೆಚ್ಚುಗೆ ವ್ಯಕ್ತಪಡಿಸಿದರು. ತಾಲೂಕಿನ ಇಂಡುವಳ್ಳಿ ಗ್ರಾಮಪಂಚಾಯಿ ವ್ಯಾಪ್ತಿಯ ಚಿಕ್ಕಸವಿ ಗ್ರಾಮದಲ್ಲಿ ನಿವೇಶನ ಅಭಿವೃದ್ಧಿ ಕಾಮಗಾರಿಗೆ ಎಸ್. ಬಂಗಾರಪ್ಪ ಬಡಾವಣೆ ಎಂಬ ಹೆಸರಿಡುವ ಮೂಲಕ ಗುಂಪು ಮನೆಗೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು. ಗ್ರಾಮೀಣ ಪ್ರದೇಶದಲ್ಲಿ ತಾವು ಇರುವ ಸುತ್ತಮುತ್ತಲಿನ ಜಾಗ ಅಥವಾ ಅವರ ಜಮೀನುಗಳಲ್ಲಿ ಮನೆ ಕಟ್ಟಿಕೊಳ್ಳುವುದು ಮತ್ತು ಗ್ರಾಮ ಪಂಚಾಯಿತಿ ನೀಡುವುದು ಸಾಮಾನ್ಯ. ಆದರೆ ಇಂಡವಳ್ಳಿ ಗ್ರಾಪಂ ಅಧ್ಯಕ್ಷರು ಮತ್ತು ಸದಸ್ಯರು ಬಡವರ ಮೇಲಿನ ವಿಶೇಷ ಕಾಳಜಿಯಿಂದ ಗ್ರಾಮದಲ್ಲಿನ ನಿವೇಶನ ರಹಿತ ಜನರಿಗೆ ಒಂದಡೆ ಜಾಗವನ್ನು ಗುರುತಿಸಿ 43 ಕುಟುಂಬಗಳು ವಾಸ ಮಾಡಲು ನಿವೇಶನ ನೀಡಿರುವುದು ಮೆಚ್ಚುವಂತದ್ದು ಎಂದು ತಿಳಿಸಿದರು. ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪ, ಕಾಗೋಡು ತಿಮ್ಮಪ್ಪ, ಇಂದಿರಾಗಾಂಧಿ ಹಾಗೂ ಅಂಬೇಡ್ಕರ್ಅವರ ಕನಸು ಪ್ರತಿಯೊಬ್ಬರಿಗೂ ಸೂರು ಸಿಗಬೇಕೆನ್ನುವದಾಗಿತ್ತು ಅದು ಇಲ್ಲಿ ಸಾಕಾರಗೊಂಡಿದೆ ಎಂದು ತಿಳಿಸಿದರು. ಗ್ರಾಪಂ ಅಧ್ಯಕ್ಷ ಮೇದಮೂರ್ತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಆರ್. ಶಶಿಧರ್, ತಾಪಂ ಮಾಜಿ ಸದಸ್ಯ ನಾಗರಾಜ್ ಚಿಕ್ಕಸವಿ, ಜಿಪಂ ಮಾಜಿ ಸದಸ್ಯ ತಬಲಿ ಬಂಗಾಪ್ಪ, ಪ್ರಭಾಕರ್ಶಿಗ್ಗಾ, ಗ್ರಾಪಂ ಉಪಾಧ್ಯಕ್ಷೆ ಎಂ.ಜಿ ಸುಮ, ಸದಸ್ಯೆ ಹೆಚ್.ಬಿ ಗೀತಾ, ಕೆಡಿಪಿ ಸದಸ್ಯ ಅಣ್ಣಪ್ಪ ಹಾಲಘಟ್ಟ ಇದ್ದರು.

{ಪ್ರತಾಪ್ ಸಿಂಹ} ಮಾಜಿ ಸಂಸದ

ಡಾ.ಯತೀಂದ್ರ ಸಿದ್ದರಾಮಯ್ಯ ಅನಧಿಕೃತ ವರ್ಗಾವಣೆ ಸಚಿವರಾಗಿದ್ದು, ವರ್ಗಾವಣೆ ದಂಧೆಯಲ್ಲಿ ತೊಡಗುವ ಮೂಲಕ ಸಿದ್ದರಾಮಯ್ಯ ರಿಗೆ ಕೆಟ್ಟ ಹೆಸರು ತರುತ್ತಿದ್ದಾರೆ. ರಾಕೇಶ್ ಸಿದ್ದರಾಮಯ್ಯ ಬದುಕಿದ್ದರೆ ಇಂಥ ತಲೆ ತಗ್ಗಿಸುವ ಸ್ಥಿತಿ ತರುತ್ತಿರಲಿಲ್ಲ. ಅಪ್ಪನ ಅಧಿಕಾರವನ್ನು ಯತೀಂದ್ರ ಅತಿ ಹೆಚ್ಚು ದುರುಪಯೋಗ ಮಾಡಿಕೊಂಡಿದ್ದಾರೆ.

ಜಾಥಾಕ್ಕೆ ರಾಷ್ಟ್ರಭಕ್ತರ ಬಳಗ ಬೆಂಬಲ | ಬಳಗದ ಸಂಚಾಲಕ ಕೆ.ಎಸ್. ಈಶ್ವರಪ್ಪ ಘೋಷಣೆ

ಶರಾವತಿ ಪಂಪ್ಡ್ ಸ್ಟೋರೇಜ್ ವಿರುದ್ಧ ಜಾಥಾ ನಾಳೆ

ಶಿವಮೊಗ್ಗ: ಪರಿಸರ ವಿರೋಧಿ, ಜನವಿರೋಧಿ, ಅವೈಜ್ಞಾನಿಕ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ವಿರೋಧಿಸಿ ಫೆ.12ರಂದು ಬೆಳಿಗ್ಗೆ 10ಗಂಟೆಗೆ ನಡೆಯುವ ಬೃಹತ್ ಜಾಥಾಕ್ಕೆ ರಾಷ್ಟ್ರಭಕ್ತರ ಬಳಗ ಬೆಂಬಲ ನೀಡಿದ್ದು, ಬಳಗದ ಒಂದು ಸಾವಿರ ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ಬಳಗದ ಸಂಚಾಲಕ, ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಹೇಳಿದರು.

ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ಮುಂದಾಗಿರುವುದು ಪ್ರಕೃತಿ ಮೇಲಿನ ಬಹಿರಂಗ ದಾಳಿ. ಬಹುಶಃ ಕೆಲ ಅಧಿಕಾರಿಗಳಿಂದ ಕೇಂದ್ರ, ರಾಜ್ಯ ಸರಕಾರಗಳಿಗೆ ಈ ಯೋಜನೆಯ ಸಾಧಕ-ಬಾಧಕದ ಕುರಿತು ಪೂರ್ಣ ಅರಿವಿಲ್ಲದಂತೆ ತೋರುತ್ತದೆ. ಸುಮಾರು 10 ಸಾವಿರದ 700 ಕೋಟಿ ರೂ.ಲೂಟಿ ಮಾಡುವ ಸಂಚು ಈ ಯೋಜನೆಯಲ್ಲಿದ್ದಂತೆ ಕಾಣಿಸುತ್ತದೆ. ಈ ಯೋಜನೆಯಲ್ಲಿ ಇರಬೇಕಾದ ಸಂಗತಿಗಳ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಲಿಖಿತ ರೂಪದಲ್ಲಿ ಪತ್ರ ನೀಡಿದ್ದೇವೆ. ಫೆ.12ರೊಳಗೆ ಈ ಕುರಿತು ಕೆಪಿಸಿಎಲ್ನಿಂದ ಉತ್ತರ ಬರುವ ನಿರೀಕ್ಷೆಯಿದೆ ಎಂದರು.

ಶಿವಮೊಗ್ಗದಲ್ಲಿ ರಾಷ್ಟ್ರಭಕ್ತರ ಬಳಗದ ಸಂಚಾಲಕ, ಮಾಜಿ ಡಿಸಿಎಂ ಕೆ.ಎಸ್. ಈಶ್ವರಪ್ಪ ಅವರು ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದರು.

ಈ ಕುರಿತಂತೆ ಕೇಂದ್ರ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ, ಪ್ರಲ್ಹಾದ್ ಜೋಷಿ, ರಾಜ್ಯ ಇಂಧನಸಚಿವ ಕೆ.ಜೆ. ಜಾರ್ಜ್ ಅವರನ್ನು ಭೇಟಿ ಮಾಡಿ, ಯೋಜನೆ ಸ್ಥಗಿತಗೊಳಿಸುವಂತೆ ಆಗ್ರಹಿಸಲಾಗುವುದು. ಪರಿಸರ ಹೋರಾಟಗಾರರ ಜೊತೆ ಚರ್ಚಿಸಿ, ನ್ಯಾಯಾಲಯದ ಮೊರೆ ಹೋಗಲು ಯೋಚಿಸಲಾಗುವುದು. ಯಾವುದೇ ಕಾರಣಕ್ಕೂ ಈ ಯೋಜನೆ ಜಾರಿಯಾಗಲು ಬಿಡುವುದಿಲ್ಲ ಎಂದು ಖಡಕ್ಕಾಗಿಯೇ ಪ್ರತಿಕ್ರಿಯಿಸಿದರು.

ಖ್ಯಾತ ಪರಿಸರ ಹೋರಾಟಗಾರ ಪ್ರೊ.ಬಿ.ಎಂ. ಕುಮಾರಸ್ವಾಮಿ ಮಾತನಾಡಿ, ಅರಣ್ಯ ಸಂರಕ್ಷಣಾ ಕಾಯಿದೆ, ವನ್ಯಜೀವಿ ಸಂರಕ್ಷಣಾ ಕಾಯಿದೆಯಂತ ಕಠಿಣ ಕಾನೂನುಗಳಿದ್ದರೂ ಅಧಿಕಾರಿಗಳು ಈ ಪರಿಸರ ಮಾರಕ ಯೋಜನೆ ಜಾರಿಗೊಳಿಸಲು ಮುಂದಾಗುತ್ತಿರುವುದು ಪರಿಸರದ ಮೇಲಿನ ಸಾಮೂಹಿಕ ದಾಳಿ ಎಂದು ಕಿಡಿಕಾರಿದರು.

ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯದ ಅಧಿಕಾರಿ ಪ್ರಣೀತಾಪೌಲ್, ಅಳಿವಿನಂಚಿನಲ್ಲಿರುವ ಸಿಂಗಳೀಕ, ಮಂಗಟ್ಟೆ ಪಕ್ಷಿಗಳು ಪಶ್ಚಿಮಘಟ್ಟದ ಈ ಸಂರಕ್ಷಣಾ ಅರಣ್ಯ ವಲಯದಲ್ಲಿದ್ದು, ಇಲ್ಲಿ ಯಾವುದೇ ಕಾರಣಕ್ಕೂ ಅಭಿವೃದ್ಧಿ ಕಾರ್ಯಗಳನ್ನು ಜಾರಿಗೊಳಿಸಬಾರದು ಎಂದು ವರದಿ ನೀಡಿದ್ದರೂ ಅದನ್ನು ಮೆಟ್ಟಿ ರಾಜ್ಯ ಅರಣ್ಯ ಅಧಿಕಾರಿ ಸೆಂಥಿಲ್ಕುಮಾರ ಒಂದೇ ಪುಟದ ವರದಿ ನೀಡಿ, ಇಲ್ಲಿ ಯಾವುದೇ ಪ್ರಾಣಿ, ಪಕ್ಷಿಗಳಿಗೆ ಹಾನಿಯಾಗುವುದಿಲ್ಲ ಎಂದು ವರದಿ ನೀಡಿದ್ದು ದುರಂತ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅರಣ್ಯನಾಶ ಮಾಡಿ ಪಂಪ್ಡ್ ಸ್ಟೋರೇಜ್ ನಿರ್ಮಿಸುವ ಬದಲು ಬ್ಯಾಟರಿ ಸ್ಟೋರೇಜ್ ತಂತ್ರಜ್ಞಾನವನ್ನು ಬಳಸಿ ಪರಿಸರ ಹಾನಿಯನ್ನು ತಡೆಗಟ್ಟಬಹುದು. 135 ಕಿ.ಮೀ. ಹರಿಯುವ ನದಿಗೆ 25 ಕಿ.ಮೀ.ದಷ್ಟು ಸ್ವತಂತ್ರವಾಗಿ ಹರಿಯಲು ಬಿಡುತ್ತಿಲ್ಲ ಎಂದು ಸಿಡಿಮಿಡಿಗೊಂಡರು.

ಪತ್ರಿಕಾಗೋಷ್ಠಿಯಲ್ಲಿ ಕೆ.ಈ. ಕಾಂತೇಶ್, ಎಂ. ಶಂಕರ್,ಈ. ವಿಶ್ವಾಸ್, ಡಾ.ಶೇಖರ್ಗೌಳೇರ್, ಮೋಹನ್ ಜಾದವ್, ಜನಾರ್ಧನ್ ಪೈ ಇದ್ದರು.

ಪರಿಹಾರದ ಬಗ್ಗೆ ಸ್ಪಷ್ಟೀಕರಣ ನೀಡಿ

ಪರಿಸರ ಹೋರಾಟಗಾರ ಡಾ.ಶ್ರೀಪತಿ ಎಲ್.ಕೆ. ಮಾತನಾಡಿ, ವಿದ್ಯುತ್ ಶೇಖರಣೆ ನೆಪದಲ್ಲಿ ಹರಿಯುವ ನೀರನ್ನು ಕಳೆದುಕೊಳ್ಳುತ್ತೇವೆ. 18,000 ಟನ್ ಜೆಲೆಟಿನ್ಗಳನ್ನು ಬಳಸಿ ಭೂಮಿ ಸಿಡಿಸುತ್ತೇವೆ. ಜಲಚರ, ಕೃಷಿಭೂಮಿ, ಮತ್ಸ್ಯೋದ್ಯಮ, ಸಸ್ಯ ಸಂಪತ್ತಿನ ಹಾನಿಗಳ ಬಗ್ಗೆ ಕೆಪಿಸಿಎಲ್ ನೀಡುವ ಪರಿಹಾರ ಏನು ಎಂಬುದರ ಬಗ್ಗೆ ಸ್ಪಷ್ಟೀಕರಣ ನೀಡಬೇಕು ಎಂದು ಆಗ್ರಹಿಸಿದರು. ಆಗುಂಬೆ ಘಾಟಿನಲ್ಲಿ ಸುರಂಗ ಮಾರ್ಗದಿಂದ ಪರಿಸರದ ಮೇಲೆ ಇನ್ನಿಲ್ಲದ ಹಾನಿ ಉಂಟಾಗುತ್ತದೆ. ಅದರ ಬದಲು ಈಗಿರುವ ರಸ್ತೆಯ ಅಗಲೀಕರಣವೇ ವಾಸಿ ಎಂದು ಹೇಳಿದರು.

'ನಕಲಿ ಮಾವ' ಸೇರಿ ಇಬ್ಬರು ಮಂಗಳೂರು ಪೊಲೀಸರ ವಶಕ್ಕೆ

ಮ್ಯಾಟ್ರಿ ಮೋನಿ ವಂಚನೆ: ಯುವತಿಯರಿಗೆ ಆಮಿಷ

ಮಂಗಳೂರು: ಮ್ಯಾಟ್ರಿಮೋನಿ ಆನ್ಲೈನ್ ಪ್ಲಾಟ್ಫಾರ್ಮ್ಗಳ ಮೂಲಕ ಪರಿಚಯವಾಗಿ, ಅಮಾಯಕ ಯುವತಿಯರನ್ನು ಮದುವೆಯಾಗಿ ಹಣ ದೋಚುತ್ತಿದ್ದ ಅಂತರರಾಜ್ಯ ವಂಚಕ ಸುಶಾಂತ್ ಪೂಜಾರಿಯನ್ನು ಮಂಗಳೂರು ಪೊಲೀಸರು ಬಂಧಿಸಿದ್ದಾರೆ. ಈತನಿಗೆ 'ನಕಲಿ ಮಾವ'ನಾಗಿ ಸಾಥ್ ನೀಡುತ್ತಿದ್ದ ಮುಲ್ಕಿಯ ಭಾಸ್ಕರ್ ಎಂಬಾತನನ್ನೂ ಪೊಲೀಸರು ಕಂಬಿ ಹಿಂದೆ ತಳ್ಳಿದ್ದಾರೆ.

ಸುದ್ದಿ ಹಿನ್ನೆಲೆ:

ಬಂಧಿತ ಸುಶಾಂತ್ ಪೂಜಾರಿ ಅಲಿಯಾಸ್ ಸುಶಾಂತ್ ಜಿ. ಕರ್ಕೇರಾ (32), ಮುಂಬೈ ಮತ್ತು ಕರ್ನಾಟಕದ ವಿವಿಧ ನಗರಗಳಲ್ಲಿ ಸಂಚು ರೂಪಿಸಿ ಹೆಣ್ಣುಮಕ್ಕಳಿಗೆ ವಂಚಿಸುತ್ತಿದ್ದ. 2025ರ ಫೆಬ್ರವರಿಯಲ್ಲಿ ಮುಂಬೈನ ಘನಸೋಳಿಯಲ್ಲಿ ಯುವತಿಯೊಬ್ಬಳನ್ನು ಮದುವೆಯಾಗಿದ್ದ ಈತ ಆಕೆಯಿಂದ 6.60 ಲಕ್ಷ ಪಡೆದು ನವೆಂಬರ್ನಲ್ಲಿ ನಾಪತ್ತೆಯಾಗಿದ್ದ. ಸಂತ್ರಸ್ತ ಮಹಿಳೆ ಕಾವೂರು ಪೊಲೀಸ್ ಠಾಣೆಗೆ ನೀಡಿದ ದೂರಿನ ಆಧಾರದ ಮೇಲೆ ತನಿಖೆ ನಡೆಸಿದ ಪೊಲೀಸರು ಗುರುವಾರ ಆರೋಪಿಯನ್ನು ದಸ್ತಗಿರಿ ಮಾಡಿದ್ದಾರೆ.

'ನಕಲಿ ಮಾವ':

ಈ ವಂಚನೆಯ ಜಾಲದಲ್ಲಿ ಮುಲ್ಕಿ ನಿವಾಸಿ ಭಾಸ್ಕರ್ಪಾತ್ರ ದೊಡ್ಡದಿದೆ. ಸುಶಾಂತ್ನನ್ನು ತನ್ನ 'ಅಳಿಯ' ಎಂದು ಪರಿಚಯಿಸುತ್ತಿದ್ದ ಭಾಸ್ಕರ್,ಹುಡುಗಿಯರ ಕುಟುಂಬದವರ ನಂಬಿಕೆ ಗಳಿಸುತ್ತಿದ್ದ. ಮುಂಬೈನಲ್ಲಿ ನಡೆದ ಮದುವೆಯ ಧಾರ್ಮಿಕ ವಿಧಿವಿಧಾನಗಳಲ್ಲಿ ಈತನೇ ಮುಂಚೂಣಿಯಲ್ಲಿ ನಿಂತು ಸುಶಾಂತ್ ಪರವಾಗಿ ಕುಟುಂಬಸ್ಥನಂತೆ ನಟಿಸಿ ಮದುವೆ ಮಾಡಿಸಿದ್ದ ಎಂಬ ಅಂಶ ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ವಂಚನೆ:

ಪೊಲೀಸ್ ವಿಚಾರಣೆ ವೇಳೆ ಸುಶಾಂತ್ ಪೂಜಾರಿ ತನ್ನ ವಂಚನೆ ಒಪ್ಪಿಕೊಂಡಿದ್ದಾನೆ. 2021ರಲ್ಲಿ ಉಡುಪಿಯ ಯುವತಿಯೊಂದಿಗೆ ಮೊದಲ ಮದುವೆ. ಉಡುಪಿಯ ಇಬ್ಬರು ಹಾಗೂ ಮುಂಬೈನ ಇಬ್ಬರು ಯುವತಿಯರಿಗೆ ಮದುವೆ ಆಮಿಷವೊಡ್ಡಿ ಹಣ ವಸೂಲಿ.

ಬೆಂಗಳೂರಿನಲ್ಲಿ ಇಬ್ಬರು ಹಾಗೂ ಕಾರ್ಕಳದ ಒಬ್ಬ ಯುವತಿಗೆ ವಂಚನೆ ಮಾಡಿದ್ದಾನೆ.

ಪೋಕ್ಸೋ ಆರೋಪಿ:

ಸುಶಾಂತ್ ಪೂಜಾರಿ ಕೇವಲ ಆರ್ಥಿಕ ವಂಚಕನಲ್ಲ, ಈತ ಹಳೆ ಕ್ರಿಮಿನಲ್ ಕೂಡ ಹೌದು. ಮಂಗಳೂರಿನ ಊರ್ವಾ ಠಾಣೆಯಲ್ಲಿ ವಂಚನೆ ಪ್ರಕರಣ, ಉಡುಪಿಯ ಕೋಟಾದಲ್ಲಿ ಕಳ್ಳತನ ಹಾಗೂ ಮಹಾರಾಷ್ಟ್ರದ ಅರ್ನಾಲ್ ಪೊಲೀಸ್ ಠಾಣೆಯಲ್ಲಿ ಅತ್ಯಾಚಾರ, ಮಾನವ ಕಳ್ಳಸಾಗಣೆ ಮತ್ತು ಪೋಕ್ಸೋ ಅಡಿ ಈತನ ಮೇಲೆ ಗಂಭೀರ ಪ್ರಕರಣ ದಾಖಲಾಗಿವೆ. ಮಂಗಳೂರು ಪೊಲೀಸರ ಕಾರ್ಯಕ್ಕೆ ಸಾರ್ವಜನಿಕ ವಲಯದಲ್ಲಿ ಶ್ಲಾಘನೆ ವ್ಯಕ್ತವಾಗಿದೆ. ಬಂಧಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ನ್ಯಾಯಾಂಗ ಬಂಧನ ವಿಧಿಸಲಾಗಿದೆ.

ಆಗುಂಬೆ ಘಾಟ್ ರಸ್ತೆ ಮೇಲ್ದರ್ಜೆಗೆ: ಸಂಸದ ಸ್ವಾಗತ

ಶಿವಮೊಗ: ಆಗುಂಬೆ ಘಾಟ್ ಮೂಲಕ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ ರಸ್ತೆಯನ್ನು ಎರಡು ಲೇನ್ ರಸ್ತೆ, ಎರಡೂ ಬದಿ ಪಾದಚಾರಿ ಮಾರ್ಗ ಸಹಿತ ವಿಸ್ತರಿಸುವ ಉದ್ದೇಶದಿಂದ ಕಾರ್ಯಸಾಧ್ಯತಾ ಅಧ್ಯಯನ, ವಿವರವಾದ ಯೋಜನಾ ವರದಿ (ಡಿಪಿಆರ್), ಸಮೀಕ್ಷೆ ಹಾಗೂ ಭೂ ಯೋಜನೆ ತಯಾರಿಕೆಗಾಗಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಟೆಂಡರ್ಆಹ್ವಾನಿಸಿರುವುದನ್ನು ಸಂಸತ್ ಸದಸ್ಯ ಬಿ.ವೈ.ರಾಘವೇಂದ್ರ ಸ್ವಾಗತಿಸಿದ್ದಾರೆ.

ಡಿಪಿಆರ್ವ್ಯಾಪ್ತಿಯು ನಿರ್ದಿಷ್ಟವಾಗಿ ಸುರಂಗ ವಿನ್ಯಾಸ ತಜ್ಞರು ಮತ್ತು ಹಿರಿಯ ಭೂ-ಭೌತಶಾಸ್ತ್ರಜ್ಞರ ತೊಡಗಿಸಿಕೊಳ್ಳುವಿಕೆಯನ್ನು ಒಳಗೊಂಡಿದ್ದು, ಆಗುಂಬೆ ಘಾಟ್ ರಸ್ತೆಯಲ್ಲಿ ಸುರಂಗ ಮಾರ್ಗ ನಿರ್ಮಾಣದ ಆಯ್ಕೆಯ ಕಾರ್ಯಸಾಧ್ಯತೆಯನ್ನು ಪರೀಕ್ಷಿಸಲು, ವಿವರವಾದ ಭೂ-ತಾಂತ್ರಿಕ ತನಿಖೆಗಳಿಗೆ ಮೀಸಲಾದ ಬಜೆಟ್ ನಿಬಂಧನೆಗಳೊಂದಿಗೆ, ಅವಕಾಶ ಕಲ್ಪಿಸಲಾಗಿದೆ. ದಶಕಗಳಿಂದಲೂ ಬಾಕಿ ಉಳಿದಿದ್ದ ಆಗುಂಬೆ ಘಾಟ್ ಮೇಲ್ದರ್ಜೆಗೇರಿಸುವ ಜನರ ಬೇಡಿಕೆಗೆ ಇದು ಸ್ಪಷ್ಟ, ನಿರ್ಣಾಯಕ ಮತ್ತು ಆಡಳಿತಾತ್ಮಕವಾಗಿ ಮೊದಲ ಹೆಜ್ಜೆಯಾಗಿದೆ ಎಂದು ರಾಘವೇಂದ್ರ ತಿಳಿಸಿದ್ದಾರೆ.

ಪರಿಸರ ಸೂಕ್ಷ್ಮ ಪ್ರದೇಶವಾಗಿರುವ ಜೊತೆಗೆ ಅಪಾಯಕಾರಿ ಹಾಗೂ ಅಪಘಾತಗಳಿಗೆ ಹೆಸರಾದ ಆಗುಂಬೆ ಘಾಟ್ ರಸ್ತೆಯ ಸುರಕ್ಷತೆ ಹೆಚ್ಚಿಸುವುದು, ಪಶ್ಚಿಮ ಘಟ್ಟ ಪ್ರದೇಶದ ಪ್ರಕೃತಿ ಸಂವೇದನಾಶೀಲತೆಗೆ ಗೌರವ ನೀಡುತ್ತಲೇ ವೈಜ್ಞಾನಿಕವಾಗಿ ರಸ್ತೆ ಅಭಿವೃದ್ಧಿ ಕೈಗೊಳ್ಳುವುದು ಈ ಯೋಜನೆಯ ಮುಖ್ಯ ಗುರಿಯಾಗಿದೆ ಎಂದು ಹೇಳಿದ್ದಾರೆ.

ಈ ಯೋಜನೆ ಕುರಿತು ಕೇಂದ್ರದ ಪ್ರಧಾನಿ ನರೇಂದ್ರ ಮೋದಿ ಸರಕಾರ ಇದನ್ನು ಕಾಲ ಮಿತಿಯೊಳಗೆ ಮುಗಿಸುವ ಬದ್ಧತೆಯನ್ನು ಪ್ರದರ್ಶಿಸುತ್ತದೆ. ಈ ಆಗುಂಬೆ ಘಾಟ್ ರಸ್ತೆ ಅಭಿವೃದ್ಧಿಯಿಂದ ಮಲೆನಾಡು - ಕರಾವಳಿ ಜಿಲ್ಲೆಗಳ ಅಭಿವೃದ್ಧಿಗೆ ಹೊಸ ದಿಕ್ಕು ಲಭ್ಯವಾಗಲಿದ್ದು, ಸ್ಥಳೀಯ ನಿವಾಸಿಗಳು, ರೈತರು, ಅಕ್ಕಪಕ್ಕದ ಜಿಲ್ಲೆಗಳು, ಪ್ರವಾಸೋದ್ಯಮ ಹಾಗೂ ತುರ್ತು ಸೇವೆಗಳಿಗೆ ಗಣನೀಯ ಲಾಭವಾಗಲಿದೆ ಎಂದು ಸಂಸದರು ಹೇಳಿದರು.

ಈ ಮಹತ್ವದ ನಿರ್ಧಾರಕ್ಕೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಸಾರಿಗೆ ಸಚಿವಾಲಯಕ್ಕೆ ಸಂಸದ ಬಿ.ವೈ. ರಾಘವೇಂದ್ರ ಕೃತಜ್ಞತೆ ಸಲ್ಲಿಸಿದ್ದಾರೆ. ಮುಂದಿನ ಹಂತಗಳಲ್ಲಿ ಯೋಜನೆ ಸುಗಮವಾಗಿ ಸಾಗಲು ಕೇಂದ್ರದೊಂದಿಗೆ ನಿರಂತರ ಸಂಯೋಜನೆ ಮುಂದುವರಿಸುವುದಾಗಿ ಅವರು ಹೇಳಿದ್ದು, ಭೂಸ್ವಾಧೀನ ಮತ್ತು ಕಾನೂನು ಪ್ರಕ್ರಿಯೆಗಳಲ್ಲಿ ರಾಜ್ಯ ಸರಕಾರ ಸಹಕಾರ ನೀಡಬೇಕು. ಈ ಯೋಜನೆ ಶೀಘ್ರ ಕಾರ್ಯರೂಪಕ್ಕಿಳಿಯಲಿ ಎಂದು ಸಂಸದ ರಾಘವೇಂದ್ರ ತಿಳಿಸಿದ್ದಾರೆ.

ಗೀತ ಗಾಯನ ಸಾಧಕರಿಗೆ ಸನ್ಮಾನ

ಸ್ಪರ್ಧಾ ವಿಜೇತ ವಿದ್ಯಾರ್ಥಿಗಳಿಗೆ, ತರಬೇತಿ ನೀಡಿದ ಶಿಕ್ಷಕರಿಗೆ ಅಭಿನಂದನಾ ಕಾರ್ಯಕ್ರಮ ನಡೆಯಿತು.

ಸುಳ್ಯ: ಸುಳ್ಯದ ಸಂತ ಜೋಸೆಫ್ ಶಾಲೆಯಲ್ಲಿ ರಾಷ್ಟ್ರಮಟ್ಟದ ಯೋಗ ಮತ್ತು ಗೀತ ಗಾಯನ ಸ್ಪರ್ಧೆಗಳಲ್ಲಿ ಉನ್ನತ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಹಾಗೂ ಅವರಿಗೆ ತರಬೇತಿ ನೀಡಿದ ಶಿಕ್ಷಕರಿಗೆ ಅಭಿನಂದನಾ ಕಾರ್ಯಕ್ರಮ ನಡೆಯಿತು. ಸಾಧಕ ವಿದ್ಯಾರ್ಥಿಗಳನ್ನು ಜ್ಯೋತಿ ಸರ್ಕಲ್ ನಿಂದ ಶಾಲಾ ವಠಾರದವರೆಗೆ ತೆರೆದ ಜೀಪಿನಲ್ಲಿ ಅದ್ದೂರಿ ಮೆರವಣಿಗೆಯೊಂದಿಗೆ ಸ್ವಾಗತಿಸಲಾಯಿತು.

ವಿದ್ಯಾ ಸಂಸ್ಥೆಯ ಜೊತೆ ಕಾರ್ಯದರ್ಶಿ ರೆ.ಫಾ.ಆಲ್ವಿನ್ ಎಡ್ವರ್ಡ್ ಡಿಕುನ್ಹ ಅಧ್ಯಕ್ಷತೆವಹಿಸಿದ್ದರು. ವೇದಿಕೆಯಲ್ಲಿ ಸುಳ್ಯ ತಾಲೂಕು, ದೈಹಿಕ ಶಿಕ್ಷಣ ಪರಿವೀಕ್ಷಣಾಧಿಕಾರಿ ಸೂಫಿ ಪೆರಾಜೆ, ಪ್ರೌಢಶಾಲಾ ವಿಭಾಗದ ಪಿ ಟಿ ಎ ಉಪಾಧ್ಯಕ್ಷ ಸುಮಲತಾ, ಪ್ರಾಥಮಿಕ ಶಾಲಾ ಪಿಟಿಎ ಉಪಾಧ್ಯಕ್ಷೆ ಸುನಿತಾ ಮೊಂತೆರೊ, ಪೂರ್ವ ಪ್ರಾಥಮಿಕ ವಿಭಾಗದ ಪಿ ಟಿ ಎ ಉಪಾಧ್ಯಕ್ಷ ಪ್ರವೀಣ್ ಕುಮಾರ್ ,ಮುಖ್ಯೋಪಾಧ್ಯಾಯನಿ ಸಿಸ್ಟರ್ಮೇರಿ ಸ್ಟೆಲ್ಲಾ, ಚರ್ಚ್ ಪಾಲನ ಮಂಡಳಿಯ ಉಪಾಧ್ಯಕ್ಷಸುನಿಲ್ ಮಸ್ಕರೇನಸ್ ಉಪಸ್ಥಿತರಿದ್ದರು.

ರಾಷ್ಟ್ರಮಟ್ಟದ ಯೋಗ ಸ್ಪರ್ಧೆಯಲ್ಲಿ ತೃತೀಯ ಸ್ಥಾನವನ್ನು ಪಡೆದ ಸೋನಾ ಅಡ್ಕಾರ್,ಒಂಬತ್ತನೇ ಸ್ಥಾನ ಪಡೆದ ಹಾರ್ದಿಕ. ಕೆ. ಕೆ ಮತ್ತು ರಾಜ್ಯಮಟ್ಟದ ಗೀತಗಾಯನ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಸ್ಕೌಟ್ ವಿದ್ಯಾರ್ಥಿಗಳನ್ನು ಮತ್ತು ಪ್ರತಿಭಾ ಕಾರಂಜಿಯಲ್ಲಿ ಜಿಲ್ಲಾ ಮಟ್ಟದಲ್ಲಿ ಸುಶಾನ್ ಡಿ ಹಾಗೂ ಜಿಲ್ಲಾ ಮಟ್ಟದ ಗೀತ ಗಾಯನದಲ್ಲಿ ಪ್ರಥಮ ಸ್ಥಾನ ಪಡೆದ ಅಶ್ವಿಜ್ ಅತ್ರೇಯರನ್ನು ಸನ್ಮಾನಿಸಲಾಯಿತು. ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಿದ ಶಿಕ್ಷಕಿ ಶೋಭ, ದೈಹಿಕ ಶಿಕ್ಷಣ ಶಿಕ್ಷಕಿ ಪುಷ್ಪವೇಣಿ, ಸ್ಕೌಟ್ ಶಿಕ್ಷಕ ಭಾನುಪ್ರಕಾಶ್ ಅವರನ್ನು ಅಭಿನಂದಿಸಲಾಯಿತು.

ಅಜಿತ್ ರೈ ಗಡಿಪಾರಿಗೆ ಪ್ರಸ್ತಾವ: ನೋಟಿಸ್ ಜಾರಿ

ಮಂಗಳೂರು: ಸಮಾಜದ ಶಾಂತಿ ಸುವ್ಯವಸ್ಥೆಗೆ ಧಕ್ಕೆ ತರುತ್ತಿರುವ ಆರೋಪದ ಹಿನ್ನೆಲೆಯಲ್ಲಿ, ಇಲ್ಲಿನ ಹಿಂದೂ ಜಾಗರಣಾ ವೇದಿಕೆಯ ಮುಖಂಡ ಅಜಿತ್ ರೈ ಹೊಸಮನೆ ಅವರನ್ನು ಜಿಲ್ಲೆಯಿಂದ ಗಡಿಪಾರು ಮಾಡುವಂತೆ ಪೊಲೀಸ್ ಇಲಾಖೆ ಪ್ರಸ್ತಾವನೆ ಸಲ್ಲಿಸಿದೆ. ಈ ಸಂಬಂಧ ವಿಚಾರಣೆಗೆ ಹಾಜರಾಗುವಂತೆ ಪುತ್ತೂರು ಸಹಾಯಕ ಆಯುಕ್ತರ ನ್ಯಾಯಾಲಯ ನೋಟಿಸ್ ಜಾರಿ ಮಾಡಿದೆ. ಪುತ್ತೂರು ತಾಲ್ಲೂಕಿನ ಒಳಮೊಗ್ರು ಗ್ರಾಮದ ಹೊಸಮನೆ ನಿವಾಸಿಯಾದ ಅಜಿತ್ ರೈ ವಿರುದ್ಧ ಈಗಾಗಲೇ ವಿವಿಧ ಪೊಲೀಸ್ ಠಾಣೆಗಳಲ್ಲಿ ಹಲವು ಪ್ರಕರಣಗಳು ದಾಖಲಾಗಿವೆ.

ಸಾರ್ವಜನಿಕ ಶಾಂತಿ ಭಂಗ ಮತ್ತು ಕೋಮು ಸೌಹಾರ್ದತೆಗೆ ಧಕ್ಕೆ ತರುವಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಕಾಯ್ದೆ 1963ರ ಕಲಂ 55ರ ಅಡಿಯಲ್ಲಿ ಅವರನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ಗಡಿಪಾರು ಮಾಡುವಂತೆ ಪೊಲೀಸರು ಜಿಲ್ಲಾಡಳಿತಕ್ಕೆ ಶಿಫಾರಸು ಮಾಡಿದ್ದಾರೆ.

ಫೆಬ್ರವರಿ 25ಕ್ಕೆ ವಿಚಾರಣೆ:

ಗಡಿಪಾರು ಪ್ರಸ್ತಾವನೆಗೆ ಸಂಬಂಧಿಸಿದಂತೆ ಅಜಿತ್ ರೈ ಅವರಿಗೆ ನೋಟಿಸ್ ನೀಡಲಾಗಿದ್ದು, ಫೆಬ್ರವರಿ 25ರಂದು ಪುತ್ತೂರು ಉಪ ವಿಭಾಗಾಧಿಕಾರಿಗಳ (ಎಸಿ) ನ್ಯಾಯಾಲಯಕ್ಕೆ ಹಾಜರಾಗಿ ವಿವರಣೆ ನೀಡುವಂತೆ ಸೂಚಿಸಲಾಗಿದೆ. ಅಜಿತ್ ರೈ ಅವರು ಖುದ್ದಾಗಿ ಅಥವಾ ವಕೀಲರ ಮೂಲಕ ವಿಚಾರಣೆಗೆ ಹಾಜರಾಗಿ ತಮ್ಮ ಪರ ವಾದ ಮಂಡಿಸಲು ಅವಕಾಶವಿದೆ. ಒಂದು ವೇಳೆ ನಿಗದಿತ ದಿನದಂದು ವಿಚಾರಣೆಗೆ ಹಾಜರಾಗದಿದ್ದಲ್ಲಿ, ಏಕಪಕ್ಷೀಯವಾಗಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ನೋಟಿಸ್ನಲ್ಲಿ ಎಚ್ಚರಿಸಲಾಗಿದೆ.

ಹಿನ್ನೆಲೆ:

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರಣಿ ಅಹಿತಕರ ಘಟನೆಗಳ ಹಿನ್ನೆಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿದೆ. ಈ ಹಿಂದೆ ಕೂಡ ಹಲವು ವ್ಯಕ್ತಿಗಳ ಮೇಲೆ ಗಡಿಪಾರು ಅಸ್ತ್ರ ಪ್ರಯೋಗಿಸಲಾಗಿದ್ದು, ಇದೀಗ ಹಿಂಜಾವೇ ಮುಖಂಡನಿಗೆ ನೋಟಿಸ್ ನೀಡಿರುವುದು ಸಂಘ ಪರಿವಾರದ ವಲಯದಲ್ಲಿ ಸಂಚಲನ ಮೂಡಿಸಿದೆ.

ವ್ಯಾಲೆಂಟೈನ್ ಡೇ ತಡೆಗಾಗಿ ಪ್ರತಿಭಟನೆ



ವ್ಯಾಲೆಂಟೈನ್ ಡೇ ನೆಪದ ಅನಾಚಾರಗಳನ್ನು ತಡೆಗಟ್ಟುವಂತೆ ಆಗ್ರಹಿಸಿ ಶಿಕಾರಿಪುರದಲ್ಲಿ ಹಿಂದೂ ಜನಜಾಗೃತಿ ಸಮಿತಿಯಿಂದ ಪ್ರತಿಭಟನೆ ನಡೆಯಿತು.

ಶಿಕಾರಿಪುರ; ವ್ಯಾಲೆಂಟೈನ್ ಡೇ ಹೆಸರಿನಲ್ಲಿ ಸಮಾಜದಲ್ಲಿ ನಡೆಯುವ ಅನಾಚಾರಗಳನ್ನು ಕೂಡಲೇ ತಡೆಗಟ್ಟುವುದು ತುರ್ತು ಅಗತ್ಯವಾಗಿದ್ದು,ತಪ್ಪಿದಲ್ಲಿ ಯುವಪೀಳಿಗೆಯ ಶೈಕ್ಷಣಿಕ ಜೀವನ,ಆರೋಗ್ಯ,ಕುಟುಂಬ ಸಂಬಂಧಗಳು ನಾಶವಾಗಿ ಭವಿಷ್ಯ ಅತ್ಯಂತ ಘೋರವಾಗಲಿದೆ ಎಂದು ಇಲ್ಲಿನ ಹಿಂದೂ ಜನಜಾಗೃತಿ ಸಮಿತಿ ಸಂಚಾಲಕ ಪರಶುರಾಮ ಎಚ್ಚರಿಸಿದರು.

ಪಟ್ಟಣದ ತಾಲೂಕು ಕಚೇರಿ ಮುಂಭಾಗ ಸಮಿತಿ ವತಿಯಿಂದ ವ್ಯಾಲೆಂಟೈನ್ ಡೇ ನೆಪದಲ್ಲಿ ನಡೆಯುವ ಅನಾಚಾರಗಳನ್ನು ತಡೆಗಟ್ಟುವಂತೆ ಆಗ್ರಹಿಸಿ ನಡೆದ ಪ್ರತಿಭಟನಾ ಸಭೆ ನೇತೃತ್ವ ವಹಿಸಿ ಅವರು ಮಾತನಾಡಿದರು.

ಕಳೆದ ಕೆಲ ವರ್ಷಗಳಿಂದ ಫೆ.14 ರಂದು "ವ್ಯಾಲಂಟೈನ್ ಡೇ'' ಆಚರಿಸುವ ಪಾಶ್ಚಾತ್ಯರ ದುಷ್ಟ ಪ್ರವೃತ್ತಿ ಭಾರತದಲ್ಲಿ ವ್ಯಾಪಕವಾಗಿ ಪಸರಿಸಿದೆ ಎಂದ ಅವರು ಪಾಶ್ಚಾತ್ಯರ ವ್ಯಾಪಾರಿಕ ಲಾಭಕ್ಕಾಗಿ ಪ್ರೇಮದ ಹೆಸರಿನಲ್ಲಿ ಈ ವಿಕೃತ ಕಲ್ಪನೆಯ ಪ್ರಚಾರದಿಂದ ಯುವಪೀಳಿಗೆ ಸ್ವೇಚ್ಛಾಚಾರ ಮತ್ತು ಅನೈತಿಕತೆಯಲ್ಲಿ ಮುಳುಗುತ್ತಿರುವುದು ಅತ್ಯಂತ ಕಳವಳಕಾರಿ ಸಂಗತಿ ಎಂದು ವಿಷಾಧಿಸಿದರು.

ಪ್ರೇಮದ ಭೀಭತ್ಸ ಪ್ರದರ್ಶನ ಮಾಡುವ ನೆಪದಲ್ಲಿ ಇತ್ತೀಚಿನ ವರ್ಷಗಳಲ್ಲಿ ಏಕಮುಖ ಪ್ರೀತಿಯಿಂದ ಯುವತಿಯರ ಮೇಲಿನ ಕಿರುಕುಳ, ಹಿಂಸಾತ್ಮಕ ಘಟನೆಗಳು, ಬೆದರಿಕೆ ಹಾಗೂ ಆತ್ಮಹತ್ಯೆಗೆ ಕುಮ್ಮಕ್ಕು ನೀಡುವ ಪ್ರಕರಣಗಳು ಹೆಚ್ಚಾಗುತ್ತಿವೆ. ಇದರ ಜೊತೆಗೆ ನಡೆಯುವ "ಪಾರ್ಟಿಗಳಲ್ಲಿ'' ಯುವಕ-ಯುವತಿಯರು ಮದ್ಯಪಾನ, ಧೂಮಪಾನ, ಮಾದಕ ವಸ್ತುಗಳ ಸೇವನೆ ಮತ್ತಿತರ ಅನಾಚಾರಗಳಲ್ಲಿ ತೊಡಗಿರುವುದು ಕಂಡು ಬರುತ್ತಿದೆ ಎಂದು ತಿಳಿಸಿದರು.

ಯುವತಿಯರಿಗೆ ಮೋಸ ಮಾಡುವ ಪ್ರಕರಣಗಳ ಮೂಲಕ "ಲವ್ ಜಿಹಾದ್'' ಚಟುವಟಿಕೆಗಳೂ ನಡೆಯುತ್ತಿರುವುದು ಸಮಾಜದ ಭದ್ರತೆಗೆ ಭಾರಿ ಅಪಾಯವಾಗಿದೆ ಎಂದು ಆತಂಕ ವ್ಯಕ್ತಪಡಿಸಿ, ವ್ಯಾಲಂಟೈನ್ ಡೇ ಎಂಬ ಅನಿಷ್ಠ ಪದ್ದತಿ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು. ಈ ವೇಳೆ ಹಿಂದೂ ಜನ ಜಾಗೃತಿ ಸಮಿತಿಯ ಈರೇಶ್ ,ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಬಿ.ವಿ. ಮಂಜುನಾಥ್, ಶ್ರೀ ಕಲ್ಪವೃಕ್ಷ ಸೇವಾ ಟ್ರಸ್ಟ್ ಅಧ್ಯಕ್ಷ ವಿ.ರಘು,ಜಯಕರ್ನಾಟಕ ಸಂಘಟನೆಯ ಶಿವಯ್ಯ ಶಾಸ್ತ್ರಿ, ಶ್ರೀನಿವಾಸ್ ,ಮಂಜುನಾಥ ಇದ್ದರು.

ಅಂತರ್ ರಾಜ್ಯ ಸರಗಳ್ಳರ ಬಂಧನ

ಶಿವಮೊಗ್ಗ : ಮಾಂಗಲ್ಯ ಸರ ಕಿತ್ತುಕೊಂಡು ಹೋದ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿಗಳನ್ನು ಹಿಡಿದಾಗ ಅವರು ಅಂತರ್ರಾಜ್ಯ ಸರ ಗಳ್ಳರು, ದರೋಡೆಕೋರರು ಎನ್ನುವ ಸಂಗತಿ ಬೆಳಕಿಗೆ ಬಂದಿದೆ. ಕಳೆದ ನ.18ರಂದು ವಿನೋಬನಗರ ಪೊಲೀಸ್ ಠಾಣೆ ವ್ಯಾಪ್ತಿಯ 60 ಅಡಿ ರಸ್ತೆಯ 16 ಕ್ರಾಸ್ ನ ರಸ್ತೆಯಲ್ಲಿ ಮಹಿಳೆ ನಡೆದುಕೊಂಡು ಹೋಗುವಾಗ ಕೊರಳಲ್ಲಿದ್ದ ಬಂಗಾರದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಹೋದ ಪ್ರಕರಣವನ್ನು ಭೇದಿಸಿದಾಗ ಇದು ಬೆಳಕಿಗೆ ಬಂದಿದೆ. ಕೊಯಮತ್ತೂರಿನ ಅರಸು ಅಲಿ ಯಾಸ್ ವಲ್ಲರಸು ಆರ್. (25), ಬೆಂಗಳೂರಿನ ಪಾದರಾಯಪುರ ಗುಡ್ಡದಹಳ್ಳಿಯ ಕಾಲು ಅಲಿ ಯಾಸ್ ಇಬ್ರಾಹಿಂ ಪಾಶಾ ಅಲಿ ಯಾಸ್ ಇಬ್ರಾಹಿಂ ಬಾಶಾ, ಸೇಲಮ್ನ ಕೇಶವನ್ (43), ತ. ನಾಡಿನ ಹೊಸೂರಿನ ಚಾಲಕ, ಹಾಲಿ ಅತ್ತಿಬೆಲೆಯ ವಾಸಿ ಸತೀಶ್ಕುಮಾರ್ (40)ಇವರನ್ನು ವಶಕ್ಕೆ ಪಡೆದು ವಲ್ಲರಸು ಮತ್ತು ಇಬ್ರಾಹಿಂ ಪಾಶಾ ಆರೋಪಿತರ ಕಡೆಯಿಂದ 40 ಗ್ರಾಂ ಬಂಗಾರದ ಗಟ್ಟಿ ವಶಪಡಿಸಿಕೊಳ್ಳಲಾಗಿದೆ. ಮೂರನೆಯ ಆರೋಪಿ ಕೇಶವನ್ ಕಡೆಯಿಂದ 70 ಗ್ರಾಂ. ತೂಕದ ಮಾಂಗಲ್ಯ ಸರ ಹಾಗೂ 60 ಗ್ರಾಂ ತೂಕದ ಬಂಗಾರದ ಆಭರಣ ವಶ ಪಡಿಸಿಕೊಳ್ಳಲಾಗಿದೆ. ಒಟ್ಟು ಅಂದಾಜು ಮೌಲ್ಯ 25 ಲಕ್ಷ ರು. ಎನ್ನಲಾಗಿದೆ. ಡಿ.ವೈ. ಎಸ್.ಪಿ. ಸಂಜೀವ ಕುಮಾರ್, ಸಿಪಿಐ ಸಂತೋಷ್ ಕುಮಾರ್, ಎಸ್ಐ ತಿರು ಮಲೇಶ್ ಶ್ರಮ ಹಾಕಿದ್ದು, ತಂಡದ ಕಾರ್ಯವನ್ನು ಪೊಲೀಸ್ ಅಧೀಕ್ಷಕ ನಿಖಿಲ್ ಶ್ಲಾಘಿಸಿದ್ದಾರೆ.

ಕಾಯಕ ಸಂಸ್ಕೃತಿಯಿಂದ ಮಾತ್ರ ಬಡತನ ನಿವಾರಣೆ ಸಾಧ್ಯ

ಶಿವಮೊಗ್ಗ: ಶ್ರದ್ದೆ, ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಕಾಯಕದಲ್ಲಿ ತೊಡಗಿದಾಗ ಬಡತನವೇ ಇರುವುದಿಲ್ಲ ಎಂದು ಕಾಯಕ ಶರಣರು ತಮ್ಮ ನಡೆ ಮತ್ತು ನುಡಿಯ ಮೂಲಕ ಸಾರಿದ್ದಾರೆ ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಸಿ.ಎಸ್.ಚಂದ್ರಭೂಪಾಲ ತಿಳಿಸಿದರು.

ಜಿಲ್ಲಾಡಳಿತ, ಜಿಪಂ, ಮಹಾನಗರಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ಮಂಗಳವಾರ ಕುವೆಂಪು ರಂಗಮಂದಿರದಲ್ಲಿ ಆಯೋಜಿಸಲಾಗಿದ್ದ ಕಾಯಕ ಶರಣರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜದಲ್ಲಿ ಅಸಮಾನತೆ, ತಾರತಮ್ಯ ಮತ್ತು ಕೆಟ್ಟ ಸಂಪ್ರದಾಯ ಹೋಗಲಾಡಿಸಲು ಅವರೆಲ್ಲ ಹೋರಾಡಿದ್ದಾರೆ. ಪ್ರತಿಯೊಬ್ಬರೂ ಕಾಯಕದಲ್ಲಿ ತೊಡಗಬೇಕು. ಆಗ ಸಮಾಜದಲ್ಲಿ ಬಡತನವೆಂಬುದು ಇರುವುದಿಲ್ಲ ಎಂದು ತಿಳಿಸಿದ್ದಾರೆ.

ಪ್ರತಿಯೊಬ್ಬ ಶರಣರು ವಚನಗಳ ಮೂಲಕ ಅಪಾರ ಕೊಡುಗೆ ನೀಡಿದ್ದಾರೆ. 12 ನೇ ಶತಮಾನದಿಂದ ನಡೆದು ಬಂದ ಶರಣರ ಕಾಯಕ ಸಂಸ್ಕೃತಿಯನ್ನು ನಾವೆಲ್ಲ ಮುಂದುವರೆಸಿಕೊಂಡು ಹೋಗೋಣ ಎಂದರು.

ಕುವೆಂಪು ರಂಗಮಂದಿರದಲ್ಲಿ ಜಿಲ್ಲಾಡಳಿತದಿಂದ ನಡೆದ ಕಾಯಕ ಶರಣರ ಜಯಂತಿ ಕಾರ್ಯಕ್ರಮವನ್ನು ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಸಿ.ಎಸ್.ಚಂದ್ರಭೂಪಾಲ ಉದ್ಘಾಟಿಸಿದರು.

ಜಾನಪದ ಸಾಹಿತಿ ಡಾ.ಬಸವರಾಜ್ ನೆಲ್ಲಿಸರ ವಿಶೇಷ ಉಪನ್ಯಾಸ ನೀಡಿ, ಶರಣರು ನೀಡಿದ ವಚನಗಳು ಜೀವನ್ಮುಖಿಯಾಗಿವೆ. ಸಿನೆಮಾ, ಸೀರಿಯಲ್, ಮೊಬೈಲ್ ನೋಡುವುದನ್ನು ಬಿಟ್ಟು ಶರಣರ ವಚನ ಸಾಹಿತ್ಯ ಓದಿ ಜೀವನದಲ್ಲಿ ಅಳವಡಿಸಿಕೊಂಡರೆ ನಿಜವಾದ ಕಲ್ಯಾಣ ಆಗುತ್ತದೆ ಎಂದರು.

ಕಾಯಕಕ್ಕೆ ಮತ್ತೊಂದು ಹೆಸರಾದ ಶರಣ ಮಾದಾರ ಚನ್ನಯ್ಯ ಬಸವಣ್ಣನವರಿಗಿಂತ ಹಿರಿಯರಾಗಿದ್ದು ಕುದುರೆ ಕಾಯುವ ಕಾಯಕದಲ್ಲಿ ತೊಡಗಿ, ಬರುವ ಶರಣರಿಗೆ ಅಂಬಲಿ ಪ್ರಸಾದ ನೀಡುತ್ತ ಶಿವನನ್ನೇ ಒಲಿಸಿಕೊಂಡಿದ್ದರು, ಮಾದಾರ ದೂಳಯ್ಯ , ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ , ಉರಿಲಿಂಗ ಪೆದ್ದಿ , ಹೀಗೆ ಅನೇಕ ಶರಣರು ಕಾಯಕ ನಿಷ್ಠೆಗೆ ಹೆಸರಾಗಿದ್ದು, ಸಮಾಜದಲ್ಲಿನ ಅನಿಷ್ಟ ಪದ್ದತಿ ನಿವಾರಣೆಗೆ ತಮ್ಮ ಕೊಡುಗೆ ನೀಡಿದ್ದಾರೆ ಎಂದರು.

ಶಾಲೆ, ಕಾಲೇಜುಗಳಲ್ಲಿ ಹಾಡು, ನೃತ್ಯ, ಉಪನ್ಯಾಸಗಳ ಮೂಲಕ ಕಾಯಕ ಶರಣರ, ದಾರ್ಶನಿಕರ ಬಗ್ಗೆ ಹೇಳುವ ಕೆಲಸ ಆಗಬೇಕು. ಆಗ ಮಾತ್ರ ಮುಂದಿನ ಪೀಳಿಗೆಗೆ ಶರಣರ ವಚನ ತಲುಪಿಸಲು ಸಾಧ್ಯ ಎಂದರು.

ಜಿಲ್ಲಾಡಳಿತ ಕಚೇರಿಯ ತಹಶೀಲ್ದಾರ್ ಪ್ರದೀಪ್ ಆರ್ಮಾತನಾಡಿ, 12ನೇ ಶತಮಾನದ ವಚನ ಸಾಹಿತ್ಯ, ಶರಣರ ಆಶಯಗಳು, ತತ್ವಗಳು, ವಿಚಾರಗಳು ಮುಂದಿನ ಪೀಳಿಗೆಗೆ ತಲುಪಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಉಮೇಶ್ ಇದ್ದರು.

ಗನ್ ಹಿಡಿದು ಕೈ ಮುಖಂಡ ಡ್ಯಾನ್ಸ್

ಕಲಬುರಗಿ: ಕಾಂಗ್ರೆಸ್ ಶಾಸಕ ಎಂ.ವೈ. ಪಾಟೀಲ್ ಆಪ್ತ ಅಫಜಲಪುರದ ಕಾಂಗ್ರೆಸ್ ಮುಖಂಡ ಮತೀನ್ ಪಟೇಲ್ ಕೈಯಲ್ಲಿ ಗನ್ ಹಿಡಿದು ಡ್ಯಾನ್ಸ್ ಮಾಡಿ ಬಿಲ್ಡಪ್ ಕೊಟ್ಟ ವಿಡಿಯೊ ವೈರಲ್ ಆಗಿದ್ದು, ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಮಾತನಾಡಿ, ಘಟನೆ ಎಲ್ಲಿ? ಯಾವಾಗ ನಡೆದಿದೆ ಎಂಬ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ. ಗನ್ ಪರವಾನಿಗೆ ಬಗ್ಗೆ ಪರಿಶೀಲನೆ ನಡೆಯುತ್ತಿದೆ ಎಂದಿದ್ದಾರೆ.

ಕರ್ನಾಟಕ ಸರ್ಕಾರ
(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಐ.ಎಫ್.ಟಿ.ಸಂಖ್ಯೆ: 35/2025-26 ದಿನಾಂಕ: 07.02.2026

ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗೆ ಕೆಡಬ್ಲ್ಯೂ-1,2,3,4ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಕೆ.ಪಿ.ಪಿ.ಪೋರ್ಟಲ್ https://kppp.karnataka.gov.in ನಲ್ಲಿ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಯ ಕಾಮಗಾರಿಗೆ ಒಂದು ಮತ್ತು ಎರಡು ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಮೊತ್ತ ರೂ.232.09 ಲಕ್ಷಗಳು ಮತ್ತು ಕನಿಷ್ಠ ಟೆಂಡರ್ ಮೊತ್ತ ರೂ.3.20 ಲಕ್ಷಗಳು. ಟೆಂಡರ್ ಸಲ್ಲಿಸುವ ಕಡೆಯ ದಿ: 16-02-2026 ಸಮಯ 17.00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಕೆಪಿಪಿ-ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/-ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/1052/ಕೆಎಸ್‌ಎಂಸಿಎ/2025-26

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ನಂ.ಲೋ.ಇ./ಚಿ.ವಿ./ಸ.ಇಂ.-1/ಟೆಂಡರ/2025-26/6910 ದಿನಾಂಕ: 09/02/2026
ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025-26 ನೇ ಸಾಲಿನ ಲೆಕ್ಕ ಶೀರ್ಷಿಕೆ 4059-ಎಸ್.ಸಿ.ಪಿ-ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ (CMIDP) ಅಡಿ 47 ಕಾಮಗಾರಿಗಳು ಮತ್ತು ಲೆಕ್ಕ ಶೀರ್ಷಿಕೆ 4059-ಟಿ.ಎಸ್.ಪಿ-ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ (CMIDP) ಅಡಿ 19 ಕಾಮಗಾರಿಗಳು, ಹೀಗೆ ಒಟ್ಟು 66 ಕಾಮಗಾರಿಗಳು ಇದ್ದು, ಗುತ್ತಿಗೆಗೆ ಇಟ್ಟ ಕನಿಷ್ಠ ಮೊತ್ತ ರೂ. 6.40 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 80.00 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್ ಆವ್ಹಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಆಕ್ಷೇಪಣೆ-ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:16-02-2026 (ಸಾಯಂಕಾಲ 5.30 ಗಂಟೆಯವರೆಗೆ),2)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 18-02-2026 (ಸಾಯಂಕಾಲ 5.00 ಗಂಟೆಯವರೆಗೆ), 3)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 20-02-2026 (ಸಾಯಂಕಾಲ 4.30 ಗಂಟೆಗೆ), 4)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 5)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-1808/KSMCA/2025-26

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಸಮ್ಮಾನ್ ಫಿನ್ಸರ್ವ್ ಲಿಮಿಟೆಡ್ (CIN:U65923DL2006PLC150632) (ಈಗಿನ ಹೆಸರು: **ಇಂಡಿಯಾಬುಲ್ಸ್ ಕಮರ್ಷಿಯಲ್ ಕ್ರೆಡಿಟ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕೆಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **30.10.2025** ರಂದು ಕರೆದು ಸಾಲಗಾರ **ದುರ್ಗಾ ಲಾಲ್ ಮಾಲೀಕರು M/S ಎಸ್‌ಎಲ್‌ವಿ ಎಂಟರ್‌ಪ್ರೈಸಸ್ ಮತ್ತು ಗೀತಾ ದೇವಿ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 22,30,991.73(ಇಪ್ಪತ್ತೆರಡು ಲಕ್ಷ ಮೂವತ್ತು ಸಾವಿರದ ಒಂಬೈ ನೂರ ತೊಂಬತ್ತೊಂದು ರೂಪಾಯಿಗಳು ಮತ್ತು ಎಪ್ಪತ್ತಮೂರು ಪೈಸೆ ಮಾತ್ರ)** ಸಾಲ ಖಾತೆ ನಂ. **HLLABGM00509741** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **29.10.2025** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **06.02.2026** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಫಿನ್ಸರ್ವ್ ಲಿಮಿಟೆಡ್** (ಈಗಿನ ಹೆಸರು: **ಇಂಡಿಯಾಬುಲ್ಸ್ ಕಮರ್ಷಿಯಲ್ ಕ್ರೆಡಿಟ್ ಲಿಮಿಟೆಡ್**) ನ ಬಾಕಿ ಇರುವ ಮೊತ್ತ **ರೂ. 22,30,991.73 (ಇಪ್ಪತ್ತೆರಡು ಲಕ್ಷ ಮೂವತ್ತು ಸಾವಿರದ ಒಂಬೈ ನೂರ ತೊಂಬತ್ತೊಂದು ರೂಪಾಯಿಗಳು ಮತ್ತು ಎಪ್ಪತ್ತಮೂರು ಪೈಸೆ ಮಾತ್ರ) 29.10.2025** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

(ಸಂಪೂರ್ಣ ಆಸ್ತಿ)

ಆಸ್ತಿ ಹೊಂದಿರುವ ಆಸ್ತಿಯ ಭಾಗದ ಎಲ್ಲಾ ತುಣುಕು ಮತ್ತು ಪಾರ್ಸೆಲ್ ಸೈಟ್ ಸಂಖ್ಯೆ 1, ಮೌಲ್ಯಮಾಪನ ಹಳೆಯ ಸಂಖ್ಯೆ 57 / ಪ 20, ಹೊಸ ಸಂಖ್ಯೆ 214, ಕಥಾ ಸಂಖ್ಯೆ 312, 30' x 40' ಅಡಿ ಅಳತೆ ಮತ್ತು 30' + 41'3''/2X25' ಅಡಿ ಎರಡೂ 'ಲ' ಆಕಾರ, ಎರಡೂ ಅಳತೆಗಳಲ್ಲಿ 2092.5 ಚದರ ಅಡಿ ಅಳತೆ. ಸಿಂಗೇನ ಅಗ್ರಹಾರ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆ - 560100 ನಲ್ಲಿದೆ ಮತ್ತು ಬದ್ಧವಾಗಿದೆ:

ಪೂರ್ವ : ಅದೇ ಆಸ್ತಿಯ ಉಳಿದ ಭಾಗ
ಪಶ್ಚಿಮದಲ್ಲಿ : ರಸ್ತೆ
ಉತ್ತರದಲ್ಲಿ : ರಸ್ತೆ
ದಕ್ಷಿಣದಲ್ಲಿ : ಸೈಟ್ ಸಂಖ್ಯೆ 2

(ಆಸ್ತಿಯನ್ನು ಅಡಮಾನ ಇಡಲಾಗಿದೆ)

ಆಸ್ತಿಯ ಭಾಗದ ಆ ಎಲ್ಲಾ ತುಣುಕು ಮತ್ತು ಪಾರ್ಸೆಲ್ ಸೈಟ್ ಸಂಖ್ಯೆ 1, ಮೌಲ್ಯಮಾಪನ ಹಳೆಯ ಸಂಖ್ಯೆ 57/ಪ20, ಹೊಸ ಸಂಖ್ಯೆ 214, ಕಾಥಾ ಸಂಖ್ಯೆ 312, 37+30/2 X 15 ಅಡಿ ಅಳತೆ ಮತ್ತು 10X10 ಚದರ ಅಡಿ 'ಲ' ಆಕಾರ, ಸಿಂಗೇನ ಅಗ್ರಹಾರ ಗ್ರಾಮದಲ್ಲಿ ನೆಲೆಗೊಂಡಿರುವ ಒಟ್ಟು 602.6 ಅಡಿ ಅಳತೆಯ ಆಸ್ತಿ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆ - 560100, ಮತ್ತು ಕೆಳಗೆ:

ಪೂರ್ವ : ಮದನ್ ಲಾಲ್ ಅವರ ಉಳಿದ ಭಾಗ
ಪಶ್ಚಿಮದಲ್ಲಿ : ರಸ್ತೆ
ಉತ್ತರದಲ್ಲಿ : ರತ್ನ ರಾಮನ ಫೆಬ್ರವರಿಯಲ್ಲಿ ದುರ್ಗಾ ಲಾಲ್ ಅವರು ಮಾರಾಟ ಮಾಡಿದ ರಸ್ತೆ ಉಳಿದ ಆಸ್ತಿ
ದಕ್ಷಿಣದಲ್ಲಿ : ರಮ್ಯಾ ರೆಡ್ಡಿ ಮುಲ್ಲೂರಿನ ಫೆಬ್ರವರಿಯಲ್ಲಿ ದುರ್ಗಾ ಲಾಲ್ ಅವರು ಮಾರಾಟ ಮಾಡಿದ ರಸ್ತೆ ಉಳಿದ ಆಸ್ತಿ

ಅಧಿಕಾರವಿರುವ ಅಧಿಕಾರಿ
ದಿನಾಂಕ: 06.02.2026 ಕ್ಯಾಪಿಟಲ್ ಲಿಮಿಟೆಡ್
ಸ್ಥಳ : ಬೆಂಗಳೂರು (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**)

ಜ.ನರವಣೆ ಪುಸ್ತಕ ವಿವಾದಕ್ಕೆ ಅಚ್ಚರಿ ತಿರುವು

← ಮೊದಲಪುಟದಿಂದ

ಫ್ಯಾಕ್ಟ್ ಚೆಕ್ಕಿಂಗ್ ಮಾಡುವ ಮೊಹಮ್ಮದ್ ಜುಬೇರ್ ಹಂಚಿಕೊಂಡಿರುವ ಜ.ನರವಣೆಯವರ 2023, ಡಿಸೆಂಬರ್ ತಿಂಗಳ ಟ್ವೀಟ್‌ನ ಸ್ಕ್ರೀನ್‌ಶಾಟ್ ಅನ್ನು ತೋರಿಸಿದ್ದಾರೆ. ಇಂತಹದ್ದೊಂದು ಪುಸ್ತಕವೇ ಇಲ್ಲ, ಅದು ಬಿಡುಗಡೆಯೂ ಆಗಿಲ್ಲ. ಆ ಬಗ್ಗೆ ಮಾತನಾಡಬಾರದೆಂದು ಸಂಸತ್‌ನಲ್ಲಿ ಸ್ಪೀಕರ್, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಕೇಂದ್ರ ಸರಕಾರ ಹೇಳಿ ನನಗೆ ಮಾತನಾಡಲು ಅವಕಾಶ ನೀಡಿರಲಿಲ್ಲ.
ಈಗ ಪುಸ್ತಕ ಅಸ್ತಿತ್ವದಲ್ಲಿರುವುದಕ್ಕೆ ಸಾಕ್ಷ್ಯವಿದೆ. ಇದನ್ನು ಯುವಕರು ಓದಬೇಕೆಂದು ಹೇಳಿದ್ದಾರೆ.

ಅಷ್ಟು ಮಾತ್ರವಲ್ಲ ಪುಸ್ತಕ ಅಮೇಜಾನ್‌ನಲ್ಲಿ ಲಭ್ಯವಿದೆ, ಅದನ್ನು ಕೊಳ್ಳಲು ಈ ಲಿಂಕ್ ಅನ್ನು ಒತ್ತಿ ಎಂದು ನರವಣೆಯೇ ಟ್ವೀಟ್‌ನಲ್ಲಿ ಹೇಳಿದ್ದಾರೆ. ಒಂದೋ ಪೆಂಗ್ವಿನ್ ಸುಳ್ಳು ಹೇಳಿರಬೇಕು, ಇಲ್ಲ ನರವಣೆ ಸುಳ್ಳು ಹೇಳಿರಬೇಕು. ನನಗೆ ನರವಣೆಯವರ ಮೇಲೆ ನಂಬಿಕೆಯಿದೆ. ನೀವು ಪೆಂಗ್ವಿನ್ ಹೇಳಿದ್ದು ಸತ್ಯ ಎನ್ನುತ್ತೀರಾ ಎಂದು ರಾಹುಲ್ ಗಾಂಧಿ ಪ್ರಶ್ನಿಸಿದ್ದಾರೆ. ಇದರೊಂದಿಗೆ ಇಡೀ ಪ್ರಕರಣ ಹೊಸ ತಿರುವು ಪಡೆದುಕೊಂಡಿದೆ. ಸದ್ಯ ಈ ಪುಸ್ತಕವನ್ನು ಓದುವ ಕುತೂಹಲ ತೀವ್ರಗೊಂಡಿದೆ.

ಕಂದಾಯ ಆಯುಕ್ತಾಲಯ, ಕಂದಾಯ ಇಲಾಖೆ
ಭೂಮಿ ಉಸ್ತುವಾರಿ ಕೋಶ
1ನೇ ಮಹಡಿ, ಎಸ್.ಎಸ್.ಎಲ್.ಆರ್.ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು-560001.
ಇ-ಮೇಲ್: bhoomi.bmc01@gmail.com ದೂರವಾಣಿ ಸಂ: 080-22113255
No: BMC/2025-26/IND0027 Date: 10/02/2026
ಇ-ಟೆಂಡರ್ ಅಧಿಸೂಚನೆ

ಭೂಮಿ ಉಸ್ತುವಾರಿ ಕೋಶ ಕಛೇರಿಯಿಂದ "IT Infrastructure for Revenue Courts", ಅನ್ನು ಸರಬರಾಜು ಮಾಡಲು ಇ-ಟೆಂಡರ್ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ದಿನಾಂಕ: 17/02/2026ರ ಸಂಜೆ 5.29 ಗಂಟೆಯೊಳಗೆ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್ ಷರತ್ತು ಮತ್ತಿತರ ವಿವರಗಳನ್ನು https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/-
ಸಹಾಯಕ ಆಯುಕ್ತರು,
ಭೂಮಿ ಉಸ್ತುವಾರಿ ಕೋಶ, ಕಂದಾಯ ಇಲಾಖೆ
DIPR/CP/SHIRDI SAI/ 5574/2025-26

ಪದವಿ ಪೂರ್ವ ಶಿಕ್ಷಣ ಇಲಾಖೆ
ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)
ಮೈಸೂರು ಜಿಲ್ಲೆ. ಇ-ಮೇಲ್: ddnnpue@gmail.com
ಸಂ: ಶಾಶಿಇ(ಪಪೂ)/ಇ-ಟೆಂಡರ್/ಅಲ್ಪಾವಧಿ ಟೆಂ/2025-26 ದಿನಾಂಕ: 07.02.2026

ಅಲ್ಪಾವಧಿ ಟೆಂಡರ್ ಅಧಿಸೂಚನೆ
(ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಉಪನಿರ್ದೇಶಕರ ಕಚೇರಿ, ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ) ಮೈಸೂರು ಇವರಿಂದ ಈ ಕೆಳಕಂಡಂತೆ ಆಯ್ದ 06 ಆದರ್ಶ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ವಿಜ್ಞಾನ ವಿಭಾಗಕ್ಕೆ ಅವಶ್ಯವಿರುವ ಪ್ರಯೋಗಾಲಯ ಉಪಕರಣಗಳನ್ನು ಖರೀದಿಸಿ ಸರಬರಾಜು ಮಾಡುವ ಅಲ್ಪಾವಧಿ ಟೆಂಡರ್‌ನ್ನು ಕೆ.ಪಿ.ಪಿ.ಪಿ ನಿಯಮಾನುಸಾರ ಖರೀದಿ ಹಾಗೂ ಪೂರೈಸುವ ಕುರಿತು ಇ-ಟೆಂಡರ್ ಅನ್ನು ಆಸಕ್ತ ಸಂಸ್ಥೆಗಳಿಂದ ಆಹ್ವಾನಿಸಲಾಗಿದೆ.

ಕ್ರ. ಸಂ.	ವಿವರಗಳು	ಟೆಂಡರ್ ಸಂಖ್ಯೆ	ಟೆಂಡರ್ ಮೊತ್ತ ಲಕ್ಷ ರೂಗಳಲ್ಲಿ
01	SUPPLY OF LAB EQUIPMENTS FOR 06 GOVT ADARSHA PU COLLEGES 06 ಸರ್ಕಾರಿ ಆದರ್ಶ ಪದವಿ ಪೂರ್ವ ಕಾಲೇಜುಗಳಿಗೆ ಪ್ರಯೋಗಾಲಯ ಉಪಕರಣಗಳನ್ನು ಸರಬರಾಜು ಮಾಡುವ ಬಗ್ಗೆ.	PUED/ 2025-26/ IND0105	ರೂ. 54.00 ಲಕ್ಷ

ಸಂಪೂರ್ಣ ಟೆಂಡರ್ ವಿವರಗಳನ್ನು https://kppp.karnataka.gov.in ನಲ್ಲಿ ವೀಕ್ಷಿಸಬಹುದಾಗಿದ್ದು ಇ-ಟೆಂಡರ್ ಸಲ್ಲಿಸಲು ಪ್ರಾರಂಭ **ದಿನಾಂಕ: 07.02.2026** ಕೊನೆಯ **ದಿನಾಂಕ: 16.02.2026 ಸಂಜೆ 5:30 ಗಂಟೆಗೆ.** ಹೆಚ್ಚಿನ ವಿವರಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನ್ನು ಸಂಪರ್ಕಿಸುವುದು.

ಸಹಿ/- ಉಪನಿರ್ದೇಶಕರು
DIPR/MYS/1635/SA/2025-26 ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), ಮೈಸೂರು.

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಸಾಮಾಜಿಕ ಅರಣ್ಯ ಉಪ-ವಿಭಾಗ, ವಿಜಯಪುರ
ಸಂಖ್ಯೆ: ವಿಜೆಪಿ/ಸಾಅವಿ/ಇ-ಪ್ರೊಕ್ಯೂರ್‌ಮೆಂಟ್/ಕ.ಟೆಂ/2025-26
ದಿನಾಂಕ:09.02.2026
ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ವಿಜಯಪುರ ಸಾಮಾಜಿಕ ಅರಣ್ಯ ಉಪ-ವಿಭಾಗದ ಅಧೀನ ಸಾಮಾಜಿಕ ಅರಣ್ಯ ವಲಯಗಳಲ್ಲಿ 2026-27 ನೇ ಸಾಲಿನಲ್ಲಿ ಕೈಗೊಳ್ಳುವ ವಿವಿಧ ಯೋಜನೆಯಡಿ ನೆಡುತೋಪು ನಿರ್ಮಾಣ, ನೆಡುತೋಪು ನಿರ್ವಹಣೆ ಹಾಗೂ 14x20 ಅಳತೆಯ ಸಸಿಗಳ ನಿರ್ವಹಣೆ ಕಾಮಗಾರಿಗಳಿಗೆ ಟೆಂಡರ್‌ನ್ನು ದಿನಾಂಕ: 09.02.2026 ರಿಂದ 17.02.2026 ರವರೆಗೆ ಅರ್ಹ ನೋಂದಾಯಿತ ಅರಣ್ಯ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಅರಣ್ಯೀಕರಣ ಕಾಮಗಾರಿಗಳಿಗೆ ಟೆಂಡರ್‌ನ್ನು ಕರೆಯಲಾಗಿದೆ ಹಾಗೂ (**ಟೆಕ್ನಿಕಲ್ ಮತ್ತು ಫೈನಾನ್ಸಿಯಲ್ ಬಿಡ್ ತೆರೆಯುವ ದಿನಾಂಕ: 19.02.2026 ರಂದು ಬೆಳಿಗ್ಗೆ 11.00 ಘಂಟೆಗೆ**) ಭಾಗವಹಿಸಲಿಚ್ಚಿಸುವವರು ತಮಗೆ ಅನುಕೂಲವಾಗುವ ಟೆಂಡರ್ ವಿವರಗಳನ್ನು www.kppp. karnataka.gov.in ಮೂಲಕ ಟೆಂಡರ್ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಸಹಿ/-ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ಉಪ ವಿಭಾಗ, ವಿಜಯಪುರ
ವಾಸಾಸಂಇ/ವಿಜಯಪುರ/686/ಕೆಎಸ್‌ಎಂಸಿಎ/2025-26

ಕರ್ನಾಟಕ ಸರಕಾರ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಕಾರ್ಯಾಲಯ, ಜಿಲ್ಲಾ ಪಂಚಾಯತ್, ಹಾವೇರಿ
ಸಂ:ಹಾಜಿಪಂ/ಅಭಿ-8/NRLM/ಹೊರಗುತ್ತಿಗೆ/ಇ-ಟೆಂ/2025-26 (ಇ-24170) ದಿನಾಂಕ : 07-02-2026
ಇ-ಟೆಂಡರ್ ಪ್ರಕಟಣೆ

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಹಾವೇರಿ ಇವರಿಂದ ಜಿಲ್ಲೆಯ ಸಂಜೀವಿನಿ- ರಾಷ್ಟ್ರೀಯ ಜೀವನೋಪಾಯ ಅಭಿಯಾನ ಯೋಜನೆಯ (NRLM) ಅನುಷ್ಠಾನಕ್ಕಾಗಿ 2 ವರ್ಷದ ಅವಧಿಗೆ ಜಿಲ್ಲಾ ಮತ್ತು ತಾಲ್ಲೂಕಗಳಲ್ಲಿನ 45 ಹೊರಗುತ್ತಿಗೆ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಮೇಲೆ ಮಾನವ ಸಂಪನ್ಮೂಲ ಏಜೆನ್ಸಿ ಮೂಲಕ ಪಡೆಯಲು ಇ-ಟೆಂಡರ್‌ನ್ನು ಆಹ್ವಾನಿಸಲಾಗಿದೆ. ವಿವರ ಕೆಳಗಿನಂತಿದೆ: (1) E-Tender Number: RDPR/2025-26/SE3452. (2) ಟೆಂಡರಗಿಟ್ಟ ಅಂದಾಜು ಮೊತ್ತ ರೂ. **137.68** ಲಕ್ಷಗಳು. (3) E.M.D ಮೊತ್ತ ರೂ. ಇ-ಪೋರ್ಟಲ್ ನಲ್ಲಿರುವಂತೆ. (4) ಟೆಂಡರ ದಾಖಲೆಗಳನ್ನು ಇ-ಪ್ರಕ್ಯೂರ್‌ಮೆಂಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ದಿನಾಂಕ : **24-02-2026** ಸಂಜೆ 4.30 ರವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. (5) ಇ-ಪೋಕ್ಯುರಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **26-02-2026.** 11.00 A.M. (6) ಇ-ಪೋಕ್ಯುರಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್‌ಗಳ ಆರ್ಥಿಕ ಬಿಡ್ ತೆರೆಯುವ ದಿನಾಂಕ : **27-02-2026.** 11.30 A.M.

ಕೆಲಸದ ಹೆಸರು/ಪೂರೈಕೆದಾರರ ಅರ್ಹತೆ/ಟೆಂಡರ್ ನಿಯಮಗಳು/ಟೆಂಡರ್ ಪ್ರೋಸೆಸ್ಸಿಂಗ್ ಫೀ ಇತ್ಯಾದಿ ವಿವರಗಳಿಗೆ http://kppp.karnataka.gov.in ಮೂಲಕ ಪಡೆಯಬಹುದು.

ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ ಹಾವೇರಿ.
ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/695/2025-26

ಮೇಲೆ ದೋಸ್ತಿ ಒಳಗೊಳಗೇ ಕುಸ್ತಿ | ನಾ ಕೊಡೆ ನೀ ಬಿಡೆ ಎನ್ನುತ್ತಿರುವ ಬಿಜೆಪಿ -ಜೆಡಿಎಸ್
ಜಿಬಿಎ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆ ಹತ್ತಿರದಲ್ಲಿದ್ದರೂ ಸಾಧಿಸದ ಸಮನ್ವಯ

ಸ್ಥಳೀಯ ಚುನಾವಣೆಗೆ ಮೈತ್ರಿ ಮುನಿಸು

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು; ಆಡಳಿತಾರೂಢ ಕಾಂಗ್ರೆಸ್ ಪಕ್ಷವನ್ನು ಕಟ್ಟಿ ಹಾಕಬೇಕಿದ್ದ ಮೈತ್ರಿ ಪಕ್ಷಗಳಲ್ಲಿ ವಿರಸ ಮೂಡಿದ್ದು, ಮೇಲೆ ದೋಸ್ತಿ ಒಳಗೊಳಗೆ ಕುಸ್ತಿ ಎನ್ನುವಂತಾಗಿ ಬಿಜೆಪಿ ಹಾಗೂ ಜೆಡಿಎಸ್‌ನಲ್ಲಿ ಬಿರುಕು ಮೂಡಿದಂತಾಗಿದೆ.

ಗ್ರೇಟರ್ ಬೆಂಗಳೂರು (ಜಿಬಿಎ) ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆ ಹತ್ತಿರವಿದ್ದರೂ ಕಾಂಗ್ರೆಸ್ ಪಕ್ಷ ಸಭೆಗಳನ್ನು ನಡೆಸಿ ತಮ್ಮ ಪಕ್ಷದ ಹುರಿಯಾಳುಗಳನ್ನು ಸಿದ್ದಪಡಿಸುವಲ್ಲಿ ಒಂದು ಕೈ ಮುಂದಿದೆ. ಇದಕ್ಕೆ ಸೆಡ್ಡು ಹೊಡೆಯಲು ಸಿದ್ದರಾಗಬೇಕಿದ್ದ ಮೈತ್ರಿ ಪಕ್ಷಗಳಲ್ಲಿ ತಮ್ಮ ಕಾರ್ಯಕರ್ತರನ್ನು ಹುರಿದುಂಬಿಸುವ ಕೆಲಸಕ್ಕಿಂತಲೂ ಒಳಗೊಳಗೇ ಕಾಲೆಯುವುದರಲ್ಲೇ ಸಮಯ ವ್ಯರ್ಥವಾಗುತ್ತಿದ್ದು, ಸಮನ್ವಯ ಸಾಧಿಸುವುದರಲ್ಲೇ ಇನ್ನೂ ಕಾಲಹರಣ ಮಾಡುವಂತಾಗಿದೆ ಎಂಬುದು ಕೆಲ ಭಾಗದ ಕಾರ್ಯಕರ್ತರ ಆಕ್ರೋಶವಾಗಿದೆ. ಹೀಗಾಗಿ ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸ್ಪರ್ಧೆ ನೀಡುವುದು ಹೋಗಲಿ ಸ್ಥಳಿಯವಾಗಿ ಚುನಾವಣೆಗೆ ಸಿದ್ದರಾಗಿ ಅಧಿಕಾರ ಗದ್ದುಗೆ ಹಿಡಿಯಬೇಕೆಂಬ ಬಿಜೆಪಿ - ಜೆಡಿಎಸ್ ಮೈತ್ರಿ ಕೂಟದಲ್ಲಿ ದಿನದಿಂದ ದಿನಕ್ಕೆ ಬಿರುಕು ಮೂಡುತ್ತಿದೆ. ಮೇಲ್ನೋಟಕ್ಕೆ ಮಾತ್ರ ನಾವು ಒಂದಾಗಿದ್ದೇವೆ ಎಂದು ಹೇಳುತ್ತಿದ್ದರೂ ವಾಸ್ತವ ಮಾತ್ರ ಪಕ್ಷದ ನಾಯಕರು ಅಂದುಕೊಂಡಂತೆ ಇಲ್ಲ. ಎರಡು ಪಕ್ಷಗಳ ನಾಯಕರು ಸೇರಿಗೆ ಸವ್ವಾ ಸೇರು ಎನ್ನುವಂತೆ ಆರೋಪ- ಪ್ರತ್ಯಾರೋಪ ಮಾಡುತ್ತಿರುವುದು ಮೈತ್ರಿಯಲ್ಲಿ ಎಲ್ಲವೂ ಸರಿ ಇಲ್ಲ. ವಿಶೇಷವಾಗಿ ಹಳೆ ಮೈಸೂರು ಭಾಗದಲ್ಲಿ ರಾಜಕೀಯ ಅಸ್ತಿತ್ವ ಉಳಿಸಿಕೊಳ್ಳಲು ಹೆಣಗಾಡುತ್ತಿರುವ ಕೆಲವರು ಜೆಡಿಎಸ್ ಜೊತೆ ಮೈತ್ರಿಗೆ ಬಹಿರಂಗವಾಗಿ ವಿರೋಧ ವ್ಯಕ್ತಪಡಿಸುತ್ತಿದ್ದು ಮೈತ್ರಿಯಲ್ಲಿ ಬಿರುಕು ಮೂಡಿದೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪರಭಾವಗೊಂಡಿದ್ದ ಬಿಜೆಪಿಯ ಕೆಲವು ನಾಯಕರು ಜೆಡಿಎಸ್ ಪಕ್ಷದ ಜೊತೆ ಮೈತ್ರಿ ಬೇಡ ಎನ್ನುತ್ತಿದ್ದಾರೆ. ಇದು ಎರಡು ಪಕ್ಷಗಳಲ್ಲಿ ಗೊಂದಲ ಸೃಷ್ಟಿಸಿದೆ. . ವಿಶೇಷವಾಗಿ ಮಂಡ್ಯ, ಹಾಸನ , ತುಮಕೂರು ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಮಾತ್ರ ಜೆಡಿಎಸ್ ಜೊತೆ ಮೈತ್ರಿಗೆ ಬಿಜೆಪಿ ನಾಯಕರಲ್ಲಿ ಒಮ್ಮತ ಇದ್ದಂತಿಲ್ಲ. ಹೀಗಿದ್ದರೂ ಕೇಂದ್ರದ ನಾಯಕರು ಜೆಡಿಎಸ್ ಜೊತೆ ಮೈತ್ರಿ ಮುಂದುವರೆಸುವಂತೆ ಸೂಚ್ಯವಾಗಿ ಸೂಚಿಸಿದ್ದಾರೆ ಎನ್ನಲಾಗಿದೆ.

ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್‌ಗೆ ಕ್ಷೇತ್ರಗಳನ್ನು ಬಿಟ್ಟುಕೊಟ್ಟರೆ ತಮ್ಮ ರಾಜಕೀಯ ಅಸ್ತಿತ್ವವೇ ಉಳಿಯುವುದಿಲ್ಲ ಎಂಬ ಆತಂಕದಿಂದ ತೆನೆ ಹೊತ್ತ ಮಹಿಳೆ ಜೊತೆ ಮೈತ್ರಿ ಏಕೆ ಎಂದು ಪ್ರಶ್ನೆ ಮಾಡುತ್ತಿದ್ದಾರೆ. ಏನೇ ವೈಮನಸ್ಸು ಭಿನ್ನಾಭಿಪ್ರಾಯ ಇದ್ದರೂ ಎಲ್ಲವನ್ನೂ ಸಹಿಸಿಕೊಂಡು ಕಾಂಗ್ರೆಸ್ ಪಕ್ಷ ಸೋಲಿಸಲು ಎಲ್ಲರೂ ಒಗ್ಗಟ್ಟಾಗಬೇಕೆಂದು ಬಿಜೆಪಿ ನಾಯಕರು ಪದೇ ಪದೇ ಹೇಳುತ್ತಿದ್ದರೂ ಮೈತ್ರಿ ಧರ್ಮವನ್ನು ಯಾರೂ ಪಾಲನೆ ಮಾಡುತ್ತಿಲ್ಲ. ಮೈತ್ರಿ ಮುಂದುವರೆಯುತ್ತದೆ ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಹೇಳಿದ್ದರೂ, ಕೇಂದ್ರ ಸಚಿವ ಕುಮಾರಸ್ವಾಮಿಯದ್ದು ಲೆಕ್ಕಾಚಾರ ಬೇರೇನೇ ಇದೆ. ಎಲ್ಲವನ್ನೂ ದೊಡ್ಡವರು ನೋಡಿಕೊಳ್ಳುತ್ತಾರೆ ಎಂದು ಯುವಜನತಾದಳದ ಅಧ್ಯಕ್ಷ ನಿಖಿಲ್ ಹೇಳುತ್ತಿದ್ದರೂ ಒಬ್ಬೊಬ್ಬರದ್ದು ಒಂದೊಂದು ಲೆಕ್ಕಾಚಾರ. ಮೈತ್ರಿ ಧರ್ಮದ ಸಮನ್ವಯತೆ ಸಾಧಿಸಬೇಕಾದ ಅನಿವಾರ್ಯತೆ ಇರುವ ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಮಾತುಕತೆ ನಡೆಸಿದ್ದರೂ ಅದರ ಫಲಿತಾಂಶ ಮಾತ್ರ ಶೂನ್ಯ. ಇದು ಕಾಂಗ್ರೆಸ್‌ಗೆ ವರದಾನವಾಗಿದೆ.

ಯಾಕೀ ವಿರೋಧ ?

ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ವಿಧಾನಸಭಾ ಕ್ಷೇತ್ರದಿಂದ ಕಳೆದ ಬಾರಿ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದ ಮಾಜಿ ಸಚಿವ ನಾರಾಯಣಗೌಡ ಮೈತ್ರಿಗೆ ಒಪ್ಪುತ್ತಿಲ್ಲ. ಕಾರಣ, ಈ ಕ್ಷೇತ್ರ ಜೆಡಿಎಸ್ ಗೆ ಬಿಟ್ಟುಕೊಟ್ಟರೆ ತಾವು ರಾಜಕೀಯವಾಗಿ ಮೂಲೆಗುಂಪು ಆಗಬೇಕಾಗುತ್ತದೆ ಎಂಬ ಆತಂಕ ಅವರಲ್ಲಿದೆ. ಮದ್ದೂರು ಹೇಳಿ ಕೇಳಿ ಜೆಡಿಎಸ್ ಪ್ರಾಬಲ್ಯ ಹೊಂದಿರುವ ಕ್ಷೇತ್ರ. ಒಂದು ವೇಳೆ ಜೆಡಿಎಸ್ ಗೆ ಇಲ್ಲಿ ಕ್ಷೇತ್ರ ಬಿಟ್ಟುಕೊಟ್ಟರೆ ಮಗನ ರಾಜಕೀಯ ಭವಿಷ್ಯಕ್ಕೆ ಕೊಡಲಿ ಪೆಟ್ಟು ಬೀಳುತ್ತದೆ ಎಂಬ ಆತಂಕ ಸುಮಲತಾ ಅಂಬರೀಷ್ ಅವರದ್ದು. ಇದೇ ರೀತಿ ಶ್ರೀರಂಗಪಟ್ಟಣದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ 40 ಸಾವಿರ ಕ್ಕೂ ಹೆಚ್ಚು ಮತಗಳನ್ನು ಪಡೆದಿದ್ದ ಸಚ್ಚಿದಾನಂದಮೂರ್ತಿ ಕೂಡ ಈ ಕ್ಷೇತ್ರದ ಪ್ರಬಲ ಆಕಾಂಕ್ಷಿ. ಆದರೆ ಜೆಡಿಎಸ್ ಮಾಜಿ ಶಾಸಕ ರವೀಂದ್ರ ಶ್ರೀಕಂಠೇಗೌಡ ಪ್ರಬಲ ಆಕಾಂಕ್ಷಿ. ಹಾಸನ ಜಿಲ್ಲೆಗೆ ಬಂದರೆ ಮಾಜಿ ಶಾಸಕ ಪ್ರೀತಂ ಗೌಡ ಇಲ್ಲಿ ಒಂದು ಬಾರಿ ಗೆದ್ದು ಕಳೆದ ಬಾರಿ ಪರಾಭವಗೊಂಡಿದ್ದರು. ಈ ಕ್ಷೇತ್ರದಲ್ಲಿ ಜೆಡಿಎಸ್ ಹಾಲಿ ಶಾಸಕ ಸ್ವರೂಪ್ ಪ್ರಕಾಶ್ ಇರುವುದರಿಂದ ಬಿಜೆಪಿಗೆ ಸ್ಥಾನ ಬಿಟ್ಟು ಕೊಡುವುದು ಅಷ್ಟು ಸುಲಭವಲ್ಲ. ಹಾಸನದಲ್ಲಿ ಬಿಜೆಪಿ-ಜೆಡಿಎಸ್ ಕಾರ್ಯಕರ್ತರು ಒಂದು ರೀತಿ ಹಾವು ಮುಂಗಸಿಯಂತೆ ಇದ್ದಾರೆ. ಇನ್ನು ಸಕಲೇಶಪುರ ಹಾಗೂ ಬೇಲೂರು ವಿಧಾನಸಭಾ ಕ್ಷೇತ್ರಗಳ ಪರಿಸ್ಥಿತಿಯೂ ಇದೇ ರೀತಿ ಇದೆ.

ಸ್ಥಳೀಯವಾಗಿ ಮನಸಿಲ್ಲ

ಜಿಬಿಎ ಚುನಾವಣಾ ಉಸ್ತುವಾರಿಯಾಗಿ ರಾಮ ಮಾಧವ್ ಅವರನ್ನು ಬಿಜೆಪಿಯಿಂದ ನೇಮಿಸಲಾಗಿದ್ದರೂ ಮೈತ್ರಿ ವಿಚಾರದಲ್ಲಿ ಯಾವುದೇ ಸಭೆ ನಡೆದಿಲ್ಲ. ಸಹ-ಉಸ್ತುವಾರಿಗಳಾದ ಸತೀಶ್ ಪೂನಿಯಾ, ಸಂಜಯ್ ಉಪಾಧ್ಯಾಯ, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಬಿ.ವೈ.ವಿಜಯೇಂದ್ರ, ವಿಪಕ್ಷ ನಾಯಕರಾದ ಆರ್.ಶೋಕ , ಛಲವಾದಿ ನಾರಾಯಣಸ್ವಾಮಿ, ಸೇರಿದಂತೆ ಬಿಜೆಪಿ ಸಂಸದರು, ಶಾಸಕರು ಕಳೆದ ವಾರ ಸಭೆ ನಡೆಸಿದ್ದರೂ ಅದು ಪಕ್ಷದ ವಿಚಾರಕಷ್ಟೇ ಸೀಮಿತವಾಗಿದೆ. ಹೀಗೆಯೇ ಜೆಡಿಎಸ್ ಕೂಡ ಜಿಬಿಎ ಸಂಬಂಧ ಸಭೆ ನಡೆಸಿದ್ದರೂ, ಮೈತ್ರಿ ವಿಚಾರದಲ್ಲಿ ಎಲ್ಲೂ ಚರ್ಚೆಯಾಗದಿರುವುದು ಎರಡೂ ಪಕ್ಷದ ಕಾರ್ಯಕರ್ತರಲ್ಲಿ ಗೊಂದಲವಿದ್ದು, ನಾಯಕರ ನಡವಳಿಕೆಯೂ ಹಿಂದಿನಂತಿಲ್ಲ. ಹೀಗಿದ್ದರೂ ಕೇಂದ್ರ ಸಚಿವ ಕುಮಾರಸ್ವಾಮಿ ಮೈತ್ರಿ ಸಂಬಂಧ ಬಿಜೆಪಿಯ ರಾಷ್ಟ್ರಮಟ್ಟದ ನಾಯಕರೊಂದಿಗೆ ಚರ್ಚಿಸಿದ್ದರೂ ಸ್ಥಳಿಯವಾಗಿ ಒಪ್ಪಿಕೊಳ್ಳಲು ಬಿಜೆಪಿಗರಿಗೆ ಮನಸಿಲ್ಲದಂತಾಗಿದೆ.

ಏನು ಮಾಡ್ತೀರಿ ಹೇಳಿ: ಹೈಗೆ ಡಿಕೆ ಖಡಕ್ ಪ್ರಶ್ನೆ?

← ಮೊದಲಪುಟದಿಂದ

ಈ ಹಿಂದೆ ರಾಹುಲ್ ಗಾಂಧಿ ಅವರು 'ವಿಲ್ ಕಾಲ್ ಯೂ ಸೂನ್' ಎಂದು ಹೇಳಿದ್ದರಿಂದ ಡಿಕೆಶಿ ಮೌನಕ್ಕೆ ಜಾರಿದ್ದರು. ಆದರೆ ಈ ಮಾತು ಹೇಳಿ ತಿಂಗಳು ಕಳೆಯುತ್ತಾ ಬಂದರೂ, ಯಾವುದೇ ಕರೆ ಬಾರದಿರುವುದರಿಂದ ಹೈಕಮಾಂಡ್ ಮನಸ್ಸಿನಲ್ಲಿ ಏನಿದೆ ಎನ್ನುವುದನ್ನು ತಿಳಿದುಕೊಳ್ಳಲು ತೀರ್ಮಾನಿಸಿದ್ದಾರೆ. ಒಂದು ವೇಳೆ ನಾಯಕತ್ವ ಬದಲಾವಣೆ ಇಷ್ಟವಿಲ್ಲದ್ದರೆ, ಈ ಬಗ್ಗೆ ಕೇಳುವುದಿಲ್ಲ. ಆದರೆ ಅದನ್ನು ಸ್ಪಷ್ಟಪಡಿಸಿ ಎಂದು ಆಗ್ರಹಿಸುವ ಸಾಧ್ಯತೆಯಿದೆ ಎನ್ನಲಾಗಿದೆ.

ಎರಡೆರಡು ಬಾರಿ ವಿಮಾನ ಟಿಕೆಟ್ ರದ್ದು: ಇನ್ನು ಡಿ.ಕೆ.ಶಿವಕುಮಾರ್ ಅವರು ದೆಹಲಿಗೆ ಮಂಗಳವಾರ ಬೆಳಗ್ಗೆಯೇ ತೆರಳಬೇಕಿತ್ತು. ಆದರೆ ಎರಡೆರಡು ಬಾರಿ ವಿಮಾನ ಟಿಕೆಟ್ ಅನ್ನು ರದ್ದುಪಡಿಸಿ, ವಿಮಾನ ನಿಲ್ದಾಣದ ಬಳಿಯಿರುವ ಖಾಸಗಿ ಹೋಟೆಲ್‌ನಲ್ಲಿದ್ದರು. ಈ ವೇಳೆ ಯಾವ ನಾಯಕರೊಂದಿಗೆ ಚರ್ಚಿಸಿದ್ದಾರೆ ಎನ್ನುವ ಮಾಹಿತಿ ಬಹಿರಂಗವಾಗಿಲ್ಲ. ಆದರೆ ಎರಡು ಬಾರಿ ಟಿಕೆಟ್ ರದ್ದುಪಡಿಸಿ, ಬಳಿಕ ತೆರಳಿದ್ದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಎಐಸಿಸಿ ನಾಯಕರು ಒಂದು ಸಭೆ ನಿಗದಿಪಡಿ ಸಿದ್ದಾರೆ. ವಿವಿಧ ಚುನಾವಣೆಗಳ ಬಗ್ಗೆ ಸಭೆಯಲ್ಲಿ ಚರ್ಚೆ ಮಾಡಲಾಗುವುದು. ಅಸ್ಸಾಂ ಸೇರಿದಂತೆ ವಿವಿಧ ರಾಜ್ಯಗಳ ಚುನಾವಣೆ ಚರ್ಚೆಗೆ ಕರೆದಿದ್ದಾರೆ. ಇದಾದ ಬಳಿಕ ಯಾರೆಲ್ಲ ಬಿಡುವಾಗಿರುತ್ತಾರೋ ಅವರನ್ನು ಮುಖಾಮುಖಿ ಭೇಟಿ ಮಾಡುತ್ತೇನೆ. ನಾನು ಯಾವುದೇ ನಾಯಕರ ಬಳಿ ಸಮಯ ಕೇಳಿಲ್ಲ.
-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಅಮಾಯಕ ಹುಲಿಗಳು ಮಾಡಿದ ತಪ್ಪಾದರೂ ಏನು?

← ಮೊದಲಪುಟದಿಂದ

ಸಫಾರಿಯಿಂದ 40 ಕಿಮೀ ದೂರದಲ್ಲಾಗಿರುವ ದಾಳಿಯನ್ನು ತೋರಿಸಿ ಸಫಾರಿ ನಿರ್ಬಂಧಿಸಿರುವ ಅರಣ್ಯ ಇಲಾಖೆ ಅಧಿಕಾರಿಗಳು, ದಾಳಿಯಾಗುವ ಮೊದಲು ಕಾಡಿನಿಂದ ಹೊರಬಂದಿದ್ದ ಹುಲಿಗಳು ದಾಳಿ ಮಾಡಲು ಪ್ರಚೋದಿಸಿದ್ದು ಯಾರು, ಏಕೆ ಎನ್ನುವ ಬಗ್ಗೆ ಮೊದಲು ಪರಿಶೀಲಿಸಬೇಕು. ಮರಿಗಳ ಮೇಲೆ ಕಲ್ಲು ಎಸೆಯಲು, ಮುಟ್ಟಲು ಹೋದರೆ ಬೀದಿನಾಯಿಗಳೇ ಪ್ರಚೋದನೆಗೊಂಡು, ಪ್ರತಿಕ್ರಿಯಿಸುತ್ತವೆ. ಹೀಗಿರುವಾಗ ತಾಯಿ ಹುಲಿಯ ಆಸುಪಾಸಿನಲ್ಲಿರುವ ಮರಿಗಳಿಗೆ ಕೀಟಲೆ ಮಾಡಲು ಹೋದರೆ ಅದನ್ನು ಗಮನಿಸಿಯೂ ಹುಲಿಗಳು ಸುಮ್ಮನೇ ಇರಲು ಸಾಧ್ಯವೇ? ಆದರೆ ಈ ಅಂಶವನ್ನು ಅರಣ್ಯ ಇಲಾಖೆ ಪರಿಶೀಲಿಸದೆ, ಅವೈಜ್ಞಾನಿಕವಾಗಿ ಸಫಾರಿಯನ್ನು ನಿರ್ಬಂಧಿಸಿದ್ದಾರೆ ಎನ್ನುವ ಆರೋಪ ಕೇಳಿಬರುತ್ತಿದೆ. ಹೆಡಿಯಾಳ ಭಾಗದಲ್ಲಿ ಆಗುತ್ತಿರುವ ಹುಲಿ ದಾಳಿಯಲ್ಲಿ ಬಹುತೇಕ ದಾಳಿಗಳು ಮಾನವ ಪ್ರಚೋದಿತ ದಾಳಿಗಳಾಗಿವೆ. ಮೊದಲ ಪ್ರಕರಣದಲ್ಲಿ ಮರದ ಮೇಲೆ ಕೂತು ಹುಲಿ ಮರಿಗಳ ಮೇಲೆ ಕಲ್ಲು ಎಸೆದ ಕಾರಣಕ್ಕೆ ತಾಯಿ ಹುಲಿ ದಾಳಿ ನಡೆಸಿದ್ದರೆ, ಇನ್ನೊಂದು ಪ್ರಕರಣದಲ್ಲಿ ಕಾಡಂಚಿನ ಜಮೀನಿನಲ್ಲಿ ತಾಯಿ ಹುಲಿ ಹಾಗೂ ಮರಿಗಳು ಹೋಗುತ್ತಿರುವಾಗ ವ್ಯಕ್ತಿ ಮರಿ ಹುಲಿಯನ್ನು ಮುಟ್ಟಲು ಪ್ರಯತ್ನಿಸಿದ್ದಾರೆ. ಈ ಸಮಯದಲ್ಲಿ ಸಹಜವಾಗಿಯೇ ತಾಯಿ ಹುಲಿ ತನ್ನ ಮರಿಗಳನ್ನು ರಕ್ಷಿಸಿಕೊಳ್ಳಲು ದಾಳಿ ನಡೆಸಿದೆ. ಮತ್ತೊಂದು ಪ್ರಕರಣದಲ್ಲಿ ಕಾಡಿನೊಳಗೆ ಮೇಯಲು ಬಿಟ್ಟಿದ್ದ ದನದ ಮೇಲೆ ಹುಲಿ ದಾಳಿ ಮಾಡಿದ ಸಮಯದಲ್ಲಿ ದನವನ್ನು ರಕ್ಷಿಸಲು ವ್ಯಕ್ತಿ ಮುಂದಾಗಿದ್ದಾನೆ. ಆಗ ಹುಲಿ ಮನುಷ್ಯನ ಮೇಲೆ ದಾಳಿ ನಡೆಸಿ ಸಾಯಿಸಿದೆ.

ಇವಿಷ್ಟೇ ಅಲ್ಲದೇ ಹುಲಿಯಷ್ಟೇ ಅಲ್ಲದೇ ಬಹುತೇಕ ವನ್ಯಜೀವಿಗಳ ದಾಳಿ ಪ್ರಕರಣದಲ್ಲಿ, ಮನುಷ್ಯನ ಪ್ರಚೋದನೆಯಿಂದ ದಾಳಿಗಳಾಗಿರುತ್ತವೆಯೇ ವಿನಃ ಸುಖಾಸುಮ್ಮನೆ ಅವುಗಳು ದಾಳಿ ನಡೆಸಿಲ್ಲ. ಉದಾಹರಣೆಗೆ ಜಮೀನಿನಲ್ಲಿ ಹುಲಿಯಿದೆ ಎಂದರೆ ಫೋಟೋ ತೆಗೆಯಲು ಗುಂಪುಗೂಡುವುದು, ಕಾಡಾನೆ ದಾಳಿಯ ವೇಳೆ ಕೋಲಿನಲ್ಲಿ ಹೊಡೆದು ಓಡಿಸುವ 'ದುಸ್ಸಾಹಸ'ಕ್ಕೆ ಕೆಲವರು ಕೈಹಾಕಿ ಪ್ರಚೋದನೆ ಮಾಡುತ್ತಾರೆ. ಆಗ ವನ್ಯಜೀವಿಗಳು ಪ್ರತಿಕ್ರಿಯಿಸುವ ರಭಸಕ್ಕೆ ವ್ಯಕ್ತಿ ಸಾಯುತ್ತಾನೆ ಎನ್ನುವುದು ವನ್ಯಜೀವಿ ತಜ್ಞರ ಅಭಿಪ್ರಾಯ. ಕಾಡಿನ ಹುಲಿಗೂ, ಸಫಾರಿ ಹುಲಿಗೂ ಇದೆ ವ್ಯತ್ಯಾಸ: ಹಾಗೆ ನೋಡಿದರೆ, ದಟ್ಟ ಕಾಡಿನಲ್ಲಿರುವ ಹುಲಿಗಳಿಗೂ, ಸಫಾರಿಯಲ್ಲಿರುವ ಹುಲಿಗಳಿಗೂ ವ್ಯತ್ಯಾಸವಿರುತ್ತದೆ. ಸಫಾರಿಯಲ್ಲಿರುವ ಹುಲಿಗಳು ಸಾಮಾನ್ಯವಾಗಿ ದಟ್ಟ ಕಾಡಿನೊಳಗೆ ವಾಸಿಸುವ ಹುಲಿಯಷ್ಟು 'ಆಕ್ರಮಣಕಾರಿ'ಯಾಗಿರುವುದಿಲ್ಲ. ಜತೆಗೆ ಸಫಾರಿಗೆ ಪ್ರತ್ಯೇಕ ವಾಹನಗಳಲ್ಲಿಯೇ ತೆರಳುವುದರಿಂದ, ಆ ವಾಹನಗಳ ಸಂಚಾರಕ್ಕೆ ಒಗ್ಗಿಕೊಂಡಿರುತ್ತದೆ. ಆದ್ದರಿಂದ ಆ ವಾಹನಗಳು ಸಂಚರಿಸಿದಾಗ, ಅದರಲ್ಲಿ ಮನುಷ್ಯರಿದ್ದರೂ, ಅದು ಹುಲಿಗಳಿಗೆ ಭಯ ಹುಟ್ಟಿಸುವುದಿಲ್ಲ. ಆದರೆ ದಟ್ಟ ಕಾನನದೊಳಗೆ ಅಂದರೆ ಸಫಾರಿಯ ಪರಿಚಯವಿಲ್ಲದ ಹುಲಿಗಳು, ಮನುಷ್ಯರು ಅಥವಾ ವಾಹನಗಳನ್ನು ನೋಡಿದರೆ ಬೆದರುತ್ತವೆ. ದೇಶದ ಬಹುಪಾಲು ಸಫಾರಿಗಳನ್ನು ಬಫರ್ ಝೋನ್‌ಗಳಲ್ಲಿ ನಡೆಸುವುದರಿಂದ, ಅದರಲ್ಲಿಯೂ ಕರ್ನಾಟಕದಲ್ಲಿ ಕಾಡಿನ ಅಂಚಿನಲ್ಲಿರುವ ಭಾಗದಲ್ಲಿ ನಡೆಸುವುದರಿಂದ, ಕಾಡಿನೊಳಗೆ ವಾಸಿಸುವ ಹುಲಿಗಳ ಸಂಪರ್ಕಕ್ಕೆ ಸಫಾರಿ ಬರುವುದಿಲ್ಲ. ಹೀಗಿರುವಾಗ ಪ್ರವಾಸಿಗರ ಮೇಲೆ ದಾಳಿ ಮಾಡುವ ಪ್ರಮೇಯವೂ ಬರುವುದಿಲ್ಲ ಎನ್ನುವುದು ತಜ್ಞರ ಅಭಿಪ್ರಾಯ.

ಮೈಸೂರು ಸ್ಯಾಂಡಲ್‌ಗೆ ತಮನ್ನಾ ರಾಯಭಾರಿ: ತಪ್ಪೇನು?

← ಮೊದಲಪುಟದಿಂದ

ಆದರೆ ಕೆಎಸ್‌ಡಿಎಲ್ ತನ್ನ ಮಾರುಕಟ್ಟೆಯನ್ನು ಉತ್ತರ ಭಾರತ ಜತೆಗೆ ಅನ್ಯ ದೇಶಗಳಿಗೂ ವಿಸ್ತರಿಸಿಕೊಳ್ಳಬೇಕೆಂಬ ಉದ್ದೇಶ ದಿಂದ ರಾಯ ಭಾರಿಯನ್ನು ನೇಮಿಸಿಕೊಂಡಿದೆ. ದೇಶ, ಜಗತ್ತಿನ ಮಾರುಕಟ್ಟೆಯನ್ನು ಗುರಿ ಮಾಡಿಕೊಂಡಾಗ ಅಂತಹದ್ದೇ ವ್ಯಕ್ತಿಯನ್ನು ಬಳಸಬೇ ಕಾಗುತ್ತದೆ. ಇದರಲ್ಲಿ ತಪ್ಪೇನು ಇನ್ನೊಂದು ದೃಷ್ಟಿ ಕೋನ ಹೊಂದಿರುವರ ಬಲವಾದ ಪ್ರಶ್ನೆ.ಒಂದು ವೇಳೆ ಮೈಸೂರು ಸ್ಯಾಂಡಲ್ ಕರ್ನಾಟಕವನ್ನು ಗುರಿ ಮಾಡಿಕೊಂಡು ತನ್ನ ವ್ಯಾಪಾರ ವಿಸ್ತರಣೆ ಮಾಡಿಕೊಳ್ಳಲು ತಮನ್ನಾ ಅವರನ್ನು ಆಯ್ಕೆ ಮಾಡಿದ್ದರೆ, ಆಗ ಈಗ ಬರುತ್ತಿರುವ ಕೊಂಕು ಮಾತುಗಳಿಗೆ ಅರ್ಥವಿರುತ್ತಿತ್ತು. ಆದರೆ ಸ್ವತಃ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಅವರೇ 'ಕೆಎಸ್‌ಡಿಎಲ್ ಸಂಸ್ಥೆಯ ವಾರ್ಷಿಕ ವಹಿವಾಟನ್ನು 2030ರ ಹೊತ್ತಿಗೆ 5,000 ಕೋಟಿ ರು.ಗೆ ಏರಿಸುವ ಗುರಿ ಇಟ್ಟುಕೊಳ್ಳಲಾಗಿದೆ. ಇದಕ್ಕೆ ಪೂರಕವಾಗಿ ಯುವ ಜನಾಂಗವನ್ನು ತಲುಪಲು ಸಾಮಾಜಿಕ ಜಾಲತಾಣದಲ್ಲಿ 30 ಲಕ್ಷಕ್ಕೂ ಹೆಚ್ಚು ಫಾಲೋಯ ರ್ಸ್‌ಗಳನ್ನು ಹೊಂದಿರುವ ನಟಿ ತಮನ್ನಾ ಅವರನ್ನು ನೇಮಿಸಿಕೊಳ್ಳಲಾಗುತ್ತಿದೆ. ಈ ಮೂಲಕ ಉತ್ತರ ಭಾರತದಲ್ಲಿಯೂ ಮೈಸೂರು ಸ್ಯಾಂಡಲ್ ಸೋಪ್‌ಗೆ ಮಾರುಕಟ್ಟೆ ಸೃಷ್ಟಿಸಲಾಗುವುದು' ಎಂದು ಹೇಳಿದ್ದಾರೆ. ಮಾರುಕಟ್ಟೆ ದೃಷ್ಟಿಯಿಂದ ಸರಕಾರದ ಈ ತೀರ್ಮಾನದಲ್ಲಿ ತಪ್ಪೇನಿದೆ?

ಸ್ಪೀಕರ್ ಬಗೆ ವಿಶ್ವಾಸ ಇಲ್ರೀ: ಕೈ ನೋಟಿಸ್

← ಮೊದಲಪುಟದಿಂದ

ಯಾಕೆ ಈ ಗೊತ್ತುವಳಿ?: ವಿಪಕ್ಷ ನಾಯಕ ರಾಹುಲ್ ಗಾಂಧಿಗೆ ಲೋಕಸಭೆಯಲ್ಲಿ ಮಾತನಾಡಲು ಅವಕಾಶ ನೀಡಿಲ್ಲ ಎನ್ನುವುದು ವಿಪಕ್ಷಗಳ ಪ್ರಮುಖ ಆರೋಪ. ಈ ಕುರಿತು ಪ್ರತಿಭಟಿಸಿದ 8 ಸಂಸದರನ್ನು ಅಮಾನತುಗೊಳಿಸಿದ್ದು ಇನ್ನೊಂದು ಕಾರಣ. ಇದಕ್ಕೂ ಮುಖ್ಯವಾಗಿ ಪ್ರಧಾನಿ ಮೋದಿ ಇದ್ದ ಸ್ಥಾನಕ್ಕೆ ಬಂದು ಪ್ರತಿಭಟಿಸಲು ಕಾಂಗ್ರೆಸ್ ಸಂಸದರು ನಿರ್ಧರಿಸಿದ್ದರು. ಹಿಂದೆಂದೂ ನಡೆಯದ ಅಸಭ್ಯ ಘಟನೆಯೊಂದು ನಡೆಯುವುದನ್ನು ತಪ್ಪಿಸಲು ನಾನೇ ಪ್ರಧಾನಿಗೆ ಸದನಕ್ಕೆ ಬರದಿರಲು ಮನವಿ ಮಾಡಿದ್ದೆ ಎಂದು ಓಂ ಬಿರ್ಲಾ ಹೇಳಿದ್ದಾರೆ. ಇದನ್ನು ಕಾಂಗ್ರೆಸ್ ಗಂಭೀರವಾಗಿ

ಪರಿಗಣಿಸಿದೆ. ಕನಿಷ್ಠ 14 ದಿನಗಳ ಮುನ್ನ ನೋಟಿಸ್ ನೀಡಬೇಕು: ಸಂವಿಧಾನದ ವಿಧಿ 94 (ಸಿ) ಸ್ಪೀಕರ್ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸಲು ಅವಕಾಶ ನೀಡುತ್ತದೆ. ನಿರ್ಣಯ ಮಂಡಿಸಿ ಸ್ಪೀಕರ್ ಅನ್ನು ಬಹುಮತದ ಮೂಲಕ ಆ ಸ್ಥಾನದಿಂದ ಹೊರಹಾಕಬಹುದು. ಆದರೆ ಕನಿಷ್ಠ 14 ದಿನ ಮುಂಚಿತವಾಗಿ ಇದಕ್ಕೆ ನೋಟಿಸ್ ನೀಡಬೇಕು. ಸದನದ ಯಾವುದೇ ಸದಸ್ಯನೂ ಸ್ಪೀಕರ್ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸಲು ಅವಕಾಶವಿದೆ. ಈ ಕುರಿತ ನೋಟಿಸ್‌ಗೆ ಕನಿಷ್ಠ 100 ಸಂಸದರ ಸಹಿ ಬೇಕು. ಸದನದಲ್ಲಿ ನಿರ್ಣಯ ಮಂಡಿಸಿದಾಗ ಕನಿಷ್ಠ 50 ಸಂಸದರು ಪ್ರಕ್ರಿಯೆ ಮುಂದುವರಿಯಲು ಬೆಂಬಲಿಸ ಬೇಕು. ಆಗ ಪ್ರಕ್ರಿಯೆ ಮುಂದುವರಿಯುತ್ತದೆ. ಇದಕ್ಕೂ ಮುನ್ನವೂ ಸರಿಯಾದ ಕಾರಣ ನಮೂದಿಸದ ಪಕ್ಷದಲ್ಲಿ ಸ್ವತಃ ಸಭಾಪತಿ, ಉಪ ಸಭಾಪತಿಯೇ ಈ ನಿರ್ಣಯವನ್ನು ತಿರಸ್ಕರಿಸಬಹುದು.

ಸಮಾಚಾರ ಸಣ್ಣದಲ್ಲ

ಯುವತಿ ಅಪಹರಣ ಪ್ರಕರಣಕ್ಕೆ ಟ್ವಿಸ್ಟ್

ಮಂಗಳೂರು: ಬೆಳ್ತಂಗಡಿ ಠಾಣೆಯಲ್ಲಿ ದಾಖಲಾಗಿದ್ದ ಯುವತಿ ನಾಪತ್ತೆ ಪ್ರಕರಣಕ್ಕೆ ಟ್ವಿಸ್ಟ್ ಸಿಕ್ಕಿದ್ದು, ಸ್ವತಃ ಯುವತಿಯೇ ಸಂಚು ರೂಪಿಸಿ ಕಿಡ್ನಾಪ್ ನಾಟಕ ಆಡಿರುವ ಸಂಗತಿ ಬೆಳಕಿಗೆ ಬಂದಿದೆ. ಮಂಗಳೂರು ಕಾಲೇಜಿಗೆ ಸೇರಿಸಲಿ ಅಂತ ವಿದ್ಯಾರ್ಥಿನಿಯೊಬ್ಬರು ಕಿಡ್ನ್ಯಾಪ್ ಡ್ರಾಮಾ ಮಾಡಿದ್ದಾಳೆ ಎನ್ನಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿಯಲ್ಲಿ ಯುವತಿ ಬ್ಲೇಡ್‌ನಲ್ಲಿ ಸಣ್ಣದಾಗಿ ಕೈ ಕೊಯ್ದುಕೊಂಡು ಕಿಡ್ನ್ಯಾಪ್ ನಾಟಕವಾಡಿದ್ದಳು. ಕಿಡ್ನ್ಯಾಪ್ ಡ್ರಾಮಾ ಮಾಡಿದರೆ ಮನೆಯವರು ಮಂಗಳೂರಿನ ಪಿಯುಸಿ ಕಾಲೇಜಿಗೆ ಸೇರಿಸುತ್ತಾರೆ ಅನ್ನೋ ಪ್ಲ್ಯಾನ್ ಮಾಡಿದ್ದಳು. ಸೋಮವಾರ ಬೆಳ್ತಂಗಡಿ ಠಾಣೆಯಲ್ಲಿ ಕಿಡ್ನ್ಯಾಪ್ ಯತ್ನ ಪ್ರಕರಣ ದಾಖಲಾಗಿತ್ತು. ಇಡೀ ದಿನ ಪೊಲೀಸರ ತಂಡದಿಂದ ಕಾರ್ಯಾಚರಣೆ ನಡೆಸಲಾಯಿತು. ಬ್ಯಾಗ್‌ನಲ್ಲಿರೋ ಪುಸ್ತಕಗಳನ್ನು ವಿದ್ಯಾರ್ಥಿನಿ ಮನೆಯಲ್ಲೇ ಸುಟ್ಟು ಹಾಕಿದ್ದಳು. ಬಳಿಕ ಬ್ಯಾಗ್‌ನ್ನು ದಾರಿಯಲ್ಲೇ ಬಿಸಾಕಿದ್ದಳು. ಸ್ಕೂಟಿಯನ್ನು ನಿಲ್ಲಿಸಿ ಬ್ಲೇಡ್‌ನಿಂದ ಕೈ ಕೊಯ್ದುಕೊಂಡು ನಾಟಕವಾಡಿದ್ದಳು. ಹಿರಿಯ ಪೊಲೀಸ್ ಅಧಿಕಾರಿಗಳು ಮಂಗಳೂರಿನಿಂದ ದೌಡಾಯಿಸಿ ತನಿಖೆ ನಡೆಸಿದರು. ವಿಚಾರಣೆ ವೇಳೆ ಹುಡುಗಿಯಿಂದಲೇ ಪೊಲೀಸರಿಗೆ ನಿಜ ಮಾಹಿತಿ ಗೊತ್ತಾಗಿದೆ.

ರೈತರಿಗೆ ಕನ್ಯೆ ಕೊಟ್ಟರೆ 2 ಲಕ್ಷ ಸಹಾಯಧನ ನೀಡಿ

ಗದಗ: ರೈತರಿಗೆ ಕನ್ಯೆ ಕೊಡುವ ಕುಟುಂಬಗಳಿಗೆ

ಸರಕಾರದಿಂದ 2 ಲಕ್ಷ ರು. ಸಹಾಯಧನ ನೀಡುವಂತಾಗಬೇಕು ಎಂದು ಸಿದ್ದನಕೊಳ್ಳದ ಡಾ.ಶಿವಕುಮಾರ ಸ್ವಾಮೀಜಿ ಸರಕಾರಕ್ಕೆ ಮನವಿ ಮಾಡಿದರು. ಜಿಲ್ಲೆಯ ನರಗುಂದ ತಾಲೂಕಿನ ಹುಣಸಿಕಟ್ಟಿ ಗ್ರಾಮದಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅತ್ಯಂತ ಅಚ್ಚುಕಟ್ಟಾಗಿ ಸಾಮೂಹಿಕ ವಿವಾಹವನ್ನು ಆಯೋಜಿಸಲಾಗಿದೆ. ಇಂತಹ ಸಾಮೂಹಿಕ ವಿವಾಹ ಇಂದಿನ ದಿನಮಾನದಲ್ಲಿ ಹೆಚ್ಚಾಗಬೇಕಾಗಿದೆ. ರೈತ ಕುಟುಂಬಗಳ ಜತೆ ಸಂಬಂಧ ಬೆಳೆಸಲು ಹಿಂಜರಿಕೆ ಹೆಚ್ಚಾಗುತ್ತಿದ್ದು, ರೈತರಿಗೆ ಕನ್ಯೆ ಕೊಡುವವರು ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದ್ದಾರೆ ಎಂದು ಸ್ವಾಮೀಜಿ ಕಳವಳ ವ್ಯಕ್ತಪಡಿಸಿದರು. ಮುಂದಿನ ದಿನಮಾನಗಳಲ್ಲಿ ರೈತರಿಗೆ ಕನ್ಯೆ ಕೊಡುವವರಿಗೆ ವಿಶೇಷ ಸಹಾಯಧನ ಯೋಜನೆ ಜಾರಿಗೊಳಿಸುವ ಅಗತ್ಯವಿದೆ. ಈ ಹಿಂದೆಯೂ ಇದೇ ವಿಚಾರವನ್ನು ಸರಕಾರದ ಗಮನಕ್ಕೆ ತಂದಿದ್ದೇನೆ. ಆದರೆ, ಇದುವರೆಗೆ ಯಾವುದೇ ಸ್ಪಷ್ಟ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ ಅವರು, ಇದು ಮುಂದಿನ ದಿನಗಳಲ್ಲಿ ಜಾರಿಗೆ ಬರಬೇಕೆಂದರೆ, ನೀವೂ ಕೂಡ ಒತ್ತಾಯ ಮಾಡಬೇಕು ಎಂದರು.

ಮಹದೇಶ್ವರ: ಬಾಲಕನ ಮೇಲೆ ಚಿರತೆ ದಾಳಿ

ಚಾಮರಾಜನಗರ: ಮಲೆ ಮಹದೇಶ್ವರ ಬೆಟ್ಟದ

ಪಾದಯಾತ್ರಿಗಳಿಗೆ ಮತ್ತೆ ಚಿರತೆ ಭೀತಿ ಎದುರಾಗಿದ್ದು, ಬಾಲಕನ ಮೇಲೆ ಚಿರತೆ ದಾಳಿಗೆ ನಡೆಸಿದೆ. ಅದೃಷ್ಟವಶಾತ್ ಬಾಲಕನಿಗೆ ಯಾವುದೇ ಹಾನಿಯಾಗಿಲ್ಲ, ಸಣ್ಣಪುಟ್ಟ ತರಚಿದ ಗಾಯಗಳಾಗಿವೆ. ಮಲೆ ಮಹದೇಶ್ವರ ಬೆಟ್ಟಕ್ಕೆ ಕಾಲ್ನಡಿಗೆಯಲ್ಲಿ ತೆರಳುತ್ತಿದ್ದ ಚನ್ನಪಟ್ಟಣ ತಾಲೂಕಿನ ಭುವಳ್ಳಿ ಗ್ರಾಮದ ಶ್ರೇಯಸ್ (8) ಮೇಲೆ ಚಿರತೆ ದಾಳಿ ನಡೆಸಿದೆ. ಮಹಾಶಿವರಾತ್ರಿ ಜಾತ್ರಾ ಮಹೋತ್ಸವ ಪ್ರಯುಕ್ತ ಭಕ್ತಾದಿಗಳು ಪಾದಯಾತ್ರೆಯ ಮೂಲಕ ತೆರಳುವುದು ವಾಡಿಕೆ. ಅದರಂತೆ ಪಾದಯಾತ್ರೆಯ ಮೂಲಕ ಪೊನ್ನಾಚಿ ಕ್ರಾಸ್ ನಿಂದ ತಲುಪಿ ನಂತರ ಮುಂದೆ ಅರಣ್ಯ ಪ್ರದೇಶದಲ್ಲಿ ತೆರಳುತ್ತಿದ್ದಾಗ ಬಾಲಕ ಶ್ರೇಯಸ್ ಮೇಲೆ ಚಿರತೆ ದಾಳಿ ಮಾಡಿದೆ. ಗಾಯಗೊಂಡಿದ್ದ ಬಾಲಕನನ್ನು ಜೊತೆಯಲ್ಲಿದ್ದ ಭಕ್ತಾದಿಗಳು ಬಸ್ಸಿನ ಮೂಲಕ ಮಲೆ ಮಾದೇಶ್ವರ ಬೆಟ್ಟದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕಳುಹಿಸಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿದ್ದಾರೆ.

ದಿನ ವಿಶೇಷ

11 ಫೆಬ್ರವರಿ 2026 ಬುಧವಾರ

» ಸೂರ್ಯೋದಯ	: 06-46
» ಸೂರ್ಯಾಸ್ತ	: 06-25
» ತಿಥಿ	: ನವಮಿ
» ನಕ್ಷತ್ರ	: ಅನುರಾಧಾ
» ಸಂವತ್ಸರ	: ವಿಶ್ವಾವಸು
» ಆಯನ	: ಉತ್ತರಾಯಣ
» ಋತು	: ಶಿಶಿರ
» ಮಾಸ	: ಮಾಘ
» ಪಕ್ಷ	: ಕೃಷ್ಣಪಕ್ಷ

ಕೆಎಸ್‌ಡಿಎಲ್‌ನ 57 ಹೊಸ ಉತ್ಪನ್ನಗಳಿಗೆ ತಮನ್ನಾ ಪ್ರಚಾರ ರಾಯಭಾರಿ | ಮೈಸೂರು ಸ್ಯಾಂಡಲ್ ಹೊಸ ಯುಗಕ್ಕೆ ನಾಂದಿ

ಮೈಸೂರು ಸ್ಯಾಂಡಲ್ ಸೋಪ್‌ಗೆ ತಮನ್ನಾ ಘಮ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೆಎಸ್‌ಡಿಎಲ್ ಕೇವಲ ಸ್ಯಾಂಡಲ್ ಸೋಪ್‌ಗೆ ಮಾತ್ರ ಸೀಮಿತವಾಗಿಲ್ಲ. ನಾವೀಗ ಜಾಸ್ಮೀನ್ ಪರಿಮಳದ ಐಷಾರಾಮಿ ಸೋಪನ್ನೂ ತಯಾರಿಸುತ್ತಿದ್ದೇವೆ. ಮಲ್ಲಿಗೆಯ ತೈಲ ಲೀಟರಿಗೆ ನಾಲ್ಕು ಲಕ್ಷ ರು.ಗೂ ಹೆಚ್ಚಿದೆ. ಆದರೆ ನಮ್ಮಲ್ಲಿ ತಯಾರಾಗುವ ಈ ಸೋಪ್‌ಗೆ 400 ರು. ನಿಗದಿಪಡಿಸಲಾಗಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಿಳಿಸಿದರು.

ಮಂಗಳವಾರ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ಪ್ರಚಾರ ರಾಯಭಾರಿ ನೇಮಕ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯೂರೋಪಿನ ಮಾರುಕಟ್ಟೆಯಲ್ಲಿ ಈ ತರಹದ ಸಾಬೂನಿಗೆ ಭಾರೀ ಬೇಡಿಕೆ ಇದೆ. ಇದೇ ರೀತಿಯಲ್ಲಿ ಸುಗಂಧ ದ್ರವ್ಯಗಳ ವಲಯವನ್ನೂ ಪ್ರವೇಶಿಸಿದ್ದೇವೆ. ಇದಕ್ಕಾಗಿ ಸಂಸ್ಥೆಯ ಉನ್ನತಾಧಿಕಾರಿಗಳು ಕೊಯಮತ್ತೂರು, ಕನೌಜ್‌ಗೆ ತೆರಳಿ, ಒಡಂಬಡಿಕೆ ಮಾಡಿಕೊಂಡು ಬಂದಿದ್ದಾರೆ ಎಂದರು.

ನಾಲ್ವಡಿ ಕೃಷ್ಣರಾಜ ಒಡೆಯರ್ 108 ವರ್ಷದ ಹಿಂದೆ ಈ ಕಾರ್ಖಾನೆ ಆರಂಭಿಸಿದರು. ಅನೇಕ ಏಳುಬೀಳುಗಳನ್ನು ಸಂಸ್ಥೆ ನೋಡಿದೆ. ಈಗ ನಾವು 450 ಕೋಟಿ ಆದಾಯ ಕಂಡಿದ್ದು, ಕಮಿಟಿ ತೀರ್ಮಾನದಂತೆ ತಮನ್ನಾ ಬಾಟಿಯಾ ಅವರನ್ನು ರಾಯಭಾರಿಯಾಗಿ ನೇಮಕ ಮಾಡಲಾಗಿದೆ. ನಾನು ಬರುವ ಮುನ್ನ 36 ಉತ್ಪನ್ನಗಳನ್ನು ಹೊಂದಿದ್ದ ಕೆಎಸ್‌ಡಿಎಲ್ ಸದ್ಯ 57 ಉತ್ಪನ್ನಗಳನ್ನು ಹೊಂದಿದೆ. 2030ಕ್ಕೆ ಐದು ಸಾವಿರ ಕೋಟಿ ವಹಿವಾಟು ನಡೆಸುತ್ತೇವೆ ಎಂಬ ಭರವಸೆ ಇದ್ದು, ಮೈಸೂರು ಸ್ಯಾಂಡಲ್ ಗತವೈಭವ ಮರುಕಳಿಸುವಂತೆ ಮಾಡುತ್ತೇವೆ ಎಂದರು.

ಈ ವೇಳೆ ನೂತನ ಪ್ರಚಾರ ರಾಯಭಾರಿ ನಟಿ ತಮನ್ನಾ ಮಾತನಾಡಿ, ಮೈಸೂರು ಸ್ಯಾಂಡಲ್ ಸೋಪು ಕೇವಲ ಒಂದು ಸಾಬೂನಲ್ಲ. ಇದರೊಂದಿಗೆ ಭಾವನೆಗಳು, ಬಾಲ್ಯ ಮತ್ತು ಸುಮಧುರ ನೆನಪುಗಳೆಲ್ಲ ಹೆಣೆದುಕೊಂಡಿವೆ. ಇದು ಪರಿಪೂರ್ಣತೆ ಮತ್ತು ಸತ್ಯಗಳ ಸಂಗಮ. ಮಾರುಕಟ್ಟೆಯಲ್ಲಿ ಇದಕ್ಕೆ ಸಾಟಿಯಾದ ಇನ್ನೊಂದು ಸೋಪ್ ಇಲ್ಲ. ಮೈಸೂರು ಸ್ಯಾಂಡಲ್ ಸೋಪ್‌ಗೆ ನನ್ನ ಹೃದಯದಲ್ಲಿ ವಿಶೇಷ ಸ್ಥಾನವಿದೆ. ಮುಂದಿನ ಎರಡು ವರ್ಷ ನಾನು ಈ ಗುಣಮಟ್ಟದ ಉತ್ಪನ್ನಗಳ ರಾಯಭಾರಿಯಾಗಿ ಕೆಲಸ ಮಾಡಲಿದ್ದೇನೆ ಎಂದರು.

ಕೆಎಸ್‌ಡಿಎಲ್ ಸಂಸ್ಥೆಯ ಅಧ್ಯಕ್ಷ ಸಿ.ಎಸ್. ಅಪ್ಪಾಜಿ ನಾಡಗೌಡ ಮಾತನಾಡಿ, ಈ ಸಾಲಿನಲ್ಲಿ ಸಂಸ್ಥೆಯ ವಹಿವಾಟು 2,000 ಕೋಟಿ ರು. ಮುಟ್ಟಲಿದ್ದು, ಲಾಭವು 500 ಕೋಟಿ ರು. ದಾಟಲಿದೆ. ಇದಕ್ಕಾಗಿ ಆಧುನಿಕ ವಹಿವಾಟು ತಂತ್ರಗಳನ್ನು ಅಳವಡಿಸಿಕೊಳ್ಳಲಾಗಿದೆ. ಸೋಶಿಯಲ್ ಮೀಡಿಯಾದಲ್ಲಿ 3 ಕೋಟಿ ಫಾಲೋವರ್ಸ್ ಹೊಂದಿರುವ ತಮನ್ನಾ ಅವರನ್ನು ಬ್ರ್ಯಾಂಡ್ ಅಂಬಾಸಿಡರ್ ಆಗಿ ನೇಮಿಸಿಕೊಂಡಿರುವುದು ಇದರ ಒಂದು ಭಾಗವಾಗಿದೆ ಎಂದರು.

ಈ ವೇಳೆ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಕೆಎಸ್ ಡಿಎಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ಎಂ. ಪ್ರಶಾಂತ್, ಸ್ವತಂತ್ರ ನಿರ್ದೇಶಕ ಅರವಿಂದ ಗಲಗಲಿ, ತಾಂತ್ರಿಕ ಸಲಹೆಗಾರ ರಜನೀಕಾಂತ್, ಶಿವಕುಮಾರ್, ಎಂಎಸ್‌ಐಎಲ್ ವ್ಯವಸ್ಥಾಪಕ ನಿರ್ದೇಶಕ ಮನೋಜ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಸ್ಯಾಂಡಲ್ ಸೋಪ್‌ಗೆ ರಾಯಭಾರಿ ಆಗಿ ಕಾರ್ಯಾರಂಭ ಮಾಡಿದ ನಟಿ ತಮನ್ನಾ ಅವರನ್ನು ಬೃಹತ್ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ್ ಮೈಸೂರು ಸ್ಯಾಂಡಲ್ ಸೋಪ್‌ಗಳ ಕಿಟ್ ನೀಡಿ ಅಭಿನಂದಿಸಿದರು. ಈ ವೇಳೆ ಕೆಎಸ್‌ಡಿಎಲ್ ಸಂಸ್ಥೆ ಅಧ್ಯಕ್ಷ ಸಿ.ಎಸ್. ಅಪ್ಪಾಜಿ ನಾಡಗೌಡ, ಕೆಎಸ್‌ಡಿಎಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ಎಂ. ಪ್ರಶಾಂತ್ ಸೇರಿ ಹಲವರಿದ್ದರು.

57 ಉತ್ಪನ್ನಗಳ ಹೊಸ ಪ್ಯಾಕ್ ಅನಾವರಣ

ನವನವೀನ ಪ್ಯಾಕಿಂಗ್ ಪಡೆದುಕೊಂಡಿರುವ ಉತ್ಪನ್ನಗಳಲ್ಲಿ ಗಂಧದ ಎಣ್ಣೆ, ಮಲ್ಲಿಗೆ ಪರಿಮಳದ ಸೋಪು, ಸುಗಂಧದ್ರವ್ಯ, ಕೊಬ್ಬರಿ ಎಣ್ಣೆ, ಪೆಟ್ರೋಲಿಯಂ ಜೆಲ್ಲಿ, ಸಾವಯವ ಉತ್ಪನ್ನಗಳವರೆಗೆ 60 ಉತ್ಪನ್ನಗಳಿವೆ. ಇದರೊಂದಿಗೆ ಕೆಎಸ್‌ಡಿಎಲ್ ಮುಂದಿನ ಹಾದಿ ತೆರೆದುಕೊಂಡಿತು. ಜತೆಯಲ್ಲಿ ತಮನ್ನಾ ಸಂಸ್ಥೆಯ ಪರವಾಗಿ ನಡೆಸಿರುವ ಪ್ರಚಾರದ ಜಾಹೀರಾತುಗಳು ಕೂಡ ಬಿಡುಗಡೆ ಮಾಡಲಾಯಿತು.

ಕೆಎಸ್‌ಡಿಎಲ್ ಉತ್ಪನ್ನಗಳ ಪೈಕಿ ಸದ್ಯಕ್ಕೆ ಶೇ. 1ರಷ್ಟು ಮಾತ್ರ ರಫ್ತಾಗುತ್ತಿದೆ. ಇದನ್ನು ಹೆಚ್ಚು ಮಾಡಲು ನೀಲನಕ್ಷೆ ಸಿದ್ಧಪಡಿಸಲಾಗಿದೆ. ಹೊಸ ಉತ್ಪನ್ನಗಳಲ್ಲಿ ಮಹಾರಾಜ ಮತ್ತು ಮಹಾರಾಣಿ ಸೀರೀಸ್ ಇವೆ. ಪರಂಪರೆಯ ಮಹತ್ವವನ್ನು ಬಿಟ್ಟುಕೊಡದೆ ಸಮಕಾಲೀನ ಅಭಿರುಚಿಯನ್ನು ಇಲ್ಲಿ ಬೆಸೆದಿದ್ದೇವೆ.

-ಎಂ.ಬಿ.ಪಾಟೀಲ್ ಸಚಿವ, ಕೈಗಾರಿಕೆ ಇಲಾಖೆ

ಯತೀಂದ್ರ ಅನಧಿಕೃತ ವರ್ಗಾವಣೆ ಸಚಿವ: ಪ್ರತಾಪ್ ಸಿಂಹ

ಯತೀಂದ್ರನಿಂದ ಸಿಎಂಗೆ ಮುಜುಗರ

ಮೈಸೂರು: ಡಾ.ಯತೀಂದ್ರ ಸಿದ್ದರಾಮಯ್ಯ

ಅನಧಿಕೃತ ವರ್ಗಾವಣೆ ಸಚಿವರಾಗಿದ್ದು, ವರ್ಗಾವಣೆ ದಂಧೆಯಲ್ಲಿ ತೊಡಗುವ ಮೂಲಕ ಸಿದ್ದರಾಮಯ್ಯ ಅವರಿಗೆ ಕೆಟ್ಟ ಹೆಸರು ತರುತ್ತಿದ್ದಾರೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಕಿಡಿಕಾರಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ತಲೆ ತಗ್ಗಿಸುವಂತಹ ಕೆಲಸವನ್ನು ಯತೀಂದ್ರ ಮಾಡುತ್ತಿದ್ದಾರೆ. ಸಿಎಂ ಸಿದ್ದರಾಮಯ್ಯ ಅವರ ಮೊದಲ ಪುತ್ರ ರಾಕೇಶ್ ಸಿದ್ದರಾಮಯ್ಯ ಅವರಿಂದ ಸಿದ್ದರಾಮಯ್ಯ ಅವರಿಗೆ ಯಾವತ್ತೂ ಕೂಡ ಮುಜುಗರ ಆಗಿರಲಿಲ್ಲ. ರಾಕೇಶ್ ಸಿದ್ದರಾಮಯ್ಯ ಬದುಕಿದ್ದರೆ ಸಿದ್ದರಾಮಯ್ಯ ಅವರಿಗೆ ತಲೆ ತಗ್ಗಿಸುವ ಸ್ಥಿತಿಯನ್ನು ತರುತ್ತಿರಲಿಲ್ಲ ಎಂದು ರಾಜ್ಯ ಸರಕಾರದ ಆಡಳಿತದಲ್ಲಿ ಯತೀಂದ್ರ ಹಸ್ತಕ್ಷೇಪ ಆರೋಪದ ಬಗ್ಗೆ ಪ್ರತಿಕ್ರಿಯಿಸಿದರು.

ಸತ್ತು ಹೋದ ಅಭಿವೃದ್ಧಿ

ಮೈಸೂರು ಅಭಿವೃದ್ಧಿ ವಿಷಯದಲ್ಲಿ ಸತ್ತು ಹೋಗಿದೆ. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು ಇಡೀ ವರ್ಷದಲ್ಲಿ ಸ್ವಾತಂತ್ರ್ಯ ದಿನೋತ್ಸವ, ಗಣರಾಜ್ಯೋತ್ಸವ ಹಾಗೂ ದಸರಾ ಈ ಮೂರು ದಿನಗಳು ಮಾತ್ರವೇ ಕಾಣಿಸುತ್ತಾರೆ ಎಂದು ಸಿಂಹ ಕಿಡಿಕಾರಿದರು.

ಉಪ್ಪಾರ ಅಭಿವೃದ್ಧಿಗೆ ಬೆಂಗಳೂರಿನಲ್ಲಿ 1 ಎಕರೆ ಜಮೀನು

ಭಗೀರಥ ಶ್ರೀಗಳಿಗೆ ಕಿರೀಟಧಾರಣೆ

ಚಿತ್ರದುರ್ಗ: ಸಿಎಂ ಸಿದ್ದರಾಮಯ್ಯ ಅವರು ಹಿಂದುಳಿದ ಮತ್ತು ದಲಿತ ಸಮುದಾಯದ ಮಠಗಳಿಗೆ ಬೆಂಗಳೂರಿನಲ್ಲಿ ಜಮೀನು ಮಂಜೂರು ಮಾಡಿದ್ದು, ಉಪ್ಪಾರ ಸಮಾಜ ಅಭಿವೃದ್ಧಿಗೆ 1 ಎಕರೆ ಜಮೀನು ನೀಡಲಾಗಿದೆ ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಹೊಸದುರ್ಗ ತಾಲೂಕಿನ ಮಧುರೆ ಸಮೀಪದ ಬಿ.ವಿ.ನಗರದ ಭಗೀರಥ ಗುರುಪೀಠದ ಪುರುಷೋತ್ತಮಾನಂದಪುರಿ ಸ್ವಾಮೀಜಿ ಅವರ 27ನೇ ವರ್ಷದ ಪಟ್ಟಾಭಿಷೇಕ ಮಹೋತ್ಸವ ಹಿನ್ನೆಲೆ ಶ್ರೀಗಳಿಗೆ ನಡೆದ ಕಿರೀಟಧಾರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಹೊಸದುರ್ಗ ಶ್ರೀಮಠಕ್ಕೆ ಮಂಜೂರಾಗಿದ್ದ ಜಮೀನು ಅರಣ್ಯ ವ್ಯಾಪ್ತಿಗೆ ಸೇರಿದ್ದರಿಂದ ಅದನ್ನು ಸರಕಾರ ವಾಪಸ್ಸು ಪಡೆದಿತ್ತು. ಅದನ್ನು ಮಠಕ್ಕೆ ಮರಳಿ ಕೊಡಿಸಲು ಶಾಸಕ ಬಿ.ಜಿ.ಗೋವಿಂದಪ್ಪ ಪ್ರಯತ್ನ ನಡೆಸುತ್ತಿದ್ದಾರೆ. ನಾನು ಕೂಡ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ನಡೆಸಿದ್ದೇನೆ ಎಂದು ಭರವಸೆ ನೀಡಿದರು. ಚಿತ್ರದುರ್ಗ ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಭಗೀರಥ ಗುರುಪೀಠದ ಪುರುಷೋತ್ತಮಾನಂದಪುರಿ ಸ್ವಾಮೀಜಿ, ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸೇರಿ ಹವಲವರಿದ್ದರು.

ಉಪ್ಪಾರ ಅಭಿವೃದ್ಧಿ ನಿಗಮಕ್ಕೆ ಇನ್ನೂ ಹೆಚ್ಚಿನ ಅನುದಾನ ಬಿಡುಗಡೆ ಆಗುವಂತೆ ಮನವಿ ಮಾಡಲಾಗುವುದು. ಭದ್ರಾ ಮೇಲ್ದಂಡೆ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಿ, ಎಲ್ಲಾ ಕೆರೆಗಳಿಗೂ ನೀರು ಹರಿಸಲಾಗುವುದು.

-ಗೋವಿಂದಪ್ಪ, ಹೊಸದುರ್ಗ ಶಾಸಕ

ಹೊಸದುರ್ಗ ತಾಲೂಕಿನ ಭಗೀರಥ ಮಠದ ಆವರಣದಲ್ಲಿ ಮಂಗಳವಾರ ನಡೆದ ಪಟ್ಟಾಭಿಷೇಕ ಕಾರ್ಯಕ್ರಮದಲ್ಲಿ ಪುರುಷೋತ್ತಮಾನಂದಪುರಿ ಶ್ರೀಗಳಿಗೆ ವಿವಿಧ ಮಠಾಧೀಶರು ಕಿರಿಟದಾರಣೆ ಮಾಡಿ ಗೌರವಿಸಿದರು.

ಬೆಂಗಳೂರಲ್ಲಿ ಹಿಂದೂ ಯುವತಿ ಮತಾಂತರ ಮಗು ಕೊಟ್ಟು ಮುಸ್ಲಿಂ ಯುವಕ ಪರಾರಿ

ಲವ್‌ಜಿಹಾದ್: ದೂರು ದಾಖಲು

ಬೆಂಗಳೂರು: ಬೆಂಗಳೂರಿನಲ್ಲಿ ಪ್ರೀತಿಯ ಹೆಸರಲ್ಲಿ ಲವ್ ಜಿಹಾದ್ ಪ್ರಕರಣ ನಡೆದಿದೆ. ಯುವತಿಯನ್ನು ಮತಾಂತರ ಮಾಡಿ, ಮದುವೆಯಾಗಿ, ಮಗುವಾದ ಬಳಿಕ ಆಕೆಯನ್ನು ಬಿಟ್ಟು ಪತಿ ಪರಾರಿಯಾಗಿದ್ದಾನೆ.

ಸಂತ್ರಸ್ತ ಯುವತಿಯು ಬೆಂಗಳೂರಿನ ಹೈಗ್ರೌಂಡ್ಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಇದನ್ನು 'ಲವ್ ಜಿಹಾದ್' ಎಂದು ಆರೋಪಿಸಲಾಗಿದೆ. ಕೋಲ್ಕತ್ತಾ ಮೂಲದ ಸಂತ್ರಸ್ತ ಯುವತಿಗೆ ಬೆಂಗಳೂರಿನ ಬಿಟಿಎಂ ಲೇಔಟ್ ನಿವಾಸಿ ಸೈಯದ್ ಇಮ್ತಿಯಾಜ್ ಎಂಬಾತ ಪರಿಚಯವಾಗಿದೆ. ಬಳಿಕ ದಿನ ಕಳೆದಂತೆ ಇಬ್ಬರ ನಡುವೆ ಪ್ರೀತಿಯಾಗಿದೆ. ಸೈಯದ್ ತನ್ನ ಮಾತುಗಳಿಂದ ಯುವತಿಯನ್ನು ನಂಬಿಸಿ, ಮದುವೆಯಾಗುವ ಮುನ್ನ ಸೈಯದ್ ಆಕೆಯನ್ನು ಇಸ್ಲಾಂ ಧರ್ಮಕ್ಕೆ ಮತಾಂತರ ಮಾಡಿ, 2025ರ ಜುಲೈ 18ರಂದು ಕಾನೂನುಬದ್ಧವಾಗಿ ಯುವತಿ ಜತೆ ರಿಜಿಸ್ಟರ್ ಮ್ಯಾರೇಜ್ ಆಗಿದ್ದಾನೆ. ಮದುವೆಯಾದ ಹೊಸತರಲ್ಲಿ ಎಲ್ಲವೂ ಸರಿಯಾಗಿರುವಂತೆ ನಟಿಸಿದ ಸೈಯದ್, ನಂತರ ಆಕೆಯನ್ನು ಕರೆದುಕೊಂಡು ಕೋಲ್ಕತ್ತಾಗೆ ತೆರಳಿ ನವರಂಗಿ ಆಟ ಶುರು ಮಾಡಿದ್ದಾನೆ.

ವಕೀಲರು ಹೇಳಿದ್ದೇನು?: ಈ ಬಗ್ಗೆ ವಕೀಲರು ಮಾತನಾಡಿದ್ದು, ಸಂತ್ರಸ್ತೆ ನಮ್ಮ ತಂಡಕ್ಕೆ ಕೋಲ್ಕತ್ತಾದಿಂದ ಫೋನ್ ಮಾಡಿ ಬಂದಿದ್ದಾಳೆ. ಸೈಯದ್ ಇಮ್ತಿಯಾಜ್ ಅವರು ನನ್ನನ್ನು ಒಂದು ವರ್ಷದೊಳಗಡೆ ಪ್ರೀತಿಸಿದ್ದು, ನಮಗೆ ಎರಡು ತಿಂಗಳ ಮಗುವಿದೆ. ಆ ಹುಡುಗ ಕೋಲ್ಕತ್ತಾದಿಂದ ಓಡಿ ಬಂದಿದ್ದಾನೆ. ನಾನು ಬ್ರಾಹ್ಮಣ ಕುಟುಂಬಕ್ಕೆ ಸೇರಿದವಳು ಎಂದು ಆ ಹುಡುಗಿ ಹೇಳಿದ್ದಾಳೆ ಎಂದು ಹೇಳಿದಳು. ನಮಗೆ ನ್ಯಾಯ ಕೊಡಿಸಿ ಎಂದು ಅವಳು ಹೇಳಿದ್ದಾಳೆ ಎಂದಿದ್ದಾರೆ.



ಮೊದಲ ಮಗು ಗರ್ಭಪಾತ

ಕೋಲ್ಕತ್ತಾದಲ್ಲಿ ನೆಲೆಸಿದ್ದಾಗ ಯುವತಿ ಮೊದಲ ಬಾರಿ ಗರ್ಭಿಣಿಯಾದಾಗ, ಸೈಯದ್ ಬಲವಂತವಾಗಿ ಆಕೆಗೆ ಗರ್ಭಪಾತ ಮಾಡಿಸಿದ್ದ. ಇದರಿಂದ ಯುವತಿ ದೈಹಿಕ ಮತ್ತು ಮಾನಸಿಕವಾಗಿ ಕುಗ್ಗಿ ಹೋಗಿದ್ದರೂ, ಸೈಯದ್ ಮೇಲಿನ ಪ್ರೀತಿಯಿಂದ ಎಲ್ಲವನ್ನೂ ಸಹಿಸಿಕೊಂಡಿದ್ದಳು. ಎರಡನೇ ಬಾರಿ ಹೆಣ್ಣು ಮಗುವಿಗೆ ಜನ್ಮ ನೀಡಿದ್ದಾಳೆ.

ಮಗು ಹುಟ್ಟಿದ ಮೇಲೆ ಸೈಯದ್ ಪರಾರಿ!

ಯುವತಿ ಮಗುವಿಗೆ ಜನ್ಮ ನೀಡಿದ ನಂತರ ಸೈಯದ್, ಪತ್ನಿಯನ್ನು ಕೋಲ್ಕತ್ತಾದಲ್ಲೇ ಬಿಟ್ಟು ನಾಪತ್ತೆಯಾಗಿದ್ದಾನೆ. ದಿನಗಳು ಕಳೆದರೂ ಆತ ವಾಪಸ್ ಬಾರದಿದ್ದಾಗ ಮೋಸ ಹೋಗಿರುವ ಬಗ್ಗೆ ಆಕೆಗೆ ಅರಿವಾಗಿದೆ. ಕೋಲ್ಕತ್ತಾದಿಂದ ಬೆಂಗಳೂರಿಗೆ ಬಂದು ಹೈಗ್ರೌಂಡ್ಸ್ ಠಾಣೆಯಲ್ಲಿ ಕೇಸ್ ದಾಖಲಿಸಿದ್ದಾಳೆ. ಸೈಯದ್ ಪತ್ತೆಗಾಗಿ ಬಲೆ ಬೀಸಿದ್ದಾರೆ.

ಕುಡಿತ ಬಿಡಲು ಹೇಳಿದ ಮಗಳ ಹತ್ಯೆಗೈದ ತಾಯಿ

ಯಾದಗಿರಿ: ಮದ್ಯ ಕುಡಿಯುವುದನ್ನು ಬಿಡು

ಎಂದಿದಕ್ಕೆ ಮಹಿಳೆಯೊಬ್ಬಳು ತನ್ನ ಮಗಳನ್ನೇ ಕತ್ತು ಹಿಸುಕಿ ಕೊಂದ ಘಟನೆ ಯಾದಗಿರಿಯ ರಾಜೀವ್ ಗಾಂಧಿ ನಗರದಲ್ಲಿ ನಡೆದಿದೆ.

ಕೊಲೆಯಾದ ಬಾಲಕಿಯನ್ನು ಪ್ರತಿಭಾ (11) ಎಂದು ಗುರುತಿಸಲಾಗಿದೆ. ಆಕೆಯ ತಾಯಿ ನಿರ್ಮಲಾ ಕೊಲೆಗೈದ ಆರೋಪಿಯಾಗಿದ್ದಾಳೆ. ಮಗಳನ್ನು ಕೊಲೆಗೈದು ಆತ್ಮಹತ್ಯೆಯ ಕತೆ ಕಟ್ಟಿದ್ದಳು. ಜ್ಯೂಸ್ ಕುಡಿಯಲು 15 ರೂ. ಹಣ ಕೇಳಿದ್ದಳು. ಹಣ ಕೊಡಲು ನಿರಾಕರಿಸಿದ್ದಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದಿದ್ದಳು. ಹತ್ಯೆ ಬಳಿಕ ಕುತ್ತಿಗೆಗೆ ಸೀರೆ ಕಟ್ಟಿದ್ದಳು ಎಂದು ತಿಳಿದು ಬಂದಿದೆ. ಮದ್ಯ ಸೇವನೆ ಮಾಡಿ ಹಣ ಖರ್ಚು ಮಾಡಿದರೆ ನಮಗೆ ಊಟಕ್ಕೆ ತೊಂದರೆಯಾಗುತ್ತದೆ. ನೀನು ಕುಡಿದು ಸತ್ತರೇ ನಮ್ಮನ್ನು ನೋಡಿಕೊಳ್ಳುವವರು ಯಾರು? ಅಮ್ಮ ಕುಡಿಯುವುದನ್ನು ಬಿಡು ಎಂದು ಪ್ರತಿಭಾ ಹೇಳಿದ್ದಳು. ಇದರಿಂದ ನಿರ್ಮಲಾ ಕೋಪಗೊಂಡು ಕೊಲೆ ಮಾಡಿದ್ದಳು. ಹಲವು ಸಾಕ್ಷಿಗಳ ಆಧಾರದ ಮೇಲೆ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಯಾದಗಿರಿ ನಗರ ಪೊಲೀಸ್ ಠಾಣೆಯಲ್ಲಿ ಈ ಸಂಬಂಧ ಪ್ರಕರಣ ದಾಖಲಾಗಿದೆ.

ಉದ್ಯಮಿ ನಿಲೇಶ್ ನೇತೃತ್ವದಲ್ಲಿ ಆಯೋಜನೆ | ವೀರಭದ್ರ ಶಿವಾಚಾರ್ಯ ಸ್ವಾಮೀಜಿ ಭಕ್ತರಿಗೆ ಆಹ್ವಾನ

ಸಿದ್ದರಬೆಟ್ಟದಲ್ಲಿ ಅದ್ದೂರಿ ಶಿವರಾತ್ರಿ ಜಾಗರಣೆ

ಕೊರಟಗೆರೆ: ಸಿದ್ದರಬೆಟ್ಟದಲ್ಲಿ ಈ ಭಾರಿ ಶಿವರಾತ್ರಿ ಹಬ್ಬದ ಜಾಗರಣೆಯನ್ನು ಅದ್ದೂರಿಯಾಗಿ ಆಚರಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಿದ್ದರಬೆಟ್ಟದ ಬಾಳೆ ಹೊನ್ನೂರು ಖಾಸಾಶಾಖಾ ಮಠದ ಪೀಠಾಧ್ಯಕ್ಷ ವೀರಭದ್ರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮೀಣ ಭಾಗದಲ್ಲಿ ಇದೆ ಮೊದಲ ಬಾರಿಗೆ ಶ್ರೀ ಮಠದಲ್ಲಿ ಶಿವರಾತ್ರಿ ಹಬ್ಬದೊಂದು ಜಾಗರಣೆ ಮಾಡುವ ವಿಶೇಷ ಕಾರ್ಯಕ್ರಮಗಳನ್ನು ಎಲೆರಾಂಪುರ ಶ್ರೀಗಳು ಮಾರ್ಗದರ್ಶನ ಹಾಗೂ ಉದ್ಯಮಿ ನಿಲೇಶ್ ಅವರ ನೇತೃತ್ವದಲ್ಲಿ ಏರ್ಪಡಿಸಲಾಗಿದ್ದು, ಶಿವರಾತ್ರಿಯಂದು ಸಂಜೆ 6 ಗಂಟೆಗೆ ಪ್ರಾರಂಭವಾಗುವ ಕಾರ್ಯಕ್ರಮ ಬೆಳಗಿನ ಜಾವದವರೆಗೂ ನಡೆಯಲಿದೆ. ಜಾಗರಣೆಗೆ ಬರುವ ಸುಮಾರು 10 ಸಾವಿರಕ್ಕೂ ಹೆಚ್ಚು ಭಕ್ತಾದಿಗಳು ಪಾಲ್ಗೊಳ್ಳಲಿದ್ದು, ದಾಸೋಹದ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಗ್ರಾಮೀಣ ಭಾಗದ ಯುವಕ ನಿಲೇಶ್ ಇಂದು ಹೊರ ದೇಶವಾದ ದುಬೈನಲ್ಲಿ ಉದ್ಯಮ ಮಾಡಿ ಗ್ರಾಮೀಣ ಭಾಗದ ಜನರಿಗೆ ಉದ್ಯೋಗ ನೀಡಿ ಆಸರೆ ಆಗಿದ್ದಾರೆ. ಅಲ್ಲದೆ ತಾಯ್ನಡಿನಲ್ಲಿ ಬಂದು ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿ ಧರ್ಮ ಜಾಗೃತಿ ಮೂಡಿಸುತ್ತಿರುವುದು ಹೆಮ್ಮೆಯ ವಿಚಾರ. ಕಾರ್ಯಕ್ರಮದ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ ಎಂದು ತಿಳಿಸಿದರು.

ಎಲೆರಾಂಪುರ ಕುಂಚಿಟಿಗ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ.ಹನುಮಂತನಾಥ ಸ್ವಾಮೀಜಿ ಮಾತನಾಡಿ, ಶಿವರಾತ್ರಿ ಜಾಗರಣೆ ಮಹೋತ್ಸವ ಜನರಲ್ಲಿ ಭಕ್ತಿಭಾವ ಹೆಚ್ಚು ಮಾಡಲಿ. ಈ ಜಾಗರಣೆಯಿಂದ ಜನರು ಜಾಗೃತರಾಗಬೇಕು. ಇದೆ ಪ್ರಥಮವಾಗಿ ಜಿಲ್ಲೆಯಲ್ಲೇ ಎಲ್ಲಿಯೂ ಮಾಡದಂತ ಜಾಗರಣಾ ಕಾರ್ಯಕ್ರಮಕ್ಕೆ ಸುಮಾರು ಒಂದು ಕೋಟಿ ರು. ಖರ್ಚಿನಲ್ಲಿ ಉದ್ಯಮಿ ನೀಲೇಶ್ ಅವರು ಮಾಡುತ್ತಿದ್ದಾರೆ. ಜಾಗರಣೆಯಲ್ಲಿ ಹೆಸರಾಂತ ಸಿನಿಮಾ ನಟರು, ರಿಯಾಲಿಟಿ ಶೋ ಹಾಗೂ ಭಕ್ತಿಗೀತೆ ಗಾಯಕರಿಂದ ಕಾರ್ಯಕ್ರಮಗಳು ನಡೆಯಲಿದ್ದು, ಕೊರಟಗೆರೆ ಸೇರಿದಂತೆ ಜಿಲ್ಲೆಯ ಹೆಚ್ಚು ಹೆಚ್ಚು ಜನರು ಈ ಕಾರ್ಯಕ್ರಮಕ್ಕೆ ಆಗಮಿಸಿ ಯಶಸ್ವಿಗೊಳಿಸಿ ಎಂದು ತಿಳಿಸಿದರು. ಉದ್ಯಮಿ ನೀಲೇಶ್ ಮಾತನಾಡಿ, ಇತ್ತೀನ ಪೀಳಿಗೆ ಧರ್ಮದ ಬಗ್ಗೆ, ಧರ್ಮ ಜಾಗೃತಿಯ ಅರಿವು ಮೂಡಿಸಲು ಮಹಾಶಿವರಾತ್ರಿ ಹಬ್ಬದಂದು ಸಿದ್ದರಬೆಟ್ಟದ ಶ್ರೀ ಮಠದ ಅವರಣದಲ್ಲಿ ಜಾಗರಣೆ ಮಹೋತ್ಸವ ಏರ್ಪಡಿಸಲಾಗಿದ್ದು, ಶಿವಭಜನೆ, ಹಾಡುಗಳು ಹಾಗೂ ಹಾಸ್ಯ, ಜಾನಪದ ನೃತ್ಯ ಎಲ್ಲಾ ತರಹದ ಕಾರ್ಯಕ್ರಮ ಜರುಗಲಿವೆ. ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಕಾರ್ಯಕ್ರಮವನ್ನು ಉದ್ಘಾಟನೆ ಮಾಡಲಿ ದ್ದಾರೆ. ಕೇಂದ್ರ ರೈಲ್ವೆ ಖಾತೆ ಸಚಿವ ವಿ.ಸೋಮಣ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ, ಮಧುಗಿರಿ ಶಾಸಕ ರಾಜಣ್ಣ, ಸೇರಿದಂತೆ ಜಿಲ್ಲೆಯ ಎಲ್ಲಾ ತಾಲೂಕಿನ ಶಾಸಕರು ವಿಧಾನ ಪರಿಷತ್ ಸದಸ್ಯರು, ವಿವಿಧ ಮಠಾಧೀಶರು ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ.

ಕೊರಟಗೆರೆ ತಾಲೂಕಿನ ಸಿದ್ದರಬೆಟ್ಟದ ಬಾಳೆ ಹೊನ್ನೂರು ಖಾಸಾಶಾಖಾ ಮಠದಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಸಿದ್ದರಬೆಟ್ಟದ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮೀಜಿ, ಎಲೆರಾಂಪುರ ಶ್ರೀ ಮಠದ ಡಾ.ಹನುಮಂತನಾಥ ಸ್ವಾಮೀಜಿ, ಉದ್ಯಮಿ ನಿಲೇಶ್ ಸೇರಿದಂತೆ ಇತರರಿದ್ದರು.

ಶಿವರಾತ್ರಿ ಜಾಗರಣೆಯಲ್ಲಿ ಗಣ್ಯರು ಭಾಗಿ

ಈ ಕಾರ್ಯಕ್ರಮಕ್ಕೆ ವಿಶ್ವವಾಣಿ ಪತ್ರಿಕೆ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಗಣ್ಯರಾಗಿ ಆಗಮಿಸಲಿದ್ದಾರೆ. ನಟ ರವಿಚಂದ್ರನ್, ಜಗ್ಗೇಶ್, ಡಾಲಿ ದನಂಜಯ್, ನಿರೂಪಕಿ ಅನುಶ್ರೀ, ಕಂಬದ ರಂಗಯ್ಯ, ಅಂಕಿತ ಕುಂಡು, ಅನುಪಮ ಭಟ್ ಸೇರಿದಂತೆ ಹಿರಿತೆರೆ, ಕಿರುತೆರೆ ಹೆಸರಾಂತ ಕಲಾವಿದರು ಮನರಂಜನೆ ಕಾರ್ಯಕ್ರಮಗಳನ್ನು ನೀಡಲಿದ್ದಾರೆ.

ಇದೆ ಪ್ರಪಥಮವಾಗಿ ನನ್ನ ತವರು ತಾಲೂಕು ಆದ ಕೊರಟಗೆರೆ ತಾಲೂಕಿನ ಸಿದ್ದರ ತಪೋ ಭೂಮಿ ಸಿದ್ದರಬೆಟ್ಟದಲ್ಲಿ ಮಹಾಶಿವರಾತ್ರಿ ಅಂಗವಾಗಿ ಅದ್ದೂರಿಯಾಗಿ ಜಾಗರಣೆ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿದೆ. ಧರ್ಮ ರಕ್ಷಣೆ, ಧರ್ಮ ಜಾಗೃತಿ ಸೇರಿದಂತೆ ಧಾರ್ಮಿಕ ಸೇವೆಗಳಿಗೆ ಆದ್ಯತೆ ನೀಡಲಾಗುತ್ತಿದೆ.

-ನಿಲೇಶ್, ಉದ್ಯಮಿ ಪರ್ವ ಗ್ರೂಪ್

www.pravasiprapancha.com

ಸಂಪಾದಕೀಯ

ಇನ್ನೂ ಎಷ್ಟು ಬಲಿಯಾಗಬೇಕು?

ಕೊರಿಯನ್ ಲವರ್ ಗೇಮ್ ಎಂಬ ಹೆಸರಿನ ಆನ್‌ಲೈನ್ ಗೇಮ್‌ನ ವ್ಯಸನಕ್ಕೆ ಸಿಲುಕಿ ಉತ್ತರ ಪ್ರದೇಶ ರಾಜ್ಯದ ಘಾಜಿಯಾಬಾದ್‌ನ ಮೂವರು ಸೋದರಿಯರು 8ನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡರೆಂಬ ಸುದ್ದಿಯನ್ನು ನೀವು ಈಗಾಗಲೇ ಓದಿದ್ದೀರಿ. ಇದು ಮನದ ಗೋಡೆಯಲ್ಲಿನ್ನೂ ಹಸಿಹಸಿಯಾಗಿರುವಾಗಲೇ ಮತ್ತದೇ ಉತ್ತರ ಪ್ರದೇಶದಲ್ಲಿ ಇಂಥ ಮತ್ತೊಂದು ದುರಂತ ಸಂಭವಿಸಿರುವುದು ವಿಷಾದನೀಯ. ಕಿವಿಗೆ ಇಯರ್‌ಫೋನ್ ಸಿಕ್ಕಿಸಿಕೊಂಡು 'ಪಬ್‌ಜಿ' ಎಂಬ ಆನ್‌ಲೈನ್ ಆಟದಲ್ಲಿ ಭಾಗಿಯಾಗಿದ್ದ 22ರ ಹರೆಯದ ಯುವಕನೊಬ್ಬ, ರಕ್ತದೊತ್ತಡವು ತೀವ್ರವಾದ ಕಾರಣ ಸಾವನ್ನಪ್ಪಿದ ಮತ್ತು ಈತ ಕಳೆದ 4 ತಿಂಗಳಿಂದ ಈ ಆಟದ ಗೀಳು ಹತ್ತಿಸಿಕೊಂಡು, ದಿನದ ಬಹುಭಾಗವನ್ನು ಅದರಲ್ಲೇ ಕಳೆಯುತ್ತಿದ್ದ ಎಂದಿದೆ ವರದಿ. ಚಾಕುವನ್ನು ಹಣ್ಣು ಕತ್ತರಿಸುವುದಕ್ಕೂ ಬಳಸಬಹುದು, ಮತ್ತೊಬ್ಬರನ್ನು ಹಿಂಸಿಸುವುದಕ್ಕೂ ದುರ್ಬಳಕೆ ಮಾಡಿಕೊಳ್ಳಬಹುದು ಎಂಬುದು ಗೊತ್ತಿರುವ ಸಂಗತಿಯೇ. ಆನ್‌ಲೈನ್ ಮಾಧ್ಯಮದ ತಂತ್ರಜ್ಞಾನದಲ್ಲಿ ಕ್ರಾಂತಿಯಾದಾಗಿನಿಂದಲೂ, ಅದರ ಸಕಾರಾತ್ಮಕ ಮತ್ತು ಆರೋಗ್ಯಕರ ಮಗ್ಗುಲುಗಳಲ್ಲಿ ಸಾಕಷ್ಟು ಸಾಧ್ಯತೆಗಳು ಅನಾವರಣಗೊಂಡಿವೆ. ಗಣನೀಯ ಸಂಖ್ಯೆಯ ಯುವಜನರಿಗೆ ಜೀವನೋಪಾಯವನ್ನು ಕಟ್ಟಿಕೊಡುವ ನಿಟ್ಟಿನಲ್ಲೂ ಈ ಮಾಧ್ಯಮ ಮುಂಚೂಣಿಯಲ್ಲಿದೆ. ಆದರೆ, ಯಾವುದೇ ಕ್ಷೇತ್ರದಲ್ಲಿ ಪ್ರಖರ ಅಂಶಗಳ ಜತೆಜತೆಗೆ ಕಪ್ಪುಚುಕ್ಕೆಗಳೂ ಇರುವಂತೆ ಈ ಮಾಧ್ಯಮದಲ್ಲೂ ಒಂದಷ್ಟು 'ಜಾರುವ ಮತ್ತು ಎಡವುವ' ತಾಣಗಳಿವೆ. ಆ ಪೈಕಿ ಎದ್ದು ಕಾಣುವಂಥದ್ದು ಹೀಗೆ ಮನುಷ್ಯರ ಜೀವಕ್ಕೇ ಸಂಚಕಾರವನ್ನು ತಂದೊಡ್ಡುವ ಮಾರಕ ಆಟಗಳದ್ದು. ಇಂಥ ಆಟಗಳನ್ನು ನಿಷೇಧಿಸಬೇಕಿರುವುದರ ಕುರಿತು ಕೆಲ ವರ್ಷದ ಹಿಂದೆ ದನಿಯೆದ್ದಿದ್ದು ಹೌದಾದರೂ, ಅಷ್ಟೇ ಕ್ಷಿಪ್ರವಾಗಿ ಅದು ಮರೆಗೆ ಸರಿದಿದ್ದು ವಿಷಾದನೀಯ. ಈಗ ಉತ್ತರ ಪ್ರದೇಶದಲ್ಲಿ ಸಂಭವಿಸಿರುವ ಈ ಸಾವುಗಳನ್ನು ಗಮನಿಸಿಯಾದರೂ ಆಳುಗರು ಈ ಪಿಡುಗಿಗೆ ಒಂದು ಪರಿಣಾಮಕಾರಿ ಮದ್ದನ್ನು ಅರೆಯಬೇಕಿದೆ...

ಸೊಂಪಾದಕೀಯ

ದೇವರ ದುಡ್ಡನ್ನೂ ಬಿಡಲ್ಲ

ಜನರಿಗೆ ದೇವರ ಬಗ್ಗೆ ಎಷ್ಟೇ ಭಕ್ತಿ ಇದ್ರೂ, ದೇವಸ್ಥಾನಗಳಲ್ಲಿ ಹುಂಡಿ ಕಳ್ಳತನ ಆಗೋ ಕೆಲಸ ಮಾತ್ರ ಇನ್ನೂ ನಡೆಯುತ್ತಲೇ ಇದೆ. ಹಾಗಂತ ಭಗವಂತನನ್ನು ನಂಬುವವರು ಹುಂಡಿಗೆ ಹಣ ಹಾಕ್ತಾರೆ, ನಂಬದೇ ಇರುವವರು ಹುಂಡಿಯಿಂದ ಹಣ ಕದೀತಾರೆ ಅನ್ನೋ ಹಾಗೂ ಇಲ್ಲ. ಯಾಕಂದ್ರೆ ಸುಮಾರು 1 ವರ್ಷದ ಹಿಂದೆ ಸಿಕ್ಕಿಬಿದ್ದ ಖತರ್‌ನಾಕ್ ಕಳ್ಳನೊಬ್ಬ ಪ್ರತಿಸಲ ಕದ್ದಾಗಲೂ ತನ್ನ ಊರಿನ ದೇವಸ್ಥಾನಕ್ಕೆ ಹೋಗಿ ಅಲ್ಲಿನ ದೇವರಿಗೆ ತಪ್ಪು ಕಾಣಿಕೆ ಹಾಕಿ ಆಮೇಲೆ ಕದ್ದ ಬಂಗಾರವನ್ನು ಮಾರಾಟ ಮಾಡುತ್ತಿದ್ದನಂತೆ. ಅದಕ್ಕಿಂತ ಗಾಬರಿ ಬೀಳಿಸೋ ವಿಷಯ ಅಂದ್ರೆ, ಅವನು ಮೊದಲು ಅದೇ ದೇವಸ್ಥಾನದಲ್ಲಿ ಪೂಜಾರಿ ಆಗಿದ್ದನಂತೆ ಅನ್ನೋದು. ಹಾಗಾಗಿ ಹುಂಡಿಗೆ ಕನ್ನ ಹಾಕುವವರೆಲ್ಲ ನಾಸ್ತಿಕರು ಅನ್ನಂಗಿಲ್ಲ. ಒಟ್ಟಿನಲ್ಲಿ ಸುಲಭವಾಗಿ ಸಿಕ್ಕರೆ ದೇವರ ದುಡ್ಡನ್ನೂ ಕಳ್ಳರು ಬಿಡ್ತಾ ಇಲ್ಲ. ಹಿಂದೊಮ್ಮೆ ಎಲ್ಲಮ್ಮದೇವಿಯ ದೇವಸ್ಥಾನದ ಹುಂಡಿಗೆ ಕನ್ನ ಹಾಕಿದ ಕಳ್ಳರು ಎಲ್ಲವನ್ನೂ ದೋಚಿದ ಮೇಲೆ 'ಎಲ್ಲಮ್ಮನ್ ದುಡ್ಡು, ಯಾರದ್ದೋ ಜಾತ್ರೆ' ಅಂತ ಜನ ತಮಗೆ ತೋಚಿದಂತೆ ಮಾತಾಡಿದ್ದು ಕೇಳಿಬಂದಿತ್ತು. ಇದನ್ನೆಲ್ಲ ನೋಡಿಯೇ ಏನೋ ಗೋಕರ್ಣದ ಮಹಾಬಲೇಶ್ವರ ದೇವಸ್ಥಾನದಲ್ಲಿ ಗರ್ಭಗುಡಿಯ ಬಾಗಿಲ ಸಂದಿನಲ್ಲಿ ಹಾವೊಂದು ಒಂದಷ್ಟು ದಿನ ಠಿಕಾಣಿ ಹೂಡಿತ್ತು. ಸಾಮಾನ್ಯವಾಗಿ ಹಾವುಗಳು ನಿಧಿ ಕಾಯುತ್ತವೆ ಅನ್ನೋದು ನಂಬಿಕೆಯ ಮಾತು. ಹಾಗಾಗಿ ನಾಗರಾಜ ಕೂಡಾ ದೇವಸ್ಥಾನದ ಹುಂಡಿಯನ್ನು ಕಾಯುತ್ತಾ ಅಲ್ಲೇ ಮೊಕ್ಕಾಂ ಹೂಡಿದ್ದನಾ ಅನ್ನೋ ಅನುಮಾನ ಬಂದರೆ ತಪ್ಪೇನಿಲ್ಲ. ಯಾಕಂದ್ರೆ, ಉರಗ ತಜ್ಞರು ಬಂದು ಎಷ್ಟೇ ಹರಸಾಹಸ ಮಾಡಿದರೂ ಹಾವು ಅಲ್ಲಿಂದ ಕದಲಲು ತಯಾರಿರಲಿಲ್ಲವಂತೆ. ಕೊನೆಗೆ ಹಾವನ್ನು ಅದರ ಪಾಡಿಗೆ ಬಿಟ್ಟು ಜನ ಎಂದಿನಂತೆ ದೇವರ ದರ್ಶನ ಮತ್ತು ಪೂಜೆಯಲ್ಲಿ ನಿರತರಾಗಿದ್ದರು. ಆದರೆ ಹಾವಿನ ಚಲನವಲನಗಳ ಮೇಲೆ ಸಿಸಿಟಿವಿ ಮೂಲಕ ನಿಗಾ ಇಡಲಾಗಿತ್ತಂತೆ. ನಂತರ ಒಂದು ರಾತ್ರಿ ಆ ಹಾವು ತನ್ನ ಜಾಗ ಬಿಟ್ಟು ಕೊನೆಗೂ ದೇವಾಲಯದಿಂದ ಹೊರಹೋಗಿರುವ ದೃಶ್ಯ ಸಿಸಿಟಿವಿ ಫೂಟೇಜ್‌ನಿಂದ ಗೊತ್ತಾಯಿತು. ಆದರೆ, ಅಷ್ಟೂ ದಿನ ನಾಗಪ್ಪ ದೇವಸ್ಥಾನದ ಹುಂಡಿಗೆ ಸಿಸಿಟಿವಿ ಥರ ಕೆಲಸ ಮಾಡುತ್ತಿದ್ದನಾ ಅನ್ನೋದರ ಬಗ್ಗೆ ಮಾತ್ರ ಯಾವುದೇ ಫೂಟೇಜ್ ಇಲ್ಲದ ಕಾರಣ ಮಾಹಿತಿ ಸಿಕ್ಕಿಲ್ಲ.

ಸಂಪಾದಕರ ಸದ್ಯಶೋಧನೆ

ಮಾನವೀಯತೆಯ ಕೋಟು

ಬೆಲ್ಜಿಯಂನಲ್ಲಿ ಚಳಿಗಾಲ ಕಳೆಯುವುದು ಬಹಳ ಕಷ್ಟ. ಅಂಥ ಕೊರೆಯುವ ಚಳಿಯ ಬೆಳಗಿನ ಜಾವದಲ್ಲಿ, ಅಲ್ಲಿನ ಬೀದಿಗಳಲ್ಲಿ ಒಂದು ಅದ್ಭುತವಾದ ಮಾನವೀಯ ದೃಶ್ಯವನ್ನು ಕಾಣಬಹುದು. ಸ್ಥಳೀಯ ಅಂಗಡಿಗಳ ಮುಂದೆ ಅಥವಾ ಕೆಫೆಗಳ ಹೊರಗೆ ಸಾಲಾಗಿ ಕೋಟ್ ಸ್ಟ್ಯಾಂಡ್‌ಗಳನ್ನು ಇರಿಸಲಾಗಿರುತ್ತದೆ. ಅವುಗಳ ಮೇಲೆ 'ಚಳಿಯಾಗುತ್ತಿದ್ದರೆ ಒಂದನ್ನು ಪಡೆದುಕೊಳ್ಳಿ' (Take One If Cold) ಎಂಬ ಫಲಕವಿರುತ್ತದೆ. ಯಾವುದೇ ಅರ್ಜಿಗಳಿಲ್ಲದೇ, ಯಾರ ಅಪ್ಪಣೆಯೂ ಇಲ್ಲದೇ, ಅಗತ್ಯವಿರುವವರು ತಮಗೆ ಬೇಕಾದ ಕೋಟನ್ನು ಆರಿಸಿಕೊಳ್ಳುವ ಈ ಪರಿಕಲ್ಪನೆಯು 'ಮಾನವೀಯತೆಗೆ ಯಾವುದೇ ಗಡಿಯಿಲ್ಲ' ಎಂಬುದನ್ನು ಸಾಬೀತುಪಡಿಸುತ್ತಿದೆ. ಈ ಅಭಿಯಾನವು ಮೊದಲು ಬೆಲ್ಜಿಯಂನ ಘೆಂಟ್ ಮತ್ತು ಬ್ರಸೆಲ್ಸ್ ನಗರಗಳಲ್ಲಿ ಆರಂಭವಾಯಿತು. ಜೀವನವೆಚ್ಚದ ಏರಿಕೆ ಮತ್ತು ಹೆಚ್ಚುತ್ತಿರುವ ಚಳಿಯಿಂದಾಗಿ ಅನೇಕ ಜನರು ಬೆಚ್ಚಗಿನ ಬಟ್ಟೆಗಳನ್ನು ಖರೀದಿಸಲು ಕಷ್ಟಪಡುತ್ತಿದ್ದರು. ಇದನ್ನು ಗಮನಿಸಿದ ಕೆಲವು ಸಮುದಾಯದ ಸ್ವಯಂಸೇವಕರು ಮತ್ತು ಸ್ಥಳೀಯ ನಿವಾಸಿಗಳು ಅತ್ಯಂತ ಪ್ರಾಯೋಗಿಕವಾದ ಈ ದಾರಿಯನ್ನು ಕಂಡುಕೊಂಡರು. ಅವರು ತಮ್ಮ ಮನೆಯಲ್ಲಿ ಬಳಕೆಯಾಗದ, ಆದರೆ ಸುಸ್ಥಿತಿಯಲ್ಲಿರುವ ಕೋಟ್‌ಗಳನ್ನು ಸಂಗ್ರಹಿಸಿ, ಅವುಗಳನ್ನು ಸ್ವಚ್ಛಗೊಳಿಸಿ ಸಾರ್ವಜನಿಕ ಸ್ಥಳಗಳಲ್ಲಿ ನೇತುಹಾಕಲು ನಿರ್ಧರಿಸಿದರು. ಇದು ಕೇವಲ ಒಂದು ದಾನವಲ್ಲ, ಬದಲಿಗೆ ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಗೌರವದಿಂದ ಬದುಕಬೇಕು ಎಂಬ ಉದ್ದೇಶದ ಪ್ರತಿಬಿಂಬ. ಸಾಮಾನ್ಯವಾಗಿ ದಾನದ ಪ್ರಕ್ರಿಯೆಗಳಲ್ಲಿ ಹತ್ತಾರು ದಾಖಲೆಗಳು ಅಥವಾ ನೋಂದಣಿ ಪ್ರಕ್ರಿಯೆಗಳಿರುತ್ತವೆ. ಆದರೆ ಇಲ್ಲಿ ಅಂಥ ಯಾವುದೇ ಅಡೆತಡೆಗಳಿಲ್ಲ. ಈ ಕೋಟ್ ಸ್ಟ್ಯಾಂಡ್‌ಗಳನ್ನು ಫಾರ್ಮಸಿಗಳು, ದಿನಸಿ ಅಂಗಡಿಗಳು ಅಥವಾ ಕೆಫೆಗಳ ಮುಂಭಾಗದ ಗೋಡೆಗಳಿಗೆ ಅಳವಡಿಸಲಾಗಿದೆ. ಅಲ್ಲಿನ ಫಲಕದಲ್ಲಿ ಎರಡು ಅರ್ಥಪೂರ್ಣ ಸಾಲುಗಳಿರುತ್ತವೆ- 'ಚಳಿಯಾಗುತ್ತಿದ್ದರೆ ಒಂದನ್ನು ಪಡೆದುಕೊಳ್ಳಿ. ಸಾಧ್ಯವಾದರೆ ಒಂದನ್ನು ನೀಡಿ'. ಅಂಗಡಿ ಮಾಲೀಕರು ಈ ಸ್ಟ್ಯಾಂಡ್‌ಗಳ ಉಸ್ತುವಾರಿ ವಹಿಸುತ್ತಾರೆ. ಮಳೆಯಾದಾಗ ಬಟ್ಟೆಗಳು ಒದ್ದೆಯಾಗದಂತೆ ನೋಡಿಕೊಳ್ಳುವುದು ಮತ್ತು ಅವುಗಳನ್ನು ಅಚ್ಚುಕಟ್ಟಾಗಿ ಜೋಡಿಸುವುದು ಅವರ ಜವಾಬ್ದಾರಿಯಾಗಿರುತ್ತದೆ. ಈ ಯೋಜನೆಯ ಅಡಿಯಲ್ಲಿ ದೊರೆಯುವ ಪ್ರತಿಯೊಂದು ಕೋಟ್‌ನ ಹಿಂದೆಯೂ ಒಂದು ಕಥೆಯಿರುತ್ತದೆ. ದಾನಿಗಳು ಕೋಟ್‌ನ ಒಳಗೆ ಸಣ್ಣ ಚೀಟಿಗಳನ್ನು ಇಟ್ಟಿರುತ್ತಾರೆ. ಅದರಲ್ಲಿ 'ಧೈರ್ಯವಾಗಿರಿ', 'ಇದು ನಿಮಗೆ ಸಹಾಯವಾಗಲಿ ಎಂದು ಆಶಿಸುತ್ತೇನೆ' ಎಂಬ ಸಾಲುಗಳನ್ನು ಬರೆದಿರುತ್ತಾರೆ. ಇದು ಕೇವಲ ದೈಹಿಕ ಉಷ್ಣತೆಯನ್ನು ನೀಡುವುದಲ್ಲದೇ, ಕಷ್ಟದಲ್ಲಿರುವವರಿಗೆ 'ನೀವು ಏಕಾಂಗಿಯಲ್ಲ, ಸಮಾಜ ನಿಮ್ಮ ಜತೆಗಿದೆ' ಎಂಬ ಮಾನಸಿಕ ಧೈರ್ಯವನ್ನು ನೀಡುತ್ತದೆ. ಈ ಉಪಕ್ರಮವು ಕೇವಲ ಶ್ರೀಮಂತರು ಬಡವರಿಗೆ ನೀಡುವ ದಾನವಲ್ಲ. ಇದು ಇಡೀ ಸಮಾಜದ ಒಗ್ಗಟ್ಟನ್ನು ತೋರಿಸುತ್ತದೆ. ಸ್ವಯಂಸೇವಕರು ನಿರಂತರವಾಗಿ ನಗರದ ವಿವಿಧ ಭಾಗಗಳಿಂದ ಬಟ್ಟೆಗಳನ್ನು ಸಂಗ್ರಹಿಸುತ್ತಾರೆ. ವ್ಯಾಪಾರಿಗಳು ತಮ್ಮ ವ್ಯಾಪಾರ ಸ್ಥಳದ ಮುಂದೆ ಈ ಸ್ಟ್ಯಾಂಡ್‌ಗಳಿಗೆ ಜಾಗ ನೀಡುವ ಮೂಲಕ ಸಾಮಾಜಿಕ ಕಾಳಜಿ ಮೆರೆಯುತ್ತಾರೆ. ಸಾಮಾನ್ಯ ಜನರು ಕೆಲಸಕ್ಕೆ ಹೋಗುವ ದಾರಿಯಲ್ಲಿ ತಮಗೇ ತಿಳಿಯದಂತೆ ಒಬ್ಬ ಅಪರಿಚಿತನಿಗೆ ನೆರವಾಗುವ ತೃಪ್ತಿ ಪಡೆಯುತ್ತಾರೆ. ಬಹಳಷ್ಟು ಜನರಿಗೆ ಸಹಾಯ ಕೇಳಲು ಮುಜುಗರ ಅಥವಾ ಸಂಕೋಚವಿರುತ್ತದೆ. ಈ 'ಕೋಟ್ ಆನ್ ಎ ಹುಕ್' ಮಾದರಿಯು ಅಂಥವರ ಆತ್ಮಗೌರವಕ್ಕೆ ಧಕ್ಕೆ ತರುವುದಿಲ್ಲ. ಯಾರು ಬೇಕಾದರೂ ಬಂದು ತಮಗೆ ಇಷ್ಟವಾದ ಬಟ್ಟೆಯನ್ನು ಪಡೆದುಕೊಳ್ಳಬಹುದು. ಇದು ದಾನ ಪಡೆಯುವವರನ್ನು 'ಕಡುಬಡವರು' ಎಂದು ಮುದ್ರೆ ಒತ್ತದೇ, ಅಗತ್ಯವಿರುವವರಿಗೆ ನೆರವಾಗುವ ಗೌರವಯುತ ಹಾದಿಯಾಗಿದೆ. ಬೆಲ್ಜಿಯಂನಲ್ಲಿ ಆರಂಭವಾದ ಈ ಸಣ್ಣ ಕಿಡಿ ಇಂದು ಯುರೋಪಿನ ಹಲವು ದೇಶಗಳಿಗೆ ಹರಡಿದೆ. ಐರ್ಲೆಂಡ್, ಫ್ರಾನ್ಸ್ ಮತ್ತು ಇಂಗ್ಲೆಂಡ್‌ನಲ್ಲೂ ಇಂಥ 'ಕರುಣೆಯ ಗೋಡೆಗಳು' (Walls of Kindness) ಅಥವಾ 'ಕೋಟ್ ಹ್ಯಾಂಗರ್‌ಗಳು' ಸೃಷ್ಟಿಯಾಗಿವೆ. ಕೇವಲ ಒಂದು ಹುಕ್ ಮತ್ತು ಹಳೆಯ ಬಟ್ಟೆಯ ತುಣುಕಿನಿಂದ ಎಷ್ಟು ದೊಡ್ಡ ಬದಲಾವಣೆ ತರಬಹುದು ಎಂಬುದಕ್ಕೆ ಇದು ಸಾಕ್ಷಿ. ಬೆಲ್ಜಿಯಂನ ಈ ಸಣ್ಣ ಪ್ರಯತ್ನವು ನಮಗೆ ಒಂದು ದೊಡ್ಡ ಪಾಠವನ್ನು ಕಲಿಸುತ್ತದೆ. ಸಹಾಯ ಮಾಡಲು ದೊಡ್ಡ ಬಜೆಟ್ ಅಥವಾ ಸಂಸ್ಥೆಯ ಅಗತ್ಯವಿಲ್ಲ. ಬದಲಿಗೆ ಒಂದು ಸಣ್ಣ ಕಾಳಜಿ ಮತ್ತು ಕಾರ್ಯರೂಪಕ್ಕೆ ತರುವ ಮನಸ್ಸಿದ್ದರೆ ಸಾಕು.

ಮತದಾರರ ಪಟ್ಟಿ ಪರಿಷ್ಕರಣೆ ವಿರೋಧದ ಹಿಂದಿನ ಗುಟ್ಟೇನು?

ಸುಪ್ರೀಂಕೋರ್ಟ್‌ನಲ್ಲಿ ಮಮತಾ ಬ್ಯಾನರ್ಜಿ ಅವರ ವಾದ ಮಂಡನೆಯಿಂದ ಕೇಸಿನಲ್ಲಿ ಭಾರಿ ಬದಲಾವಣೆಯಾಗಿಬಿಡುತ್ತದೆ ಎಂದೇನಲ್ಲ. ಚುನಾವಣೆ ಹೊಸ್ತಿಲಲ್ಲಿರುವ ಬಂಗಾಳದಲ್ಲಿ ಮತದಾರರ ಗಮನಸೆಳೆಯಲು ಅವರಿಗೆ ಅವಕಾಶವೊಂದು ಬೇಕಿತ್ತು ಮತ್ತು ವೈಫಲ್ಯಗಳನ್ನು ಮರೆಮಾಚಿ, 'ತಾವು ಜನಪರ' ಎಂಬ ಪ್ರಬಲ ರಾಜಕೀಯ ನರೇಟಿವ್ ಅನ್ನು ರೂಪಿಸಬೇಕಿತ್ತು.

ಜನಪಥ
ರಾಘವಶರ್ಮ ನಿಡ್ಲೆ
vveditoped@gmail.com

2005ರ ಆಗಸ್ಟ್ 4. ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದು ವರ್ಷ ಕಳೆದು ಲೋಕಸಭೆ ಅಧಿವೇಶನ ನಡೆಯುತ್ತಿದ್ದ ಸಂದರ್ಭವದು. ''ಬಾಂಗ್ಲಾದೇಶದಿಂದ ಭಾರತಕ್ಕೆ ಅಕ್ರಮ ವಲಸೆ ಹೆಚ್ಚುತ್ತಿರುವ ಬಗ್ಗೆ ಸದನದಲ್ಲಿ ಚರ್ಚೆಯಾಗಬೇಕು'' ಎಂದು ತೃಣಮೂಲ ಕಾಂಗ್ರೆಸ್ ಪಕ್ಷದ (ಟಿಎಂಸಿ) ಲೋಕಸಭಾ ಸದಸ್ಯೆ ಮಮತಾ ಬ್ಯಾನರ್ಜಿ ಅವರು ಭಾರಿ ಪ್ರತಿಭಟನೆ ನಡೆಸುತ್ತಿದ್ದರು. ಬಾಂಗ್ಲಾದೇಶೀಯರ ಒಳನುಸುಳುವಿಕೆ ಬಂಗಾಳಕ್ಕೆ ಬಹುದೊಡ್ಡ ವಿಪತ್ತಾಗಿ ಪರಿಣಮಿಸಿದೆ ಎಂದಿದ್ದ ಮಮತಾ, ಬಂಗಾಳದ ಮತದಾರರ ಪಟ್ಟಿಯಲ್ಲಿ ಅಕ್ರಮ ಬಾಂಗ್ಲಾದೇಶಿ ವಲಸಿಗರನ್ನೂ ಸೇರಿಸಲಾಗಿದೆ, ಇದಕ್ಕೆ ತಮ್ಮ ಬಳಿ ಪುರಾವೆಗಳಿವೆ ಎಂದು ಹೇಳಿಕೊಂಡಿದ್ದರು. ಆದರೆ, ಈ ಕುರಿತ ಚರ್ಚೆಯ ಬೇಡಿಕೆಯನ್ನು ಉಪ ಸಭಾಪತಿ ಚರಣ್‌ಜಿತ್ ಸಿಂಗ್ ಅಟ್ವಾಲ್ ಅವರು ತಿರಸ್ಕರಿಸಿದ್ದರು. ಇದರಿಂದ ಕೆಂಡಾಮಂಡಲಗೊಂಡಿದ್ದ ಮಮತಾ, ಸದನದ ಬಾವಿಗಿಳಿದು, ಸಭಾಧ್ಯಕ್ಷರ ಮೇಲೆ ಕಾಗದಪತ್ರಗಳ ಕಂತೆಗಳನ್ನು ಎಸೆದಿದ್ದರು. ''ನಮ್ಮ ಸಮಸ್ಯೆಗಳಿಗೆ ಸದನ ಸ್ಪಂದಿಸುತ್ತಿಲ್ಲ ಮತ್ತು ಜನರ ತೊಂದರೆಗಳನ್ನು ಪ್ರಸ್ತಾಪಿಸಲು ಸಾಧ್ಯವಿಲ್ಲದಿದ್ದರೆ ಸಂಸತ್ ಸದಸ್ಯರಾಗಿ ಇರುವುದರಲ್ಲಿ ಅರ್ಥವಿಲ್ಲ'' ಎಂದು ಸಿಟ್ಟಾದ ಮಮತಾ, ಸದನಕ್ಕೆ ತಮ್ಮ ರಾಜೀನಾಮೆ ಸಲ್ಲಿಸಿದ್ದರು. ಆದರೆ, ರಾಜೀನಾಮೆ ಸರಿಯಾದ ಸ್ವರೂಪದಲ್ಲಿಲ್ಲ ಎಂದು ಲೋಕಸಭೆ ಸ್ಪೀಕರ್ ಸೋಮನಾಥ್ ಚಟರ್ಜಿ ಅದನ್ನು ತಿರಸ್ಕರಿಸಿದ್ದರು.

ಇದೇ ಮಮತಾ ಬ್ಯಾನರ್ಜಿ ಅಸ್ಸಾಂನಲ್ಲಿ ಬಾಂಗ್ಲಾದೇಶದ ಅಕ್ರಮ ವಲಸಿಗರ ಪ್ರವೇಶಕ್ಕೆ ತಡೆಯೊಡ್ಡುವ ಸಲುವಾಗಿ ಕೇಂದ್ರ ಸರಕಾರ ರಾಷ್ಟ್ರೀಯ ನಾಗರಿಕ ನೋಂದಣಿ (ಎನ್‌ಆರ್‌ಸಿ) ಜಾರಿಮಾಡಲು ಮುಂದಾದಾಗ ತಮ್ಮ 2005ರ ನಿಲುವನ್ನು ಬದಲಿಸಿ, ''ಪಶ್ಚಿಮ ಬಂಗಾಳದಲ್ಲಿ ಕೂಡ ಇದು ಅಂತರ್ಯುದ್ಧ ಮತ್ತು ರಕ್ತಪಾತಕ್ಕೆ ಕಾರಣವಾಗಲಿದೆ'' ಎಂದು ಕೇಂದ್ರ ಸರಕಾರಕ್ಕೆ ಬೆದರಿಕೆ ಹಾಕಿದ್ದರು. ನಂತರ, 2014ರ ಪೂರ್ವದಲ್ಲಿ ಭಾರತಕ್ಕೆ ವಲಸೆ ಬಂದ ಬಾಂಗ್ಲಾದೇಶ, ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನದ ಹಿಂದೂಗಳಿಗೆ ಭಾರತದ ಪೌರತ್ವ ನೀಡುವ ಕೇಂದ್ರದ ಪೌರತ್ವ ತಿದ್ದುಪಡಿ ಕಾಯ್ದೆಯನ್ನೂ (ಸಿಎಎ) ಮಮತಾ ಬ್ಯಾನರ್ಜಿ ವಿರೋಧಿಸಿದರು. ಇದೀಗ, ಕೇಂದ್ರ ಚುನಾವಣಾ ಆಯೋಗದ ಮತದಾರರ ಪಟ್ಟಿ ಪರಿಷ್ಕರಣಾ ಪ್ರಕ್ರಿಯೆಯನ್ನೂ (ಎಸ್‌ಐಆರ್) ವಿರೋಧಿಸುತ್ತಾ ಭುಸುಗುಡುತ್ತಿದ್ದಾರೆ. ಎಂದಿನಂತೆ, ತಮ್ಮ ನಾಟಕೀಯ ಶೈಲಿಯಲ್ಲಿ ಕೇಂದ್ರ ಸರಕಾರ ಪ್ರೇರಿತ ಭಾರಿ ದೊಡ್ಡ ಅನಾಹುತವೊಂದು ರಾಜ್ಯದಲ್ಲಿ ಸೃಷ್ಟಿಯಾಗಿದೆ ಎಂಬಂತೆ ಬೊಬ್ಬಿಡುತ್ತಿದ್ದಾರೆ. ಒಟ್ಟಿನಲ್ಲಿ, ಚುನಾವಣೆ ಹೊಸ್ತಿಲಲ್ಲಿ ಮತ್ತೊಂದು ಹೈಡ್ರಾಮಾವನ್ನು ನಾವು ನೋಡುವಂತಾಗಿದೆ. ಮತದಾರರ ಪಟ್ಟಿ ಪರಿಷ್ಕರಣೆಯಿಂದ ಎಲ್ಲಿ ತಮ್ಮ ಬೆಂಬಲಿಗ (ವಲಸಿಗ) ಮತವರ್ಗ ಕಳೆದುಹೋಗುತ್ತದೋ ಎಂಬ ಭಯದಿಂದ, ಹೇಗಾದರೂ ಸರಿ, ಮತದಾರರ ಪಟ್ಟಿ ಪರಿಷ್ಕರಣೆಯನ್ನು ತಡೆಯಲೇಬೇಕು ಎಂದು ಮಮತಾ ಪಣತೊಟ್ಟಂತಿದೆ. ಆದರೆ, ಸುಪ್ರೀಂಕೋರ್ಟ್ ಸಿಜೆಐ ಸೂರ್ಯಕಾಂತ್ ಅವರು ಬಂಗಾಳ ಸರಕಾರದ ವಿರೋಧಕ್ಕೆ ಸೊಪ್ಪು ಹಾಕದಿರುವುದು ಗಮನಾರ್ಹ ಬೆಳವಣಿಗೆ.

ಬಂಗಾಳದಲ್ಲಿ ಬಾಂಗ್ಲಾ ನುಸುಳುಕೋರರು ದೊಡ್ಡ ಸಂಖ್ಯೆಯಲ್ಲಿರುವುದು ಮತ್ತು ಅವರು ಆಧಾರ್ ಕಾರ್ಡ್, ಮತಚೀಟಿಗಳನ್ನು ಹೊಂದಿರುವುದು ಹೊಸ ವಿಷಯವೇನಲ್ಲ. ಬಂಗಾಳದಲ್ಲಿ ಬಾಂಗ್ಲಾದೊಂದಿಗೆ ಗಡಿಬೇಲಿ ಹೊಂದಿರುವ ರಾಜ್ಯದ ಗಡಿ ಜಿಲ್ಲೆಗಳ ಮೂಲಕ ಭಾರತ ಪ್ರವೇಶಿಸುವ ಬಾಂಗ್ಲಾ ನಿವಾಸಿಗರು, ಈಗ ಭಾರತದಾದ್ಯಂತ ತಮ್ಮ ನೆಲೆಗಳನ್ನು ವಿಸ್ತರಿಸಿಕೊಂಡಿದ್ದಾರೆ. ಪಂಚಾಯತ್‌ನಿಂದ ಹಿಡಿದು ಲೋಕಸಭೆ ಚುನಾವಣೆ ತನಕ ಎಲ್ಲಾ ಚುನಾವಣೆಗಳಲ್ಲೂ ಈ ಅಕ್ರಮ ವಲಸಿಗರು ಮತದಾನ ಮಾಡುತ್ತಾ ಬಂದಿದ್ದಾರೆ ಮತ್ತು ಇದನ್ನು ಬಂಗಾಳದ ಜನರೂ ಒಪ್ಪಿಕೊಳ್ಳುತ್ತಾರೆ. ಗಡಿ ಭಾಗದ ಜಿಲ್ಲೆಗಳಿಗೆ ಭೇಟಿ ನೀಡಿದರೆ, ಬಾಂಗ್ಲಾ ಮಂದಿ ಭಾರತಕ್ಕೆ ಒಳನುಸುಳುವ ಬಗೆ ಹೇಗೆ ಎಂಬುದರ ನೈಜ ಚಿತ್ರಣ ಸಿಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ಇಂಡೋ-ಬಾಂಗ್ಲಾ ಗಡಿಗಳ ಹಳ್ಳಿಗಳಲ್ಲಿ ಫೆನ್ಸಿಂಗ್ (ಕಬ್ಬಿಣದ ಬೇಲಿ) ಬಿಗಿಯಾದ ಹಿನ್ನೆಲೆಯಲ್ಲಿ ಒಳನುಸುಳುವುದು ಸುಲಭ ಸಾಧ್ಯವಾಗುತ್ತಿಲ್ಲ. ಅಕ್ರಮ ವಲಸೆ, ಕಳ್ಳಸಾಗಣೆ ತಡೆಯಲು ಬಾಂಗ್ಲಾದೇಶದೊಂದಿಗಿನ ತನ್ನ 4,096.7 ಕಿ.ಮೀ. ಗಡಿಯಲ್ಲಿ ಭಾರತವು ಬೇಲಿಗಳನ್ನು ಹಾಕಿದ್ದು, ಸುಮಾರು 3,200 ಕಿ.ಮೀ. (ಇದು ಶೇ.79ಕ್ಕಿಂತ ಹೆಚ್ಚು) ಪೂರ್ಣಗೊಂಡಿದೆ. ದಟ್ಟಾರಣ್ಯ ಮತ್ತು ಗುಡ್ಡಗಾಡು ಪ್ರದೇಶಗಳುಳ್ಳ ಸುಮಾರು 850-900 ಕಿ.ಮೀ. ಬೇಲಿಯಿಲ್ಲದೆ ಉಳಿದಿದೆ. ಈ ನಡುವೆಯೂ, ನದಿ ಮೂಲಕ ಅಥವಾ ಅನ್ಯ ಮಾರ್ಗಗಳ ಮುಖೇನ ಅಕ್ರಮವಾಗಿ ಭಾರತವನ್ನು ಅಕ್ರಮ ವಲಸಿಗರು ಪ್ರವೇಶಿಸುವುದು ಮುಂದುವರಿಯುತ್ತಿದೆ.

ಅಕ್ರಮ ವಲಸಿಗರು ಭಾರತೀಯ ಮತದಾರರಾಗಿ ಚುನಾವಣೆಯಲ್ಲಿ ಪಾಲ್ಗೊಳ್ಳುವುದು ಅಪಾಯಕಾರಿ. ಈ ಹಿನ್ನೆಲೆಯಲ್ಲಿ ಬಂಗಾಳದಂಥ ರಾಜ್ಯಗಳಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಎಂದೋ ನಡೆಯಬೇಕಿತ್ತು. ಆದರೆ, ವಿಧಾನಸಭೆ ಚುನಾವಣೆ ಹೊಸ್ತಿಲಲ್ಲಿ ನಡೆಸಲು ಕೇಂದ್ರ ಚುನಾವಣಾ ಆಯೋಗ ಮುಂದಾಯಿತು. ಮತಪಟ್ಟಿ ಪರಿಷ್ಕರಣೆ ಎನ್ನುವುದು ಬಹಳ ಅಗಾಧವಾದ, ವಿಸ್ತೃತವಾದ ಪ್ರಕ್ರಿಯೆ. ಇದು ಕೆಲವೇ ತಿಂಗಳುಗಳಲ್ಲಿ ಪೂರ್ಣಗೊಳ್ಳುವುದಿಲ್ಲ. ಕನಿಷ್ಠ ಒಂದು ವರ್ಷವಾದರೂ ಬೇಕು ಎಂದು ತಜ್ಞರೇ ಹೇಳುತ್ತಾರೆ. ಹೀಗಿದ್ದಾಗ, ಮಾರ್ಚ್-ಏಪ್ರಿಲ್ ತಿಂಗಳ ಬಂಗಾಳ ವಿಧಾನಸಭೆ ಚುನಾವಣೆ ಆರಂಭಕ್ಕೆ ಮುನ್ನ ಪರಿಷ್ಕರಣೆ ಪ್ರಕ್ರಿಯೆ ಪೂರ್ಣಗೊಳಿಸಬೇಕಾದ ದೈತ್ಯ ಸವಾಲು ಚುನಾವಣಾ ಆಯೋಗದ ಮುಂದಿದೆ ಮತ್ತು 2 ದಿನಗಳ ಹಿಂದಿನ ಸುಪ್ರೀಂಕೋರ್ಟ್ ವಿಚಾರಣೆ ವೇಳೆ ಪ್ರಕ್ರಿಯೆ ಪೂರ್ಣಗೊಳಿಸಲು ಆಯೋಗಕ್ಕೆ ನೀಡಲಾಗಿದ್ದ ಗಡುವನ್ನು ವಿಸ್ತರಿಸಲಾಗಿದೆ.

2011ರಿಂದ ಬಂಗಾಳದಲ್ಲಿ ಅಧಿಕಾರದಲ್ಲಿರುವ ಮಮತಾಗೆ ಈ ಬಾರಿ ಬಿಜೆಪಿ ಪ್ರಬಲ ಸವಾಲೊಡ್ಡಿದೆ. ಬಿಹಾರ ಚುನಾವಣೆ ಫಲಿತಾಂಶವು ಸಹಜವಾಗಿಯೇ ಮಮತಾರ ನಿದ್ದೆಗೆಡಿಸಿದೆ. ಏತನ್ಮಧ್ಯೆ, ಮತದಾರರ ಪಟ್ಟಿ ಪರಿಷ್ಕರಣೆ ಪರಿಣಾಮ 1 ಕೋಟಿಗಿಂತಲೂ ಹೆಚ್ಚು ಮತದಾರರ (ನಕಲಿ?) ಹೆಸರು ಪಟ್ಟಿಯಿಂದ ಅಳಿಸಿಹೋಗುವ ಸಾಧ್ಯತೆ ಇರುವುದರಿಂದ ಸಹಜವಾಗಿಯೇ ಟಿಎಂಸಿ ಮತ್ತು ಮಮತಾರ ಆತಂಕ ಹೆಚ್ಚಾಗಿದೆ. ಇದೇ ಕಾರಣಕ್ಕಾಗಿ, ಭಾರತೀಯ ರಾಜಕಾರಣದಲ್ಲಿ ಪ್ರಪ್ರಥಮ ಬಾರಿಗೆ ಎಂಬಂತೆ ಫೆ.4ರಂದು ಖುದ್ದಾಗಿ ರಾಜ್ಯದ ಮುಖ್ಯಮಂತ್ರಿಯೊಬ್ಬರು (ಮಮತಾ) ಸುಪ್ರೀಂಕೋರ್ಟ್‌ಗೆ ಬಂದು ವಾದ ಮಂಡಿಸುವ ದೃಶ್ಯಕ್ಕೆ ದೇಶ ಸಾಕ್ಷಿಯಾಯಿತು. ವಿವಾಹವಾದ ನಂತರ ಹೆಸರು, ವಿಳಾಸಗಳಲ್ಲಿ ಸಣ್ಣಪುಟ್ಟ ಬದಲಾವಣೆಗಳಾದರೂ ಅಂಥವರ ಹೆಸರನ್ನು ಮತದಾರರ ಪಟ್ಟಿಯಿಂದ ಅಳಿಸಲಾಗುತ್ತಿದೆ ಎಂದು ಆತಂಕ ಹೊರಹಾಕಿದ ಮಮತಾ ಬ್ಯಾನರ್ಜಿ, ರಾಜ್ಯದಲ್ಲಿ 1.36 ಕೋಟಿ ಮತದಾರರು ಮತದಾನದ ಹಕ್ಕನ್ನು ಕಳೆದುಕೊಳ್ಳುವ ಅಪಾಯ ಎದುರಿಸುತ್ತಿದ್ದಾರೆ ಎಂದು ಆರೋಪಿಸಿದರು. ಇದಕ್ಕೆ ಪ್ರತಿಯಾಗಿ ಅಫಿಡವಿಟ್ ಸಲ್ಲಿಸಿದ ಆಯೋಗ, ''ರಾಜ್ಯ ಸರಕಾರ ಮತ್ತು ಮುಖ್ಯಮಂತ್ರಿಗಳಿಂದಲೇ ಅಧಿಕಾರಿಗಳಿಗೆ ಬೆದರಿಕೆ ಹಾಕಲಾಗುತ್ತಿದೆ. ಪಟ್ಟಿ ಪರಿಷ್ಕರಣೆಗೆ ಅಡ್ಡಿಪಡಿಸಲು ಹಿಂಸಾಚಾರವನ್ನು ಪ್ರಚೋದಿಸಲಾಗುತ್ತಿದೆ'' ಎಂದು ಆರೋಪಿಸಿತು. ಫೆ.9ರ ವಿಚಾರಣೆ ವೇಳೆ ಮಮತಾ ಬ್ಯಾನರ್ಜಿಯವರಿಗೆ ಪರೋಕ್ಷ ಎಚ್ಚರಿಕೆ ನೀಡಿದ ಸುಪ್ರೀಂಕೋರ್ಟ್, ಮತದಾರರ ಪಟ್ಟಿಗಳ ವಿಶೇಷ ತೀವ್ರ ಪರಿಷ್ಕರಣೆಗೆ ಯಾವುದೇ ಅಡೆತಡೆಯನ್ನು ಅನುಮತಿಸುವುದಿಲ್ಲ ಎಂದು ಸ್ಪಷ್ಟಪಡಿಸಿತು. ಯಾವುದೇ ಆದೇಶ ಅಥವಾ ಸ್ಪಷ್ಟೀಕರಣದ ಅಗತ್ಯವಿದ್ದರೂ, ನಾವು ತಿಳಿಸುತ್ತೇವೆ. ಆದರೆ 'ಎಸ್‌ಐಆರ್'ಗೆ ಯಾವುದೇ ಅಡೆತಡೆ ಇರಬಾರದು. ಇದನ್ನು ಎಲ್ಲಾ ರಾಜ್ಯಗಳು ಅರ್ಥಮಾಡಿಕೊಳ್ಳಬೇಕು ಎಂದು ಸಿಜೆಐ ಸೂರ್ಯಕಾಂತ್ ಹೇಳಿರುವುದರಿಂದ ಬಂಗಾಳದಲ್ಲಿ 'ಎಸ್‌ಐಆರ್' ಪ್ರಕ್ರಿಯೆಗೆ ಸೂಕ್ತ ರೀತಿಯಲ್ಲಿ ಸ್ಪಂದಿಸುವುದು ಮಮತಾರಿಗೆ ಅನಿವಾರ್ಯವಾಗಲಿದೆ. ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೂ ಎಚ್ಚರಿಕೆ ನೀಡಿರುವ ಸುಪ್ರೀಂಕೋರ್ಟ್, 'ಎಸ್‌ಐಆರ್' ಹೆಸರಲ್ಲಿ ಆಗುತ್ತಿರುವ ಹಿಂಸಾಚಾರವನ್ನು ತಡೆಯಲು ಕಠಿಣ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ. ರಾಜ್ಯದ ಕಾನೂನು-ಸುವ್ಯವಸ್ಥೆ ಕುಸಿಯಲು ರಾಜ್ಯ ಸರಕಾರದ ಆಡಳಿತ ಯಂತ್ರ ಕಾರಣವಾದರೂ, ಈ ವೈಫಲ್ಯಕ್ಕೆ ಮಮತಾ ಬ್ಯಾನರ್ಜಿಯವರು ಕೇಂದ್ರದೆಡೆಗೆ ಬೊಟ್ಟು ಮಾಡುತ್ತಿದ್ದಾರೆ!

ಸುಪ್ರೀಂಕೋರ್ಟ್‌ನಲ್ಲಿನ ಮಮತಾ ಬ್ಯಾನರ್ಜಿ ಅವರ ವಾದ ಮಂಡನೆಯಿಂದ ಕೇಸಿನಲ್ಲಿ ಭಾರಿ ಬದಲಾವಣೆಯಾಗಿಬಿಡುತ್ತದೆ ಎಂದೇನಲ್ಲ. ಚುನಾವಣೆ ಹೊಸ್ತಿಲಲ್ಲಿರುವ ಬಂಗಾಳದಲ್ಲಿ ಜನರ ಗಮನಸೆಳೆಯಲು ಮಮತಾಗೆ ಅವಕಾಶವೊಂದು ಬೇಕಿತ್ತು ಮತ್ತು ಸರಕಾರದ ಆಡಳಿತ ವೈಫಲ್ಯಗಳನ್ನು ಮರೆಮಾಚಿ, 'ತಾವು ಜನಪರ' ಎಂಬ ಪ್ರಬಲ ರಾಜಕೀಯ ನರೇಟಿವ್ ಅನ್ನು ರೂಪಿಸಲು ಮತ್ತು ಪಕ್ಷದ ಇಮೇಜ್ ವೃದ್ಧಿಸಲು ಅವರು ಸುಪ್ರೀಂಕೋರ್ಟ್ ನ್ಯಾಯಪೀಠದ ಮುಂದೆ ಕಾಣಿಸಿಕೊಳ್ಳುವುದನ್ನೇ ಅಸ್ತ್ರವಾಗಿ ಬಳಸಿಕೊಂಡರು. ''ಬಂಗಾಳಕ್ಕೆ ಇಂದು ಐತಿಹಾಸಿಕ ದಿನ. ಬಂಗಾಳದ ಮುಖ್ಯಮಂತ್ರಿ ಜನರ ಹಕ್ಕುಗಳಿಗಾಗಿ ಹೇಗೆ ಹೋರಾಡಿದರು ಎಂಬುದನ್ನು ನೋಡಿ. ಅವರು ಸಾಮಾನ್ಯ ಜನರಿಗಾಗಿ ನಿರಂತರವಾಗಿ ಹೋರಾಡುವ ಏಕೈಕ ನಾಯಕಿ'' ಎಂದು ಟಿಎಂಸಿ ನಾಯಕರೆಲ್ಲರೂ ಹಾಡಿ ಹೊಗಳಿದರು. ಹಾಗಂತ, ಇಂಥಾ ನಾಟಕಗಳು ಟಿಎಂಸಿಗೆ ಮಾತ್ರ ಸೀಮಿತವೇನಲ್ಲ. ಬಿಜೆಪಿ, ಕಾಂಗ್ರೆಸ್ ಸೇರಿ ಎಲ್ಲಾ ಪಕ್ಷಗಳು ಇಂಥಾ ರಾಜಕೀಯ 'ನಾಟಕ'ಗಳನ್ನು ಆಗಾಗ್ಗೆ ಮಾಡುತ್ತಲೇ ಇರುತ್ತವೆ..!

ಕೇಂದ್ರ ಚುನಾವಣಾ ಆಯೋಗ ನಿರ್ದಿಷ್ಟ ವರ್ಗದ ಮತದಾರರ ಹೆಸರನ್ನು ಅಳಿಸಿಹಾಕುತ್ತಿದೆ ಎಂಬ ಮಮತಾ ಬ್ಯಾನರ್ಜಿಯವರ ಆರೋಪಕ್ಕೆ ಉತ್ತರ ಪ್ರದೇಶ ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಕೂಡ ದನಿಗೂಡಿಸಿದ್ದಾರೆ. ಮುಖ್ಯವಾಗಿ, ಮುಸ್ಲಿಂ ಧರ್ಮೀಯರ ಮತವರ್ಗವನ್ನು ಗುರಿಮಾಡಲಾಗುತ್ತಿದೆ ಎನ್ನುವುದು ಅವರ ಆರೋಪದ ಸಾರ. ಬಂಗಾಳ ಮತ್ತು ಉತ್ತರ ಪ್ರದೇಶದಲ್ಲಿ ಮುಸ್ಲಿಂ ಮತಗಳು ಚುನಾವಣೆಯಲ್ಲಿ ನಿರ್ಣಾಯಕ ಪಾತ್ರವಹಿಸುತ್ತವೆ ಎನ್ನುವುದು ಗುಟ್ಟಿನ ವಿಷಯವೇನಲ್ಲ. ಹೀಗಾಗಿ, ಬಿಜೆಪಿ ಕಡಿಮೆ ಅಂತರದಲ್ಲಿ ಸೋತ ಕ್ಷೇತ್ರಗಳ ಅಲ್ಪಸಂಖ್ಯಾತ ಮತದಾರರು ಹರಕೆಯ ಕುರಿಗಳಾಗುತ್ತಿದ್ದಾರೆ ಎಂದು ಟಿಎಂಸಿ ಹೇಳುತ್ತಿದೆ. ಹಾಗಂತ, ಈ ಆರೋಪಗಳಿಗೆ ಸಾಕ್ಷ್ಯಾಧಾರಗಳನ್ನು ಒದಗಿಸಲು ಅವರಿಗೆ ಸಾಧ್ಯವಾಗಿಲ್ಲ. ಬಂಗಾಳದಲ್ಲಿ 2021ರ ಫಲಿತಾಂಶ ಗಮನಿಸುವುದಾದರೆ, 294 ಸ್ಥಾನಗಳಲ್ಲಿ ಟಿಎಂಸಿ 215 ಸ್ಥಾನಗಳನ್ನು ಗೆದ್ದರೆ, ಬಿಜೆಪಿ 77 ಸ್ಥಾನಗಳೊಂದಿಗೆ ಪ್ರಮುಖ ವಿಪಕ್ಷವಾಗಿ ಹೊರಹೊಮ್ಮಿತ್ತು. 35 ಕ್ಷೇತ್ರಗಳಲ್ಲಿನ ಫಲಿತಾಂಶವು 5,000ಕ್ಕಿಂತ ಕಡಿಮೆ ಮತಗಳ ಅಂತರದಿಂದ ನಿರ್ಧರಿಸಲ್ಪಟ್ಟಿತ್ತು. ಈ 35 ಸ್ಥಾನಗಳಲ್ಲಿ, ಬಿಜೆಪಿ 22 ಮತ್ತು ಟಿಎಂಸಿ 12 ಸ್ಥಾನಗಳನ್ನು ಗೆದ್ದಿದ್ದವು. ಕಲಿಂಪಾಂಗ್ ಕ್ಷೇತ್ರದಲ್ಲಿ ಸ್ವತಂತ್ರ ಅಭ್ಯರ್ಥಿಯೊಬ್ಬರು ಬಿಜೆಪಿಯನ್ನು 3,870 ಮತಗಳಿಂದ ಸೋಲಿಸಿದ್ದರು. ಮಮತಾ ಬ್ಯಾನರ್ಜಿ ತಮ್ಮ ಭದ್ರಕೋಟೆ ನಂದಿಗ್ರಾಮದಲ್ಲಿ ಸುವೇಂದು ಅಧಿಕಾರಿ ವಿರುದ್ಧ 1,956 ಮತಗಳಿಂದ ಸೋತರು. 2024ರ ಲೋಕಸಭೆ ಚುನಾವಣೆಯಲ್ಲಿ ಈ 35 ವಿಧಾನಸಭೆ ಕ್ಷೇತ್ರಗಳಲ್ಲಿ ಬಿಜೆಪಿ ಮುನ್ನಡೆ ಸಾಧಿಸಿದರೆ, ಟಿಎಂಸಿ ಕೇವಲ 6 ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿತ್ತು. ಸಿಪಿಐ-ಎಂ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳಿಂದಾಗಿ ಮತ ವಿಭಜನೆ ಹೆಚ್ಚಾಗಿ ಟಿಎಂಸಿ ನಷ್ಟ ಅನುಭವಿಸಿತ್ತು. ಹೀಗಾಗಿ, 2026ರ ಮತದಾರರರ ಪಟ್ಟಿ ಪರಿಷ್ಕರಣೆ ನಂತರ ಇಂಥ ಕಡಿಮೆ ಅಂತರದಲ್ಲಿ ಫಲಿತಾಂಶ ಹೊರಬರುವ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸಬಹುದು ಎನ್ನುವುದು ಟಿಎಂಸಿ ಆತಂಕ. ಅದೇ ಕಾರಣಕ್ಕಾಗಿ, 'ಎಸ್‌ಐಆರ್'ಗೆ ಟಿಎಂಸಿಯಿಂದ ಪ್ರಬಲ ವಿರೋಧ ವ್ಯಕ್ತವಾಗುತ್ತಿದೆ ಎಂಬ ಚರ್ಚೆಗಳು ಕೇಳಿಬರುತ್ತಿವೆ.

ಚುನಾವಣಾ ಆಯೋಗಕ್ಕೆ ಕಾಲಕಾಲಕ್ಕೆ ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ನಡೆಸುವ ಶಾಸನಬದ್ಧ ಹಕ್ಕಿದೆ. ನಕಲಿ ಮತದಾರರನ್ನು ಪಟ್ಟಿಯಿಂದ ಕಿತ್ತುಹಾಕುವ ಪ್ರಕ್ರಿಯೆ ಆಗಾಗ ನಡೆಯುತ್ತಿರಲೇಬೇಕು. ಆದರೆ ವಿಧಾನಸಭೆ ಚುನಾವಣೆಗೆ ಕೇವಲ ಒಂದೆರಡು ತಿಂಗಳುಗಳ ಮೊದಲು ಏಕೆ ನಡೆಸಬೇಕು? ಅದಕ್ಕಿಂತ ಮೊದಲೇ ಇಂಥದ್ದೊಂದು ಪ್ರಕ್ರಿಯೆ ಕೈಗೊಳ್ಳಬಹುದಲ್ಲವೇ? ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿಲ್ಲ. 2003 ಮತ್ತು 2024ರ ನಡುವೆ, ಲೋಕಸಭೆಗೆ ಐದು ಚುನಾವಣೆಗಳು ಮತ್ತು ರಾಜ್ಯಗಳಲ್ಲಿ ಹಲವು ವಿಧಾನಸಭೆ ಚುನಾವಣೆಗಳು ನಡೆದಿವೆ. ಆದರೆ ಈ ಅವಧಿಯಲ್ಲಿ ಆಯೋಗ 'ಎಸ್‌ಐಆರ್' ಅನ್ನು ನಡೆಸಲಿಲ್ಲ. ಹೀಗಾಗಿ, ಬಿಹಾರ ಚುನಾವಣೆಗಳಿಗೆ ಸ್ವಲ್ಪ ಮೊದಲು ಮತ್ತು ಈಗ ಕೇರಳ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳದಲ್ಲಿ ವಿಧಾನಸಭಾ ಚುನಾವಣೆಗಳಿಗೆ ಕೆಲವು ತಿಂಗಳುಗಳಿಗೆ ಮೊದಲು ಪಟ್ಟಿ ಪರಿಷ್ಕರಣೆ ಮಾಡುತ್ತಿರುವುದರಿಂದ ಸಹಜವಾಗಿಯೇ ಚುನಾವಣಾ ಆಯೋಗ ಮತ್ತೊಮ್ಮೆ ವಿಪಕ್ಷಗಳ ಕೆಂಗಣ್ಣಿಗೆ ಗುರಿಯಾಗಿದೆ. ಆದರೆ, ಈ ಪ್ರಕ್ರಿಯೆಗೆ ಈಗ ಸುಪ್ರೀಂಕೋರ್ಟ್ ಅನುಮೋದನೆಯೂ ಸಿಕ್ಕಿರುವುದರಿಂದ ಬರುವ ಬಂಗಾಳ ಚುನಾವಣಾ ಕದನದ ರೋಚಕತೆ ಮತ್ತು ಆಕ್ರಮಣಶೀಲತೆ ಮತ್ತಷ್ಟು ಹೆಚ್ಚಲಿದೆ.

(ಲೇಖಕರು ಹಿರಿಯ ಪತ್ರಕರ್ತರು)

ಕಳಂಕದಿಂದ ಕಿರೀಟಕ್ಕೆ: ಬದಲಾದ ಕಾಲದ ತೀರ್ಪು

ಕಾಲಚಕ್ರ
ಎಸ್.ಎನ್.ಭಟ್, ಸೈಪಂಗಲ್ಲು
vveditoped@gmail.com

ಜಾಗತಿಕ ರಾಜಕೀಯ ಮತ್ತು ಇತಿಹಾಸದ ಪುಟಗಳನ್ನು ತಿರುವಿ ನೋಡಿದಾಗ, ಪ್ರಶಸ್ತಿಗಳು ಹಾಗೂ ಅಪರಾಧದ ಹಣೆಪಟ್ಟಿಗಳ ನಡುವಿನ ಸಂಬಂಧವು ಅತ್ಯಂತ ಸಂಕೀರ್ಣವಾಗಿ ಕಂಡುಬರುತ್ತದೆ. ಇರಾನ್‌ನ ಟೆಹರಾನ್ ನಲ್ಲಿನ ಎವಿನ್ ಜೈಲಿನಲ್ಲಿರುವ ನರ್ಗಿಸ್ ಮೊಹಮ್ಮದಿ ಅವರಿಗೆ 2023ರಲ್ಲಿ ನೊಬೆಲ್ ಶಾಂತಿ ಪ್ರಶಸ್ತಿ ಘೋಷಣೆಯಾದಾಗ ವಿಶ್ವವೇ ಸಂಭ್ರಮಿಸಿತು. ಆದರೆ, ಇರಾನ್ ಸರಕಾರ ಅವರನ್ನು 'ರಾಷ್ಟ್ರೀಯ ಭದ್ರತೆಗೆ ಧಕ್ಕೆ ತಂದ ಅಪರಾಧಿ' ಎಂದು ಕರೆದು, ಫೆಬ್ರವರಿ 2026ರಲ್ಲಿ ಮತ್ತೆ ಏಳೂವರೆ ವರ್ಷಗಳ ಹೆಚ್ಚುವರಿ ಶಿಕ್ಷೆಯನ್ನು ವಿಧಿಸಿದೆ. ಸರಕಾರಗಳ ದೃಷ್ಟಿಯಲ್ಲಿ ಯಾರು 'ಅಪರಾಧಿ' ಎನ್ನುವುದು ಕಾಲಕ್ಕೆ ತಕ್ಕಂತೆ ಮತ್ತು ಅಧಿಕಾರದಲ್ಲಿರುವವರ ಸಿದ್ಧಾಂತಕ್ಕೆ ಅನುಗುಣವಾಗಿ ಹೇಗೆ ಬದಲಾಗುತ್ತದೆ ಎಂಬುದಕ್ಕೆ ಈ ಘಟನೆಯು ಜೀವಂತ ಸಾಕ್ಷಿಯಾಗಿದೆ.

ಇತಿಹಾಸದಲ್ಲಿ ಇಂದು ನಾವು ಯಾರನ್ನು ಮಹಾನ್ ನಾಯಕರೆಂದು ಗೌರವಿಸುತ್ತೇವೆಯೋ, ಅವರು ಒಂದು ಕಾಲದಲ್ಲಿ ಕಾನೂನಿನ ದೃಷ್ಟಿಯಲ್ಲಿ ಶಿಕ್ಷಾರ್ಹ ಅಪರಾಧಿಗಳಾಗಿದ್ದರು. ದಕ್ಷಿಣ ಆಫ್ರಿಕಾದ ನೆಲ್ಸನ್ ಮಂಡೇಲಾ ಅವರನ್ನು ಅಂದಿನ ಸರಕಾರ 'ಭಯೋತ್ಪಾದಕ' ಎಂದು ಕರೆದು 27 ವರ್ಷಗಳ ಕಾಲ ಸೆರೆಮನೆಯಲ್ಲಿಟ್ಟಿತ್ತು. ಕಾಲಚಕ್ರ ಉರುಳಿದಂತೆ ಅದೇ ಮಂಡೇಲಾ ದೇಶದ ಅಧ್ಯಕ್ಷರಾದರು ಮತ್ತು ನೊಬೆಲ್ ಶಾಂತಿ ಪ್ರಶಸ್ತಿ ಹಾಗೂ ಭಾರತ ರತ್ನದಂಥ ಅತ್ಯುನ್ನತ ಗೌರವಗಳಿಗೆ ಪಾತ್ರರಾದರು. ಮ್ಯಾನ್ಮಾರ್‌ನ ಆಂಗ್ ಸಾನ್ ಸೂ ಕಿ ಕೂಡ ಪ್ರಜಾಪ್ರಭುತ್ವಕ್ಕಾಗಿ ದಶಕಗಳ ಕಾಲ ಗೃಹಬಂಧನದಲ್ಲಿದ್ದು ನೊಬೆಲ್ ಪ್ರಶಸ್ತಿ ಪಡೆದರು. ಇನ್ನು ಪ್ಯಾಲೆಸ್ತೀನ್ ವಿಮೋಚನಾ ಸಂಸ್ಥೆಯ ನಾಯಕ ಯಾಸರ್ ಅರಾಫತ್ ಅವರ ಮೇಲೆ ಅನೇಕ ದೇಶಗಳು 'ಭಯೋತ್ಪಾದಕ' ಹಣೆಪಟ್ಟಿ ಹಚ್ಚಿದ್ದರೂ, 1994ರಲ್ಲಿ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ನೀಡಲಾಯಿತು. ಇದು ಅಂತಾರಾಷ್ಟ್ರೀಯ ರಾಜತಾಂತ್ರಿಕತೆಯಲ್ಲಿ ಪ್ರಶಸ್ತಿಗಳು ಹೇಗೆ ಧ್ರುವೀಕರಣಕ್ಕೆ ಕಾರಣವಾಗುತ್ತವೆ ಎಂಬುದನ್ನು ತೋರಿಸುತ್ತವೆ.

ಭಾರತದ ಸಂದರ್ಭದಲ್ಲೂ ಇಂಥ ಹತ್ತಾರು ಉದಾಹರಣೆಗಳಿವೆ. 'ಬ್ಯಾಂಡಿಟ್ ಕ್ವೀನ್' ಫೂಲನ್ ದೇವಿ ಅವರ ಮೇಲೆ ದರೋಡೆ ಮತ್ತು ಕೊಲೆಯಂಥ ಅನೇಕ ಗಂಭೀರ ಪ್ರಕರಣಗಳಿದ್ದವು. ಆದರೆ, ಜೈಲುಶಿಕ್ಷೆಯ ನಂತರ ಅವರು ಸಂಸತ್ ಸದಸ್ಯರಾಗಿ ಆಯ್ಕೆಯಾಗಿ ದೀನದಲಿತರ ಧ್ವನಿಯಾದರು. ಅವರ ಜೀವನಗಾಥೆಯ ಚಿತ್ರವು ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳನ್ನು ಪಡೆಯಿತು. ಅಂತೆಯೇ, ಕ್ರಾಂತಿಕಾರಿ ವಿನಾಯಕ ದಾಮೋದರ್ ಸಾವರ್ಕರ್ ಅವರನ್ನು ಬ್ರಿಟಿಷ್ ಸರಕಾರವು ಕಠಿಣ 'ಕಾಲಾಪಾನಿ' ಶಿಕ್ಷೆಗೆ ಗುರಿಪಡಿಸಿತ್ತು. ಬ್ರಿಟಿಷರ ದೃಷ್ಟಿಯಲ್ಲಿ ಅವರು ಅಪಾಯಕಾರಿ ಅಪರಾಧಿಯಾಗಿದ್ದರೂ, ಸ್ವತಂತ್ರ ಭಾರತವು ಅವರನ್ನು ಗೌರವಿಸಿತು.

ವಿವಿಧ ಕ್ಷೇತ್ರಗಳಲ್ಲೂ ಈ ವಿರೋಧಾಭಾಸ ಎದ್ದುಕಾಣುತ್ತದೆ. ಚಲನಚಿತ್ರ ನಟ ಸಂಜಯ್ ದತ್ 1993ರ ಮುಂಬೈ ಸ್ಫೋಟದ ಪ್ರಕರಣದಲ್ಲಿ ಜೈಲು ಶಿಕ್ಷೆ ಅನುಭವಿಸಿದರೂ, ಅವರ ನಟನೆಗಾಗಿ ಅನೇಕ ರಾಷ್ಟ್ರೀಯ ಮತ್ತು ಫಿಲ್ಮ್‌ಫೇರ್ ಪ್ರಶಸ್ತಿಗಳು ಸಂದಿವೆ. ವಿಜ್ಞಾನ ಕ್ಷೇತ್ರದಲ್ಲಿ, ಇಸ್ರೋ ವಿಜ್ಞಾನಿ ಎಸ್. ನಂಬಿ ನಾರಾಯಣನ್ ಅವರ ಮೇಲೆ 1994ರಲ್ಲಿ ಸುಳ್ಳು 'ದೇಶದ್ರೋಹ'ದ ಆರೋಪ ಹೊರಿಸಲಾಗಿತ್ತು. ದಶಕಗಳ ನಂತರ ಸುಪ್ರೀಂ ಕೋರ್ಟ್ ಅವರನ್ನು ನಿರ್ದೋಷಿ ಎಂದು ಘೋಷಿಸಿದಾಗ, ಸರಕಾರವು ಅವರಿಗೆ ಪದ್ಮಭೂಷಣ ನೀಡಿ ಗೌರವಿಸಿತು. ಇದು ವ್ಯವಸ್ಥೆಯ ತಪ್ಪು ನಿರ್ಧಾರವನ್ನು ಪ್ರಶಸ್ತಿಯ ಮೂಲಕ ಸರಿಪಡಿಸಿದ ಸಂದರ್ಭವಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ರಾಜಕೀಯ ಜೀವನವು 'ಕಳಂಕ' ಮತ್ತು 'ಗೌರವ'ದ ನಡುವಿನ ಸಂಘರ್ಷಕ್ಕೆ ಒಂದು ಅತಿ ದೊಡ್ಡ ಉದಾಹರಣೆಯಾಗಿದೆ. 2002ರ ಗುಜರಾತ್ ಗಲಭೆಯ ನಂತರ, ಅಂದಿನ ಮುಖ್ಯಮಂತ್ರಿಯಾಗಿದ್ದ ಮೋದಿ ಅವರ ಮೇಲೆ ಗಂಭೀರ ಆರೋಪಗಳು ಕೇಳಿಬಂದವು. ವಿರೋಧ ಪಕ್ಷಗಳು ಮತ್ತು ಮಾನವ ಹಕ್ಕುಗಳ ಸಂಘಟನೆಗಳು ಅವರನ್ನು 'ಅಪರಾಧಿ'ಯ ಸ್ಥಾನದಲ್ಲಿ ನಿಲ್ಲಿಸಿದವು, ಅಷ್ಟೇ ಅಲ್ಲದೆ ಅಮೆರಿಕದಂಥ ದೇಶಗಳು ಅವರಿಗೆ ವೀಸಾ ನಿರಾಕರಿಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ನಿರ್ಬಂಧ ಹೇರಿದ್ದವು. ಆದರೆ, ದಶಕಗಳ ಕಾಲ ನಡೆದ ಕಾನೂನು ಹೋರಾಟದ ನಂತರ ಭಾರತದ ಸರ್ವೋಚ್ಚ ನ್ಯಾಯಾಲಯವು ಅವರಿಗೆ 'ಕ್ಲೀನ್ ಚಿಟ್' ನೀಡಿತು. ಆ ಕಳಂಕದ ಕರಾಳಛಾಯೆಯಿಂದ ಹೊರಬಂದ ಮೋದಿ, ಸತತ ಮೂರು ಬಾರಿ ಭಾರತದ ಪ್ರಧಾನಿಯಾಗಿ ಆಯ್ಕೆಯಾಗುವ ಮೂಲಕ ಅಭೂತಪೂರ್ವ ಜನಪ್ರಿಯತೆ ಗಳಿಸಿದರು. ಇಂದು

ಜಗತ್ತಿನ ಪ್ರಬಲ ರಾಷ್ಟ್ರಗಳಾದ ಅಮೆರಿಕ, ಯುಎಇ ಮತ್ತು ಫ್ರಾನ್ಸ್ ಸೇರಿದಂತೆ ಹಲವು ದೇಶಗಳು ಅವರಿಗೆ ತಮ್ಮ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ. ಈ ಸ್ಥಿತ್ಯಂತರವು ರಾಜಕೀಯ ಸನ್ನಿವೇಶ ಮತ್ತು ಕಾಲ ಬದಲಾದಂತೆ ಒಬ್ಬ ವ್ಯಕ್ತಿಯ ಮೇಲಿನ 'ಕಳಂಕ'ವು ಹೇಗೆ 'ಗೌರವ'ವಾಗಿ ರೂಪಾಂತರಗೊಳ್ಳಬಹುದು ಎಂಬುದನ್ನು ಸಾರುತ್ತದೆ.

ಕ್ರಿಕೆಟಿಗ ಮೊಹಮ್ಮದ್ ಅಜರುದ್ದೀನ್ 'ಮ್ಯಾಚ್ ಫಿಕ್ಸಿಂಗ್' ಹಗರಣದಲ್ಲಿ ಸಿಲುಕಿ ಆಜೀವ ನಿಷೇಧಕ್ಕೊಳಗಾದರು. ಆದರೆ ಅದಕ್ಕೂ ಮುನ್ನ ಅವರು ಪದ್ಮಶ್ರೀ ಮತ್ತು ಅರ್ಜುನ ಪ್ರಶಸ್ತಿಗಳನ್ನು ಪಡೆದಿದ್ದರು. ಇತ್ತೀಚಿನ ವರ್ಷಗಳಲ್ಲಿ ಶಿಕ್ಷಣ ಮತ್ತು ಪರಿಸರ ಹೋರಾಟಗಾರ ಸೋನಂ ವಾಂಗ್‌ಚುಕ್ ಅವರಿಗೆ ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ ಲಭಿಸಿದೆ. ಆದರೆ ಲಡಾಖ್ ಹಕ್ಕುಗಳಿಗಾಗಿ ಅವರು ನಡೆಸುತ್ತಿರುವ ಹೋರಾಟದ ಕಾರಣದಿಂದಾಗಿ ಅವರು ಸರಕಾರದ ಕಣ್ಣಿಗೆ 'ಕಾನೂನು-ಸುವ್ಯವಸ್ಥೆಗೆ ಧಕ್ಕೆ ತರುವವರು' ಎನಿಸಿ ಗೃಹಬಂಧನಕ್ಕೆ ಒಳಗಾಗುತ್ತಿದ್ದಾರೆ.

ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಒಂದು ಸತ್ಯ ಸ್ಪಷ್ಟವಾಗುತ್ತದೆ: ಇಂದಿನ ಕ್ರಾಂತಿಕಾರಿ ಅಥವಾ ಹೋರಾಟಗಾರ ನಾಳೆಯ ನಾಯಕನಾಗಬಹುದು ಅಥವಾ ಇಂದಿನ ರಾಷ್ಟ್ರಪ್ರೇಮಿ ನಾಳೆಯ ಅಪರಾಧಿಯಾಗಬಹುದು.

ಕಾನೂನು ಮತ್ತು ಸಿದ್ಧಾಂತ

ಕಾನೂನು ಎನ್ನುವುದು ಕೇವಲ ಕಾಗದದ ಮೇಲಿರುವ ನಿಯಮವಲ್ಲ; ಅದು ಆಯಾ ಕಾಲದ ರಾಜಕೀಯ ಸಿದ್ಧಾಂತ ಮತ್ತು ಅಧಿಕಾರಶಾಹಿಯ ಪ್ರತಿಬಿಂಬವಾಗಿರುತ್ತದೆ. ಒಂದು ದೇಶದ ಆಡಳಿತಾರೂಢ ವ್ಯವಸ್ಥೆಯು ತನ್ನ ಅಸ್ತಿತ್ವಕ್ಕೆ ಸಂಚಕಾರ ತರುವ ಯಾವುದೇ ಧ್ವನಿಯ ಮೇಲೆ 'ಕಾನೂನುಬಾಹಿರ' ಎಂದು ಮುದ್ರೆ ಒತ್ತುತ್ತದೆ. ಇತಿಹಾಸದುದ್ದಕ್ಕೂ ವ್ಯವಸ್ಥೆಯನ್ನು ಪ್ರಶ್ನಿಸುವವರು ಅಥವಾ ಸಮಾಜದಲ್ಲಿ ಹೊಸ ಬದಲಾವಣೆಯನ್ನು ತರಲು ಬಯಸುವ ಕ್ರಾಂತಿಕಾರಿಗಳು ಅಂದಿನ ವ್ಯವಸ್ಥೆಯ ದೃಷ್ಟಿಯಲ್ಲಿ 'ಅಪರಾಧಿ'ಗಳಾಗಿಯೇ ಕಾಣಿಸಿಕೊಂಡಿದ್ದಾರೆ. ಉದಾಹರಣೆಗೆ, ಬ್ರಿಟಿಷರ ಕಾಲದ 'ದೇಶದ್ರೋಹ'ದ ಕಾನೂನು ಅಂದು ಸ್ವಾತಂತ್ರ್ಯ ಹೋರಾಟಗಾರರನ್ನು ಹತ್ತಿಕ್ಕಲು ಬಳಕೆಯಾಗಿತ್ತು. ಅಂದರೆ, ಕಾನೂನು ಸ್ಥಿರವಲ್ಲ; ಅದು ಆಳುವವರ ಹಿತಾಸಕ್ತಿಗೆ ಅನುಗುಣವಾಗಿ ಬದಲಾಗುತ್ತಿರುತ್ತದೆ. ನರ್ಗಿಸ್ ಮೊಹಮ್ಮದಿ ಅವರ ವಿಷಯದಲ್ಲೂ ಇರಾನ್ ಸರಕಾರದ ಭದ್ರತಾ ಕಾನೂನುಗಳು ಅವರ ಮಾನವ ಹಕ್ಕುಗಳ ಹೋರಾಟವನ್ನು 'ಅಪರಾಧ' ಎಂದು ವ್ಯಾಖ್ಯಾನಿಸುತ್ತಿವೆ.

ಪ್ರಶಸ್ತಿಗಳು ಮತ್ತು ವ್ಯಕ್ತಿಯ ನೈಜ ಕೊಡುಗೆ

ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರಶಸ್ತಿಗಳು, ವಿಶೇಷವಾಗಿ ನೊಬೆಲ್‌ನಂಥ ಗೌರವಗಳು, ವ್ಯಕ್ತಿಯ ಮೇಲೆ ಹೊರಿಸಲಾದ ತಾತ್ಕಾಲಿಕ ಕಾನೂನು ಪ್ರಕರಣಗಳಿಗಿಂತ ಹೆಚ್ಚಾಗಿ ಅವರ 'ಉದ್ದೇಶ' ಮತ್ತು 'ದೀರ್ಘಕಾಲದ ಕೊಡುಗೆ'ಯನ್ನು ಮಾನ್ಯ ಮಾಡುತ್ತವೆ. ಪ್ರಶಸ್ತಿ ನೀಡುವ ಸಂಸ್ಥೆಗಳು ವ್ಯಕ್ತಿಯನ್ನು ಕೇವಲ ಒಬ್ಬ ನಾಗರಿಕನಾಗಿ ನೋಡದೆ, ಒಂದು ದೊಡ್ಡ ಬದಲಾವಣೆಯ ಸಂಕೇತವಾಗಿ ನೋಡುತ್ತವೆ. ನೆಲ್ಸನ್ ಮಂಡೇಲಾ ಅಥವಾ ನರ್ಗಿಸ್ ಮೊಹಮ್ಮದಿ ಅವರ ಹೋರಾಟವು ಕೇವಲ ವೈಯಕ್ತಿಕ ಲಾಭಕ್ಕಾಗಿರಲಿಲ್ಲ, ಬದಲಿಗೆ ಸಮಾನತೆ ಮತ್ತು ನ್ಯಾಯದಂಥ ಸಾರ್ವತ್ರಿಕ ಮೌಲ್ಯಗಳಿಗಾಗಿ ಇತ್ತು. ಜಾಗತಿಕ ವೇದಿಕೆಯು ಇಂಥ ವ್ಯಕ್ತಿಗಳನ್ನು ಗೌರವಿಸುವ ಮೂಲಕ, ಆಯಾ ದೇಶದ ಸರಕಾರಗಳು ಲಗತ್ತಿಸಿದ 'ಅಪರಾಧಿ' ಎಂಬ ಹಣೆಪಟ್ಟಿಯನ್ನು ಪರೋಕ್ಷವಾಗಿ ತಿರಸ್ಕರಿಸುತ್ತದೆ ಮತ್ತು ಅವರ ಹೋರಾಟಕ್ಕೆ ನೈತಿಕ ಬೆಂಬಲವನ್ನು ನೀಡುತ್ತದೆ.

ಸತ್ಯದ ಹಾದಿಯಲ್ಲಿನ ಸಂಘರ್ಷ

ನೈತಿಕತೆ ಮತ್ತು ಕಾನೂನು ಯಾವಾಗಲೂ ಒಂದೇ ಹಾದಿಯಲ್ಲಿ ಸಾಗುವುದಿಲ್ಲ. ಕಾನೂನುಬದ್ಧವಾಗಿರುವುದು ಯಾವಾಗಲೂ ನೈತಿಕವಾಗಿ ಸರಿಯಾಗಿರಬೇಕೆಂದಿಲ್ಲ (ಉದಾಹರಣೆಗೆ: ವರ್ಣಭೇದ ನೀತಿ ಒಂದು ಕಾಲದಲ್ಲಿ ಕಾನೂನುಬದ್ಧವಾಗಿತ್ತು, ಆದರೆ ಅದು ನೈತಿಕವಾಗಿ ತಪ್ಪಾಗಿತ್ತು). ನೈತಿಕವಾಗಿ ಸರಿಯಾದ ಹಾದಿಯಲ್ಲಿ ನಡೆಯುವವರು ಹಲವು ಬಾರಿ ಸಂಕುಚಿತ ಮತ್ತು ದಬ್ಬಾಳಿಕೆಯ ಕಾನೂನುಗಳ ಅಡಿಯಲ್ಲಿ ಅಪರಾಧಿಗಳಾಗುತ್ತಾರೆ. ಆದರೆ ಜಾಗತಿಕ ಸಮುದಾಯವು ಇಂಥವರನ್ನು ಸಮಾಜದ 'ನೈಜ ರಾಯಭಾರಿಗಳು' ಎಂದು ಗುರುತಿಸುತ್ತದೆ. ನಂಬಿ ನಾರಾಯಣನ್ ಅವರ ಪ್ರಕರಣದಲ್ಲಿ ದಶಕಗಳ ಕಾಲ ಕಾನೂನು ಅವರನ್ನು ತಪ್ಪಿತಸ್ಥನೆಂದು ಬಿಂಬಿಸಿದರೂ, ಅವರ ನೈತಿಕತೆ ಮತ್ತು ವಿಜ್ಞಾನದ ಮೇಲಿನ ನಿಷ್ಠೆ ಅವರನ್ನು ಕೊನೆಗೆ 'ಪದ್ಮ' ಪ್ರಶಸ್ತಿಗೆ ಅರ್ಹರನ್ನಾಗಿ ಮಾಡಿತು. ಇದು 'ಕಾನೂನು ಸೋತರೂ ನೈತಿಕತೆ ಗೆಲ್ಲುತ್ತದೆ' ಎಂಬುದಕ್ಕೆ ಉತ್ತಮ ನಿದರ್ಶನ.

ಒಟ್ಟಾರೆಯಾಗಿ, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ರಾಜಕೀಯ ಪಿತೂರಿಗಳ ನಡುವಿನ ಈ ಸಂಘರ್ಷವು ಸಮಾಜದಲ್ಲಿ ನ್ಯಾಯದ ವ್ಯಾಖ್ಯಾನವನ್ನು ನಿರಂತರವಾಗಿ ಮರುರೂಪಿಸುತ್ತಲೇ ಇರುತ್ತದೆ. ನರ್ಗಿಸ್ ಮೊಹಮ್ಮದಿ ಅವರಂಥವರ ಜೀವನವು ಜೈಲುಗೋಡೆಗಳ ನಡುವೆಯೂ ಸತ್ಯ ಮತ್ತು ನ್ಯಾಯದ ಧ್ವನಿ ಸಾಯುವುದಿಲ್ಲ ಎಂಬುದಕ್ಕೆ ಪ್ರಬಲ ಸಂಕೇತವಾಗಿದೆ.

(ಲೇಖಕರು ನಿವೃತ್ತ ಪ್ರಾಂಶುಪಾಲರು)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಅಂಕಣ ಆಸಕ್ತಿದಾಯಕ

'ಗ್ವಾಕಮೂಲಿಯ ಮೂಲವಸ್ತುವಿನ ಹೆಸರಿನ ಮೂಲ' (ತಿಳಿರುತೋರಣ, ಫೆ.8) ಅಂಕಣಬರಹ ತುಂಬ ಆಸಕ್ತಿದಾಯಕ, ಮಾಹಿತಿಪೂರ್ಣ ಮತ್ತು ಚೆನ್ನಾಗಿ ಬರೆಯಲ್ಪಟ್ಟದ್ದಾಗಿ ಅನ್ನಿಸಿತು. ಇದು ಆಹಾರಸಂಸ್ಕೃತಿ, ಇತಿಹಾಸ, ವ್ಯಾಪಾರ, ಆರೋಗ್ಯ ವಿಜ್ಞಾನ ಮತ್ತು ಜನಪದ ಕಥೆಗಳನ್ನು ಒಟ್ಟಿಗೆ ಸೇರಿಸಿ, ಆವಕಾಡೊ ಮತ್ತು ಗ್ವಾಕಮೂಲಿ ವಿಷಯವನ್ನು ಶಿಕ್ಷಣಾತ್ಮಕವಾಗಿಯೂ ಮನರಂಜನೆಯಾಗಿಯೂ ಮಾಡುತ್ತದೆ. ಸೂಪರ್‌ಬೌಲ್ ಸಮಯದಲ್ಲಿ ಗ್ವಾಕಮೂಲಿ ಬಳಕೆ, ಆವಕಾಡೊ ರಫ್ತಿನಲ್ಲಿ ಮೆಕ್ಸಿಕೋದ ಮೇಲುಗೈ, ಆವಕಾಡೊ ಪದದ ಮೂಲ, ಮತ್ತು ಹಾಸ್ ಆವಕಾಡೊಗಳ ಬೆಳವಣಿಗೆ ಮೊದಲಾದ ವಾಸ್ತವಾಂಶಗಳು ಬಹುಪಾಲು ಸರಿಯಾಗಿವೆ ಮತ್ತು ಚೆನ್ನಾಗಿ ಸಂಶೋಧಿಸಿದಂತಿವೆ. ಆವಕಾಡೊಗಳ ಪೌಷ್ಟಿಕ ಲಾಭಗಳು ಮತ್ತು ಜಾಗತಿಕ ಜನಪ್ರಿಯತೆಯನ್ನೂ ಸಮತೋಲನವಾಗಿ ಹಾಗೂ ನಿಜವಾದ ರೀತಿಯಲ್ಲಿ ವಿವರಿಸಲಾಗಿದೆ. ಈ ಲೇಖನವನ್ನು ಇನ್ನಷ್ಟು ವಿಶೇಷವಾಗಿಸುವುದು ಪೌರಾಣಿಕ ಕಥೆಗಳು, ಕನಸಿನ ನಂಬಿಕೆಗಳು ಮತ್ತು ಸಾಂಸ್ಕೃತಿಕ ಜನಪದ ಕಥೆಗಳ ಸೇರ್ಪಡೆ. ಇವು ವೈಜ್ಞಾನಿಕವಾಗಿ ಸತ್ಯವಲ್ಲದಿದ್ದರೂ, ಕಥನಕ್ಕೆ ರಸವತ್ತಾದ ಮೌಲ್ಯವನ್ನು ನೀಡುತ್ತವೆ ಮತ್ತು ಓದುವ ಅನುಭವವನ್ನು ಹೆಚ್ಚು ನೆನಪಿನಲ್ಲಿ ಉಳಿಯುವಂತೆ ಮಾಡುತ್ತವೆ. ಒಟ್ಟಿನಲ್ಲಿ, ಇದು ನಂಬಲರ್ಹ ಮಾಹಿತಿಯನ್ನು ಸೃಜನಾತ್ಮಕ ಕಥನದೊಂದಿಗೆ ಸೇರಿಸಿರುವ ಉತ್ತಮ ಗುಣಮಟ್ಟದ ಲೇಖನ ಎಂದು ನಾನು ಅಂಕ ನೀಡುತ್ತೇನೆ. ಮಾಹಿತಿಯು ಬರವಣಿಗೆಯನ್ನು ಹೇಗೆ ಜೀವಂತ ಮತ್ತು ಆಕರ್ಷಕವಾಗಿ ಮಾಡಬಹುದು ಎಂಬುದಕ್ಕೆ ಇದೊಂದು ಒಳ್ಳೆಯ ಉದಾಹರಣೆ. ಆದರೆ ಓದುಗರು ಸತ್ಯವಾದ ಮಾಹಿತಿಯನ್ನು ಮತ್ತು ಜನಪದ ಕಥೆಗಳನ್ನು ಬೇರ್ಪಡಿಸಿ ತಿಳಿದುಕೊಳ್ಳಬೇಕು ಅಷ್ಟೇ.

- ಭಾರತಿ ಪ್ರಕಾಶ ಶೆಣೈ, ಕಾರ್ಕಳ

ಚಿಂತನೆಗೆ ಹಚ್ಚಿತು

ಮುಂಬೈನ ಡಬ್ಬಾವಾಲಾಗಳ ಕುರಿತಾದ ಕಿರಣ್ ಉಪಾಧ್ಯಾಯರ ಅಂಕಣಬರಹ (ಫೆ.9) ಒಂದಿಷ್ಟು ಚಿಂತನೆಗೆ ಹಚ್ಚಿತು. ಯಾವ್ಯಾವುದೋ ದೂರದ ಪ್ರದೇಶದಿಂದ ಅಥವಾ ಉಪನಗರಗಳಿಂದ, ಅಗತ್ಯವಿರುವವರ ಮನೆಗಳಿಗೆ ನಿರ್ದಿಷ್ಟ ಸಮಯಕ್ಕೆ ತಲುಪಿ, ಅಲ್ಲಿಂದ ಅವರ ಊಟದ ಡಬ್ಬಿಯನ್ನು ಹೊತ್ತು ತಂದು ಸಂಬಂಧಪಟ್ಟ ಉದ್ಯೋಗಸ್ಥರಿಗೆ ಸರಿಯಾದ ಸಮಯಕ್ಕೆ ಮುಟ್ಟಿಸುವುದನ್ನು 'ಕೆಲಸ' ಅನ್ನುವುದಕ್ಕಿಂತ 'ವೃತ್ತಿಶ್ರದ್ಧೆ' ಎನ್ನುವುದೇ ಹೆಚ್ಚು ಸೂಕ್ತ. ಇಂಥ ತಪಸ್ಸನ್ನು ಅತ್ಯಂತ ಶಿಸ್ತು ಮತ್ತು ಬದ್ಧತೆಯಿಂದ ನಿರ್ವಹಿಸುವ ಡಬ್ಬಾವಾಲಾಗಳಿಗೆ ಒಂದು ನಮಸ್ಕಾರವನ್ನು ಸಲ್ಲಿಸಲೇಬೇಕು. ಪ್ರಾಯಶಃ ಮನೆಯವರು ಕೂಡ ಅಷ್ಟೊಂದು ಕಾಳಜಿ ವಹಿಸುತ್ತಾರೋ ಇಲ್ಲವೋ, ಈ ಡಬ್ಬಾವಾಲಾಗಳು ಮಾತ್ರ ಆಯಾ ಊಟದ ಡಬ್ಬಿಗಳನ್ನು ಸಂಬಂಧಪಟ್ಟವರಿಗೆ ಮುಟ್ಟಿಸುವಲ್ಲಿ ಅತೀವ ಕಾಳಜಿ ವಹಿಸುತ್ತಾರೆ. ಇಷ್ಟಾಗಿಯೂ ಅವರಲ್ಲಿ ಅದೆಷ್ಟು ವಿನಯ, ಸಭ್ಯತೆ ಮತ್ತು ಚುರುಕುತನ! ಡಬ್ಬಾವಾಲಾಗಳದ್ದು ಏನಿದ್ದರೂ ಮೌನವಾಗಿ ಕೆಲಸ ಮಾಡಿಕೊಂಡು ಹೋಗುವ ಸ್ವಭಾವ. ಎಲ್ಲೂ, ಯಾವಾಗಲೂ, ಯಾರೊಡನೆಯೂ ಅನಗತ್ಯವಾದ ಮಾತಿಲ್ಲ, ಜಗಳವಿಲ್ಲ, ತಂಟೆ-ತಕರಾರುಗಳಿಲ್ಲ! ಇವರಲ್ಲಿಯ ಶಿಸ್ತನ್ನು ಒಂದೊಮ್ಮೆ ನಾವು ಅರಗಿಸಿಕೊಂಡಿದ್ದೇ ಆದಲ್ಲಿ, ಬೇರಾವುದೇ 'ಬಿಸಿನೆಸ್ ಸ್ಕೂಲ್'ಗಳಿಗೆ ಹೋಗುವ ಅವಶ್ಯಕತೆಯೇ ಎದುರಾಗುವುದಿಲ್ಲ. ಅಷ್ಟೊಂದು ಕರಾರುವಾಕ್ಕು ಇವರ ಕಾರ್ಯಶೈಲಿ. ಡಬ್ಬಾವಾಲಾಗಳಿಂದ ನಮ್ಮ ಕಾರ್ಪೊರೇಟ್ ಜಗತ್ತು ಕಲಿಯಬೇಕಾದ ಪಾಠ ಸಾಕಷ್ಟಿದೆ.

- ಶಂಕರನಾರಾಯಣ ಭಟ್, ಮಾಡಗೇರಿ

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ನವೀನ ಶೆಟ್ಟಿ, ಕುಂದಾಪುರ**
ಭಟ್ರೇ, ಮದುವೆಗೂ, ಇಂಟರ್ನೆಟ್ ವೇಗಕ್ಕೂ ಸಂಬಂಧವೇನು?
- **ಮದುವೆಗೆ ಮುಂಚೆ '5ಜಿ' ವೇಗದಲ್ಲಿ ಮಾತುಕತೆ ಇರುತ್ತದೆ, ಮದುವೆಯಾದ ಮೇಲೆ 'ಒಕೆ' ಎನ್ನಲು ಮಾತ್ರ ಸಿಗ್ನಲ್ ಸಿಗುತ್ತದೆ!**

- **ಸತ್ಯನಾರಾಯಣ ಬಿ., ಕತ್ರಿಗುಪ್ಪೆ**
ಭಟ್ರೇ, ಮದುವೆಗೂ, ಮೊಬೈಲ್ ಪಾಸ್‌ವರ್ಡ್‌ಗೂ ಸಾಮ್ಯತೆ ಏನು?
- **ಎರಡರಲ್ಲೂ ಅಸಲಿ ಅಂಶವನ್ನು ಕಾಪಾಡಲು ಎಲ್ಲರೂ ಭಯಸುತ್ತಾರೆ!**

- **ನಿರ್ಮಲಾ ರೊಟ್ಟಿ, ಗದಗ**
ಭಟ್ರೇ, ಮಗು ಅಳುತ್ತಿರುವಾಗ ಅಪ್ಪ ಯಾಕೆ ಸಮಾಧಾನ ಮಾಡುವುದಿಲ್ಲ?
- **ಅಪ್ಪನಿಗೆ ಗೊತ್ತಿರುತ್ತದೆ, ಆ ಮಗುವಿನ ಅಳುವಿಗೆ ಕಾರಣ ತಾನಲ್ಲ ಎಂದು!**

- **ಶಾರದಾ ದೇಶಮಾನೆ, (ಇಮೇಲ್ ಮೂಲಕ)**
ಭಟ್ರೇ, ಸಾಲ ಕೊಟ್ಟವನಿಗೂ, ಶ್ಯಾಂಪೂ ಬಾಟಲಿಗೂ ಏನು ವ್ಯತ್ಯಾಸ?
- **ಶ್ಯಾಂಪೂ ಖಾಲಿಯಾದಾಗ ಒಮ್ಮೆ ಒತ್ತಿದರೆ ಸ್ವಲ್ಪ ಬರುತ್ತದೆ, ಆದರೆ ಸಾಲಗಾರನನ್ನ ಎಷ್ಟೇ ಒತ್ತಿದರೂ ಹಣ ಬರುವುದಿಲ್ಲ!**

- **ಹರಿ, ಬೆಂಗಳೂರು**
ಭಟ್ರೇ, ಸೋಮವಾರಕ್ಕೂ, ಡಯಟ್ ಮಾಡುವುದಕ್ಕೂ ಇರುವ ಸಂಬಂಧವೇನು?
- **ಎರಡೂ ಶುರುವಾದ ಹತ್ತು ನಿಮಿಷಕ್ಕೆ 'ಮುಂದಿನ ವಾರ ನೋಡೋಣ' ಅನಿಸುತ್ತದೆ!**

- **ವಿನೋದ ಶರ್ಮ, ಕೆಂಗೇರಿ**
ಭಟ್ರೇ, ಗೂಗಲ್, ಹೆಂಡತಿಯ ನಡುವಿನ ಸಾಮ್ಯತೆ ಏನು?
- **ನಮಗೆ ಬೇಕಿದ್ದನ್ನು ನಾವು ಕೇಳುವ ಮೊದಲೇ ಅವಳಿಗೆ ಎಲ್ಲವೂ ಗೊತ್ತಿರುತ್ತದೆ!**

- **ಶೋಭಾ ಕೆಳಮನೆ, ಬಾಗಲಕೋಟೆ**
ಭಟ್ರೇ, ವಾಟ್ಸಾಪ್ ಗ್ರೂಪ್ ಮತ್ತು ಹಳೆ ಕಾಲದ ಬಾವಿಯ ನಡುವಿನ ವ್ಯತ್ಯಾಸವೇನು?
- **ಬಾವಿಯಲ್ಲಿ ಕಲ್ಲು ಹಾಕಿದರೆ ಶಬ್ದ ಬರುತ್ತದೆ, ವಾಟ್ಸಾಪ್ ಗ್ರೂಪ್‌ನಲ್ಲಿ ಜೋಕ್ ಹಾಕಿದರೆ ಕೇವಲ 'ಸೈಲೆನ್ಸ್' ಬರುತ್ತದೆ!**

- **ರಾಜು, ಹುಬ್ಬಳ್ಳಿ**
ಭಟ್ರೇ, ಕೆಲಸ ಮಾಡುವ ಮಗ ಮತ್ತು ಕೆಲಸ ಮಾಡದ ಮಗನ ಮಧ್ಯೆ ಏನು ವ್ಯತ್ಯಾಸ?
- **ಒಬ್ಬ ಆಫೀಸ್‌ನಲ್ಲಿ ಬಾಸ್ ಹತ್ತಿರ ಬೈಸಿಕೊಳ್ಳುತ್ತಾನೆ, ಇನ್ನೊಬ್ಬ ಮನೆಯಲ್ಲಿ ಅಪ್ಪನ ಹತ್ತಿರ ಬೈಸಿಕೊಳ್ಳುತ್ತಾನೆ!**

ನಮ್ಮ ಮೆಟ್ರೋ, ನಿಮ್ಮದೂ ಆಗುವುದು ಯಾವಾಗ ?

ಲೋಕಮತ

ಲೋಕೇಶ್ ಕಾಯರ್ಗ

vveditoped@gmail.com

ಸೀನ್ ನಂಬರ್ 1: ಮೆಟ್ರೋ ನಮ್ಮ ಅಧೀನದಲ್ಲಿ ಇಲ್ಲ. ದರ ಏರಿಕೆ ನಿರ್ಧಾರ ಏನಿದ್ದರೂ ಕೇಂದ್ರ ಸರಕಾರದ ನಿರ್ಧಾರ.

ಸೀನ್ ನಂಬರ್ 2: ಮೆಟ್ರೋ ಮಾರ್ಗ ಮಾತ್ರ ನಮ್ಮ ಯೋಜನೆ. ದರ ಏರಿಕೆ ವಿಚಾರದಲ್ಲಿ ರಾಜ್ಯ ಸರಕಾರದ್ದೇ ಅಂತಿಮ ಮಾತು.

ರಾಜ್ಯದ ಕಾಂಗ್ರೆಸ್ ಸರಕಾರ ಮತ್ತು ಕೇಂದ್ರದ ಬಿಜೆಪಿ ಸರಕಾರ ಕಳೆದ ಎರಡು ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ಮಹಾ ನಾಟಕದ ದೃಶ್ಯಗಳಿವು. ಇದೀಗ ದರ ಏರಿಕೆಗೆ ತಾತ್ಕಾಲಿಕ ಬ್ರೇಕ್ ಸಿಕ್ಕಿದೆ. ಈ ಸಂಬಂಧ ಇಬ್ಬರದ್ದೂ ಒಂದೇ ಡೈಲಾಗ್– 'ಈ ನಿರ್ಧಾರ ನಮ್ಮದು'.

ಒಳಿತೆಲ್ಲವೂ ನಮ್ಮದು, ಕೆಡುಕೆಲ್ಲವೂ ಅವರದ್ದು ಎನ್ನುವ ಕೇಂದ್ರ ಮತ್ತು ರಾಜ್ಯ ಸರಕಾರಗಳ ನಡುವಣ ಈ ಕಿತ್ತಾಟದ ಪ್ರಹಸನವನ್ನು ಮೂಕ ಪ್ರೇಕ್ಷಕರಾಗಿ ವೀಕ್ಷಿಸುವುದು, ಎಷ್ಟೇ ದರ ಹೆಚ್ಚಳವಾದರೂ ತಲೆ ಬಗ್ಗಿಸಿ ಪಾವತಿಸುವುದಷ್ಟೇ ನಮ್ಮ ಪಾತ್ರ.

ಇವುಗಳ ಒಟ್ಟು ತಾತ್ಪರ್ಯ ಎಂದರೆ ನಾವು 'ನಮ್ಮ ಮೆಟ್ರೊ' ಎಂದು ಹೆಮ್ಮೆಯಿಂದ ಕರೆಯುವ ಮೆಟ್ರೋ ಮಾರ್ಗ ನಮ್ಮದಲ್ಲ. ಖಾಸಗಿ ಬಸ್ಸು, ವಿಮಾನಗಳಂತೆ ನಮ್ಮ ಟಿಕೆಟ್ ಹಣದಲ್ಲಿ ನಮ್ಮ ತಲೆ ಮೇಲೆಯೇ ಓಡುವ ರೈಲಷ್ಟೇ. ಇಲ್ಲಿ ಕೇಂದ್ರದ ಮಾತೂ ನಡೆಯುವುದಿಲ್ಲ. ರಾಜ್ಯದ ಮಾತೂ ನಡೆಯುವುದಿಲ್ಲ. ಬಂಡವಾಳ ಹೂಡಿಕೆದಾರರದ್ದೇ ಅಂತಿಮ ಮಾತು. ಹೆಚ್ಚೆಂದರೆ 'ನಮ್ಮ ಆರ್‌ಸಿಬಿ' ಎಂದು ಅಭಿಮಾನಪಟ್ಟುಕೊಳ್ಳುವಂತೆ ಇಲ್ಲೂ ನಮ್ಮದೇ ದುಡ್ಡಿನಲ್ಲಿ ಹುಚ್ಚು ಅಭಿಮಾನ ಬೆಳೆಸಿಕೊಳ್ಳಬಹುದು.

ತುಂಬಾ ಸರಳವಾಗಿ ಹೇಳಬೇಕೆಂದರೆ ನಮ್ಮ ಮೆಟ್ರೋ ಬ್ರ್ಯಾಂಡ್ ನೇಮ್ ಹೊಂದಿರುವ ಬಿಎಂಆರ್‌ಸಿಎಲ್ ಒಂದು ಕಾರ್ಪೋರೇಟ್ ಸಂಸ್ಥೆ. ವ್ಯತ್ಯಾಸ ಎಂದರೆ ಇಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರ ಜಂಟಿಯಾಗಿ ಷೇರು ಬಂಡವಾಳ ಹೊಂದಿವೆ. ಈ ಜಂಟಿ ಉದ್ಯಮವನ್ನು ನಡೆಸಲು ಬಾಹ್ಯ ಸಾಲ ಪಡೆಯಲಾಗಿದೆ. ಈ ಸಾಲದ ಮರುಪಾವತಿ ಜವಾಬ್ದಾರಿಯನ್ನು ಎರಡೂ ಸರಕಾರಗಳು ಹಂಚಿಕೊಂಡಿವೆ. ಸಾಲ ಕಂತು ತುಂಬಬೇಕಾದರೆ ಆದಾಯ ಹೆಚ್ಚಳ ಆಗಲೇಬೇಕು. ಆಮೆಗತಿಯಲ್ಲಿ ಸಾಗುತ್ತಿರುವ ಬೆಂಗಳೂರು ಮೆಟ್ರೋ ಮಾರ್ಗ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕಾದರೆ ಇನ್ನಷ್ಟು ಹಣ ಬೇಕು. ಹೀಗಾಗಿ ದರ ಹೆಚ್ಚಳ ಎರಡೂ ಸರಕಾರಗಳ ಜಂಟಿ ನಿರ್ಧಾರ. ಆದರೆ ದರ ಹೆಚ್ಚಳದಿಂದಾಗುವ ಜನಾಕ್ರೋಶವನ್ನು ಎದುರಿಸಲು ಎರಡೂ ಸರಕಾರಗಳು ಸಿದ್ಧವಿಲ್ಲ. ಹೀಗಾಗಿ ಬೆಂಗಳೂರಿನ ವಾಹನದಟ್ಟಣೆಗೆ ಮುಕ್ತಿ ನೀಡಬೇಕಿದ್ದ 'ನಮ್ಮ ಮೆಟ್ರೋ' ರಾಜಕೀಯದ ಕೆಸರಿನಲ್ಲಿ ಸಿಲುಕಿ ಏದುಸಿರು ಬಿಡುತ್ತಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ದರ ಏರಿಕೆ ಮಾಡಿದ್ದು ನಾವಲ್ಲ, ಕೇಂದ್ರ ಸರಕಾರ ರಚಿಸಿದ ದರ ನಿಗದಿ ಸಮಿತಿ ಎಂದು ಸ್ಪಷ್ಟನೆ ನೀಡಿದ್ದಾರೆ. ಸಂಸದ ತೇಜಸ್ವಿ ಸೂರ್ಯ ಮತ್ತು ಇತರ ಬಿಜೆಪಿ ನಾಯಕರು, ರಾಜ್ಯ ಸರಕಾರವು ತನ್ನ ಹಣಕಾಸಿನ ಮುಗ್ಗಟ್ಟಿನಿಂದಾಗಿ ಮತ್ತು ಮೆಟ್ರೋಗೆ ನೀಡುತ್ತಿದ್ದ ಸಬ್ಸಿಡಿಯನ್ನು ನಿಲ್ಲಿಸಿದ್ದರಿಂದಲೇ ದರ ಏರಿಕೆ ಅನಿವಾರ್ಯವಾಯಿತು ಎಂದು ಆರೋಪಿಸಿದ್ದಾರೆ.

ದರ ಏರಿಕೆಯ ತಾಂತ್ರಿಕ ನಿರ್ಧಾರ ಕೇಂದ್ರ ಸರಕಾರದ ಅಧೀನದಲ್ಲಿರುವ ವಿಶೇಷ ಸಮಿತಿಯದ್ದು. ಕೇಂದ್ರ ಸರಕಾರದ ನಗರ ಸಾರಿಗೆ ಮತ್ತು ವಸತಿ ಸಚಿವಾಲಯದಿಂದ ರಚನೆಯಾಗುವ ಸ್ವತಂತ್ರ ಸಮಿತಿಗೆ ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರ ನೇತೃತ್ವವಿರುತ್ತದೆ. ಇಲ್ಲಿ ರಾಜ್ಯ ಸರಕಾರದ ಪರವಾಗಿ ಒಬ್ಬರು ಮತ್ತು ಕೇಂದ್ರ ಸರಕಾರದ ಪರ ಒಬ್ಬ ಪ್ರತಿನಿಧಿ ಇರುತ್ತಾರೆ. ಮೆಟ್ರೋ ರೈಲ್ವೆ (ಕಾರ್ಯಾಚರಣೆ ಮತ್ತು ನಿರ್ವಹಣೆ) ಕಾಯ್ದೆ 2002ರ ಅನ್ವಯ ಈ ಸಮಿತಿಯು ದರ ಏರಿಕೆ ಅಥವಾ ಇಳಿಕೆಯ ಶಿಫಾರಸು ಮಾಡುತ್ತದೆ. ಆದರೆ, ಈ ನಿರ್ಧಾರಕ್ಕೆ ಬೇಕಾದ ಹಣಕಾಸಿನ ವರದಿಗಳು ಮತ್ತು ಸನ್ನಿವೇಶಗಳನ್ನು ಬಿಎಂಆರ್‌ಸಿಎಲ್ ಒದಗಿಸುತ್ತದೆ. ಅಂದರೆ ದರ ಏರಿಕೆಯಲ್ಲಿ ಇಬ್ಬರೂ ಸಮಾನ ಪಾಲುದಾರರು.

ದೇಶದ ಉಳಿದ ನಾಲ್ಕು ಮೆಟ್ರೋ ನಗರಗಳ ಜನತೆಗೆ ಹೋಲಿಸಿದರೆ ಕನ್ನಡಿಗರ ನಸೀಬು ಯಾವಾಗಲೂ ಖೊಟ್ಟಿ. ಮುಂಬಯಿ ಚೆನ್ನೈ ಮತ್ತು ಕೋಲ್ಕತ್ತಾ ನಗರಗಳಿಗೆ ಬ್ರಿಟಿಷರ ಕಾಲದಲ್ಲಿಯೇ ಸಬ್ ಅರ್ಬನ್ ರೈಲಿನ ಸೇವೆ ಲಭ್ಯವಾಯಿತು. ಮುಂಬಯಿನ ಚರ್ಚ್ ಗೇಟ್ ಮತ್ತು ವಿರಾರ್ ನಡುವೆ 1867ರಷ್ಟು ಹಿಂದೆಯೇ ರೈಲು ಸೇವೆ ಆರಂಭವಾಗಿತ್ತು. ಬ್ರಿಟಿಷರ ನೇರ ಅಧೀನದಲ್ಲಿದ್ದ ಈ ನಗರಗಳಲ್ಲಿ ಬ್ರಿಟಿಷರು ಆರಂಭಿಸಿದ್ದ ರೈಲು ಸೇವೆಯು ಸ್ವಾತಂತ್ರ್ಯ ನಂತರದಲ್ಲಿ ಮತ್ತಷ್ಟು ವಿಸ್ತರಣೆಯಾಯಿತು. ಇವೆಲ್ಲವೂ ಕೇಂದ್ರ ಸರಕಾರದ ರೈಲ್ವೆ ಇಲಾಖೆಯ ನೇರ ಸುಪರ್ದಿಯಲ್ಲಿಯೇ ನಡೆಯಿತೆನ್ನುವುದು ಗಮನಾರ್ಹ. ಇಂದು ಲೋಕಲ್ ಟ್ರೈನ್ ಈ ನಗರಗಳ ಜೀವನಾಡಿ. ಒಂದೇ ಒಂದು ಒಂದು ದಿನ ಸಬ್ ಅರ್ಬನ್ ರೈಲು ಸ್ಥಗಿತಗೊಂಡರೆ ಇಡೀ ಮುಂಬಯಿಯ ಜನಜೀವನ ಸ್ಥಗಿತಗೊಳ್ಳುತ್ತದೆ. ಇಲ್ಲಿನ ಮುಕ್ಕಾಲು ಭಾಗದಷ್ಟು ಸಾರಿಗೆ ಅವಶ್ಯಕತೆಯನ್ನು ಈ ರೈಲುಗಳು ಅತ್ಯಂತ ಕಡಿಮೆ ಖರ್ಚಿನಲ್ಲಿ ಭರಿಸುತ್ತಿವೆ. ತಿಂಗಳಿಗೆ ಕೇವಲ 300 ರು. ಕೊಟ್ಟು ಪಾಸ್ ಪಡೆದರೆ ಸಾಕು, ನವಿಮುಂಬೈನಿಂದ ಛತ್ರಪತಿ ಶಿವಾಜಿ ಟರ್ಮಿನಸ್ ನಡುವೆ ಸುಮಾರು 30 ಕಿಮಿ. ದೂರ ಪ್ರತಿದಿನ ಸಂಚರಿಸಬಹುದು.

ಇನ್ನು ವಿಸ್ತೃತ ಸಬ್ ಅರ್ಬನ್ ರೈಲು ಸೇವೆಯಿಂದ ವಂಚಿತವಾಗಿದ್ದ ರಾಜಧಾನಿ ದೆಹಲಿಯಲ್ಲಿ 25 ವರ್ಷಗಳ ಹಿಂದೆಯೇ (2002) ಮೆಟ್ರೋ ರೈಲು ಸೇವೆ ಆರಂಭಿಸಲಾಯಿತು. ದೆಹಲಿ ಸರಕಾರ ಮತ್ತು ಕೇಂದ್ರ ಸರಕಾರದ ಜಂಟಿ ಸಹಭಾಗಿತ್ವದಲ್ಲಿಯೇ ಈ ರೈಲು ಯೋಜನೆ ಆರಂಭವಾದರೂ ಇಲ್ಲಿ ಕೇಂದ್ರ ಸರಕಾರವೇ ಹೆಚ್ಚಿನ ಹಣ ವ್ಯಯಿಸಿದೆ. ಈಗಲೂ ಇಲ್ಲಿನ ಮೆಟ್ರೋ ರೈಲಿನ ಭದ್ರತೆ ಹೊಣೆಯನ್ನು ಕೇಂದ್ರಸರಕಾರವೇ ನಿರ್ವಹಿಸುತ್ತಿದೆ. ಆದರೆ ಬೆಂಗಳೂರಿನ ನಮ್ಮ ಮೆಟ್ರೋ ಮಾರ್ಗದ ಭೂ ಸ್ವಾಧೀನದಿಂದ ಹಿಡಿದು ಭದ್ರತೆ ತನಕ ರಾಜ್ಯ ಸರಕಾರ ಅರ್ಥಾತ್ ಕನ್ನಡಿಗರಾದ ನಾವೇ ಭರಿಸಬೇಕಾಗಿದೆ.

ಕೋಲ್ಕತ್ತಾ ಮೆಟ್ರೋದಲ್ಲಿ ಗರಿಷ್ಠ ದರ ಇನ್ನೂ 50 ರು. ದಾಟಿಲ್ಲ. ದೆಹಲಿ ಮೆಟ್ರೋ ದರ 60–65ರ ಆಸುಪಾಸಿನಲ್ಲಿದೆ. ಮುಂಬೈನಲ್ಲಿ ಇನ್ನೂ 80 ರು.ಗಳ ಮಿತಿಯಲ್ಲಿದೆ. ನಮ್ಮ ಮೆಟ್ರೋ 95ರ ಗಡಿ ದಾಟಿ ಶತಕ ಬರೆಯಲು ಸಜ್ಜಾಗಿದೆ. ಇದು ಕನ್ನಡಿಗರ ದುರದೃಷ್ಟ. ದೇಶದ ಅಭಿವೃದ್ಧಿ ಯೋಜನೆಗಳ ವಿಚಾರ ಬಂದಾಗ ನಮ್ಮ ಪಾಲಿನ ಕೊಡುಗೆ ನೀಡಲು ನಾವೆಂದೂ ಹಿಂಜರಿಯುವುದಿಲ್ಲ. ಸದ್ಯ ಮಹಾರಾಷ್ಟ್ರ ಬಿಟ್ಟರೆ ದೇಶದ ಜಿಡಿಪಿಗೆ ಅತಿ ಹೆಚ್ಚು ಕೊಡುಗೆ ನೀಡುವ ರಾಜ್ಯ ಕರ್ನಾಟಕ. ಸ್ವತ: ಪ್ರಧಾನಿ ನರೇಂದ್ರ ಮೋದಿಯವರೇ ಬೆಂಗಳೂರು ದೇಶದ ಅಭಿವೃದ್ಧಿ ಎಂಜಿನ್ ಎಂದು ಹಲವು ಸಲ ಹೇಳಿದ್ದಾರೆ. ಆದರೆ ಬೆಂಗಳೂರಿನ ಅಭಿವೃದ್ಧಿ ವಿಚಾರ ಬಂದಾಗ ನಮ್ಮದು, ನಿಮ್ಮದು ಎಂಬ ಚರ್ಚೆ ಆರಂಭವಾಗುತ್ತದೆ.

ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ರಾಜ್ಯಕ್ಕೆ ಸಿಕ್ಕಿದ ರೈಲ್ವೆ ಅನುದಾನದ ವಿಚಾರವನ್ನೇ ತೆಗೆದುಕೊಳ್ಳಿ. ಅತಿ ಹೆಚ್ಚು ಅನುದಾನ ಪಡೆದ ರಾಜ್ಯಗಳ ಪೈಕಿ ಕರ್ನಾಟಕ ಅಗ್ರ 10ರ ಪಟ್ಟಿಯಲ್ಲೂ ಇಲ್ಲ. ಅಗ್ರಸ್ಥಾನದಲ್ಲಿರುವ ಮಹಾರಾಷ್ಟ್ರಕ್ಕೆ 23,926 ಕೋಟಿ ರು. ಅನುದಾನ ದೊರೆತಿದೆ. 11ನೇ ಸ್ಥಾನದಲ್ಲಿರುವ ಕರ್ನಾಟಕಕ್ಕೆ ಸಿಕ್ಕಿರುವುದು 7748 ಕೋಟಿ ರು. ಮಾತ್ರ. ಮೊದಲ 10 ಸ್ಥಾನದಲ್ಲಿರುವ ರಾಜ್ಯಗಳ ಪೈಕಿ ಪಶ್ಚಿಮಬಂಗಾಳವೊಂದೇ ಬಿಜೆಪಿಯೇತರ ರಾಜ್ಯ. ಚುನಾವಣೆ ಸಮೀಪದಲ್ಲಿರುವ ಕಾರಣ ಮತ್ತು ಪೂರ್ವಾಂಚಲದ ಅಭಿವೃದ್ಧಿ ಯೋಜನೆಯ ಭಾಗವಾಗಿ ಬಂಗಾಳಕ್ಕೆ 14,205 ಕೋಟಿ ರು. ದೊರೆತಿದೆ. ಮೋದಿ ಅವರ ತವರು ರಾಜ್ಯಕ್ಕೆ 17366 ಕೋಟಿ ರು. ಅನುದಾನ ದೊರೆತಿದೆ.

ಭೂಸ್ವಾಧೀನ, ಸಬ್ಸಿಡಿ ಮತ್ತು ಇತರ ವೆಚ್ಚಗಳನ್ನು ಒಳಗೊಂಡಂತೆ ಈವರೆಗೆ ಮೆಟ್ರೋದ ಸುಮಾರು ಶೇ.87 ರಷ್ಟು ವೆಚ್ಚವನ್ನು ರಾಜ್ಯಸರಕಾರವೇ ಭರಿಸಿದೆ. ನೇರ ಅನುದಾನ ಮತ್ತು ಷೇರುಗಳ ರೂಪದಲ್ಲಿ ಕೇಂದ್ರದ ಪಾಲು ಸುಮಾರು ಶೇ. 13 ರಷ್ಟು ಮಾತ್ರ ಇದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಾದ. ಈ ಅಂಕಿ ಅಂಶ ಪೂರ್ತಿ ಸರಿ ಎಂದಲ್ಲ. ಆದರೆ ಅಂದರೆ ಮೆಟ್ರೋ ರೈಲು ಆಗಲಿ ವರ್ತುಲ ರೈಲು ಮಾರ್ಗವಾಗಲಿ ಕೇಂದ್ರ ಮತ್ತು ರಾಜ್ಯದ ಶೇ 50:50 ಅನುದಾನದಡಿಯಲ್ಲಿಯೇ ನಡೆಯಬೇಕು. ಇದರಲ್ಲಿ ಅತಿ ಹೆಚ್ಚು ಖರ್ಚಿನ ಬಾಬ್ತು ಭೂ ಸ್ವಾಧೀನದ್ದು. ಈ ಖರ್ಚನ್ನು ರಾಜ್ಯಸರಕಾರವೇ ಭರಿಸಬೇಕು. ಅಲ್ಲಿಗೆ ಮುಕ್ಕಾಲು ಪಾಲಿಗಿಂತ ಹೆಚ್ಚಿನ ಖರ್ಚು ಕರ್ನಾಟಕ ಸರಕಾರದ್ದು ಎನ್ನುವುದು ನಿರ್ವಿವಾದ.

ವಿಶೇಷ ಎಂದರೆ ಉಳಿದ ಎಲ್ಲ ರಾಜ್ಯದ ರಸ್ತೆಗಳನ್ನು ಅಭಿವೃದ್ಧಿಪಡಿಸುವ ವಿಚಾರದಲ್ಲೂ ರಾಜ್ಯ ಸರಕಾರ 50:50 ಅನುಪಾತದಡಿ ಅನುದಾನ ನೀಡುತ್ತಾ ಬಂದಿದೆ. ಎಸ್.ಎಂ ಕೃಷ್ಣ ಅವರ ಕಾಲದಲ್ಲಿಯೇ ದೇಶದಲ್ಲಿಯೇ ಮೊದಲ ಬಾರಿಗೆ ಕೆ–ರೈಡ್ ಯೋಜನೆಗೆ ಅಂಕಿತ ಹಾಕಿದ್ದು ಕರ್ನಾಟಕ ಸರಕಾರ. ಬೇರೆ ಎಲ್ಲ ರಾಜ್ಯಗಳಲ್ಲಿ ರೈಲ್ವೆ ಮತ್ತು ಹೆದ್ದಾರಿಗಳ ಅಭಿವೃದ್ಧಿಗೆ ಕೇಂದ್ರ ಸರಕಾರವೇ ಹಣ ವ್ಯಯಿಸಿದರೆ ಕರ್ನಾಟಕ ಸರಕಾರ ತಾನೇ ಅರ್ಧದಷ್ಟು ಹಣ ವ್ಯಯಿಸಿ ಅಭಿವೃದ್ಧಿಪಡಿಸಲು ಮುಂದಾಗಿತ್ತು. ರಾಜ್ಯದಲ್ಲಿ ಕಳೆದ ಎರಡು ಮೂರು ದಶಕಗಳಲ್ಲಿ ಹೆದ್ದಾರಿ ಅಭಿವೃದ್ಧಿ ತ್ವರಿತಗತಿಯಲ್ಲಿ ನಡೆಯಲು ರಾಜ್ಯಸರಕಾರದ ಸಹಭಾಗಿತ್ವವೂ ಪ್ರಮುಖ ಕಾರಣ ಎನ್ನುವುದನ್ನು ಮರೆಯುವಂತಿಲ್ಲ.

ಮುಂಬಯಿನಿಂದ ತಿರುವನಂತಪುರ ತನಕ ಸಂಪರ್ಕ ಕಲ್ಪಿಸುವ ಕೊಂಕಣ ರೈಲ್ವೆಯ ಸಾಕಾರಕ್ಕೆ ರೈಲ್ವೆ ಇಲಾಖೆಯಲ್ಲಿ ಹಣದ ಅಡಚಣೆಯಾದಾಗ ಇಂದಿನ ಮೆಟ್ರೋ ಮಾದರಿಯಲ್ಲಿ ಕೊಂಕಣ ರೈಲ್ವೆ ಕಾರ್ಪೊರೇಷನ್ ಲಿಮಿಟೆಡ್ ಹೆಸರಿನಲ್ಲಿ ಪ್ರತ್ಯೇಕ ನಿಗಮ ಸ್ಥಾಪಿಸಲಾಗಿತ್ತು. ಕೇಂದ್ರ ಸರಕಾರ ಶೇ. 51ರಷ್ಟು ಷೇರು ಬಂಡವಾಳ ತೊಡಗಿಸಿದರೆ ಶೇ. 15ರಷ್ಟು ಷೇರು ಬಂಡವಾಳದೊಂದಿಗೆ ಅತಿ ಹೆಚ್ಚು ಭೂಮಿ ಬಿಟ್ಟು ಕೊಟ್ಟಿದ್ದು ಕರ್ನಾಟಕ. ಈಗ ಈ ಮಾರ್ಗದ ಗರಿಷ್ಠ ಪ್ರಯೋಜನ ಪಡೆಯುತ್ತಿರುವ ಕೇರಳ ಮತ್ತು ಗೋವಾ ಕೇವಲ ಶೇ. 6ರಷ್ಟು ಷೇರು ಬಂಡವಾಳ ಹೂಡಿವೆ. ಈ ಯೋಜನೆ ಮಾದರಿಯಲ್ಲಿ ಕೇಂದ್ರ ಸರಕಾರದ ಅದೆಷ್ಟೋ ಮೂಲ ಸೌಕರ್ಯ ಯೋಜನೆಗಳಲ್ಲಿ ಕರ್ನಾಟಕ ತನ್ನ ಪಾಲಿನ ಅನುದಾನ ನೀಡಿದೆ.

ಉತ್ತರ ಭಾರತದ ಯಾವುದೇ ರಾಜ್ಯಗಳು ಈ ರೀತಿಯಲ್ಲಿ ಕೇಂದ್ರದ ಯೋಜನೆಗಳಿಗೆ ಸಾಥ್ ನೀಡಿದ ಉದಾಹರಣೆಗಳಿಲ್ಲ. ಈಗ ಕರ್ನಾಟಕದಲ್ಲಿ ಯಾವುದೇ ಯೋಜನೆ ಕೈಗೆತ್ತಿಕೊಳ್ಳಲಿ. ಅದರಲ್ಲಿ ರಾಜ್ಯ ಸರಕಾರದ ಪಾಲು ಇರಬೇಕೆಂದು ಕೇಂದ್ರ ನಿರೀಕ್ಷಿಸುತ್ತಿದೆ. ಇದೇ ವೇಳೆ ಉಳಿದ ರಾಜ್ಯಗಳ ಯೋಜನೆಗಳಿಗೆ ಉದಾರವಾಗಿ ಧನಸಹಾಯ ಮಾಡುತ್ತಿದೆ. ತೀರಾ ಇತ್ತೀಚಿನ ಉದಾಹರಣೆ ತೆಗೆದುಕೊಳ್ಳುವುದಾದರೆ ನೆರೆಯ ಆಂಧ್ರಪ್ರದೇಶದ ಹೊಸ ರಾಜಧಾನಿ ಅಮರಾವತಿಯ ಮೊದಲ ಹಂತದ ಅಭಿವೃದ್ಧಿಗೆ ಕೇಂದ್ರ ಸರಕಾರ 15 ಸಾವಿರ ಕೋಟಿ ರು. ನೆರವು ಘೋಷಿಸಿದೆ. ನಿರ್ಮಲಾ ಸೀತಾರಾಮನ್ ಅವರು ಮೊನ್ನೆ ಮಂಡಿಸಿದ ಬಜೆಟ್‌ನಲ್ಲಿ ಅಮರಾವತಿ ಮತ್ತು ಪೋಲವರಂ ಯೋಜನೆಗಳಿಗೆ 3,752 ಕೋಟಿ ರು. ಅನುದಾನ ಘೋಷಿಸಿದ್ದಾರೆ.

ಉಳಿದ ರಾಜ್ಯಗಳನ್ನು ಮಮತೆಯಿಂದ ಪೊರೆಯುವ ಕೇಂದ್ರ ಸರಕಾರ ಕರ್ನಾಟಕದ ವಿಚಾರದಲ್ಲಿ ಜಿಪುಣತನ ತೋರಿಸುವುದನ್ನು ಪ್ರಶ್ನಿಸಬೇಕಾಗಿರುವುದು ನಮ್ಮ ಸಂಸದರ ಕರ್ತವ್ಯ. ಈ ಹಿಂದಿನ ರೈಲ್ವೆ ಅನುದಾನಗಳಿಗೆ ಹೋಲಿಸಿದರೆ ಕರ್ನಾಟಕಕ್ಕೆ ಈ ಬಾರಿ ಹೆಚ್ಚಿನ ಅನುದಾನ ದೊರೆತಿದೆ ಎಂದು ಆಡಳಿತ ಪಕ್ಷದ ಸಂಸದರು ವಾದಿಸಬಹುದು. ಆದರೆ ಬಜೆಟ್ ಗಾತ್ರ ಹೆಚ್ಚಿದಂತೆ ಎಲ್ಲ ರಾಜ್ಯಗಳಿಗೂ ಹೆಚ್ಚಿನ ಅನುದಾನ ದೊರೆತಿದೆ. ರಾಜ್ಯಕ್ಕೂ ಹೆಚ್ಚಿನ ಹಣ ಹಂಚಿಕೆಯಾಗಿರುವುದು ಬಿಟ್ಟರೆ, ದೇಶದ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಕರ್ನಾಟಕ ರಾಜ್ಯ ಇಲ್ಲವೇ ಬೆಂಗಳೂರಿನ ಅಭಿವೃದ್ಧಿಗೆ ಹೆಚ್ಚೇನೂ ಅನುದಾನ ದೊರೆತಿಲ್ಲ.

ಈ ಹಿಂದೆ ಮುಂಬಯಿಯಲ್ಲಿ, ಮದ್ರಾಸ್, ಕೋಲ್ಕತ್ತಾ ನಗರಗಳಲ್ಲಿ ಸಾರ್ವಜನಿಕ ಸಾರಿಗೆ ಸುಧಾರಣೆಗೆ ನೇರವಾಗಿ ಸಹಾಯ ಮಾಡಿದ ಕೇಂದ್ರ ಸರಕಾರ ಈಗ ಬೆಂಗಳೂರಿಗೂ ಇದೇ ರೀತಿ ಸಹಾಯ ಮಾಡಬೇಕಾಗಿದೆ. ಈ ಬೇಡಿಕೆಯನ್ನು ನಮ್ಮ ಸಂಸದರು ಮತ್ತು ರಾಜ್ಯ ಸರಕಾರ ಮುಂದಿಡಬೇಕಾಗಿದೆ. ನಮ್ಮ ಬೆಂಗಳೂರು ಮತ್ತು ನಮ್ಮ ಮೆಟ್ರೋ ನಮ್ಮದು ಮಾತ್ರವಲ್ಲ. ಇಡೀ ದೇಶದ್ದು ಕೂಡ. ಬೆಂಗಳೂರು ಮತ್ತು ಇಲ್ಲಿನ ಮೂಲ ಸೌಕರ್ಯದ ಬೆಳವಣಿಗೆಗೆ ಕೇಂದ್ರ ಸರಕಾರದ ಹೆಚ್ಚುವರಿ ಅನುದಾನ ಸಿಗಲೇಬೇಕು.

ಪ್ರತಿಸ್ಪಂದನ

ಮಂಜುನಾಥ ಡಿ.ಎಸ್.

ಈ ಪರಿಯ ನಿರ್ಲಕ್ಷ್ಯವೇಕೆ?

ಸರಕಾರವು ಪ್ರವಾಸೋದ್ಯಮವನ್ನು ಅಲಕ್ಷ್ಯ ಮಾಡುತ್ತಿರುವುದರ ಕುರಿತಾದ 'ಅಶ್ವತ್ಥಕಟ್ಟೆ' ಅಂಕಣಬರಹಕ್ಕೆ (ಫೆ.10) ಪೂರಕವಾಗಿ ನನ್ನ ಒಂದಿಷ್ಟು ಅನುಭವಗಳನ್ನು ಹಂಚಿಕೊಳ್ಳಲು ಬಯಸುತ್ತೇನೆ. ಕಳೆದ ತಿಂಗಳ ಅಂತ್ಯದಲ್ಲಿ ನಾವು ಕೆಎಸ್‌ಟಿಡಿಸಿಯಲ್ಲಿ ಹಂಪಿ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ವಿಜಯಪುರ, ಕೂಡಲಸಂಗಮ ಸೇರಿದಂತೆ ಉತ್ತರ ಕರ್ನಾಟಕ ಪ್ರವಾಸಕ್ಕೆ ಹೋಗಲು ನಿರ್ಧರಿಸಿದೆವು. ಪ್ರವಾಸೋದ್ಯಮ ಇಲಾಖೆಯ ಸಹಾಯವಾಣಿಯನ್ನು ಸಂಪರ್ಕಿಸಿದರೆ ಈ ಪ್ರವಾಸದ ಕುರಿತು ನಿಖರ ಮಾಹಿತಿ ದೊರಕಲಿಲ್ಲ. ಅಂತರ್ಜಾಲದಲ್ಲಿ ಅರಸಿ, ವೆಬ್‌ಸೈಟ್ ಮೂಲಕ ಸ್ಥಳ ಕಾದಿರಿಸಿದೆ. ನಿಗದಿತ ದಿನ ರಾತ್ರಿ ಯಶವಂತಪುರದ ಟಿಟಿಎಂಸಿಯಲ್ಲಿರುವ ಪ್ರವಾಸೋದ್ಯಮ ಇಲಾಖೆಯ ಕಚೇರಿ ತಲುಪಿದೆವು. ಕೊಳಕು ವಾತಾವರಣದಲ್ಲಿ ಅರ್ಧ ಗಂಟೆ ಮೂಗು ಮುಚ್ಚಿಕೊಂಡು ಕುಳಿತಿರುವುದು ಅನಿವಾರ್ಯವಾಗಿತ್ತು. ಜಲಬಾಧೆ ನೀಗಿಸಿಕೊಳ್ಳಲು ಸನಿಹದ ಸಾರ್ವಜನಿಕ ಶೌಚಾಲಯ ಬಳಸಬೇಕಿತ್ತು. ಹಣ ಪಾವತಿಸಿದರೂ ಅದು ಸ್ವಚ್ಛವಾಗಿರಲಿಲ್ಲ. ಅದರ ದುಸ್ಥಿತಿಯನ್ನು ವರ್ಣಿಸಲು ಪದಗಳು ಸಾಲವು.

ಬಸ್ಸಿನ ಸೀಟುಗಳು ಹರಿದಿದ್ದವು, ಕೊಳಕಾಗಿದ್ದವು. ಬಸ್ಸು ಹಳತಾಗಿತ್ತು. ಮೊದಲ ಸೀಟಿನಲ್ಲಿ ಕುಳಿತಿದ್ದರೂ ಬೆನ್ನುಮೂಳೆ ಯಾವಾಗ ಮುರಿಯುವುದೋ ಎಂಬ ಆತಂಕ ಕಾಡುತ್ತಿತ್ತು. ಅಂತೂ ಇಂತೂ ಬೆಳಗಿನ ಐದರ ವೇಳೆಗೆ ತುಂಗಭದ್ರಾ ಡ್ಯಾಮ್ ತಲುಪಿದೆವು. ಹೋಟೆಲ್ ಮಯೂರದಲ್ಲಿ ಸ್ನಾನಕ್ಕಾಗಿ ಇಳಿಸಲಾಗುವುದೆಂದು ತಿಳಿಸಲಾಗಿತ್ತು. ಆದರೆ, ದುರ್ನಾತ ಬೀರುತ್ತಿದ್ದ ತೆರೆದ ಚರಂಡಿಯ ಎದುರಿನ ಹೋಟೆಲ್ ಒಂದರ ಬಳಿ ಬಸ್ಸು ನಿಲ್ಲಿಸಿದರು. ಆ ಹೋಟೆಲಿನಲ್ಲಿ ಶಾಲಾ ಮಕ್ಕಳಿದ್ದರು. ಅವರು ಕೊಠಡಿಗಳನ್ನು ತೆರವುಗೊಳಿಸಿದ ನಂತರ ನಮಗೆ ಅವಕಾಶ ಎಂದು ತಿಳಿಯಿತು. ರಾತ್ರಿ ಪಯಣದ ನಂತರ ಸುಮಾರು ಎರಡು ತಾಸು ಧೂಳು ದುರ್ಗಂಧದ ಪರಿಸರದಲ್ಲಿ ಕುಳಿತಿರಬೇಕಾಯಿತು. ಆ ಹೋಟೆಲ್ ಸ್ವಚ್ಛತೆಯನ್ನೇ ಕಂಡಂತಿರಲಿಲ್ಲ. ಜತೆಗೆ ದುರ್ಗಂಧ ಬೇರೆ. ಅಧಿಕಾರಿಗಳಿಗೆ ಕರೆ ಮಾಡಿ ಸಂಪು ಹೂಡಿದ್ದರಿಂದ, ಅರ್ಧ ಗಂಟೆಯ ನಂತರ ನಮ್ಮನ್ನು ಹೋಟೆಲ್ ಮಯೂರಕ್ಕೆ ಕರೆದೊಯ್ದರು. ಅದೂ ಸ್ವಚ್ಛವಾಗಿರಲಿಲ್ಲ. ಅಲ್ಲಿಯೂ ಹಿಂದಿನ ಪ್ರವಾಸಿಗರು ತೆರವುಗೊಳಿಸಿದ್ದ ಕೊಠಡಿಗಳನ್ನು ಸ್ವಚ್ಛಗೊಳಿಸದೆ ಹಾಗೆಯೇ ಬಳಸಲು ತಿಳಿಸಿದರು. ಇದರ ಬಗ್ಗೆ ಕೇಳಿದರೆ, 'ಸ್ನಾನ ಮಾಡಿಕೊಂಡು ಹೋಗುವುದಷ್ಟೇ ತಾನೆ?' ಎಂಬ ಉಡಾಫೆಯ ಸವಾಲು! ಇದರಿಂದ ಬೇಸತ್ತ ಮೂವರು ಪ್ರವಾಸಿಗರು ತಮ್ಮ ಪ್ರವಾಸವನ್ನು ಮೊಟಕುಗೊಳಿಸಿ ಹೊರಟುಹೋದರು.ಮಯೂರ ಹೋಟೆಲಿನ ಊಟ–ತಿಂಡಿ ಮತ್ತು ಗ್ರಾಹಕಸೇವೆ ಅಷ್ಟಕ್ಕಷ್ಟೇ. ಪ್ರವಾಸದಲ್ಲಿ ಮಾರ್ಗದರ್ಶನವೂ ಕಳಪೆಯಾಗಿತ್ತು. ಪ್ರವಾಸಿಗರು ತಮ್ಮ ಅತಿಥಿಗಳು, ಅವರನ್ನು ಆದರದಿಂದ ಕಾಣಬೇಕೆಂಬುದನ್ನು ಸರಕಾರಿ ಸ್ವಾಮ್ಯದ ನಿಗಮದಿಂದ ನಿರೀಕ್ಷಿಸಿದರೆ ಅದು ನಮ್ಮ ಮೂರ್ಖತನವಾಗುತ್ತದೆ. ಈ ಸಂಬಂಧ ವ್ಯವಸ್ಥಾಪಕ ನಿರ್ದೇಶಕರಿಗೆ ಇ–ಮೇಲ್ ಕಳಿಸಿದ್ದೆ. ಅವರು ಸೌಜನ್ಯಕ್ಕಾದರೂ ಉತ್ತರಿಸಲಿಲ್ಲ. ಕರ್ನಾಟಕವನ್ನು ದೇಶ–ವಿದೇಶಗಳಲ್ಲಿ ಪ್ರತಿನಿಧಿಸಬೇಕಾದ ಪ್ರವಾಸೋದ್ಯಮ ನಿಗಮವು ರಾಜ್ಯದ ಹೆಸರಿಗೆ ಮಸಿ ಬಳಿಯುತ್ತಿದೆ. ಈ ಪರಿಸ್ಥಿತಿ ಬದಲಾಗಬೇಕಾದ ಜರೂರಿದೆ.

(ಲೇಖಕರು ಹವ್ಯಾಸಿ ಬರಹಗಾರರು)

ರಷ್ಯಾ ಮಾಡಿದ ಸಹಾಯವನ್ನು ಭಾರತ ಮರೆಯುವಂತಿಲ್ಲ

ರಾಜತಂತ್ರ

ಡಾ. ಸತೀಶ ಕೆ. ಪಾಟೀಲ

vveditoped@gmail.com

ಭಾರತ ಮತ್ತು ಅಮೆರಿಕ ನಡುವಿನ ಇತ್ತೀಚಿನ ವ್ಯಾಪಾರ ಒಪ್ಪಂದದ ಕುರಿತು ಅಂತಿಮ ರೂಪುರೇಷೆ ಸಿದ್ಧಗೊಳ್ಳುತ್ತಿದೆ. ಇದರ ನಡುವೆಯೇ ಅಮೆರಿಕದ ಶ್ವೇತಭವನವು, 'ಭಾರತವು ಇನ್ನು ಮುಂದೆ ರಷ್ಯಾದಿಂದ ಕಚ್ಚಾತೈಲವನ್ನು ಖರೀದಿಸುವುದಿಲ್ಲ' ಎಂಬ ಹೇಳಿಕೆ ನೀಡಿದೆ. ಇದು ಭಾರತ ಮತ್ತು ರಷ್ಯಾ ನಡುವಿನ ಸುಮಧುರ ಬಾಂಧವ್ಯದ ಮೇಲೆ ನಕಾರಾತ್ಮಕ ಪರಿಣಾಮ ಬೀರುವ ಸಾಧ್ಯತೆಯಿದೆ.

ಭಾರತವು ತನ್ನ ಬಹುಕಾಲದ ಗೆಳೆಯ ರಷ್ಯಾವನ್ನು ಅಮೆರಿಕದ ಸಲುವಾಗಿ ಕಡೆಗಣಿಸಿದರೆ, ಭಾರತದ ಕಷ್ಟಕಾಲದಲ್ಲಿ ರಷ್ಯಾ ಜತೆಯಾಗಿ ನಿಂತಿದ್ದನ್ನು ಮತ್ತು ಇಲ್ಲಿಯವರೆಗೆ ಮಾಡಿದ ಸಹಾಯವನ್ನು ಮರೆತಂತೆ ಆಗುತ್ತದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, 'ರಷ್ಯಾದಿಂದ ಕಚ್ಚಾತೈಲದ ಆಮದನ್ನು ಭಾರತವು ನಿಲ್ಲಿಸಬೇಕು, ಇಲ್ಲವಾದಲ್ಲಿ ಭಾರತದಿಂದ ಅಮೆರಿಕಕ್ಕೆ ಆಮದಾಗುವ ಸರಕುಗಳ ಮೇಲೆ ಭಾರಿ ಸುಂಕವನ್ನು ಹೇರಲಾಗುವುದು' ಎಂದು ಕೆಲ ತಿಂಗಳ ಹಿಂದೆ ಬೆದರಿಕೆ ಹಾಕಿದ್ದು ಗೊತ್ತಿರುವ ಸಂಗತಿಯೇ. ಈಗ ಅದರ ಮುಂದುವರಿದ ಭಾಗವೆಂಬಂತೆ ಅಮೆರಿಕದ ಶ್ವೇತಭವನದಿಂದ ಹೊಮ್ಮಿರುವ ಈ ಹೇಳಿಕೆಯು, ಭಾರತ ಮತ್ತು ರಷ್ಯಾ ನಡುವಿನ ಬಾಂಧವ್ಯದಲ್ಲಿ ಒಂದಿಷ್ಟು ಕದಲಿಕೆಯನ್ನು ಉಂಟುಮಾಡಬಹುದು ಎನ್ನಲಾಗುತ್ತಿದೆ. ಭಾರತ ಮತ್ತು ಅಮೆರಿಕದ ನಡುವಿನ ಇತ್ತೀಚಿನ ಈ ವ್ಯಾಪಾರ ಒಪ್ಪಂದವು ಸ್ವಾಗತಾರ್ಹವಾದುದಾದರೂ, ಈ ಒಪ್ಪಂದದ ಕಾರಣಕ್ಕೆ ಭಾರತವು ಅಮೆರಿಕದಿಂದ ಒತ್ತಡಕ್ಕೆ ಒಳಗಾಯಿತಾ? ಎಂಬ ಪ್ರಶ್ನೆಯೂ ಮೂಡುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಈ ದ್ವಿಪಕ್ಷೀಯ ಒಪ್ಪಂದವು ಭಾರತ ಮತ್ತು ಅಮೆರಿಕಕ್ಕೆ ಮಾತ್ರ ಸೀಮಿತವಾಗಿರಬೇಕು; ಅದನ್ನು ಬಿಟ್ಟು, ರಷ್ಯಾದ ಜತೆಗಿನ ಭಾರತದ ಸಂಬಂಧದ ಬಗ್ಗೆ ಅಮೆರಿಕ ಮಾತನಾಡಿದೆ. ಅಮೆರಿಕದ ಈ 'ಅಧಿಕಾರಯುತ' ಹೇಳಿಕೆ ಅಥವಾ ಧೋರಣೆಯು ಭಾರತದ 'ಸಾರ್ವಭೌಮತೆ'ಯನ್ನೇ ಪ್ರಶ್ನಿಸುವಂತಿದೆ. ಏಕೆಂದರೆ, ಭಾರತ ಮತ್ತು ರಷ್ಯಾ ನಡುವಿನ ಸಂಬಂಧದಲ್ಲಿ ಮೂಗು ತೂರಿಸುವ ಅಧಿಕಾರ ಅಮೆರಿಕಕ್ಕೆ ಇಲ್ಲ.

ಈ ಬೆಳವಣಿಗೆಯ ಕುರಿತು ಭಾರತವು ಎಚ್ಚರ ವಹಿಸಬೇಕಿದೆ. ಏಕೆಂದರೆ, ಭಾರತವು ಸ್ವತಂತ್ರಗೊಂಡ ದಿನದಿಂದ 1990ರ ದಶಕದವರೆಗೂ ಅಮೆರಿಕವು ಭಾರತವನ್ನು 'ವಿರೋಧಿ ರಾಷ್ಟ್ರ' ಎಂದೇ ಪರಿಗಣಿಸಿ ತೊಂದರೆ ಕೊಟ್ಟಿದೆ; ಇದಕ್ಕೆ ತದ್ವಿರುದ್ಧ ಎಂಬಂತೆ ರಷ್ಯಾ ದೇಶವು ನಿರಂತರವಾಗಿ ಭಾರತಕ್ಕೆ ಒತ್ತಾಸೆಯಾಗಿ ನಿಂತಿದೆ ಮತ್ತು ಸಂಕಷ್ಟದ ಸಮಯದಲ್ಲಿ ಭಾರತಕ್ಕೆ ಸಹಾಯ ಮಾಡಿದೆ. ಇದನ್ನು ನಾವು ಮರೆಯಬಾರದು. ಭಾರತಕ್ಕೆ ರಷ್ಯಾ ಮಾಡಿದ ಸಹಾಯ ಮತ್ತು ಅಮೆರಿಕ ನೀಡಿದ ತೊಂದರೆಯ ಇತಿಹಾಸವನ್ನು ಒಮ್ಮೆ ನೆನಪಿಸಿಕೊಳ್ಳುವುದು ಪ್ರಸ್ತುತ ಅನಿವಾರ್ಯವೆನಿಸುತ್ತದೆ. ಭಾರತವು ಸ್ವತಂತ್ರಗೊಂಡ ನಂತರ ಜಗತ್ತಿನಲ್ಲಿ ಎರಡು ಪ್ರಬಲ ಗುಂಪುಗಳು ಹುಟ್ಟಿಕೊಂಡವು. ಪ್ರಜಾಪ್ರಭುತ್ವದ ಮುಖವಾಡವನ್ನು ಹಾಕಿಕೊಂಡ ಅಮೆರಿಕ ಮತ್ತು ಕಮ್ಯುನಿಸ್ಟ್ ಮುಖವಾಡವನ್ನು ಹಾಕಿಕೊಂಡ ರಷ್ಯಾ ಎಂಬ ಎರಡು 'ಶಕ್ತಿ ಬಣ'ಗಳ ನಡುವೆ ಜಗತ್ತಿನ ನಾಯಕತ್ವಕ್ಕೆ ಪೈಪೋಟಿ ನಡೆಯಿತು. ಈ ಸಂದರ್ಭದಲ್ಲಿ ಭಾರತವು ಈ ಎರಡೂ ಶಕ್ತಿಕೇಂದ್ರಗಳಿಗೆ ಸೇರದೆ ತಟಸ್ಥ ನಿಲುವು ತಳೆದು, ಅಲಿಪ್ತ ರಾಷ್ಟ್ರಗಳ ನಾಯಕತ್ವವನ್ನು ವಹಿಸಿತು. ಭಾರತವು ಪ್ರಜಾಪ್ರಭುತ್ವ ರಾಷ್ಟ್ರವಾಗಿರುವುದರಿಂದ ತನ್ನ ಬಣವನ್ನು ಸೇರುತ್ತದೆ

ಎಂದು ಭಾವಿಸಿದ್ದ ಅಮೆರಿಕಕ್ಕೆ ಭಾರತದ ಈ ನಡೆ ಸರಿ ಕಾಣಲಿಲ್ಲ. ಹೀಗಾಗಿ ಅದು ಭಾರತದ ಮೇಲೆ ಕೋಪಗೊಂಡಿತ್ತು. 1962ರ ಭಾರತ–ಚೀನಾ ಯುದ್ಧದ ಸಮಯದಲ್ಲಿ, ಅಮೆರಿಕದ ಆಗಿನ ಅಧ್ಯಕ್ಷ ಜಾನ್ ಎಫ್. ಕೆನಡಿ ಅವರು ಭಾರತದ ಪರವಾಗಿ ಯುದ್ಧನೌಕೆಯನ್ನು ಕಳುಹಿಸಿದರು. ಈ ಸಹಾಯವನ್ನು ಹೊರತುಪಡಿಸಿದರೆ ಅಮೆರಿಕವು ಭಾರತದ ವೈರಿಯಾಗಿಯೇ ನಡೆದುಕೊಂಡು, ಪಾಕಿಸ್ತಾನದ ಪರ ವಹಿಸಿಕೊಂಡುಬಂತು. ಭಾರತವು ರಷ್ಯಾದ ಜತೆಗೆ ಕೈಜೋಡಿಸಿದ್ದು ಈ ಬೆಳವಣಿಗೆಯ ಹಿನ್ನೆಲೆಯಲ್ಲೇ. ಸದ್ಯಕ್ಕೆ ಇದನ್ನು ಅವಲೋಕಿಸುವುದು ಅಗತ್ಯವೆನಿಸುತ್ತದೆ.

ಅಮೆರಿಕ ಸೇರಿದಂತೆ ಪಾಶ್ಚಿಮಾತ್ಯ ಬಣಗಳು ಭಾರತದ ನೀತಿಯನ್ನು ವಿರೋಧಿಸಿ ತೈಲ ಸರಬರಾಜನ್ನು ನಿಲ್ಲಿಸಿದಾಗ, ರಷ್ಯಾ ದೇಶವು ನಮ್ಮ ಸಂಕಷ್ಟಕ್ಕೆ ಸ್ಪಂದಿಸಿ ತೈಲವನ್ನು ಒದಗಿಸಿ ಸಹಾಯಮಾಡಿತು. ನಂತರದ ವಿವಿಧ ಕಾಲಘಟ್ಟಗಳಲ್ಲಿ ಹಂಗೇರಿ, ಪೋಲೆಂಡ್ ಮತ್ತು ಅಫ್ಘಾನಿಸ್ತಾನಗಳ ಮೇಲೆ ರಷ್ಯಾ ದಾಳಿಮಾಡಿದ್ದನ್ನು ಭಾರತ ಖಂಡಿಸಿದರೂ, ರಷ್ಯಾ ನಮ್ಮ ಮೇಲೆ ಕೋಪಗೊಳ್ಳಲಿಲ್ಲ. 1959ರಲ್ಲಿ ಕಾಶ್ಮೀರ ಸಮಸ್ಯೆಯ ಕುರಿತಾಗಿ ಅಮೆರಿಕ ಮತ್ತು ಚೀನಾ ಸೇರಿಕೊಂಡು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತದ ವಿರುದ್ಧ ಕ್ರಮ ಕೈಗೊಳ್ಳಲು ನಿರ್ಧರಿಸಿದಾಗ ರಷ್ಯಾ ತನ್ನ 'ವೀಟೊ ಅಧಿಕಾರ'ವನ್ನು ಚಲಾಯಿಸಿ ಆ ನಡೆಯನ್ನು ತಡೆಯಿತು. ರಷ್ಯಾ ಅತಿಹೆಚ್ಚು ಸಲ, ಅಂದರೆ ಮೂರು ಬಾರಿ ಹೀಗೆ ಭದ್ರತಾ ಮಂಡಳಿಯಲ್ಲಿ ಭಾರತದ ಪರ 'ವೀಟೋ' ಅಧಿಕಾರ ಚಲಾಯಿಸಿ ನೆರವಾಗಿದೆ.

ಮಾತ್ರವಲ್ಲದೆ, ಭಾರತದ 3ನೇ ಪಂಚವಾರ್ಷಿಕ ಯೋಜನೆಗೆ ರಷ್ಯಾ 500 ಮಿಲಿಯನ್ ಡಾಲರ್‌ನಷ್ಟು ನೆರವು ನೀಡಿತು. ಭಾರತದ ಬದ್ಧವೈರಿ ಪಾಕಿಸ್ತಾನಕ್ಕೆ ಅಮೆರಿಕವು ಆರ್ಥಿಕವಾಗಿ ಮತ್ತು ಯುದ್ಧಾಸ್ತ್ರಗಳ ರೂಪದಲ್ಲಿ ನೆರವು ನೀಡಿದಾಗ, 'ಮಿಗ್' ಯುದ್ಧವಿಮಾನ ತಯಾರಿಕೆಗೆ ಭಾರತಕ್ಕೆ ನೆರವಾಗಿ ಅನೇಕ ಆಧುನಿಕ ಶಸ್ತ್ರಾಸ್ತ್ರಗಳನ್ನು ನೀಡಿದ್ದು ಇದೇ ರಷ್ಯಾ. 1965ರಲ್ಲಿ ಭಾರತ ಮತ್ತು ಪಾಕಿಸ್ತಾನದ ನಡುವಿನ ಯುದ್ಧದ ಸಮಯದಲ್ಲಿ, ಪಾಕಿಸ್ತಾನದ ಪರವಾಗಿ ಯುದ್ಧದಲ್ಲಿ ಭಾಗಿಯಾಗುವುದಾಗಿ ಚೀನಾ ಹೇಳಿದಾಗ, 'ಹಾಗಾದಲ್ಲಿ ನಾನು ಭಾರತದ ಪರವಾಗಿ ಭಾಗವಹಿಸಬೇಕಾಗುತ್ತದೆ' ಎಂದಿತು ರಷ್ಯಾ. ಆಗ ಚೀನಾ ಯುದ್ಧದಿಂದ ಹಿಂದೆ ಸರಿಯಿತು. 1971ರ ಬಾಂಗ್ಲಾ ವಿಮೋಚನೆಯ ವೇಳೆ ಭಾರತ ಮತ್ತು ಪಾಕಿಸ್ತಾನದ ನಡುವೆ ಹಣಾಹಣಿ ಏರ್ಪಟ್ಟಾಗ, ತಾನು ಪಾಕಿಸ್ತಾನದ ಪರವಾಗಿ ಭಾಗವಹಿಸುವುದಾಗಿ ಬೆದರಿಕೆ ಹಾಕಿದ ಅಮೆರಿಕ ತನ್ನ 6 ಯುದ್ಧನೌಕೆಗಳನ್ನು ಕಳುಹಿಸಿತು; ತಕ್ಷಣವೇ ರಷ್ಯಾ 12 ಯುದ್ಧನೌಕೆಗಳನ್ನು ಭಾರತದ ಪರವಾಗಿ ಹಿಂದೂ ಮಹಾಸಾಗರಕ್ಕೆ ಕಳುಹಿಸಿದಾಗ ಹೆದರಿದ ಅಮೆರಿಕ ಯುದ್ಧದಿಂದ ಹಿಂದೆ ಸರಿಯಿತು. ನಂತರ 1998ರಲ್ಲಿ ಭಾರತವು ಪೋಖ್ರಾನ್‌ನಲ್ಲಿ ಅಣುಪರೀಕ್ಷೆ ನಡೆಸಿದಾಗ, ಅಮೆರಿಕವು ಭಾರತದ ಮೇಲೆ ಆರ್ಥಿಕ ನಿರ್ಬಂಧವನ್ನು ಹೇರಿತು ಮತ್ತು ಆಗ ಭಾರತದ ಸಹಾಯಕ್ಕೆ ರಷ್ಯಾ ಧಾವಿಸಿತ್ತು. ನಂತರ 1999ರ ಕಾರ್ಗಿಲ್ ಯುದ್ಧದ ಸಮಯದಲ್ಲಿ ಪಾಕಿಸ್ತಾನದ ಪರವಾಗಿ ಅಮೆರಿಕ ಹೇಳಿಕೆ ನೀಡಿದಾಗ, ಭಾರತದ ಪರವಾಗಿ ನಿಂತಿತ್ತು ರಷ್ಯಾ.

ಹಾಗೆ ನೋಡಿದರೆ, 1970ರ ದಶಕದಲ್ಲಿ ಭಾರತದ ಜತೆಗೆ 20 ವರ್ಷಗಳ ಶಾಂತಿ ಸಹಕಾರ ಒಪ್ಪಂದ ಮಾಡಿಕೊಂಡ ರಷ್ಯಾ, ಅಪಾರ ಪ್ರಮಾಣದ ಆರ್ಥಿಕ ಸಹಾಯ ಮತ್ತು ಶಸ್ತ್ರಾಸ್ತ್ರಗಳ ನೆರವು ನೀಡಿತು. ನಂತರ 1993ರಲ್ಲಿ ರಷ್ಯಾದ ಅಂದಿನ ಅಧ್ಯಕ್ಷ ಬೋರಿಸ್ ಎಲಿನ್ ಅವರು, ''ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಕಾಯಂ ಸದಸ್ಯತ್ವ ಸಿಗುವ ನಿಟ್ಟಿನಲ್ಲಿ ಸಂಪೂರ್ಣ ಬೆಂಬಲ ನೀಡಲು ಸಿದ್ಧ'' ಎಂದರು. ಈ ವಿಷಯದಲ್ಲಿ ಇಂದಿಗೂ ಭಾರತದ ಬೆಂಬಲಕ್ಕೆ ರಷ್ಯಾ ನಿಂತಿರುವುದು ಈ ಎರಡೂ ರಾಷ್ಟ್ರಗಳ ನಡುವಿನ ಗೆಳೆತನಕ್ಕೆ ಸಾಕ್ಷಿಯಾಗಿದೆ. ಅತ್ಯಾಧುನಿಕ ಕ್ರಯೋಜೆನಿಕ್ ತಂತ್ರಜ್ಞಾನವನ್ನು ನೀಡಲು ರಷ್ಯಾ ಮುಂದೆ ಬಂದಾಗ, ಅಮೆರಿಕ ಭಾರಿ ವಿರೋಧ ಮಾಡಿತು; ಆದರೂ ರಷ್ಯಾ ಈ ವಿಷಯದಲ್ಲಿ ಹಿಂದೆಗೆಯಲಿಲ್ಲ. ಇನ್ನು, ''ಭಾರತದ ಕಾಶ್ಮೀರ ಮತ್ತು ಪಂಜಾಬ್‌ನಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ'' ಎಂದು ಅಮೆರಿಕವು ವಿಶ್ವಸಂಸ್ಥೆಯಲ್ಲಿ ಮಾತನಾಡಿದಾಗ, ''ಅದು ಭಾರತದ ಆಂತರಿಕ ವಿಚಾರ'' ಎಂದು ಸಮರ್ಥಿಸಿಕೊಂಡಿತು ರಷ್ಯಾ. ಜಮ್ಮು–ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವ ಸಂವಿಧಾನದ 'ವಿಧಿ 370' ಅನ್ನು ಕೆಲ ವರ್ಷದ ಹಿಂದೆ ಭಾರತವು ರದ್ದುಪಡಿಸಿದಾಗ, ಅಮೆರಿಕ ಮತ್ತು ಚೀನಾ ದೇಶಗಳು ಪಾಕಿಸ್ತಾನದ ಪರವಾಗಿ ನಿಲುವು ತಳೆದ ಭಾರತದ ಈ ಕ್ರಮವನ್ನು ವಿರೋಧಿಸಿದವು. ಆಗ ಭಾರತದ ಹೆಗಲಿಗೆ ಹೆಗಲು ಕೊಟ್ಟು ನಿಂತಿದ್ದು ರಷ್ಯಾ.

ಪಾಕಿಸ್ತಾನವು ಉಗ್ರವಾದಕ್ಕೆ ಕುಮ್ಮಕ್ಕು ನೀಡುವ, ಉಗ್ರರಿಗೆ ನೆರವು ಮತ್ತು ಆಶ್ರಯ ನೀಡುವ ರಾಷ್ಟ್ರ ಎಂಬುದನ್ನು ಭಾರತವು ಸಾಕ್ಷಿ ಸಮೇತವಾಗಿ ಅಮೆರಿಕಕ್ಕೆ ಮನವರಿಕೆ ಮಾಡಿಕೊಟ್ಟರೂ, ಆ ಅಭಿಪ್ರಾಯಕ್ಕೆ ಬೆಲೆ ಕೊಡದ ಅಮೆರಿಕವು ಪಾಕಿಸ್ತಾನಕ್ಕೆ ಯುದ್ಧಾಸ್ತ್ರಗಳನ್ನೂ ಆರ್ಥಿಕ ನೆರವನ್ನೂ ನೀಡುತ್ತಲೇ ಬಂದಿದೆ. ಈ ಎಲ್ಲ ಇತಿಹಾಸವನ್ನು ಅವಲೋಕಿಸಿದಾಗ, ರಷ್ಯಾ ನೀಡಿದ ಸಹಾಯ–ಸಹಕಾರ, ಸಂಕಷ್ಟದ ಸಮಯದಲ್ಲಿ ನೀಡಿದ ನೆರವನ್ನು ಭಾರತವು ಎಂದಿಗೂ ಮರೆಯಬಾರದು. ಇದೇ ವೇಳೆಗೆ, ಅಮೆರಿಕವು 'ಭಾರತ–ವಿರೋಧಿ' ಧೋರಣೆಯನ್ನು ತೋರುತ್ತಾ ಬಂದಿರುವುದನ್ನೂ ನೆನಪಿನಲ್ಲಿಟ್ಟುಕೊಳ್ಳಬೇಕು.

ಪ್ರಸ್ತುತ ಭಾರತವು ಅಮೆರಿಕದೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಂಡಿರುವುದು ಸ್ವಾಗತಾರ್ಹ ವಾಗೇನೋ ಇದೆ. ಹಾಗಂತ, ಅಮೆರಿಕದ ಒತ್ತಡಕ್ಕೆ ಮಣಿದು ರಷ್ಯಾದ ಜತೆಗಿನ ಕಚ್ಚಾತೈಲ ಸರಬರಾಜಿನ ಒಪ್ಪಂದವನ್ನು ಭಾರತವು ಮುರಿದುಕೊಳ್ಳಬಾರದು. ಬದಲಿಗೆ, ಭಾರತವು ಅಮೆರಿಕ ಮತ್ತು ರಷ್ಯಾ ಈ ಎರಡೂ ರಾಷ್ಟ್ರಗಳೊಂದಿಗೆ ಸಮನಾದ ಮತ್ತು ಉತ್ತಮವಾದ ಸಂಬಂಧವನ್ನು ಹೊಂದಲು ಪ್ರಯತ್ನಿಸಬೇಕು. ಆಗ ಮಾತ್ರವೇ ಭಾರತದ ಹಿತಾಸಕ್ತಿಯನ್ನು ಕಾಯ್ದುಕೊಂಡಂತಾಗುತ್ತದೆ. ಈ ನಿಟ್ಟಿನಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿಯವರು ಎಚ್ಚರಿಕೆಯ ಹೆಜ್ಜೆಯಿಡುವುದು ಅವಶ್ಯವಾಗಿದೆ. ಏಕೆಂದರೆ, ಐರೋಪ್ಯ ಒಕ್ಕೂಟದೊಂದಿಗೆ ಭಾರತವು ವ್ಯಾಪಾರ ಒಪ್ಪಂದವನ್ನು ಮಾಡಿಕೊಂಡ ನಂತರ ಅಮೆರಿಕಕ್ಕೆ ನಡುಕ ಉಂಟಾಗಿ ನಮ್ಮೊಂದಿಗೆ ವ್ಯಾಪಾರ ಒಪ್ಪಂದಕ್ಕೆ ಮುಂದೆ ಬಂದಿದೆಯಷ್ಟೇ. ಭಾರತವು ಇದನ್ನು ಮನಗಂಡು, ಅಮೆರಿಕದ ಒತ್ತಡಕ್ಕೆ ಮಣಿಯದೆ, ತನ್ನದೇ ಆದ ನೀತಿಯನ್ನು ಅನುಸರಿಸಬೇಕು. ಇದರಲ್ಲೇ ದೇಶದ ಜನರ ಹಿತ ಅಡಗಿದೆ.

(ಲೇಖಕರು ಪ್ರಾಧ್ಯಾಪಕರು ಹಾಗೂ ರಾಜಕೀಯ ವಿಶ್ಲೇಷಕರು)

ಅಭಿಮತ

ಲಯನ್ ಕೆ. ರಾಧಾಕೃಷ್ಣ ಹೊಳ್ಳ

ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣಸಂಕಟ

ಬೇಸಗೆಯ ಸಮಯದಲ್ಲಿ ಅರಣ್ಯ ಪ್ರದೇಶಗಳಲ್ಲಿ ಚಾರಣಿಗರ ಚಟುವಟಿಕೆಗಳಿಂದ ಕಾಡ್ಗಿಚ್ಚು, ವನ್ಯಜೀವಿಗಳಿಗೆ ಅಪಾಯ ಉಂಟಾಗಬಹುದು ಎಂಬ ಕಾರಣ ನೀಡಿ ರಾಜ್ಯದ ಬಹುತೇಕ ಕಾಡು–ಮೇಡುಗಳಲ್ಲಿ ನಿರ್ಬಂಧ ಹೇರಲಾಗುತ್ತದೆ. ಸುರಕ್ಷತೆಯ ದೃಷ್ಟಿಯಿಂದ ಈ ಕ್ರಮಕ್ಕೆ ತರ್ಕವಿದೆ. ಆದರೆ ವಿಚಿತ್ರವೆಂದರೆ, ಬೇಸಗೆಗೂ ಮುನ್ನವೇ, ಡಿಸೆಂಬರ್ ತಿಂಗಳಿಂದಲೇ ಆರಂಭವಾಗುವ ಪ್ರವಾಸಿಗರ ಸೀಸನ್‌ನಲ್ಲೇ, ಪ್ರವಾಸಿಗರ ಅತಿ ಪ್ರಿಯ ತಾಣಗಳಾದ ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶ ಮತ್ತು ನಾಗರಹೊಳೆ ರಾಷ್ಟ್ರೀಯ ಉದ್ಯಾನಗಳಲ್ಲಿ ಸುರಕ್ಷಿತ, ನಿಯಂತ್ರಿತ ಮತ್ತು ಮೇಲ್ವಿಚಾರಣೆಯಲ್ಲಿರುವ ಅರಣ್ಯ ಸಫಾರಿಗಳನ್ನೂ ಸಂಪೂರ್ಣವಾಗಿ ಸ್ಥಗಿತಗೊಳಿಸಿರುವುದು ಎಷ್ಟರಮಟ್ಟಿಗೆ ವೈಜ್ಞಾನಿಕ? ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ.

'ಬೆಕ್ಕಿಗೆ ಚೆಲ್ಲಾಟವಾದರೆ, ಇಲಿಗೆ ಪ್ರಾಣಸಂಕಟ' ಎಂಬ ಮಾತಿನಂತೆ, ಈ ನಿರ್ಧಾರವು ಪ್ರವಾಸೋದ್ಯಮವನ್ನೇ ಅವಲಂಬಿಸಿರುವ ಸಾವಿರಾರು ಕುಟುಂಬಗಳಿಗೆ ಸಂಕಷ್ಟವನ್ನು ತಂದಿದೆ. ಆದರೆ ವ್ಯವಸ್ಥೆಗೆ 'ಇದು ಸುಲಭ ಪರಿಹಾರ' ಎಂಬ ಭಾವನೆ ಮೂಡಿಸುತ್ತದೆ.

ಕರ್ನಾಟಕದ ಹೆಮ್ಮೆಯ ಈ ಪ್ರತಿಷ್ಠಿತ ಅರಣ್ಯ ತಾಣಗಳು ಕೇವಲ ಪ್ರವಾಸಿ ಆಕರ್ಷಣೆಗಳಲ್ಲ; ಅವು ಸಂರಕ್ಷಣೆ, ಸಂಶೋಧನೆ, ಸ್ಥಳೀಯ ಉದ್ಯೋಗ ಮತ್ತು ರಾಜ್ಯದ ಪರಿಸರ–ಆರ್ಥಿಕತೆಯ ಅವಿಭಾಜ್ಯ ಅಂಗಗಳೂ ಹೌದು. ಕರ್ನಾಟಕ ಅರಣ್ಯ ಪ್ರವಾಸೋದ್ಯಮವು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ, ಇಲ್ಲಿನ ನೀತಿಗಳಲ್ಲಿ ಈ ರೀತಿಯ ಮೌಢ್ಯ ಏಕೆ? ಎಂಬ ಪ್ರಶ್ನೆಯು ಕೂಲಿ ಕಾರ್ಮಿಕರಿಂದ ಹಿಡಿದು ಪ್ರವಾಸೋದ್ಯಮ ಉದ್ಯಮಿಗಳವರೆಗೂ ಕಾಡುತ್ತಿದೆ.

ಅಂತಾರಾಷ್ಟ್ರೀಯ ಪ್ರವಾಸಿಗರ ಕೈಪಿಡಿಯಲ್ಲಿ ರಂಜಿತವಾದ ಸಫಾರಿಗೆ ಇತಿಹಾಸ ಇಲ್ಲವೇ? ಬಂಡಿಪುರವು 1931ರಲ್ಲಿ ವೇಣುಗೋಪಾಲ ವನ್ಯಜೀವಿ ಉದ್ಯಾನವಾಗಿ ಆರಂಭವಾಗಿ, 1974ರಲ್ಲಿ ಹುಲಿ ಸಂರಕ್ಷಿತ ಪ್ರದೇಶವಾಗಿ ಘೋಷಿತವಾಯಿತು. 1970ರ ದಶಕದಿಂದಲೇ ಇಲ್ಲಿ ಪರಿಸರ ಸ್ನೇಹಿ, ನಿಯಂತ್ರಿತ ಸಫಾರಿ ವ್ಯವಸ್ಥೆ ರೂಪುಗೊಂಡಿದೆ. ನಾಗರಹೊಳೆಯು 1955ರಲ್ಲಿ ವನ್ಯಜೀವಿ ಅಭಯಾರಣ್ಯವಾಗಿ ಆರಂಭಗೊಂಡು, 1983ರಲ್ಲಿ ರಾಷ್ಟ್ರೀಯ ಉದ್ಯಾನವಾಗಿ ಹೆಸರುಮಾಡಿತು ಮತ್ತು 1970–80ರ ದಶಕದಿಂದ ವ್ಯವಸ್ಥಿತ ಸಫಾರಿ ಮೂಲಸೌಕರ್ಯವು ಬೆಳೆಯಿತು.

ಕರ್ನಾಟಕ ಅರಣ್ಯ ಇಲಾಖೆಯು ಬಸ್ ಸಫಾರಿಗಳನ್ನು ನಡೆಸುತ್ತಿದ್ದರೆ, Jungle Lodges and Resorts ಜೀಪ್ ಸಫಾರಿಗಳನ್ನು ನಡೆಸುತ್ತಿದೆ. ಇವೆಲ್ಲವೂ ನಿರ್ವಹಿಸಲ್ಪಡುತ್ತಿರುವುದು ಕಟ್ಟುನಿಟ್ಟಿನ ಮಾರ್ಗಸೂಚಿ, ಮೇಲ್ವಿಚಾರಣೆ ಮತ್ತು ಜವಾಬ್ದಾರಿಯುತ ವ್ಯವಸ್ಥೆಯಡಿ. ಹೀಗಿರುವಾಗ, ಇಲ್ಲಿ ಮೂಡುವ ಪ್ರಶ್ನೆಗಳೆಂದರೆ– ಅರಣ್ಯಗಳು, ಸಫಾರಿಗಳು, ಕಡಲತೀರಗಳು, ಸಾಹಸ ಕ್ರೀಡಾ ಪ್ರದೇಶಗಳು ಎಲ್ಲವೂ ಮಾನವ ಮತ್ತು ಪ್ರಾಣಿ ಸಮುದಾಯಗಳ ಸಹ–ಅಸ್ತಿತ್ವದಲ್ಲಿ ಬೆಳೆಯುತ್ತಿರುವಾಗ, ಸಂಪೂರ್ಣ ನಿರ್ಬಂಧವೇ ಇಲ್ಲಿ ಪರಿಹಾರವೇ? ಅಥವಾ ಅಪಾಯವನ್ನು ಕಡಿತಗೊಳಿಸುವ ವೈಜ್ಞಾನಿಕ ನಿರ್ವಹಣೆ ಸಾಧ್ಯವೇ? ಎಂಬುದು.

ವೈಜ್ಞಾನಿಕ ಮತ್ತು ಸಮತೋಲನದ ಪರ್ಯಾಯ ದಾರಿಗಳ ಕಡೆಗೆ ನೋಡುವುದಾದರೆ, 'ಸೀಸನಲ್ ಕ್ಯಾಂಪಿಂಗ್'ಗೆ ಅಂದರೆ ದಿನಕ್ಕೆ ನಿರ್ದಿಷ್ಟ ಸಂಖ್ಯೆಯ ವಾಹನಗಳು ಮತ್ತು ಪ್ರವಾಸಿಗರಿಗೆ ಮಾತ್ರ ಅವಕಾಶ ಕೊಡಲಿ. 'ಟೈಮ್–ಸ್ಲಾಟ್ ಸಫಾರಿ' ಅಂದರೆ ಮಧ್ಯಾಹ್ನದ ಗರಿಷ್ಠ ಅಪಾಯದ ಸಮಯದಲ್ಲಿ ಸಫಾರಿಗಳಿಗೆ ವಿರಾಮ ನೀಡಲಿ. ಬೆಂಕಿಯ ಅಪಾಯ ಹೆಚ್ಚಿರುವ ದಿನಗಳಲ್ಲಿ ಮಾತ್ರ ತಾತ್ಕಾಲಿಕ ನಿರ್ಬಂಧವನ್ನು ವಿಧಿಸಲಿ. ಚಾಲಕರು ಮತ್ತು ಗೈಡ್‌ಗಳಿಗೆ ಅಗ್ನಿ ಸುರಕ್ಷತೆಗೆ ಸಂಬಂಧಿಸಿ ಕಡ್ಡಾಯ ತರಬೇತಿಯನ್ನು ನೀಡುವಂತಾಗಲಿ ಮತ್ತು ನಿಯಮಗಳ ಉಲ್ಲಂಘನೆಗೆ ದಂಡವನ್ನು ವಿಧಿಸುವಂತಾಗಲಿ. 'ಸ್ಥಳೀಯ ಪಾಲುದಾರಿಕೆ' ಪರಿಕಲ್ಪನೆ ಅಡಿಯಲ್ಲಿ ಗ್ರಾಮಸ್ಥರನ್ನು 'ವಾಚ್–ಆ್ಯಂಡ್–ವಾರ್ಡ್', 'ಫೈರ್–ಲೈನ್' ನಿರ್ವಹಣೆಯಲ್ಲಿ ಸೇರಿಸಿಕೊಳ್ಳುವಂತಾಗಲಿ. ಪ್ರವಾಸಿಗರನ್ನು ಸೆಳೆಯುವ ಇಂಥ ಮಂತ್ರವು ವಿಧಾನಸೌಧಕ್ಕೆ ಅದೇಕೆ ಕೇಳಿಸುತ್ತಿಲ್ಲವೋ ಗೊತ್ತಿಲ್ಲ.

ರಾಜ್ಯದ ಹೆಮ್ಮೆಯ ಅರಣ್ಯ ತಾಣಗಳನ್ನು ಪ್ರವಾಸಿಗರಿಂದ ಸಂಪೂರ್ಣವಾಗಿ ದೂರ ಇಡುವುದರಿಂದ ಸಂರಕ್ಷಣೆ ಸಾಧ್ಯವಿಲ್ಲ. ನಿಯಂತ್ರಿತ ಪ್ರವೇಶ, ವಿಜ್ಞಾನಾಧಾರಿತ ನಿರ್ಧಾರಗಳು ಮತ್ತು ಜವಾಬ್ದಾರಿಯುತ ಪ್ರವಾಸೋದ್ಯಮವೇ ಈ ಸಮಸ್ಯೆಗೆ ಇರುವ ದೀರ್ಘಕಾಲೀನ ಪರಿಹಾರ. ಸುರಕ್ಷಿತ ಸಫಾರಿಗಳನ್ನು ನಿಲ್ಲಿಸುವುದು ಇಲ್ಲಿ ಉತ್ತರವಲ್ಲ, ಸುರಕ್ಷಿತವಾಗಿ, ಜವಾಬ್ದಾರಿಯಿಂದ ನಡೆಸುವುದೇ ಇದಕ್ಕೆ ಉತ್ತರ.

(ಲೇಖಕರು ಅಧ್ಯಕ್ಷರು, ಕರ್ನಾಟಕ ರಾಜ್ಯ ಟ್ರಾವೆಲ್ಸ್ ಮಾಲೀಕರ ಸಂಘ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:25, Issue:28

ಸಮಾಚಾರ ಸಣ್ಣದಲ್ಲ

ಜೈಪುರ: 2 ಜಪಾನಿ ಪ್ರವಾಸಿಗರು ಕಣ್ಮರೆ

ಜೈಪುರ: ರಾಜಸ್ಥಾನ ರಾಜ್ಯದ ರಾಜಧಾನಿ ನಗರ ಜೈಪುರದಲ್ಲಿ ಇಬ್ಬರು ಜಪಾನಿ ಪ್ರವಾಸಿಗರು ನಾಪತ್ತೆಯಾಗಿದ್ದಾರೆ. ಜಪಾನಿ ಪ್ರವಾಸಿಗರಿಬ್ಬರು ಬಾಡಿಗೆಗೆ ಪಡೆದಿದ್ದ ಟ್ಯಾಕ್ಸಿ ಚಾಲಕ ಅಶೋಕ್ ನಗರ ಪೊಲೀಸ್ ಠಾಣೆಯಲ್ಲಿ ನಾಪತ್ತೆ ದೂರು ದಾಖಲಿಸಿದ್ದಾರೆ ಎಂದು ಸ್ಟೇಷನ್ ಹೌಸ್ ಆಫೀಸರ್ ಮೋತಿಲಾಲ್ ಶರ್ಮಾ ಸುದ್ದಿಸಂಸ್ಥೆಗೆ ಮಂಗಳವಾರ ತಿಳಿಸಿದ್ದಾರೆ. ಜಪಾನ್‌ನ ಇಬ್ಬರು ಪುರುಷ ಪ್ರವಾಸಿಗರು ದೆಹಲಿಯಿಂದ ಜೈಪುರಕ್ಕೆ ಫೆ.7ರಂದು ಬಂದು ಹೋಟೆಲ್‌ನಲ್ಲಿ ತಂಗಿದ್ದರು. ಟ್ಯಾಕ್ಸಿ ಚಾಲಕ ಇಬ್ಬರೂ ಪ್ರವಾಸಿಗರನ್ನು ರಾತ್ರಿ ಅಶೋಕ್ ನಗರದಲ್ಲಿನ ರೆಸ್ಟೋರೆಂಟ್‌ಗೆ ಊಟಕ್ಕೆ ಕರೆದೊಯ್ದರು. ಚಾಲಕ ಮರುದಿನ ಬೆಳಗ್ಗೆವರೆಗೂ ಪ್ರವಾಸಿಗರಿಗಾಗಿ ಕಾದಿದ್ದಾರೆ. ಆದರೆ ಪ್ರವಾಸಿಗರು ರೆಸ್ಟೋರೆಂಟ್‌ನಿಂದ ವಾಪಸ್ ಆಗಲೇ ಇಲ್ಲ. ಚಾಲಕನನ್ನೂ ಸಂಪರ್ಕಿಸಿಲ್ಲ. ಪ್ರವಾಸಿಗರು ತಂಗಿದ್ದ ಹೋಟೆಲ್‌ಗೂ ತಲುಪಿಲ್ಲ. ಹೀಗಾಗಿ ಚಾಲಕ ಸೋಮವಾರ ಪೊಲೀಸ್ ಠಾಣೆಗೆ ಬಂದು ನಾಪತ್ತೆ ದೂರು ದಾಖಲಿಸಿದ್ದಾರೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ. ರೆಸ್ಟೋರೆಂಟ್ ಪ್ರದೇಶದ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಶರ್ಮಾ ಹೇಳಿದ್ದಾರೆ.

ರಕ್ಷಣಾ ಸಲಕರಣೆ ತಯಾರಿಕೆ ಸಹಕಾರ

ದೆಹಲಿ: ಕೈಗಾರಿಕೆಗಳು ಮತ್ತು ರಕ್ಷಣಾ ಕ್ಷೇತ್ರದ ಉಪಕರಣಗಳ ತಯಾರಿಕೆಗೆ ಸಂಬಂಧಿಸಿದ ಉದ್ಯಮ

ಕ್ಷೇತ್ರದಲ್ಲಿ ಪರಸ್ಪರ ಸಹಕಾರ ವೃದ್ಧಿ ಜಂಟಿ ಘೋಷಣೆಗೆ ಭಾರತ-ಗ್ರೀಸ್ ಸಹಿ ಹಾಕಿವೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಹೆಲೆನಿಕ್ ಗಣರಾಜ್ಯದ ರಕ್ಷಣಾ ಸಚಿವ ನಿಕೋಲಾಸ್-ಜಾರ್ಜಿಯೊಸ್ ಡೆಂಡಿಯಾಸ್ ದೆಹಲಿಯಲ್ಲಿ ದ್ವಿಪಕ್ಷೀಯ ಮಾತುಕತೆ ನಡೆಸಿದ ಬಳಿಕ ಒಪ್ಪಂದಕ್ಕೆ ಸೋಮವಾರ ಸಹಿ ಹಾಕಿದರು. 2026ರ ದ್ವಿಪಕ್ಷೀಯ ಮಿಲಿಟರಿ ಸಹಕಾರ ಯೋಜನೆಗಳನ್ನೂ ವಿನಿಮಯ ಮಾಡಿಕೊಳ್ಳಲಾಗಿದೆ. ಇದೇ ವೇಳೆ, ಉಭಯ ದೇಶಗಳ ನಡುವಿನ ಸಾಗರ ಭದ್ರತೆ ಬಲಪಡಿಸಲು ಹಿಂದೂ ಮಹಾಸಾಗರ ಪ್ರದೇಶಕ್ಕೆ ಸಂಬಂಧಿಸಿದ ಮಾಹಿತಿ ಸಮ್ಮಿಳನ ಕೇಂದ್ರಕ್ಕೆ (ಗುರುಗ್ರಾಮ್) ಗ್ರೀಸ್‌ನಿಂದ ಅಂತಾರಾಷ್ಟ್ರೀಯ ಸಂಪರ್ಕ ಅಧಿಕಾರಿ ನೇಮಿಸುವುದಾಗಿ ಗ್ರೀಸ್ ರಕ್ಷಣಾ ಸಚಿವ ಘೋಷಿಸಿದ್ದು, ಅದನ್ನು ರಾಜನಾಥ್ ಸಿಂಗ್ ಸ್ವಾಗತಿಸಿದ್ದಾರೆ. ಇದು ಎರಡೂ ರಾಷ್ಟ್ರಗಳ ನಡುವಿನ ಕಡಲ ಸಹಕಾರವನ್ನು ಮತ್ತಷ್ಟು ಹೆಚ್ಚಿಸುತ್ತದೆ ಎಂದು ರಾಜನಾಥ್ ಸಿಂಗ್ 'ಎಕ್ಸ್' ಸಂದೇಶದಲ್ಲಿ ತಿಳಿಸಿದ್ದಾರೆ.

ಸುನೇತ್ರಾ ಡಿಸಿಎಂ ಅಧಿಕಾರ ಸ್ವೀಕಾರ

ಮುಂಬೈ: ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿ(ಅಜಿತ್ ಬಣ) ಹಿರಿಯ ನಾಯಕಿ ಸುನೇತ್ರಾ ಪವಾರ್ ಮಂಗಳವಾರ ಮಹಾರಾಷ್ಟ್ರ ಸರಕಾರದ ಸಚಿವಾಲಯಕ್ಕೆ ಆಗಮಿಸಿ ಉಪ ಮುಖ್ಯಮಂತ್ರಿ ಅಧಿಕಾರ

ವಹಿಸಿಕೊಂಡು. ಸಚಿವಾಲಯ ಸಿಬ್ಬಂದಿ ತಂದ ಕಡತಗಳಿಗೆ ಸಹಿ ಹಾಕುವ ಮೂಲಕ ತಮ್ಮ ಇಲಾಖೆಗಳ ಕೆಲಸ ಆರಂಭಿಸಿದರು. ಡಿಸಿಎಂ ಆಗಿದ್ದ ಪತಿ ಅಜಿತ್ ಪವಾರ್ ಲಘು ವಿಮಾನ ಅಪಘಾತದಲ್ಲಿ ನಿಧನರಾದ ನಂತರ ಸುನೇತ್ರಾ ಅವರು, ಜ.31ರಂದು ರಾಜಭವನದಲ್ಲಿ ಪ್ರಮಾಣವಚನ ಸ್ವೀಕರಿಸಿ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ನೇತೃತ್ವದ ಮಹಾಯುತಿ ಸರಕಾರವನ್ನು ಸೇರಿಕೊಂಡರು. ಆ ಮೂಲಕ ರಾಜ್ಯದ ಮೊದಲ ಮಹಿಳಾ ಉಪ ಮುಖ್ಯಮಂತ್ರಿ ಎನಿಸಿಕೊಂಡರು. ಸಚಿವಾಲಯಕ್ಕೆ ತೆರಳುವ ಮುನ್ನ ಸುನೇತ್ರಾ ಮುಂಬೈನ ಪ್ರಸಿದ್ಧ ಸಿದ್ಧಿವಿನಾಯಕ ದೇವಸ್ಥಾನಕ್ಕೆ ಭೇಟಿ ನೀಡಿದರು. ದಾದರ್‌ನಲ್ಲಿರುವ ಚೈತ್ಯಭೂಮಿಗೆ ತೆರಳಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ಪುಷ್ಪ ನಮನ ಸಲ್ಲಿಸಿದರು. ನಂತರ ಹಿರಿಯ ಪುತ್ರ ಪಾರ್ಥ್ ಪವಾರ್ ಮತ್ತು ಪಕ್ಷದ ಹಿರಿಯ ನಾಯಕರ ಜತೆಗೂಡಿ ಸಚಿವಾಲಯಕ್ಕೆ ತೆರಳಿದರು.

ಟೀನಾ ಅಂಬಾನಿಗೆ ಮತ್ತೆ ಇ.ಡಿ ಸಮನ್ಸ್

ಮುಂಬೈ: ರಿಲಯನ್ಸ್ ಇನ್ಫೋಕಾಮ್ ಕಂಪನಿ ಮಾಲೀಕ ಅನಿಲ್ ಅಂಬಾನಿ ಅವರ ಪತ್ನಿ ಟೀನಾ ಅಂಬಾನಿ



ಅವರಿಗೆ ಅಕ್ರಮ ಹಣ ವರ್ಗಾವಣೆ ಆರೋಪದ ಪ್ರಕರಣ ಸಂಬಂಧ ವಿಚಾರಣೆಗೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯ(ಇ.ಡಿ) ಮತ್ತೆ ಸಮನ್ಸ್ ಜಾರಿ ಮಾಡಿದೆ. ಈ ಹಿಂದೆ ಇ.ಡಿ ಜಾರಿ ಮಾಡಿದ್ದ ಸಮನ್ಸ್‌ಗಳಿಗೆ ಟೀನಾ ಅಂಬಾನಿ ಪ್ರತಿಕ್ರಿಯೆ ನೀಡಿಯೇ ಇಲ್ಲ, ವಿಚಾರಣೆಗೂ ಹಾಜರಾಗಿಲ್ಲ ಎಂಬ ಕಾರಣಕ್ಕೆ ಇ.ಡಿ ತನಿಖಾಧಿಕಾರಿ, ಮಂಗಳವಾರ ಮತ್ತೊಮ್ಮೆ ಸಮನ್ಸ್ ಜಾರಿ ಮಾಡಿದ್ದಾರೆ.

{ ರಾಕೇಶ್ ಟಿಕಾಯತ್ } ಬಿಕೆಯು ಮುಖಂಡ

ಅಮೆರಿಕ-ಭಾರತದ ನಡುವಿನ ವ್ಯಾಪಾರ ಒಪ್ಪಂದವನ್ನು ಒಪ್ಪಲಾಗದು. ಆ ಒಪ್ಪಂದದಿಂದ ಭಾರತದ ಕೃಷಿ ಕ್ಷೇತ್ರಕ್ಕೆ ಖಂಡಿತಾ ತೊಂದರೆ ಆಗಲಿದೆ. ರೈತರ ಹಿತಾಸಕ್ತಿ ರಕ್ಷಿಸುತ್ತೇವೆ ಎಂದು ಕೇಂದ್ರ ಸರಕಾರ ಸುಳ್ಳು ಹೇಳುತ್ತಿದೆ. ನಮ್ಮ ಟ್ರ್ಯಾಕ್ಟರ್‌ಗಳು ಸಜ್ಜಾಗಿವೆ. ದೆಹಲಿ ದೂರವೇನೂ ಇಲ್ಲ. ಫೆ.12ರಂದು ನಡೆಯಲಿರುವ ಸಾರ್ವತ್ರಿಕ ಮುಷ್ಕರಕ್ಕೆ ಕೃಷಿಕರ ಬೆಂಬಲವಿದೆ.

ಸ್ಪೀಕರ್ ಓಂ ಬಿರ್ಲಾ ವಿರುದ್ಧದ ಕಾಂಗ್ರೆಸ್ ಅವಿಶ್ವಾಸ ನಿರ್ಣಯಕ್ಕೆ ಫೆ.4ರ ವಿಡಿಯೊ ಪ್ರತ್ಯಸ್ತ್ರ | ಪ್ರಧಾನಿ ಆಸನ ಬಳಿ ಕಾಂಗ್ರೆಸ್ ಸಂಸದೆಯರ ಪ್ರತಿಭಟನೆ ದೃಶ್ಯ

ಬಜೆಟ್ ಅಧಿವೇಶನದಲ್ಲೀಗ ಕೈ-ಕಮಲ ವಿಡಿಯೊ ಸಮರ

ದೆಹಲಿ: ಲೋಕಸಭೆಯಲ್ಲಿ ಬಜೆಟ್ ಅಧಿವೇಶನದ ಮುಂದುವರಿದ ಭಾಗವಾಗಿ ಕಲಾಪ ಸುಗಮವಾಗಿ ನಡೆಯುವ ಬದಲಾಗಿ 'ವಿಡಿಯೊ' ಅಸ್ತ್ರಗಳು-ಪ್ರತ್ಯಸ್ತ್ರಗಳು ಬಳಕೆಯಾಗುತ್ತಾ ಆಡಳಿತ ಪಕ್ಷ ಮತ್ತು ಪ್ರತಿಪಕ್ಷಗಳ ನಡುವೆ ವಾಗ್ಯುದ್ಧಕ್ಕೆ ಕಾರಣವಾಗುತ್ತಿವೆ.

ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು, ಫೆ.4ರಂದು ಲೋಕಸಭೆ ಸದನದಲ್ಲಿ ನಡೆದ ಘಟನೆಗಳ 2 ವಿಡಿಯೊಗಳನ್ನು ಮಂಗಳವಾರ ಬೆಳಗ್ಗೆ ಬಿಡುಗಡೆ ಮಾಡಿದ್ದು, 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಕಾಂಗ್ರೆಸ್ ಸಂಸದೆಯರು ಪ್ರತಿಭಟನೆ ನೆಪದಲ್ಲಿ ಪ್ರಧಾನಿ ಮೋದಿ ಅವರ ಆಸನವನ್ನು ಸುತ್ತುವರಿದು ಬೆದರಿಕೆ ಹಾಕುವಂತೆ ವರ್ತಿಸಿದ್ದಾರೆ ಎಂದು ಆರೋಪಿಸಿದ್ದಾರೆ.

ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್ ಪಕ್ಷ, 'ಪ್ರಧಾನಿ ನರೇಂದ್ರ ಮೋದಿ ಅವರು ಫೆ.4ರಂದು ತಾವು ಸದನಕ್ಕೆ ಬರುವುದಿಲ್ಲ. ಅದಕ್ಕೇ ಒಂದು ಕಾರಣವನ್ನು ಸೃಷ್ಟಿಸಿ ಸದನಕ್ಕೆ ಹೇಳಿಬಿಡಿ' ಎಂದು ಸ್ಪೀಕರ್ ಓಂ ಬಿರ್ಲಾ ಅವರಿಗೆ ತಿಳಿಸಿದಂತೆ 'ಕೃತಕ ಬುದ್ಧಿಮತ್ತೆ'(ಎ.ಐ) ವಿಡಿಯೊ ಸೃಷ್ಟಿ ಮಾಡಿ ಪಕ್ಷದ ಅಧಿಕೃತ ಸಾಮಾಜಿಕ ಮಾಧ್ಯಮ ತಾಣದಲ್ಲಿ ಹಂಚಿಕೊಂಡಿದೆ.

ಒಟ್ಟಾರೆ ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಲೋಕಸಭೆ ಕಲಾಪ ದಿಕ್ಕು ತಪ್ಪಿದಂತಾಗಿದೆ. ಆಡಳಿತ ಪಕ್ಷ ಮತ್ತು ಪ್ರತಿಪಕ್ಷಗಳ ನಡುವೆ 'ವಿಡಿಯೊ' ಸಮರ ಮುಂದುವರಿದಿದೆ.

ನಡೆದಿದ್ದೇನು?:

ಜ.28ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಜಂಟಿ ಸದನ ಭಾಷಣದೊಂದಿಗೆ ಆರಂಭಗೊಂಡ ಸಂಸತ್ತಿನ ಬಜೆಟ್ ಅಧಿವೇಶನ ಜ.30ರಂದು ಆರ್ಥಿಕ ಸಮೀಕ್ಷೆ ಮಂಡನೆ ಮತ್ತು ಫೆ.1ರಂದು ಭಾನುವಾರ 2026-27ನೇ ಹಣಕಾಸು ವರ್ಷದ ಮುಂಗಡಪತ್ರ ಮಂಡನೆಯೊಂದಿಗೆ ಫೆ.14ರವರೆಗೂ ಮುಂದುವರಿದಿದೆ. ಫೆ.1ರಂದು ಕೇಂದ್ರ ಬಜೆಟ್ ಮಂಡನೆ ನಂತರ ಬಜೆಟ್ ಮೇಲಿನ ಚರ್ಚೆ, ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಯಕ್ಕೆ ಚರ್ಚೆ ನಡೆಯುವುದಕ್ಕೆ ಬದಲಾಗಿ ಗದ್ದಲ-ಕೋಲಾಹಲ-ಕಲಾಪ ಮುಂದೂಡಿಕೆಯಲ್ಲಿ ತೊಡಗಿದ್ದೇ ಹೆಚ್ಚು.

ಈ ಚರ್ಚೆಗಳಿಗೆ ಪ್ರತಿಯಾಗಿ ಫೆ. 4ರಂದು ಲೋಕಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮಾತನಾಡಬೇಕಿತ್ತು. ಆದರೆ, ಕಾಂಗ್ರೆಸ್ ಮಹಿಳಾ ಸಂಸದರು ಪ್ರಧಾನಿ ಕುರ್ಚಿಯನ್ನು ಸುತ್ತುವರೆದು ಗದ್ದಲ ಎಬ್ಬಿಸಿದರು.

ಸದನದಲ್ಲಿ ಪ್ರತಿಪಕ್ಷಗಳಿಂದ ಊಹಿಸಲೂ ಆಗದಂತಹ ಘಟನೆ ನಡೆಯುವ ಸಾಧ್ಯತೆ ಇದೆ. ಅದರಿಂದ ಸದನದ ಘನತೆಗೆ ಭಾರೀ ಪೆಟ್ಟು ಬೀಳಲಿದೆ ಎಂಬುದು ಖಚಿತವಾಗಿದ್ದರಿಂದ ಪ್ರಧಾನಿ ಮೋದಿ ಅವರನ್ನು ಸದನಕ್ಕೆ ಹಾಜರಾಗದಿರಲು ನಾನೇ ಮನವಿ ಮಾಡಿದೆ ಎಂದು ಸ್ಪೀಕರ್ ಓಂ ಬಿರ್ಲಾ ಅವರು ಸದನಕ್ಕೆ ಅರುಹಿದ್ದಾರೆ.

ಆದರೆ, ಸ್ಪೀಕರ್ ಅವರ ಈ ಸಮಜಾಯಿಷಿಯನ್ನು ಒಪ್ಪದ ಕಾಂಗ್ರೆಸ್ ಪಕ್ಷ, ಪ್ರಧಾನಿ ಮೋದಿ ಅವರಿಗೆ ಕಾಂಗ್ರೆಸ್ ಸಂಸದೆಯರೇನೂ ಬೆದರಿಕೆ ಹಾಕಿಲ್ಲ. ಬದಲಾಗಿ ಪ್ರಧಾನಿ ಮೋದಿ ಮಾಜಿ ಸೇನಾಧಿಕಾರಿ ಎಂಎಂ ನರವಣೆ ಅವರ ಪುಸ್ತಕದಲ್ಲಿನ ಸತ್ಯಗಳಿಗೆ ಹೆದರಿದ್ದಾರೆ. ಹಾಗಾಗಿಯೇ ಸದನಕ್ಕೆ ಬರುತ್ತಿಲ್ಲ ಎಂದು ಲೇವಡಿಯಾಡುತ್ತಿದೆ.

ಕಾಂಗ್ರೆಸ್‌ನ ಈ ವಾದವನ್ನು ತುಂಡರಿಸಲೆಂದೇ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಫೆ.4ರಂದು ಲೋಕಸಭಾ ಸದನದಲ್ಲಿ ಏನೇನು ನಡೆಯಿತು ಎಂಬುದನ್ನು ದೇಶದ ಜನರೆದುರು ತೆರೆದಿಡುವ ಸಲುವಾಗಿಯೇ ಅಂದಿನ ದೃಶ್ಯಾವಳಿಗಳ ವಿಡಿಯೋಗಳನ್ನು ಮಂಗಳವಾರ ಬಿಡುಗಡೆ ಮಾಡಿದ್ದಾರೆ.

ಫೆ.4ರಂದು ಲೋಕಸಭೆ ಕಲಾಪ ವೇಳೆ ಪ್ರಧಾನಿ ಆಸನವನ್ನು ಸುತ್ತುವರಿದು ಬ್ಯಾನರ್ ಹಿಡಿದು ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಸಂಸದೆಯರು. ಅವರನ್ನು ಸಮಾಧಾನಪಡಿಸಲು ಯತ್ನಿಸಿದ ಕೇಂದ್ರ ಸಚಿವರು.

ಸಿಟ್ಟಿಗೆದ್ದಿದ್ದ ಬಿಜೆಪಿ ಸಂಸದೆಯರು

ಫೆ.4ರಂದು ಕಾಂಗ್ರೆಸ್ ಪಕ್ಷದ 6-7 ಸಂಸದೆಯರು ಪ್ರಧಾನಿ ಮೋದಿ ಅವರ ಆಸನವನ್ನು ಸುತ್ತುವರೆದು ಬ್ಯಾನರ್ ಹಿಡಿದು ಘೋಷಣೆ ಕೂಗಿದಾಗ ಬಿಜೆಪಿ ಸೇರಿದಂತೆ ಆಡಳಿತ ಪಕ್ಷಗಳ ಸಂಸದೆಯರೂ

ಸಿಟ್ಟಿಗೆದ್ದಿದ್ದರು. ಅವರಲ್ಲಿ ಕೆಲವರು ತಮ್ಮ ಆಸನದಿಂದ ಎದ್ದು ಬಂದು ಪ್ರತಿಭಟನೆ ನಡೆಸುತ್ತಿದ್ದ ಕಾಂಗ್ರೆಸ್ ಸಂಸದೆಯರ ಬಳಿ ತೆರಳಿ ವಿರೋಧ ವ್ಯಕ್ತಪಡಿಸಿದರು. ಆಗ ಆಡಳಿತ ಪಕ್ಷದ ಉಳಿದ ಸಂಸದೆಯರೂ ಅಲ್ಲಿಗೆ ಧಾವಿಸಿ ಬರಲಾರಂಭಿಸಿದರು. ಆಗ ಪರಿಸ್ಥಿತಿ ಕೈಮೀರುವುದನ್ನು ಅರಿತು ನಾನೇ ನಮ್ಮ ಮೈತ್ರಿಕೂಟ ಪಕ್ಷಗಳ ಸಂಸದೆಯರನ್ನು ಸಮಾಧಾನಪಡಿಸಿದೆ. ಅವರ ಆಸನಗಳಿಗೆ ಮರಳುವಂತೆ ಮನವಿ ಮಾಡಿದೆ ಎಂದು ಸಚಿವ ಕಿರಣ್ ರಿಜಿಜು ಮಂಗಳವಾರ ಹೇಳಿದ್ದಾರೆ.ಅಂದು ನಾನು ಹಾಗೆ ಮಾಡದೇ ಇದ್ದಿದ್ದರೆ ಸದನದಲ್ಲಿ ಪರಿಸ್ಥಿತಿ ಮತ್ತಷ್ಟು ಹದಗೆಡುವ ಸಾಧ್ಯತೆ ಇತ್ತು. ಸುದೈವವಶಾತ್ ಬಿಜೆಪಿ ಸೇರಿದಂತೆ ಆಡಳಿತ ಪಕ್ಷಗಳ ಸಂಸದೆಯರು ಸಂಯಮ ವಹಿಸಿದರು. ಪ್ರತಿಭಟನೆ ನಡೆಸಿದ್ದ ಕಾಂಗ್ರೆಸ್ ಸಂಸದೆಯರ ಜತೆ ಸಂಘರ್ಷಕ್ಕೆ ಇಳಿಯಲಿಲ್ಲ. ಇಲ್ಲವಾಗಿದ್ದರೆ ಸದನದಲ್ಲಿ ಆಗಬಾರದ್ದು ಆಗಿಬಿಡುವ ಸಾಧ್ಯತೆ ಇತ್ತು ಎಂದು ಕಳವಳ ವ್ಯಕ್ತಪಡಿಸಿದ್ದಾರೆ.ಆ ದಿನ ಬಿಜೆಪಿ ಸಂಸದರನ್ನು ತಡೆಯದೇ ಇದ್ದರೆ ತುಂಬಾ ಮುಜುಗರದ ದೃಶ್ಯಕ್ಕೆ ಕಾರಣವಾಗುತ್ತಿತ್ತು. ಸಂಸತ್ತಿನ ಘನತೆ ಮತ್ತು ಪಾವಿತ್ರ್ಯವನ್ನು ರಕ್ಷಿಸಲು ನಾವು ಆ ದಿನ ಸುಮ್ಮನಿದ್ದೆವು ಎಂದೂ ಹೇಳಿದ್ದಾರೆ.

ಕಾಂಗ್ರೆಸ್ ಸಂಸದೆಯರ ವಿರುದ್ಧ ಕ್ರಮಕ್ಕೆ ಬಿಜೆಪಿ ಪತ್ರ

ಪ್ರಧಾನಿ ಮೋದಿ ಅವರ ಆಸನವನ್ನು ಫೆ.4ರದು ಸುತ್ತುವರೆದಿದ್ದ ಪ್ರತಿಪಕ್ಷ ಸಂಸದೆಯರ ವಿರುದ್ಧ ಕ್ರಮ ಕೈಗೊಳ್ಳಲೇಬೇಕು ಎಂದು ಆಗ್ರಹಿಸಿ ಬಿಜೆಪಿ ಸಂಸದೆಯರು ಸ್ಪೀಕರ್‌ಗೆ ಮಂಗಳವಾರ ಪತ್ರ ಬರೆದಿದ್ದಾರೆ. ಲೋಕಸಭಾ ಸದನವನ್ನು ಹಿಂದೆಂದೂ ಕಾಣದಂತಹ ಪರಿಸ್ಥಿತಿಗೆ ದೂಡಿದ, ಪ್ರಧಾನಿ ಆಸನವನ್ನೇ ಸುತ್ತುವರಿದ, ಪ್ರಧಾನಿ ಸದನಕ್ಕೆ ಬಂದು ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡಲಾಗದಂತಹ ಪರಿಸ್ಥಿತಿಗೆ ಸದನವನ್ನು ದೂಡಿದ ಕಾಂಗ್ರೆಸ್ ಸಂಸದೆಯರ ವಿರುದ್ಧ ನಿಯಮ ರೀತಿ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಬಿಜೆಪಿ ಸಂಸದೆಯರು ಓಂ ಬಿರ್ಲಾ ಅವರಿಗೆ ಬರೆದ ಪತ್ರದಲ್ಲಿ ಆಗ್ರಹಿಸಿದ್ದಾರೆ.ಬಿಜೆಪಿ ಸಂಸದೆಯರು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ಸಲ್ಲಿಸಿರುವ ದೂರನ್ನೂ ಸಚಿವ ಕಿರಣ್ ರಿಜಿಜು ಬೆಂಬಲಿಸಿ ಮಾತನಾಡಿದ್ದಾರೆ. ಸಂಸತ್ತಿನಲ್ಲಿನ ಕಾಂಗ್ರೆಸ್ ಜನಪ್ರತಿನಿಧಿಗಳ ವರ್ತನೆ ಸಂಸತ್ತಿನ ನಿಯಮಗಳನ್ನು ಮಿತಿಗಳನ್ನು ಮೀರಿದೆ ಎಂದೂ ಸಚಿವರು ಆರೋಪಿಸಿದ್ದಾರೆ.ಕಾಂಗ್ರೆಸ್ ಪಕ್ಷವು ತಮ್ಮ ಸಂಸದೆಯರ ಅತ್ಯಂತ ಅವಮಾನಕರ ನಡವಳಿಕೆ ಬಗ್ಗೆ ಹೆಮ್ಮೆಪಡುತ್ತಿದೆ. ಕಾಂಗ್ರೆಸ್ ಪಕ್ಷ ಮತ್ತು ಅದರ ನಾಯಕರ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ ಈ ಬಗ್ಗೆ ಸಂಭ್ರಮಿಸುತ್ತಿರುವ ಸಂದೇಶಗಳು ಹರಿದಾಡುತ್ತಿವೆ. ಸಂಸದರ ಇಂಥ ನಡವಳಿಕೆಗಳನ್ನು ಯಾರಾದರೂ ಸಮರ್ಥಿಸಲು ಸಾಧ್ಯವೇ? ಸದನದ ಘನತೆಯನ್ನು ಕಾಪಾಡಿಕೊಳ್ಳಬೇಕಾದ್ದು ನಮ್ಮದೇ ಜವಾಬ್ದಾರಿ ಅಲ್ಲವೇ? ಎಂದೂ 'ಎಕ್ಸ್' ಸಂದೇಶದಲ್ಲಿ ಬೇಸರ ವ್ಯಕ್ತಪಡಿಸಿದ್ದಾರೆ.

ಎಡಪಕ್ಷಗಳ ಅರ್ಜಿ ವಿಚಾರಣೆಗೆ ಅಂಗೀಕರಿಸಿದ ಸಿಜೆಐ ಪೀಠ

ಹಿಮಂತ ಬಂದೂಕು ಗುರಿ: ಸುಪ್ರೀಂಗೆ ಅರ್ಜಿ

ದೆಹಲಿ: ಬಿಜೆಪಿ ಅಸ್ಸಾಂ ಘಟಕದ ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಬಂದೂಕು ಹಿಡಿದು ಮುಸ್ಲಿಮರಂತೆ ಕಾಣುವ ಜನರತ್ತ ಗುರಿ ಇಟ್ಟಿರುವುದನ್ನು ಚಿತ್ರಿಸಿರುವ ವಿಡಿಯೊ ಹಂಚಿಕೊಂಡಿರುವ ಬಗ್ಗೆ ಸಿಪಿಐ(ಎಂ) ಮತ್ತು ಸಿಪಿಐ ಪಕ್ಷಗಳು ಸಲ್ಲಿಸಿರುವ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ಮಂಗಳವಾರ ಸಮ್ಮತಿಸಿದೆ. ಅಸ್ಸಾಂನಲ್ಲಿ ಬಂಗಾಳಿ ಮಾತನಾಡುವ ಮುಸ್ಲಿಂ ಸಮುದಾಯದ ವಿರುದ್ಧ ಸಿಎಂ ಹಿಮಂತ ಬಿಸ್ವ ಶರ್ಮಾ ಅವರ ದ್ವೇಷಪೂರಿತ ಭಾಷಣಗಳ ಸರಣಿಯನ್ನೂ ಅರ್ಜಿಯ ಜತೆ ಲಗತ್ತಿಸಲಾಗಿದೆ.

ಅರ್ಜಿದಾ ರರಾದ ಎಡಪಕ್ಷಗಳ ನಾಯಕರ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ವಕೀಲ ನಿಜಾಮ್ ಪಾಷಾ ಅವರ ಸಲ್ಲಿಕೆ ಮತ್ತು ಪ್ರತಿಪಾದನೆಗಳನ್ನು ಮುಖ್ಯ ನ್ಯಾಯಮೂರ್ತಿ(ಸಿಜೆಐ) ಸೂರ್ಯ ಕಾಂತ್ ಮತ್ತು ನ್ಯಾ. ಜೋಯ್‌ಮಲ್ಯ ಬಾಗ್ಚಿ ಮತ್ತು ನ್ಯಾ.ಎನ್.ವಿ.ಅಂಜಾರಿಯಾ ಅವರ ತ್ರಿಸದಸ್ಯ ಪೀಠ ಗಮನಿಸಿತು.ಚುನಾವಣೆ ಸಮೀಪಿಸುತ್ತಲೇ ಅದರ ಒಂದು ಭಾಗವನ್ನು ಸುಪ್ರೀಂ ಕೋರ್ಟ್‌ಗೆ ತಂದು ಹೋರಾಟ ನಡೆಸಲಾಗುತ್ತದೆ. ಅದುವೇ ಈಗಿನ ಸಮಸ್ಯೆ ಎಂದ ಅಭಿಪ್ರಾಯಪಟ್ಟ ಪೀಠ, ಅರ್ಜಿಯ ವಿಚಾರಣೆಗೆ ಸಮ್ಮತಿಸಿ ವಿಚಾರಣೆಗೆ ದಿನ ನಿಗದಿಪಡಿಸುವುದಾಗಿ ಹೇಳಿತು. ಅಸ್ಸಾಂ ಸಿಎಂ ಮಾಡಿರುವ ಭಾಷಣಗಳನ್ನೂ, ನಿರ್ದಿಷ್ಟ ಸಮುದಾಯದ ಜನರತ್ತ ಬಂದೂಕು ಗುರಿ ಇಟ್ಟಿರುವ ವಿಡಿಯೊವನ್ನೂ ಪೀಠ ಗಮನಿಸಬೇಕು. ಆದರೆ ಈ ವಿಚಾರಗಳಿಗೆ ಸಂಬಂಧಿಸಿ ಯಾವುದೇ ಎಫ್‌ಐಆರ್ ದಾಖಲಿಸಲಾಗಿಲ್ಲ. ಹಾಗಾಗಿ ನ್ಯಾಯಾಲಯ ತುರ್ತು ಮಧ್ಯಪ್ರವೇಶ ಮಾಡಬೇಕು ಎಂದು ಅರ್ಜಿದಾರರ ಪರ ವಕೀಲರು ಪೀಠಕ್ಕೆ ಮನವಿ ಮಾಡಿದರು.

ಈ ಮಧ್ಯೆ, ಕಾಂಗ್ರೆಸ್ ಪಕ್ಷದ ಅಸ್ಸಾಂ ಶಾಸಕರಾದ ಸಿಬಾಮೋನಿ ಬೋರಾ ಮತ್ತು ದಿಗಂತ ಬರ್ಮನ್ ರಾಜಧಾನಿ ನಗರ ಗುವಾಹಟಿಯಲ್ಲಿನ ದಿಸ್‌ಪುರ ಪೊಲೀಸ್ ಠಾಣೆಗೆ ಮಂಗಳವಾರ ತೆರಳಿ, ಬಿಜೆಪಿಯ ಸಾಮಾಜಿಕ ಮಾಧ್ಯಮ ವೇದಿಕೆ ಮತ್ತು ಅದು ಹಂಚಿಕೊಂಡಿರುವ ವೀಡಿಯೊ ವಿರುದ್ಧ ದೂರು ದಾಖಲಿಸಿದ್ದಾರೆ.

ಎಐಎಂಐಎಂ ದೂರು

ಈ ಮಧ್ಯೆ, 'ಆಲ್ ಇಂಡಿಯ ಮಜ್ಲಿಸ್-ಎ-ಇತ್ತೆಹಾದುಲ್ ಮುಸ್ಲಿಮೀನ್'(ಎಐಎಂಐಎಂ) ಮುಖ್ಯಸ್ಥ ಮತ್ತು ಲೋಕಸಭಾ ಸಂಸದ ಅಸಾದುದ್ದೀನ್ ಓವೈಸಿ ಅವರೂ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ವಿರುದ್ಧ ಸೋಮವಾರ ಪೊಲೀಸರಿಗೆ ದೂರು ನೀಡಿದ್ದಾರೆ. ಸಾಂವಿಧಾನಿಕ ಆಡಳಿತವನ್ನು ಪೂರ್ವಾಗ್ರಹ ಮತ್ತು ಬೆದರಿಕೆ ಮಟ್ಟಕ್ಕೆ ಇಳಿಸಿದ್ದಾರೆ ಎಂದೂ ಆರೋಪಿಸಿದ್ದಾರೆ.

'ನರೇಂದರ್ ಸರೆಂಡರ್-ಇಡೀ ದೇಶ ನೋಡುತ್ತಿದೆ' ಬ್ಯಾನರ್ ಪ್ರದರ್ಶನ

ಅಮೆರಿಕ ವ್ಯಾಪಾರ ಒಪ್ಪಂದ ವಿರುದ್ಧ ಪ್ರತಿಭಟನೆ

ದೆಹಲಿ: 'ನರೇಂದರ್ ಸರೆಂಡರ್-ಇಡೀ ದೇಶ ನೋಡುತ್ತಿದೆ' ಎಂದು ಬರೆಯಲಾಗಿದ್ದ ಬ್ಯಾನರ್ ಹಿಡಿದು ಪ್ರತಿಪಕ್ಷ ಕಾಂಗ್ರೆಸ್‌ನ ಕೆಲವು ಸಂಸದರು ಸಂಸತ್ ಭವನದ 'ಮಕರ ದ್ವಾರ'ದೆದುರು ಭಾರತ-ಅಮೆರಿಕದ ವ್ಯಾಪಾರ ಒಪ್ಪಂದ ವಿರುದ್ಧ ಮಂಗಳವಾರ ಬೆಳಗ್ಗೆ ಪ್ರತಿಭಟನೆ ನಡೆಸಿದರು.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಶರಣಾಗಿದ್ದಾರೆ ಎಂದು ಪ್ರತಿಭಟನಾ ನಿರತ ಪ್ರತಿಪಕ್ಷ ಸಂಸದರು ಆರೋಪಿಸಿದರು. ಅಮೆರಿಕ ಜತೆಗೆ ಭಾರತ ಸರಕಾರ ಮಾಡಿಕೊಂಡಿರುವ ವ್ಯಾಪಾರ ಒಪ್ಪಂದದ ಚೌಕಟ್ಟಿನ ಬಗ್ಗೆ ಪ್ರಸಕ್ತ ಬಜೆಟ್ ಅಧಿವೇಶನದಲ್ಲಿಯೇ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಿಸಿದರು. ಈ ಮಧ್ಯೆ, 'ಭಾರತ-ಅಮೆರಿಕ ಮಧ್ಯಂತರ ವ್ಯಾಪಾರ ಒಪ್ಪಂದದ ಬಗ್ಗೆ ಚರ್ಚೆ ನಡೆಸಬೇಕು' ಎಂದು ಕೋರಿ ಕಾಂಗ್ರೆಸ್ ಸಂಸದ ಮನೀಶ್ ತಿವಾರಿ ಲೋಕಸಭೆಯಲ್ಲಿ ವಜಾ ನಿರ್ಣಯದ ನೋಟಿಸನ್ನು ಮಂಗ ಳವಾರ ಬೆಳಗ್ಗೆ ಸಲ್ಲಿಸಿದರು. ಅಲ್ಲದೇ, ರಷ್ಯಾದಿಂದ ಕಡಿಮೆ ಬೆಲೆಗೆ ಕಚ್ಚಾತೈಲ ಖರೀದಿಸುವುದನ್ನು ಭಾರತ ನಿಲ್ಲಿಸಲು ಮುಂದಾಗಿದೆ, ಇನ್ನೊಂದೆಡೆ ಅಮೆರಿಕದ ಕೃಷಿ ಉತ್ಪನ್ನಗಳಿಗೆ ಸುಂಕ ರಿಯಾಯಿತಿ ನೀಡುತ್ತಿದೆ ಎಂದು ತಿವಾರಿ ಕಳವಳ ವ್ಯಕ್ತಪಡಿಸಿದರು.

ಸರಕಾರದ ಈ ಕ್ರಮಗಳು ದೇಶದಲ್ಲಿನ ಇಂಧನ ಭದ್ರತೆ, ರೈತರ ಹಿತಾಸಕ್ತಿ ಮತ್ತು ಕಾರ್ಯತಂತ್ರದ ಸ್ವಾಯತ್ತತೆ ಮೇಲೆ ಪ್ರಶ್ನೆಗಳನ್ನು ಹುಟ್ಟುಹಾಕುತ್ತವೆ. ಆದ್ದರಿಂದ ಸರಕಾರ ಈ ಬಗ್ಗೆ ಸದನದಲ್ಲಿ ತಕ್ಷಣ ಹೇಳಿಕೆ ನೀಡಬೇಕು, ಸಂಸತ್ತಿನಲ್ಲಿ ಪೂರ್ಣ ಚರ್ಚೆಗೆ ಅವಕಾಶ ನೀಡಬೇಕು ಎಂದು ಸರಕಾರವನ್ನು ಒತ್ತಾಯಿಸುವೆ ಎಂದು ತಿವಾರಿ ನೋಟಿಸ್‌ನಲ್ಲಿ ತಿಳಿಸಿದ್ದಾರೆ.

ಸಂಸತ್ತಿನ ಮಕರ ದ್ವಾರದೆದುರು ಮಂಗಳವಾರ ಬೆಳಗ್ಗೆ 'ನರೇಂದರ್ ಸರೆಂಡರ್' ಎಂಬ ಬ್ಯಾನರ್ ಹಿಡಿದು ಕಾಂಗ್ರೆಸ್ ಸಂಸದರ ಪ್ರತಿಭಟನೆ.

ಬಿಹಾರ: ತಮ್ಮದೇ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸಿದ ಬಿಜೆಪಿಯ ಅತಿಕಿರಿಯ ಶಾಸಕಿ - ಗಾಯಕಿ

ಆರೋಗ್ಯ ಸಚಿವರಿಗೇ ಜ್ವರ ಬರಿಸಿದ ನವ ಶಾಸಕಿ ಮೈಥಿಲಿ

ಪಟನಾ: ಜಾನಪದ, ಶ್ರೀರಾಮ ಭಜನೆ, ಸಂಗೀತ ಕಾರ್ಯಕ್ರಮಗಳಿಂದ ಜನಪ್ರಿಯತೆ ಗಳಿಸಿದ್ದ, 2025ರ ಬಿಹಾರ ವಿಧಾನಸಭಾ ಚುನಾವಣೆ ವೇಳೆ ಬಿಜೆಪಿ ಸೇರಿ 12 ಸಾವಿರಕ್ಕೂ ಅಧಿಕ ಮತಗಳಿಂದ ಗೆದ್ದು, ಅತಿ ಕಿರಿಯ ಶಾಸಕಿ ಎನಿಸಿಕೊಂಡ ಮೈಥಿಲಿ ಠಾಕೂರ್(25), ವಿಧಾನಸಭೆ

ಮಂಗಲ್ ಪಾಂಡೆ

ಕಲಾಪದಲ್ಲಿಯೂ ಮಿಂಚುತ್ತಿದ್ದಾರೆ. ಬಿಜೆಪಿ- ಜೆಡಿಯು ನೇತೃತ್ವದ ತಮ್ಮದೇ ಎನ್‌ಡಿಎ ಸರಕಾರದ ಇಲಾಖೆಗಳ ಕುರಿತೇ ಸದನದಲ್ಲಿ ಪ್ರಶ್ನೆ ಮಾಡುತ್ತಾ ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರ ಮೆಚ್ಚುಗೆ ಗಳಿಸಿದ್ದಾರೆ.

ನೇರ-ದಿಟ್ಟ ಪ್ರಶ್ನೆಗಳಿಗೆ ಹೆಸರಾದ ಮೈಥಿಲಿ, ಶಾಸಕಿಯಾದ ಬಳಿಕ ತಮ್ಮ ಕ್ಷೇತ್ರದ ಸಮಸ್ಯೆಗಳ ಕುರಿತು ಸದನದಲ್ಲಿ ಪ್ರಶ್ನೆಗಳ ಮಳೆಗರೆಯುತ್ತಾ, ಆಡಳಿತ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸುತ್ತಿದ್ದಾರೆ. ತಾವು ಪ್ರತಿನಿಧಿಸುವ 'ಅಲಿ ನಗರ' ಕ್ಷೇತ್ರದಲ್ಲಿನ ಸರಕಾರಿ ಆಸ್ಪತ್ರೆ ದುಸ್ಥಿತಿ ಬಗ್ಗೆ ಪ್ರಸಕ್ತ ಬಜೆಟ್ ಅಧಿವೇಶನದಲ್ಲಿ ಪ್ರಶ್ನೆ ಮಾಡಿದ್ದಾರೆ. ಅದಕ್ಕೆ ಆರೋಗ್ಯ ಸಚಿವ ಮಂಗಲ್ ಪಾಂಡೆ ಉತ್ತರ ನೀಡಿದರೂ 'ಸಚಿವರ ಉತ್ತರ ನನಗೆ ತೃಪ್ತಿ ತಂದಿಲ್ಲ' ಎಂದು ನೇರ ಮುಖಕ್ಕೇ ಹೊಡೆದಂತೆ ಹೇಳಿದ್ದಾರೆ.

'ಅಲಿ ನಗರ ಕ್ಷೇತ್ರದ ಪ್ರಮುಖ ಆಸ್ಪತ್ರೆಯನ್ನು ಸ್ವತಃ ಪರಿಶೀಲಿಸಿರುವೆ. ಆಸ್ಪತ್ರೆ ಬಹಳ ಕಿರಿದಾದ ಸ್ಥಳದಲ್ಲಿದೆ. ಕಟ್ಟಡ ಶಿಥಿಲವಾಗಿದೆ, ಸೀಲಿಂಗ್‌ನಿಂದ ಪ್ಲಾಸ್ಟರ್ ಕಿತ್ತು ಬೀಳುತ್ತಿದೆ, ಗೋಡೆಗಳಲ್ಲಿ ಬಿರುಕಿವೆ. ಮಳೆಗಾಲದಲ್ಲಿ ತಾರಸಿ ಸೋರುತ್ತದೆ. ಕಟ್ಟಡ ಯಾವುದೇ ಕ್ಷಣ ಬೀಳಬಹುದು. ದೊಡ್ಡ ಅನಾಹುತವಾಗಲಿ ಎಂದು ಸರಕಾರ ಕಾಯುತ್ತಿದೆಯೇ?' ಎಂದು ಪ್ರಶ್ನೆ ಮಾಡಿದ್ದಾರೆ. ಇಂಥ ಕಟ್ಟಡದಲ್ಲೇ ಗರ್ಭಿಣಿಯರು-ಪುಟ್ಟ ಮಕ್ಕಳ ಆರೈಕೆ ನಡೆಯುತ್ತಿದೆ. ಜನರ ಜೀವಕ್ಕೆ ಅಪಾಯವಿದೆ ಎಂದೂ ಕಳವಳ ವ್ಯಕ್ತಪಡಿಸಿದ್ದಾರೆ.

ಆಸ್ಪತ್ರೆಯಲ್ಲಿದ್ದ ಇಬ್ಬರು ಎಂಬಿಬಿಎಸ್ ವೈದ್ಯರನ್ನೂ ವರ್ಗಾಯಿಸಲಾಗಿದೆ. ಸಚಿವರು ಆಯುರ್ ವೈದ್ಯರನ್ನು ನಿಯೋಜಿಸುವುದಾಗಿ ಈಗ ಭರವಸೆ ನೀಡಿದ್ದಾರೆ. ಆದರೆ, ಈ ಆಸ್ಪತ್ರೆಯನ್ನೇ 2 ಪಟ್ಟಣಗಳ, ಹತ್ತಾರು ಗ್ರಾಪಂಗಳ ಸಾವಿರಾರು ಜನರು ಆಶ್ರಯಿಸಿದ್ದಾರೆ. ಹಾಗಾಗಿ, ವಿಶಾಲ ಕಟ್ಟಡಕ್ಕೆ ಆಸ್ಪತ್ರೆ ಸ್ಥಳಾಂತರಿಸಬೇಕು. ಕನಿಷ್ಠ ಇಬ್ಬರು ಎಂಬಿಬಿಎಸ್ ವೈದ್ಯರನ್ನು ಬೇಗ ನಿಯೋಜಿಸಬೇಕು' ಎಂದು ಮೈಥಿಲಿ ಆಗ್ರಹಿಸಿದ್ದಾರೆ. ಹೀಗೆ ಮೈಥಿಲಿ ಅವರ ವಾಗ್ಝರಿ ಮುಂದುವರಿದಾಗ ಪ್ರತಿಪಕ್ಷ ಸದಸ್ಯರು ಮೇಜು ತಟ್ಟಿ ಮೈಥಿಲಿಯನ್ನು ಬೆಂಬಲಿಸಿದರು. ಕೊನೆಗೆ ಸ್ಪೀಕರ್ ಮಧ್ಯ ಪ್ರವೇಶಿಸಿ ಚರ್ಚೆ ಕೊನೆಗೊಳಿಸಬೇಕಾಯಿತು.

ಪ್ರಥಮ ಬಾರಿ ಶಾಸಕಿಯಾದಾಗಲೇ, ಅದೂ ಆರಂಭದ ದಿಸೆಯಲ್ಲೇ ತಮ್ಮದೇ ಪಕ್ಷದ ಸಚಿವರನ್ನು ಪ್ರಶ್ನೆಗಳಿಂದ ಕಟ್ಟಿಹಾಕಿದ ಮೈಥಿಲಿ ಅವರ ಈ ವಿಡಿಯೊ ಜಾಲತಾಣದಲ್ಲಿ ವೈರಲ್ ಆಗಿದ್ದು, ಭಾರಿ ಜನಮೆಚ್ಚುಗೆ ಗಳಿಸಿದೆ. ಕ್ಷೇತ್ರದ ಜನತೆ ಮೈಥಿಲಿ ದಿಟ್ಟತನವನ್ನು ಪ್ರಶಂಸಿಸಿದ್ದಾರೆ. ನೆಟ್ಟಿಗರಲ್ಲಿ ಹಲವರು 'ನಮ್ಮ ಕ್ಷೇತ್ರಕ್ಕೂ ಇಂಥವರೇ ಶಾಸಕಿಯಾಗಿ ಬೇಕು' ಎಂಬ ಆಶಯ ವ್ಯಕ್ತಪಡಿಸಿದ್ದಾರೆ.



ಬಿಹಾರ ವಿಧಾನಸಭೆಯಲ್ಲಿ ಮೈಥಿಲಿ ಠಾಕೂರ್ ಪ್ರಶ್ನಾವಳಿ.

ಸುಂಕ ಶೇ.1 ಕಡಿತ: ಬಾಂಗ್ಲಾ ಹರ್ಷ

ಢಾಕಾ: ಬಾಂಗ್ಲಾದೇಶದ ಸರಕುಗಳ ಆಮದು ಮೇಲೆ ಶೇ.20ರಷ್ಟು ಸುಂಕ ವಿಧಿಸಿದ್ದ ಅಮೆರಿಕ, ಹಲವು ಸುತ್ತಿನ ಮಾತುಕತೆ ಬಳಿಕ ಸುಂಕ ಪ್ರಮಾಣದಲ್ಲಿ ಶೇ.1ರಷ್ಟು ಕಡಿತ ಮಾಡಲು ಒಪ್ಪಿಕೊಂಡಿದೆ ಎಂದು ಬಾಂಗ್ಲಾದೇಶದ ಮಧ್ಯಂತರ ಸರಕಾರ ಹೇಳಿಕೊಂಡಿದೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು 2025ರ ಆಗಸ್ಟ್‌ನಲ್ಲಿ ಬಾಂಗ್ಲಾದೇಶದ ಮೇಲೆ ಶೇ.34ರಷ್ಟು ಸುಂಕ ವಿಧಿಸಿದ್ದರು. ಆ ಬಳಿಕ ಶೇ.20ಕ್ಕೆ ತಗ್ಗಿಸಿದ್ದರು. ಕಡೆಗೆ ಈಗ ಸುಂಕದ ಪ್ರಮಾಣವನ್ನು ಶೇ.19ಕ್ಕೆ ಇಳಿಸಲು ಒಪ್ಪಿಕೊಂಡಿದ್ದಾರೆ ಎಂದು ಬಾಂಗ್ಲಾ ಮಧ್ಯಂತರ ಸರಕಾರದ ಮುಖ್ಯ ಸಲಹೆಗಾರ ಮೊಹಮ್ಮದ್ ಯೂನುಸ್ ಹೇಳಿಕೊಂಡಿದ್ದಾರೆ.

ಅಷ್ಟೇ ಅಲ್ಲದೇ, ಅಮೆರಿಕದಿಂದ ಸರಬರಾಜಾಗುವ ಸಾಮಗ್ರಿಗಳು, ಕಚ್ಚಾಪದಾರ್ಥಗಳನ್ನು ಬಳಸಿಕೊಂಡು ಸಿದ್ಧಪಡಿಸುವ ವಸ್ತ್ರಗಳು ಮತ್ತು ಸಿದ್ಧ ಉಡುಪುಗಳಿಗೆ ಸುಂಕವನ್ನೇ ಹಾಕುವುದಿಲ್ಲ ಎಂದೂ ಭರವಸೆ ನೀಡಿದ್ದಾರೆ. ಹಾಗಾಗಿ, ಬಾಂಗ್ಲಾದಲ್ಲಿನ ಸಿದ್ಧ ಉಡುಪು ತಯಾರಿಕೆ ಉದ್ಯಮದ ಮೇಲಿನ ದೊಡ್ಡ ಆತಂಕ ತಪ್ಪಿದಂತಾಗಿದೆ ಎಂದು ಬಾಂಗ್ಲಾ ಸರಕಾರದ ಪ್ರತಿನಿಧಿಗಳು ಖುಷಿಯಿಂದ ಹೇಳಿಕೊಂಡಿದ್ದಾರೆ.

ಪ್ರಚಾರ ಅಂತ್ಯ: ನಾಳೆ ಮತದಾನ

ಭಾರೀ ನಿರೀಕ್ಷೆ-ಕುತೂಹಲ ಹುಟ್ಟು ಹಾಕಿರುವ ಬಾಂಗ್ಲಾದೇಶದಲ್ಲಿನ ಸಾರ್ವತ್ರಿಕ ಚುನಾವಣೆ ಪ್ರಕ್ರಿಯೆ ಅಂತಿಮ ಘಟ್ಟದತ್ತ ಸಾಗಿದ್ದು, ರಾಜಕೀಯ ಪಕ್ಷಗಳ ಬಹಿರಂಗ ಪ್ರಚಾರಕ್ಕೆ ಮಂಗಳವಾರ ಸಂಜೆ ತೆರೆ ಬಿದ್ದಿದೆ. ನಿತ್ಯ ರ್‍ಯಾಲಿಗಳು, ಬಹಿರಂಗ ಪ್ರಚಾರ ಸಭೆಗಳಲ್ಲಿ ಬಿಡುವಿಲ್ಲದಂತೆ ತೊಡಗಿಸಿಕೊಂಡಿದ್ದ ಅಭ್ಯರ್ಥಿಗಳು, ರಾಜಕೀಯ ನಾಯಕರು ತುಸು ವಿರಮಿಸಿ, ಬುಧವಾರ ಮನೆ ಮನೆ ಪ್ರಚಾರ ಕೈಗೊಳ್ಳಲಿದ್ದಾರೆ. ಬಳಿಕ ಗುರುವಾರ ಚುನಾವಣೆ. ಬೆಳಗ್ಗೆ 7.30ರಿಂದ ಮತದಾನ ಆರಂಭಗೊಳ್ಳಲಿದೆ.

ಬಿಜೆಪಿ ಮಂಜುಷಾ ಪುಣೆ ಮೇಯರ್-ಅವಿರೋಧ

ಪುಣೆ: ಮಹಾರಾಷ್ಟ್ರ ರಾಜ್ಯದ 2ನೇ ಪ್ರಮುಖ ನಗರ ಪುಣೆಯಲ್ಲಿನ ಮಹಾನಗರ ಪಾಲಿಕೆಯ ನೂತನ ಮೇಯರ್

ಆಗಿ ಬಿಜೆಪಿ ಕಾರ್ಪೊರೇಟರ್ ಮಂಜುಷಾ ನಾಗ್ಪುರೆ ಮಂಗಳವಾರ ಆಯ್ಕೆ ಯಾದರು. ಸಿಂಹಗಢ ವಾರ್ಡ್‌ನ ಕಾರ್ಪೊರೇಟರ್ ಆಗಿರುವ ಮಂಜುಷಾ, ಬಿಜಿನೆಸ್ ಮ್ಯಾನೇಜ್ಮೆಂಟ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ನಿಕಟ ಸಂಬಂಧ ಹೊಂದಿದ್ದಾರೆ. ಎನ್‌ಡಿಎ ಮಿತ್ರಪಕ್ಷವಾದ ಕೇಂದ್ರ ಸಚಿವ ರಾಮದಾಸ್ ಅಠಾವಳೆ ಅವರ ನೇತೃತ್ವದ 'ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯ'ದ(ಆರ್‌ಪಿಐ-ಎ) ಕಾರ್ಪೊರೇಟರ್ ಪರಶುರಾಮ್ ವಾಡೇಕರ್ ಉಪ ಮೇಯರ್ ಆಗಿದ್ದಾರೆ. ಎನ್‌ಸಿಪಿಯಿಂದ ಮೇಯರ್ ಸ್ಥಾನಕ್ಕೆ ಸ್ಪರ್ಧಿಸಿದ್ದ ಶೀತಲ್ ಸಾವಂತ್ ಮತ್ತು ಕಾಂಗ್ರೆಸ್‌ನ ಅಶ್ವಿನಿ ಲಾಂಡ್‌ಗೆ ಹಾಗೂ ಉಪ ಮೇಯರ್ ಹುದ್ದೆಗೆ ಸ್ಪರ್ಧಿಸಿದ್ದ ಎನ್‌ಸಿಪಿಯ ದತ್ತಾತ್ರೇಯ ಬಹಿರತ್ ಮತ್ತು ಕಾಂಗ್ರೆಸ್‌ನ ಸಾಹಿಲ್ ಕೇದಾರಿ ಕಡೆಕ್ಷಣ ನಾಮಪತ್ರ ಹಿಂತೆಗೆದುಕೊಂಡರು. ಪರಿಣಾಮ, ಮಂಜುಷಾ ಮತ್ತು ವಾಡೇಕರ್ ಅವಿರೋಧ ಆಯ್ಕೆಯಾದರು. ಒಟ್ಟು 165 ಸದಸ್ಯ ಬಲದ ಪುಣೆ ಪಾಲಿಕೆಯಲ್ಲಿ ಬಿಜೆಪಿ ಮೈತ್ರಿಕೂಟ 119 ಸ್ಥಾನ ಗೆದ್ದಿದೆ. ಅಜಿತ್ ಮತ್ತು ಶರದ್ ಪವಾರ್ ನೇತೃತ್ವದ ಎನ್‌ಸಿಪಿ ಬಣಗಳು 30 ಸ್ಥಾನ, ಕಾಂಗ್ರೆಸ್ 15 ಮತ್ತು ಶಿವಸೇನೆ (ಯುಬಿಟಿ) ಕೇವಲ 1 ಸ್ಥಾನ ಗೆದ್ದಿವೆ.

ರಕ್ಷಣಾ ಕ್ಷೇತ್ರ: 3.25 ಲಕ್ಷ ಕೋಟಿ ಡಾಲರ್ ಖರೀದಿ ಭಾರತ-ಫ್ರಾನ್ಸ್ ಬೃಹತ್ ಒಪ್ಪಂದ

ಮತ್ತೆ 114 ರಾಫೇಲ್ ಯುದ್ಧ ವಿಮಾನ ಖರೀದಿ

ದೆಹಲಿ: 'ಆಪರೇಷನ್ ಸಿಂಧೂರ್' ಸೇನಾ ಕಾರ್ಯಾಚರಣೆಯಲ್ಲಿ ಫ್ರಾನ್ಸ್ ದೇಶದ ರಾಫೇಲ್ ಯುದ್ಧ ವಿಮಾನಗಳ ಸಾಮರ್ಥ್ಯವನ್ನು ಕಂಡುಕೊಂಡ ಬಳಿಕ ಭಾರತ, ಮತ್ತೆ 114 ರಾಫೇಲ್ ಯುದ್ಧ ವಿಮಾನಗಳನ್ನು ಖರೀದಿಸಲು ಮುಂ ದಾಗಿದೆ. ಫ್ರಾನ್ಸ್ ಸರಕಾರದ ಪಾಲುದಾರಿಕೆ ಮತ್ತು ಖಾಸಗಿ ಒಡೆತನದ ಡಸ್ಸಾಲ್ಟ್ ಕಂಪನಿ ನಿರ್ಮಿತ ರಾಫೇಲ್ ಯುದ್ಧ ವಿಮಾನಗಳ ಖರೀದಿ ಸಂಬಂಧ 3.25 ಲಕ್ಷ ಕೋಟಿ ಡಾಲರ್ ಮೊತ್ತದ ರಕ್ಷಣಾ ಒಪ್ಪಂದಕ್ಕೆ ಭಾರತ ಮತ್ತು ಫ್ರಾನ್ಸ್ ಸರಕಾರಗಳು ಸದ್ಯದಲ್ಲೇ ಸಹಿ ಹಾಕಲಿವೆ ಎಂದು ವರದಿಯಾಗಿದೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ನೇತೃತ್ವದ ರಕ್ಷಣಾ ವಲಯದ ಉಪಕರಣಗಳ ಖರೀದಿ ಸಮಿತಿ(ಡಿಎಸಿ) ಮಂಗಳವಾರ ಸಭೆ ನಡೆಸಿ 114 ರಾಫೇಲ್ ಯುದ್ಧ ವಿಮಾನಗಳು ಸೇರಿದಂತೆ ವಿವಿಧ ರಕ್ಷಣಾ ಸಾಮಗ್ರಿಗಳ ಖರೀದಿ ಸಂಬಂಧ ಫ್ರಾನ್ಸ್ ಜತೆ ಒಪ್ಪಂದ ಮಾಡಿಕೊಳ್ಳುವ ಬಗ್ಗೆ ಚರ್ಚೆ ನಡೆಸಿದೆ. ಮುಖ್ಯವಾಗಿ ಈ 114 ರಾಫೇಲ್ ಜೆಟ್ ಫ್ಲೈಟ್‌ಗಳಲ್ಲಿ ಶೇ.80ರಷ್ಟು ಯುದ್ಧ ವಿಮಾನಗಳನ್ನು ಭಾರತದಲ್ಲಿಯೇ ತಯಾರಿಸಬೇಕು ಎಂಬ ಬೇಡಿಕೆಯನ್ನೂ ಭಾರತ ಮುಂದಿಡಲಿದೆ. ಆ ಮೂಲಕ ಆತ್ಮನಿರ್ಭರ ಭಾರತ ಪರಿಕಲ್ಪನೆಗೆ ಒತ್ತು ನೀಡುವುದು ಕೇಂದ್ರ ಸರಕಾರದ ಆಶಯವಾಗಿದೆ.

17-19 ಮ್ಯಾಕ್ರಾನ್ ಭಾರತ ಪ್ರವಾಸ

ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯಲ್ ಮ್ಯಾಕ್ರಾನ್ ಅವರು ಇದೇ ಫೆ.17ರಿಂದ ಮೂರು ದಿನಗಳ ಕಾಲ ಭಾರತ ಪ್ರವಾಸ ಹಮ್ಮಿಕೊಳ್ಳಲಿದ್ದಾರೆ ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ

ಮಂಗಳವಾರ ತಿಳಿಸಿದೆ.ಫೆ.19ರವರೆಗಿನ ಅಧಿಕೃತ ಭೇಟಿ ವೇಳೆ ರಕ್ಷಣಾ ಕ್ಷೇತ್ರದಲ್ಲಿ ಪರಸ್ಪರ ಸಹಕಾರ, 2047ರ ಹೊಸದಿಗಂತ ಮಾರ್ಗಸೂಚಿ, ಇಂಡೊ-ಫೆಸಿಫಿಕ್ ವಲಯದಲ್ಲಿ ಸಹಕಾರ ಸೇರಿದಂತೆ ಹಲವು ವಿಚಾರಗಳ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರ ಜತೆ ದ್ವಿಪಕ್ಷೀಯ ಚರ್ಚೆ ನಡೆಸಲಿದ್ದಾರೆ.ಇದಲ್ಲದೇ, ಮ್ಯಾಕ್ರಾನ್ ಅವರು ಫೆ.19ರಂದು ದೆಹಲಿಯಲ್ಲಿ ಆಯೋಜಿತವಾಗಿರುವ 'ಎಐ ಇಂಪ್ಯಾಕ್ಟ್ ಸಮ್ಮಿಟ್'(ಕೃತಕ ಬುದ್ಧಿಮತ್ತೆ ಪರಿಣಾಮಗಳು-ಶೃಂಗಸಭೆ)ಯಲ್ಲಿ ಭಾಗಿಯಾಗಲಿದ್ದಾರೆ.ಇದಕ್ಕೂ ಮುನ್ನ ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರಾನ್ ಅವರು 2024ರ ಜ.26ರಂದು ಭಾರತ ಪ್ರವಾಸ ಕೈಗೊಂಡು ಗಣರಾಜ್ಯೋತ್ಸವ ದಿನದ ಪಥಸಂಚಲನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗಿಯಾಗಿದ್ದರು. ಆ ಬಳಿಕ ಪ್ರಧಾನಿ ಮೋದಿ ಅವರು 2025ರ ಫೆಬ್ರವರಿಯಲ್ಲಿ ಫ್ರಾನ್ಸ್‌ಗೆ ಭೇಟಿ ನೀಡಿದ್ದರು.

ಕೈ ನಾಯಕರ ವಿರುದ್ಧ ₹ 500 ಕೋಟಿ ದಾವೆ

ಗುವಾಹಟಿ: 'ಕಾಂಗ್ರೆಸ್ ನಾಯಕರು ಪತ್ರಿಕಾಗೋಷ್ಠಿ ನಡೆಸಿ ನನ್ನ ವಿರುದ್ಧ ದುರುದ್ದೇಶದಿಂದ ಆರೋಪಗಳನ್ನು ಹೊರಿಸಿ ಮಾನಹಾನಿ ಮಾಡಿದ್ದಾರೆ' ಎಂದು ಅಸ್ಸಾಂ ಮುಖ್ಯಮಂತ್ರಿ

ಹಿಮಂತ ಬಿಸ್ವಾ ಶರ್ಮಾ ಅವರು 500 ಕೋಟಿ ರು. ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ.ಫೆ.4ರಂದು ಪತ್ರಿಕಾಗೋಷ್ಠಿ ನಡೆಸಿದ ಕಾಂಗ್ರೆಸ್ ಪಕ್ಷದ ಅಸ್ಸಾಂ ಘಟಕ ಅಧ್ಯಕ್ಷ ಗೌರವ್ ಗೊಗೊಯ್, 'ಸಿಎಂ ಮತ್ತು ಅವರ ಕುಟುಂಬ ರಾಜ್ಯದ ವಿವಿಧೆಡೆ 12,000 ಬಿಘಾ ಭೂಮಿ ಒತ್ತುವರಿ ಮಾಡಿಕೊಂಡಿದೆ' ಎಂದು ಆರೋಪಿಸಿದ್ದರು.ಅದಲ್ಲದೇ, ಸೋಮವಾರ ಮತ್ತೊಮ್ಮೆ ಸುದ್ದಿಗೋಷ್ಠಿ ನಡೆಸಿದ ಗೌರವ್ ಗೊಗೊಯ್, ಸಿಎಂ ಶರ್ಮಾ ಅವರು ಬಂದೂಕು ಹಿಡಿದಿರುವ ಇತ್ತೀಚಿನ ವಿಡಿಯೋಗಳನ್ನು ಪ್ರದರ್ಶಿಸಿದ್ದರು. 'ಸಿಎಂ ಶರ್ಮಾ ಮುಸ್ಲಿಮರ ಜನಾಂಗೀಯ ಹತ್ಯೆಗೆ ಪ್ರಚೋದನೆ ನೀಡುತ್ತಿದ್ದಾರೆ' ಎಂದು ಆರೋಪಿದ್ದರು.ಈ ಆರೋಪಗಳಿಗೆ ಮಂಗಳವಾರ ಪ್ರತಿಕ್ರಿಯಿಸಿರುವ ಸಿಎಂ ಹಿಮಂತ ಶರ್ಮಾ, 'ನನ್ನ ವಿರುದ್ಧ ಸುಳ್ಳು, ದುರುದ್ದೇಶಪೂರಿತ ಮತ್ತು ಮಾನಹಾನಿಕರ ಆರೋಪಗಳನ್ನು ಮಾಡಿರುವ ಕಾಂಗ್ರೆಸ್ ನಾಯಕರಾದ ಜಿತೇಂದ್ರ ಸಿಂಗ್, ಭೂಪೇಶ್ ಬಘೇಲ್, ಗೌರವ್ ಗೊಗೊಯ್ ವಿರುದ್ಧ 500 ಕೋಟಿ ರು. ಮಾನನಷ್ಟ ಮೊಕದ್ದಮೆ ಹೂಡಿದ್ದೇನೆ' ಎಂದು 'ಎಕ್ಸ್' ಸಂದೇಶದಲ್ಲಿ ಬರೆದುಕೊಂಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಪ್ರತಿಭಾ ಕಾರಂಜಿ: ಆಳ್ವಾಸ್ ವಿದ್ಯಾರ್ಥಿಗಳು ಪ್ರಥಮ

ಮೂಡುಬಿದಿರೆ: ಕೊಪ್ಪಳ ಜಿಲ್ಲೆಯ ಕಾರಟಗಿಯಲ್ಲಿ ಫೆಬ್ರವರಿ 7 ಮತ್ತು 8 ರಂದು ನಡೆದ ರಾಜ್ಯ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಆಳ್ವಾಸ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ 10ನೇ ತರಗತಿ ವಿದ್ಯಾರ್ಥಿನಿ ಅನ್ವಿತಾ ಬಿ ಹಿಂದಿ ಭಾಷಣದಲ್ಲಿ ಪ್ರಥಮ ಸ್ಥಾನ ಮತ್ತು ಆಳ್ವಾಸ್ ಕನ್ನಡ ಮಾಧ್ಯಮ ಪ್ರೌಢಶಾಲೆಯ 10ನೇ ತರಗತಿ ವಿದ್ಯಾರ್ಥಿನಿ ಸ್ನೇಹ ಪರಪ್ಪ ಸಮಾಯಿ ಕನ್ನಡ ಆಶು ಭಾಷಣದಲ್ಲಿ ಪ್ರಥಮ ಸ್ಥಾನ ಪಡೆದುಕೊಂಡರು. ವಿದ್ಯಾರ್ಥಿಗಳ ಸಾಧನೆಯನ್ನು ಸಂಸ್ಥೆಯ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ ಅಭಿನಂದಿಸಿದ್ದಾರೆ.

ಮಾ.3ರಂದು ದರ್ಶನ ಸಮಯ ವ್ಯತ್ಯಯ

ಸುಬ್ರಹ್ಮಣ್ಯ: ಮಹತೋ ಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಮಾ.3ರಂದು ಮಂಗಳವಾರ ಚಂದ್ರಗ್ರಹಣ ಇರುವ ಹಿನ್ನೆಲೆಯಲ್ಲಿ ಶ್ರೀ ದೇವರ ದರುಶನ ಹಾಗೂ ಸೇವೆಗಳಲ್ಲಿ ವ್ಯತ್ಯಯ ಮಾಡಲಾಗಿದೆ. ಭಕ್ತರು ಸಹಕರಿಸಬೇಕಾಗಿ ಶ್ರೀ ದೇವಳದ ಆಡಳಿತ ಮಂಡಳಿ ತಿಳಿಸಿದೆ. ಮಾ.2ರ ಸೋಮವಾರ ಮತ್ತು ಮಾ.3ರ ಮಂಗಳವಾರ ಸರ್ಪಸಂಸ್ಕಾರ ಪೂಜೆ ಇರುವುದಿಲ್ಲ.ಮಾ.3ರಂದು ಯಾವುದೇ ಸೇವೆಗಳು ದೇವಳದಲ್ಲಿ ನಡೆಯುವುದಿಲ್ಲ. ಈ ದಿನ ಮಧ್ಯಾಹ್ನದ ಮಹಾಪೂಜೆ ಬೆಳಗ್ಗೆ 8 ಗಂಟೆಗೆ ನಡೆಯಲಿದೆ. ಬೆಳಗ್ಗೆ 9 ಗಂಟೆಯ ಬಳಿಕ ಶ್ರೀ ದೇವರ ದರುಶನಕ್ಕೆ ಅವಕಾಶ ಇರುವುದಿಲ್ಲ. ಬೆಳಗ್ಗಿನ ಉಪಹಾರ 9 ಗಂಟೆ ತನಕ ಮಾತ್ರ ನಡೆಯಲಿದೆ. ಮಧ್ಯಾಹ್ನ ಪ್ರಸಾದ ಬೋಜನ ವ್ಯವಸ್ಥೆ ಇರುವುದಿಲ್ಲ. ರಾತ್ರಿ 7 ಗಂಟೆ ನಂತರ ಶ್ರೀ ದೇವಳದಲ್ಲಿ ಬಾಗಿಲು ತೆರೆಯಲಾಗುವುದು.ಬಳಿಕ ಶ್ರೀ ದೇವರ ಮಹಾಪೂಜೆ ನಡೆಯಲಿದೆ.

ಹಾಸ್ಟೆಲ್ ಕಟ್ಟಡಕ್ಕೆ ಜಮೀನು ಮಂಜೂರು

ಮಂಗಳೂರು: ವಿವಿಧ ಸರ್ಕಾರಿ ಇಲಾಖೆಗಳ ಹಾಸ್ಟೆಲ್ ಕಟ್ಟಡಗಳ ನಿರ್ಮಾಣಕ್ಕೆ ಅಗತ್ಯವಿರುವ ಜಮೀನನ್ನು ವಿಳಂಬವಿಲ್ಲದೆ ತ್ವರಿತವಾಗಿ ಮಂಜೂರುಗೊಳಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಮೀರ್‌ಶುಕ್ಲಾ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಮಂಗಳವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಪ್ರಗತಿ ಪರಿಶೀಲನೆ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಇಲಾಖೆಯ ವಿದ್ಯಾರ್ಥಿ ನಿಲಯಗಳ ನಿರ್ಮಾಣದಲ್ಲಿ ಯಾವುದೇ ರೀತಿಯ ವಿಳಂಬವನ್ನು ಸಹಿಸಲಾಗದು ಎಂದು ಎಚ್ಚರಿಸಿದರು. ಇದೇ ವೇಳೆ ಜಿಲ್ಲೆಯ ಗ್ಯಾರಂಟಿ ಯೋಜನೆಗಳು ಹಾಗೂ ಜಲಜೀವನ್ ಮಿಷನ್ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಿದ ಅವರು, ಮಂಗಳೂರಿಗೆ ಮಂಜೂರಾಗಿರುವ 100 ಕೆ.ಎಸ್.ಆರ್.ಟಿ.ಸಿ ಇ-ಬಸ್ಸುಗಳ ಕಾರ್ಯಾಚರಣೆಗೆ ಚಾರ್ಜಿಂಗ್ ಸ್ಟೇಷನ್ ಸೇರಿದಂತೆ ಅಗತ್ಯ ಸೌಕರ್ಯ ಸಜ್ಜುಗೊಳಿಸುವಂತೆ ಸೂಚಿಸಿದರು. ಜಲಜೀವನ್ ಮಿಷನ್ ಅಡಿ ಜಿಲ್ಲೆಯಲ್ಲಿ ಶೇ. 84 ರಷ್ಟು ಪ್ರಗತಿಯಾಗಿದ್ದು, ಫೆಬ್ರವರಿ ಅಂತ್ಯದೊಳಗೆ ಬಾಕಿ ಕಾಮಗಾರಿ ಮುಗಿಸಿ, ರಸ್ತೆ ಅಗೆತದ ಸಮಸ್ಯೆಗಳನ್ನು ದುರಸ್ತಿಗೊಳಿಸುವಂತೆ ತಾಕೀತು ಮಾಡಿದರು.

ಆಹಾರ ವಾಹಿನಿಗೆ ಅರ್ಜಿ ಆಹ್ವಾನ

ಮಂಗಳೂರು: ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ವತಿಯಿಂದ ಪ್ರವರ್ಗ-1ರ ಸಮುದಾಯಗಳ ಆರ್ಥಿಕ ಸಬಲೀಕರಣಕ್ಕಾಗಿ ''ಆಹಾರ ವಾಹಿನಿ'' (ಫುಡ್ ಕಿಯೋಸ್ಕ್) ಯೋಜನೆಗೆ ಆನ್ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ನಾಲ್ಕು ಚಕ್ರದ ಇವಿ-ಗೂಡ್ಸ್ ವಾಹನಗಳಲ್ಲಿ ಸಂಚಾರಿ ತಿಂಡಿ ಮಳಿಗೆಗಳನ್ನು ನಡೆಸಲು 3 ಲಕ್ಷ ರೂಪಾಯಿ ಸಹಾಯಧನ ನೀಡಲಾಗುತ್ತಿದ್ದು, ಅರ್ಜಿ ಸಲ್ಲಿಸಲು ಮಾರ್ಚ್ 8 ಕೊನೆಯ ದಿನವಾಗಿದೆ. 21 ರಿಂದ 45 ವರ್ಷದೊಳಗಿನ, ವಾರ್ಷಿಕ 3 ಲಕ್ಷ ರೂಪಾಯಿಗಿಂತ ಕಡಿಮೆ ಆದಾಯವಿರುವವರು ಸೇವಾಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬಹುದು.

ಸಮಿತಿಗೆ ಯು.ಟಿ.ಖಾದರ್

ಮಂಗಳೂರು: ಸಂವಿಧಾನದ 10ನೇ ಅನುಸೂಚಿಯಡಿ ಪೀಠಾಸೀನಾಧಿಕಾರಿಗಳ ಅಧಿಕಾರಗಳನ್ನು ಪರಿಶೀಲಿಸಲು ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರು ರಚಿಸಿರುವ ಸಮಿತಿಗೆ ಧಾನಸಭೆಯ ಸ್ಪೀಕರ್‌ಯು.ಟಿ. ಖಾದರ್‌ಫರೀದ್ ಅವರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. ಉನ್ನತ ಮಟ್ಟದ ಸಮಿತಿಯ ಮೊದಲ ಸಭೆಯು ಮುಂಬೈನಲ್ಲಿ ಇತ್ತೀಚೆಗೆ ನಡೆಯಿತು.

{ಶ್ರೀ ಗಣಪತಿ ಸಚ್ಚಿದಾನಂದ ಶ್ರೀ} ದತ್ತ ಮಠದ ಪೀಠಾಧಿಪತಿ

ಹನುಮಾನ್ ಚಾಲೀಸಾ ಚಿಕ್ಕವರಿಂದ ಹಿಡಿದು ದೊಡ್ಡವರೆಲ್ಲರೂ ಹಾಡಬಹುದಾದ ಸುಲಭ, ಶಕ್ತಿಶಾಲಿ ಸ್ತೋತ್ರ. ಹನುಮಂತ ಕಷ್ಟದ ಸಮಯದಲ್ಲಿ ನಮ್ಮನ್ನು ಕಾಪಾಡುತ್ತಾನೆ. ಶ್ರೀ ಆಂಜನೇಯ ಶಿವನ ಒಂದು ಅಂಶ. ಶ್ರೀ ರಾಮನ ಪ್ರಿಯ ಭಕ್ತ. ಹನುಮಾನ್ ಚಾಲೀಸಾ ಪಾರಾಯಣ ಮಾಡುವುದು ಅತ್ಯಂತ ಫಲಪ್ರದ ಕೂಡ.

ಕಾಂಗ್ರೆಸ್ ನಿಂದ 'ನರೇಗಾ ಬಚಾವೋ ಸಂಗ್ರಾಮ್' ಪಾದಯಾತ್ರೆ | ಮಾಜಿ ಸಚಿವ ಜಯಪ್ರಕಾಶ್ ಹೆಗ್ಡೆ ಚಾಲನೆ

ಉದ್ಯೋಗ ಖಾತರಿ ಮುಗಿಸುವ ಹುನ್ನಾರ

ಮಾಜಿ ಸಚಿವ ಜಯಪ್ರಕಾಶ್ ಹೆಗ್ಡೆ ನರೇಗಾ ಬಚಾವೋ ಸಂಗ್ರಾಮ್ ಗೆ ಚಾಲನೆ ನೀಡಿ ಮಾತನಾಡಿದರು.

ಸುಳ್ಯದಿಂದ ಆರಂಭಗೊಂಡ ಕಾಂಗ್ರೆಸ್ ನ ಪಾದಯಾತ್ರೆ, ಫೆ.12ರ ತನಕ ಮೂಲ್ಕಿವರೆಗೆ ನಡೆಯಲಿದೆ.

ಸುಳ್ಯ: ಕಾಂಗ್ರೆಸ್ ಸರಕಾರ ಜಾರಿಗೆ ತಂದಿರುವ ಬಡವರಿಗೆ ವರದಾನವಾದ ಮಹಾತ್ಮಾಗಾಂಧಿ ಉದ್ಯೋಗ ಖಾತರಿ ಯೋಜನೆಗೆ ತಿದ್ದುಪಡಿ ತಂದು ಹೆಸರು ಬದಲಾವಣೆಯ ಮೂಲಕ ಯೋಜನೆಯಲ್ಲಿ ಬದಲಾವಣೆ ಮಾಡಿ ಯೋಜನೆಯನ್ನು ಮುಗಿಸುವ ಹುನ್ನಾರವನ್ನು ಕೇಂದ್ರ ಸರಕಾರ ಮಾಡುತ್ತಿದೆ ಎಂದು ಮಾಜಿ ಸಚಿವ ಜಯಪ್ರಕಾಶ್ ಹೆಗ್ಡೆ ಹೇಳಿದ್ದಾರೆ.

ಮಹಾತ್ಮಾಗಾಂಧಿ ಉದ್ಯೋಗ ಖಾತರಿ ಯೋಜನೆಗೆ ತಿದ್ದುಪಡಿ ತಂದು ಹೆಸರು ಬದಲಾವಣೆ, ಯೋಜನೆ ಬದಲಾವಣೆ ಮಾಡಿರುವುದನ್ನು ವಿರೋಧಿಸಿ ಕಾಂಗ್ರೆಸ್ ವತಿಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಮ್ಮಿಕೊಂಡಿರುವ ನರೇಗಾ ಬಚಾವೋ ಸಂಗ್ರಾಮ್ ಪಾದಯಾತ್ರೆಗೆ ಸುಳ್ಯದಲ್ಲಿ ಚಾಲನೆ ನೀಡಿ ಅವರು ಮಾತನಾಡಿದರು.

ಕೇಂದ್ರ ಅನುದಾನವನ್ನು ಕಡಿತ ಮಾಡಿ ರಾಜ್ಯ ಸರಕಾರದ ಮೇಲೆ ಹೊರೆ ಹಾಕಿ ಯೋಜನೆಯನ್ನು ಕ್ರಮೇಣ ನಿಲ್ಲಿಸುವ ಪ್ರಯತ್ನ ಮಾಡಲಾಗಿದೆ. ಇದರ ವಿರುದ್ಧ ನಾವು ಗೆಲ್ಲಿಸಿದ ಸಂಸದರು ಮಾತನಾಡದೇ ಇರುವುದು ದುರದೃಷ್ಟಕರ. ಪ್ರತಿ ವರ್ಷ ಎರಡು ಕೋಟಿ ಉದ್ಯೋಗ ನೀಡುವುದಾಗಿ ಭರವಸೆ ನೀಡಿ ಅಧಿಕಾರಕ್ಕೆ ಏರಿದ ಮೋದಿ ಸರಕಾರ 12 ವರ್ಷದಲ್ಲಿ 24 ಕೋಟಿ ಉದ್ಯೋಗ ಸೃಷ್ಟಿ ಮಾಡಬೇಕಿತ್ತು. ಆದರೆ ಉದ್ಯೋಗ ಸೃಷ್ಟಿ ಮಾಡಲಿಲ್ಲ ಎಂಬುದು ಮಾತ್ರವಲ್ಲ ಇರುವ ಉದ್ಯೋಗವನ್ನೇ ಕಿತ್ತುಕೊಳ್ಳುತ್ತಿದ್ದಾರೆ ಎಂದು ಅವರು ಆರೋಪಿಸಿದರು.

ಪ್ರಾಸ್ತಾವಿಕವಾಗಿ ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಕೆ.ಹರೀಶ್ ಕುಮಾರ್‌ಮಾತನಾಡಿ, ಗ್ರಾಮೀಣ ಭಾಗದ ಜನರಿಗೆ ಆಸರೆಯಾಗಿದ್ದ ನರೇಗಾ ಯೋಜನೆಗೆ ಮಾಡಿರುವ ತಿದ್ದುಪಡಿ ಹಿಂದಕ್ಕೆ ಪಡೆಯಬೇಕು ಎಂದು ಒತ್ತಾಯಿಸಿದರು.

ಗ್ರಾಮೀಣ ಭಾಗದ ಬಡ ಮತ್ತು ಕೂಲಿ ಕಾರ್ಮಿಕರಿಗೆ ಭದ್ರತೆ ನೀಡಬೇಕು ಎಂದು ಯುಪಿಎ ಸರಕಾರ ಯೋಜನೆ ಜಾರಿಗೆ ತಂದಿದ್ದು 100 ದಿನ ಕೆಲಸ ಅಥವಾ ಕೆಲಸ ಕೊಡಲು ಸಾಧ್ಯವಾಗದಿದ್ದರೆ, 100 ದಿನದ ಕೂಲಿ ಕೊಡುವ ಯೋಜನೆ ಇದಾಗಿದೆ. ಇದನ್ನು ಕ್ರಮೇಣ ನಿಲ್ಲಿಸುವ ಹುನ್ನಾರ ಕೇಂದ್ರ ಸರಕಾರದ್ದು. ಗ್ರಾಮ ಪಂಚಾಯಿತಿಗೂ ನರೇಗಾದಿಂದ ಹಲವು ಯೋಜನೆ ಮಾಡಲು ಸಹಾಯಕವಾಗಿತ್ತು ಎಂದು ಹೇಳಿದರು.

ಸುಳ್ಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ.ಸಿ.ಜಯರಾಮ ಸ್ವಾಗತಿಸಿದರು. ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜಾ, ಸುಳ್ಯ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಜಿ. ಕೃಷ್ಣಪ್ಪ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಆರ್.ಪದ್ಮರಾಜ ಪೂಜಾರಿ, ಟಿ.ಎಂ.ಶಹೀದ್ ತೆಕ್ಕಿಲ್, ಮಮತಾ ಗಟ್ಟಿ, ಎಂ.ಎಸ್.ಮಹಮ್ಮದ್, ಮಾಜಿ ಶಾಸಕ ಜೆ.ಆರ್.ಲೋಬೋ, ಗ್ಯಾರಂಟಿ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಭರತ್ ಮುಂಡೋಡಿ, ಅರೆಭಾಷೆ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ, ಕಾಂಗ್ರೆಸ್ ಮುಖಂಡರಾದ ಧನಂಜಯ ಅಡ್ಪಂಗಾಯ, ನಿತ್ಯಾನಂದ ಮುಂಡೋಡಿ, ರಾಧಾಕೃಷ್ಣ ಬೊಳ್ಳೂರು, ರಾಜೀವಿ ಆರ್‌ರೈ, ಗೀತಾ ಕೋಲ್ಚಾರ್,ಸರಸ್ವತಿ ಕಾಮತ್, ಶಾಲೆಟ್ ಪಿಂಟೋ, ಉಷಾ ಅಂಚನ್, ಅಪ್ಪಿ ಮಂಗಳೂರು, ಶಾಹುಲ್ ಹಮೀದ್ ಕುತ್ತಮೊಟ್ಟೆ, ಕೆ.ಎಂ.ಮುಸ್ತಫ, ಶಾಫಿ ಕುತ್ತಮೊಟ್ಟೆ, ಶುಭಾಶ್ಚಂದ್ರ ಕೋಳ್ನಾಡ್, ಸಂಶುದ್ದೀನ್ ಸಾಲ್ಮರ, ಶಶಿಧರ ಹೆಗ್ಡೆ, ವಿನಯರಾಜ್ ಎ.ಸಿ, ಕೆ. ಗೋಕುಲ್ ದಾಸ್, ಎಂ.ವೆಂಕಪ್ಪ ಗೌಡ, ಮಹಮ್ಮದ್ ಕುಂಞ್ ಗೂನಡ್ಕ, ಜಿ.ಕೆ.ಹಮೀದ್ ಮತ್ತಿತರರು ಉಪಸ್ಥಿತರಿದ್ದರು.

ಸುಳ್ಯದಿಂದ ಆರಂಭಗೊಂಡ ಪಾದಯಾತ್ರೆ ಫೆ.12ರ ತನಕ ಮೂಲ್ಕಿವರೆಗೆ ನಡೆಯಲಿದೆ. ಪಾದಯಾತ್ರೆಗೆ ಮುನ್ನ ಸುಳ್ಯ ಗಾಂಧಿನಗರದ ಗಾಂಧಿ ಪ್ರತಿಮೆಗೆ ಪ್ರಮುಖರು ಮಾಲಾರ್ಪಣೆ ಮಾಡಿದರು.

ಕ್ಯಾನ್ಸರ್‌ಬಗ್ಗೆ ಜನ ಜಾಗೃತಿ ಅಗತ್ಯ: ಶಾಸಕ ಯಶ್ಪಾಲ್



ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ನಡೆದ ಶಾಸಕ ಯಶ್ಪಾಲ್ ಸುವರ್ಣ ಅವರು ವಿಶ್ವ ಕ್ಯಾನ್ಸರ್ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿದರು.

ಉಡುಪಿ: ಕ್ಯಾನ್ಸರ್ ಮಾರಣಾಂತಿಕ ರೋಗವಾಗಿದ್ದು ರೋಗದ ಆರಂಭಿಕ ಪತ್ತೆಯಿಂದ ಅನೇಕ ಜೀವಗಳನ್ನು ಉಳಿಸಬಹುದು. ಅನಾರೋಗ್ಯಕರ ಜೀವನಶೈಲಿಯಿಂದ ಕ್ಯಾನ್ಸರ್‌ಬರುವ ಸಂಭವ ಹೆಚ್ಚು. ಆರಂಭಿಕ ಚಿಕಿತ್ಸೆ ಬಗ್ಗೆ ಜನರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಿದಾಗ ಕ್ಯಾನ್ಸರ್ ಪ್ರಮಾಣ ತಗ್ಗಿಸಬಹುದು ಎಂದು ಶಾಸಕ ಯಶ್ಪಾಲ್ ಸುವರ್ಣ ಹೇಳಿದರು.

ಜಿಲ್ಲಾ ಆರೋಗ್ಯ ಇಲಾಖೆ, ಆದರ್ಶ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಆದರ್ಶ ಗ್ರೂಪ್ ಆಫ್ ಇನ್‌ಸ್ಟಿಟ್ಯೂಟ್, ರಾಷ್ಟ್ರೀಯ ಆರೋಗ್ಯ ಅಭಿಯಾನ, ಜಿಲ್ಲಾ ಸಾಂಕ್ರಾಮಿಕ ರೋಗಗಳ ಘಟಕ , ಜಿಲ್ಲಾ ಆಸ್ಪತ್ರೆ ಎನ್ಸಿಡಿ ವಿಭಾಗ, ಭಾರತೀಯ ವೈದ್ಯಕೀಯ ಸಂಘ, ಕಾಲೇಜ್ ಆಫ್ ನರ್ಸಿಂಗ್, ಸಿಎಸ್‌ಐ ಕಾಲೇಜ್ ಆಫ್ ನರ್ಸಿಂಗ್, ನ್ಯೂ ಸಿಟಿ ಕಾಲೇಜ್ ಆಫ್ ನರ್ಸಿಂಗ್ ಇವರ ಸಹಯೋಗದಲ್ಲಿ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ನಡೆದ ವಿಶ್ವ ಕ್ಯಾನ್ಸರ್ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣ, ಪ್ರವಾಸೋದ್ಯಮ ಹಾಗೂ ಧಾರ್ಮಿಕ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಜಿಲ್ಲೆಯು ಆರೋಗ್ಯ ಸೇವೆಯಲ್ಲಿಯೂ ಇತರ ಜಿಲ್ಲೆಗಳಿಗೆ ಮಾದರಿಯಾಗಿದೆ. ಜಿಲ್ಲೆಯ ವೈದ್ಯರು ಗುಣಮಟ್ಟದ ಆರೋಗ್ಯ ಸೇವೆ ನೀಡುವ ಮೂಲಕ ವಿಶ್ವದಾದ್ಯಂತ ಹೆಸರುವಾಸಿಯಾಗಿದ್ದಾರೆ. ತಮ್ಮ ಕರ್ತವ್ಯದ ಜೊತೆಗೆ ಸಮಾಜ ಸೇವೆಯಲ್ಲಿ ನಿರತರಾಗಿರುವ ವೈದ್ಯಾಧಿಕಾರಿಗಳು ಅಸಾಂಕ್ರಾಮಿಕ ರೋಗಗಳ ಬಗ್ಗೆ ಜನಜಾಗೃತಿ ಮೂಡಿಸುವ ಕಾರ್ಯ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಜನರೂ ಕೂಡಾ ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಪೋಷಕಾಂಶಯುಕ್ತ ಆಹಾರ ಸೇವನೆ ಮತ್ತು ದಿನನಿತ್ಯ ವ್ಯಾಯಾಮ ಮಾಡುವ ಜೊತೆಗೆ ಆಗಾಗೆ ಆರೋಗ್ಯ ತಪಾಸಣೆ ಮಾಡಿಕೊಳ್ಳಬೇಕು ಎಂದರು.

ನೂತನ ಜಿಲ್ಲಾಸ್ಪತ್ರೆಯ ಕಾಮಗಾರಿಗಳು ಶೇ.70 ರಷ್ಟು ಪೂರ್ಣಗೊಂಡಿದ್ದು, ಬಾಕಿ ಕಾಮಗಾರಿ ಶೀಘ್ರ ಪೂರ್ಣಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಇದಾದನಂತರ ಜಿಲ್ಲೆಯ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ಲಭ್ಯವಾಗಲಿದೆ ಎಂದರು.

ಎಂಸಿಎಚ್ ಆಸ್ಪತ್ರೆ ಸ್ತ್ರೀ ರೋಗ ತಜ್ಞೆ ಡಾ. ಕವಿತಾ, ಕ್ಯಾನ್ಸರ್‌ತಜ್ಞ ಡಾ. ಅನಂತ ಎಸ್. ಮಠದ್ ಕ್ಯಾನ್ಸರ್ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಸರ್ಜನ್ ಡಾ. ಎಚ್. ಅಶೋಕ್, ವೈದ್ಯಾಧಿಕಾರಿ ಡಾ. ವಾಸುದೇವ್, ಡಾ. ಲತಾ ನಾಯಕ್, ಡಾ. ಜಿ.ಎಸ್. ಚಂದ್ರಶೇಖರ್, ದಿಫುಡ್ ಫಾರ್‌ದ ಹಂಗ್ರಿ ಫೌಂಡೇಶನ್ ನ ನಿಧಿ, ಐಎಂಎ ಅಧ್ಯಕ್ಷ ಡಾ. ಅಶೋಕ್ ಕುಮಾರ್, ಕಾರ್ಯದರ್ಶಿ ಡಾ. ಮಾನಸ ಈ. ಆರ್. ಉಪಸ್ಥಿತರಿದ್ದರು.

ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಸತೀಶ್ ರಾವ್ ಸ್ವಾಗತಿಸಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಚಂದ್ರಕಲಾ ನಿರೂಪಿಸಿದರು. ಶಶಿಧರ್‌ಎಚ್. ವಂದಿಸಿದರು.

ಫೆ.25ರಂದು ಮುಖ್ಯಮಂತ್ರಿ ಕಾರ್ಕಳಕ್ಕೆ

ಕಾರ್ಕಳದ ಬ್ಲಾಕ್ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಕಾಂಗ್ರೆಸ್ ಮುಖಂಡರಾದ ಉದಯ ಶೆಟ್ಟಿ ಮುನಿಯಾಲು ಮಾತನಾಡಿದರು.

ಉಡುಪಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಫೆ. 25 ರಂದು ಕಿಸಾನ್ ಸಭಾಂಗಣದ ಉದ್ಘಾಟನೆಗಾಗಿ ಕಾರ್ಕಳಕ್ಕೆ ಆಗಮಿಸಲಿದ್ದಾರೆ. ಬ್ಲಾಕ್ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಕಾಂಗ್ರೆಸ್ ಮುಖಂಡರಾದ ಉದಯ ಶೆಟ್ಟಿ ಮುನಿಯಾಲು, ಮಾಜಿ ಮುಖ್ಯಮಂತ್ರಿ ಡಾ. ಎಂ. ವೀರಪ್ಪ ಮೊಯ್ಲಿಯವರ ಮುಂದಾಳತ್ವದಲ್ಲಿ ನಿರ್ಮಾಣವಾದ ಕಿಸಾನ್ ಸಭಾದ ಸಭಾಂಗಣ ಉದ್ಘಾಟನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾರ್ಕಳಕ್ಕೆ ಆಗಮಿಸುತ್ತಿದ್ದಾರೆ. ಇದೊಂದು ಹೆಮ್ಮೆಯ ಕ್ಷಣವಾಗಿರಲಿದ್ದು, ಕಾರ್ಯಕ್ರಮವನ್ನು ಯಶಸ್ವಿಗೆ ಎಲ್ಲರೂ ಕೈಜೋಡಿಸಬೇಕೆಂದು ಮನವಿ ಮಾಡಿಕೊಂಡರು.

ಶಿಕ್ಷಣದಿಂದ ವಂಚಿತರಾಗಿದ್ದ ವಿದ್ಯಾರ್ಥಿಗಳಿಗೆಂದೇ ಅಂದು ಕಿಸಾನ್ ಸಭಾ ಶಾಲೆಯನ್ನು ಸ್ಥಾಪಿಸಲಾಗಿತ್ತು. ಅದೇ ಸಭಾಂಗಣದಲ್ಲಿ ರೈತರ ಪರ ಹೋರಾಟ, ಚಟುವಟಿಕೆ ನಡೆಯುತ್ತಿತ್ತು. ಇದೀಗ ನೂತನವಾಗಿ ಕಿಸಾನ್ ಸಭಾದ ಸಭಾಂಗಣ ನಿರ್ಮಾಣವಾಗಿದ್ದು ಮುಖ್ಯಮಂತ್ರಿ ಉದ್ಘಾಟಿಸಲಿದ್ದಾರೆ ಎಂದು ಹಿರಿಯ ಕಾಂಗ್ರೆಸ್ ನಾಯಕರಾದ ಶೇಖರ ಮಡಿವಾಳ ಹೇಳಿದರು.

ಕಾರ್ಕಳ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶುಭದ್ ರಾವ್ ಮಾತನಾಡಿ, ಜನಪರ ಯೋಜನೆಗಳ ಮೂಲಕ ಜನಮನವನ್ನು ಗೆದ್ದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕಾರ್ಕಳಕ್ಕೆ ಆಗಮಿಸುತ್ತಿರುವುದು ಅತ್ಯಂತ ಸಂತಸ ಮತ್ತು ಹೆಮ್ಮೆಯ ವಿಚಾರ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಹೆಬ್ರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋಪೀನಾಥ್ ಭಟ್, ಜಿಲ್ಲಾ ಉಪಾಧ್ಯಕ್ಷ ಸುಧಾಕರ ಕೋಟ್ಯಾನ್, ಬ್ಲಾಕ್ ಉಪಾಧ್ಯಕ್ಷ ಜಾರ್ಜ್ ಕ್ಯಾಸ್ತಲಿನೊ, ಅಬ್ದುಲ್ ಸಾಣೂರು, ಗ್ಯಾರಂಟಿ ಸಮಿತಿ ತಾಲೂಕು ಅಧ್ಯಕ್ಷ ಅಜಿತ್ ಹೆಗ್ಡೆ ಮಾಳ, ಭಾನು ಭಾಸ್ಕರ್‌ಪೂಜಾರಿ, ಮಲಿಕ್ ಅತ್ತೂರು, ಸಿರಿಯಣ್ಣ ಶೆಟ್ಟಿ, ಕೆ.ಎಂ.ಎಫ್ ನಿರ್ದೇಶಕರಾದ ಸುಧಾಕರ ಶೆಟ್ಟಿ ಮುಡಾರು, ಅನಿಲ್ ಪೂಜಾರಿ ನೆಲ್ಲಿಗುಡ್ಡೆ ಮೊದಲಾದವರು ಉಪಸ್ಥಿತರಿದ್ದರು. ಬ್ಲಾಕ್ ವಕ್ತಾರ ಪ್ರದೀಪ್ ಬೇಲಾಡಿ ಸ್ವಾಗತಿಸಿ, ಶೇಖ್ ಶಭೀರ್‌ಮಿಯ್ಯಾರು ವಂದಿಸಿದರು.

ಕಿಡ್ನಾಪ್ ಪ್ರಕರಣ: ವಿದ್ಯಾರ್ಥಿನಿ ನಾಟಕ ಬಯಲು!

ಬೆಳ್ತಂಗಡಿ: ಕಾಶಿಬೆಟ್ಟು ಗ್ರಾಮದ ಸರಕಾರಿ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿನಿಯ ಅಪಹರಣ ಯತ್ನ ಪ್ರಕರಣ ಪೊಲೀಸರ ತನಿಖೆ ಹಾಗೂ ಫಾರೆನ್ಸಿಕ್ ವರದಿಯಿಂದಾಗಿ ಸುಳ್ಳು ಎಂದು ಸಾಬೀತಾಗಿದೆ.

ಮಂಗಳೂರಿನ ಕಾಲೇಜಿಗೆ ಸೇರಬೇಕೆಂಬ ಹಠಕ್ಕೆ ಬಿದ್ದ ವಿದ್ಯಾರ್ಥಿನಿ, ಸ್ವತಃ ಬ್ಲೇಡ್ನಿಂದ ಕೈ ಕೊಯ್ದುಕೊಂಡು ಕಿಡ್ನಾಪ್ ನಾಟಕವಾಡಿರುವುದು ಬಯಲಾಗಿದೆ. ಫೆ.9ರಂದು ಕಾಶಿಬೆಟ್ಟು ಕಾಲೇಜಿಗೆ ತೆರಳುತ್ತಿದ್ದ ವೇಳೆ ಸುದೆಮುಗೇರು ಎಂಬಲ್ಲಿ ಮುಸುಕುಧಾರಿಗಳು ಕಾರಿನಲ್ಲಿ ಬಂದು ತನ್ನನ್ನು ಅಪಹರಿಸಲು ಯತ್ನಿಸಿ, ಚೂರಿಯಿಂದ ಹಲ್ಲೆ ಮಾಡಿದ್ದಾರೆ ಎಂದು ವಿದ್ಯಾರ್ಥಿನಿ ದೂರಿದ್ದಳು. ಘಟನೆ ಜಿಲ್ಲಾದ್ಯಂತ ಸಂಚಲನ ಮೂಡಿಸಿತ್ತು. ಶಾಸಕ ಹರೀಶ್ ಪೂಂಜ ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳು ಆಸ್ಪತ್ರೆಗೆ ಭೇಟಿ ನೀಡಿ ಮಾಹಿತಿ ಪಡೆದಿದ್ದರು. ಆದರೆ, ಘಟನಾ ಸ್ಥಳದ ಸಿಸಿಟಿವಿ ದೃಶ್ಯಗಳು ಲಭ್ಯವಾಗದಿದ್ದಾಗ ಪೊಲೀಸರು ಆಕೆಯನ್ನು ತೀವ್ರ ವಿಚಾರಣೆಗೊಳಪಡಿಸಿದಾಗ ಸತ್ಯ ಹೊರಬಂದಿದೆ.

ಈ ಪ್ರಕರಣದಲ್ಲಿ ಫಾರೆನ್ಸಿಕ್ ತಜ್ಞರ ವರದಿಯು ಅತ್ಯಂತ ಮಹತ್ವದ ಸಾಕ್ಷ್ಯ ಒದಗಿಸಿದೆ. ತಜ್ಞರ ವಿಶ್ಲೇಷಣೆಯ ಮುಖ್ಯಾಂಶಗಳು ಇಲ್ಲಿವೆ.

ಸ್ವಯಂ ಪ್ರೇರಿತ ಗಾಯ:

ವಿದ್ಯಾರ್ಥಿನಿಯ ಕೈ ಮೇಲಿದ್ದ ಗಾಯಗಳು ವೈಜ್ಞಾನಿಕವಾಗಿ ''ಸ್ವಯಂ ಪ್ರೇರಿತ ಗಾಯಗಳು'' ಎಂದು ದೃಢಪಟ್ಟಿವೆ. ಗಾಯದ ಆಳ ಹಾಗೂ ತುಂಡಿಗಳು ದೇಹದ ದಿಕ್ಕಿನತ್ತಲೇ ಇರುವುದು ಕಂಡುಬಂದಿದೆ. ಇದು ವ್ಯಕ್ತಿಯು ತಾನೇ ಗಾಯ ಮಾಡಿಕೊಂಡಾಗ ಮಾತ್ರ ಸಾಧ್ಯ.

ಕೈ ಮೇಲಿನ ಗಾಯಗಳು ಒಂದಕ್ಕೊಂದು ಸಮಾನಾಂತರವಾಗಿದ್ದು, ಹಲ್ಲೆ ನಡೆದಾಗ ಗಾಯಗಳು ಇಷ್ಟು ವ್ಯವಸ್ಥಿತವಾಗಿರಲು ಸಾಧ್ಯವಿಲ್ಲ.

ಬಟ್ಟೆ ಮತ್ತು ಗಾಯ :

ವಿದ್ಯಾರ್ಥಿನಿಯ ಶರ್ಟ್ ಮೇಲೆ ಕೇವಲ 3 ಕಟ್ಟಗಳಿದ್ದವು, ಆದರೆ ಕೈ ಮೇಲೆ 5 ಗಾಯಗಳಿದ್ದವು. ಇದು ಆಕೆಯೇ ಗಾಯ ಮಾಡಿಕೊಂಡ ಬಳಿಕ ಬಟ್ಟೆಯನ್ನು ಹರಿದುಕೊಂಡಿದ್ದಾಳೆ ಎಂಬುದನ್ನು ಸ್ಪಷ್ಟಪಡಿಸುತ್ತಿವೆ ಎಂದು ವಿಧಿವಿಜ್ಞಾನ ತಜ್ಞ ಮಹಾಬಲೇಶ್ ಶೆಟ್ಟಿ ತಿಳಿಸಿದ್ದಾರೆ.

ಕಾರಣವೇನು?:

ಗ್ರಾಮೀಣ ಭಾಗದ ಕಾಲೇಜು ಬಿಟ್ಟು ಮಂಗಳೂರು ನಗರದ ಕಾಲೇಜಿಗೆ ಹೋಗಲು ಪೋಷಕರು ನಿರಾಕರಿಸಿದ್ದರು ಎಂಬ ಕಾರಣಕ್ಕೆ ಈ ರೋಚಕ ಕಥೆ ಸೃಷ್ಟಿಸಿದ್ದಾಗಿ ವಿದ್ಯಾರ್ಥಿನಿ ಒಪ್ಪಿಕೊಂಡಿದ್ದಾಳೆ. ಇದಕ್ಕಾಗಿ ಆಕೆ ತನ್ನ ಮನೆಯ ಸಮೀಪವೇ ಪುಸ್ತಕಗಳನ್ನು ಸುಟ್ಟು ಹಾಕಿ, ಅಪಹರಣಕಾರರು ಬ್ಯಾಗ್ ಹೊತ್ತೊಯ್ದಿದ್ದಾರೆ ಎಂದು ಬಿಂಬಿಸಿದ್ದಳು. ಕೇವಲ ವೈಯಕ್ತಿಕ ಹಠಕ್ಕಾಗಿ ಪೊಲೀಸ್ ಇಲಾಖೆ ಹಾಗೂ ಸಾರ್ವಜನಿಕರನ್ನು ಹಾದಿ ತಪ್ಪಿಸಿದ ಈ ಪ್ರಕರಣ ಜಿಲ್ಲೆಯಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಹೆತ್ತವರೇ ಮಕ್ಕಳಿಗೆ ಆದರ್ಶರಾಗಲಿ: ಶ್ರೀಗಳು

ಕಾರ್ಕಳದ ನೆಕ್ಲಾಜೆ ಶ್ರೀ ಕಾಳಿಕಾಂಬ ದೇವಸ್ಥಾನದಲ್ಲಿ ನಡೆದ ಚಿನ್ನ ಬೆಳ್ಳಿ ಕೆಲಸಗಾರರ ಸಂಘದ ರಜತ ಸಂಭ್ರಮ– ಸಾಮೂಹಿಕ ಬ್ರಹ್ಮೋಪದೇಶದ ಧಾರ್ಮಿಕ ಸಭೆಯನ್ನು ಕಾಳಹಸ್ತೇಂದ್ರ ಶ್ರೀ ಸರಸ್ವತೀ ಸ್ವಾಮೀಜಿ ಉದ್ಘಾಟಿಸಿದರು.

ಉಡುಪಿ: ಮಕ್ಕಳಿಗೆ ಇನ್ನೊಬ್ಬರ ಆದರ್ಶದ ಬಗ್ಗೆ ತಿಳಿಸುವ ಬದಲು ಹೆತ್ತವರೇ ಆದರ್ಶಯುತ ಜೀವನ ನಡೆಸಬೇಕು. ಮಕ್ಕಳು ಮೊದಲು ಮನೆ ಮಂದಿಯನ್ನೇ ಅನುಸರಿಸುತ್ತಾರೆ ಎಂದು ಕಟಪಾಡಿ ಪಡುಕುತ್ಯಾರು ಆನೆಗುಂದಿ ಮಹಾಸಂಸ್ಥಾನ ಸರಸ್ವತೀ ಪೀಠದ ಶ್ರೀ ಅನಂತ ಶ್ರೀವಿಭೂಷಿತ ಕಾಳಹಸ್ತೇಂದ್ರ ಸರಸ್ವತೀ ಮಹಾಸ್ವಾಮೀಜಿ ಹೇಳಿದರು.

ಕಾರ್ಕಳ ನೆಕ್ಲಾಜೆ ಶ್ರೀ ಕಾಳಿಕಾಂಬ ದೇವಸ್ಥಾನದಲ್ಲಿ ಕಾರ್ಕಳ ತಾಲೂಕು ಚಿನ್ನ ಬೆಳ್ಳಿ ಕೆಲಸಗಾರರ ಸಂಘದ ರಜತ ಸಂಭ್ರಮ ಹಾಗೂ ಸಾಮೂಹಿಕ ಬ್ರಹ್ಮೋಪದೇಶ ಪ್ರಯುಕ್ತ ಜರುಗಿದ ಧಾರ್ಮಿಕ ಸಭೆ ಉದ್ದೇಶಿಸಿ ಅವರು ಆಶೀರ್ವಚನ ನೀಡಿದರು.

ಹೆತ್ತವರು ಹುಟ್ಟಿದ ಮಗನಿಗೆ ಉಪನಯನ ಮಾಡುವ ಜವಾಬ್ದಾರಿ ಮರೆಯಬಾರದು. ಸಾಮೂಹಿಕ ಆಚರಣೆಯಿಂದ ಸುಲಭವಾಗಿ ದೇವರ ಅನುಗ್ರಹ ಪ್ರಾಪ್ತಿಯಾಗಲಿದೆ ಎಂದರು.

ಚಿನ್ನ ಬೆಳ್ಳಿ ಕೆಲಸಗಾರರು ವೃತ್ತಿಯಲ್ಲಿ ಆಧುನೀಕತೆ ಬಳಸಿಕೊಂಡಾಗ ಯಶಸ್ಸು ಸಾಧಿಸಲು ಅನುಕೂಲ. ಸಮಾಜದಲ್ಲಿ ನಮ್ಮನ್ನು ಹೊಗಳುವವರು, ಪ್ರೀತಿಸುವವರು, ಆತ್ಮೀಯತೆಯಿಂದ ನೊಡಿಕೊಳ್ಳುವವರಿಂದ ನಾವು ಸುಖವಾಗಿ ಇರಬಹುದು. ಆದರೆ, ಟೀಕಿಸುವವರು ಮಾತ್ರ ನಮ್ಮನ್ನು ಬೆಳೆಸುತ್ತಾರೆ ಎಂದರು.

ರಾಜಕೀಯವಾಗಿ ನಾವು ಯಾವುದೇ ಪಕ್ಷದ ಬ್ರ್ಯಾಂಡ್ ಆಗಬಾರದು. ಹಾಗೆ ಆದಲ್ಲಿ ಅವರು ನಮ್ಮನ್ನು ನಿರ್ಲಕ್ಷ್ಯ ಮಾಡುತ್ತಾರೆ. ಯಾವುದೇ ಪಕ್ಷಕ್ಕೆ ಸೀಮಿತವಾಗಿರದೇ ಸಹಕಾರ ನೀಡುವ ಪಕ್ಷದೊಂದಿಗೆ ನಾವು ತೊಡಗಿಸಿಕೊಳ್ಳಬೇಕು ಎಂದು ಸ್ವಾಮೀಜಿ ಹೇಳಿದರು.

ಚಿನ್ನ ಬೆಳ್ಳಿ ಕೆಲಸಗಾರರ ಸಂಘದ ಅಧ್ಯಕ್ಷ ಎಂ. ರಮೇಶ್ ಆಚಾರ್ಯ ಅಧ್ಯಕ್ಷತೆ ವಹಿಸಿದ್ದರು. ವಿಶ್ವಕರ್ಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಸುಜ್ಞಾನಮೂರ್ತಿ ಪಿ., ಕೋಟೇಶ್ವರ ರಥಶಿಲ್ಪಿ ರಾಜಗೋಪಾಲ ಆಚಾರ್ಯ, ಶ್ರೀ ಕಾಳಿಕಾಂಬಾ ದೇವಸ್ಥಾನದ ಆಡಳಿತ ಮೊಕ್ತೇಸರರಾದ ಶಿಲ್ಪಿ ರಾಮಚಂದ್ರ ಆಚಾರ್ಯ, ವಿಶ್ವಕರ್ಮ ಸಹಕಾರ ಬ್ಯಾಂಕ್ನ ಅಧ್ಯಕ್ಷ ಡಾ. ಎಸ್.ಆರ್. ಹರೀಶ್ ಆಚಾರ್ಯ,ಉಡುಪಿ ಜಿಲ್ಲಾ ಚಿನ್ನ ಬೆಳ್ಳಿ ಸಂಘದ ಅಧ್ಯಕ್ಷ ರವಿಚಂದ್ರ ಆಚಾರ್ಯ ಮಾರಾಳಿ, ಪೆರ್ವಾಜೆ ವಿ.ಬಿ.ಎಸ್. ಸಭಾ ಕಾರ್ಕಳ ಇದರ ಅಧ್ಯಕ್ಷ ಬಿ. ಪ್ರಕಾಶ್ ಆಚಾರ್ಯ,ಮುಂಬೈ ಉದ್ಯಮಿ ಶೇಖರ ಆಚಾರ್ಯ,ಕಾರ್ಕಳ ಉಷಾ ಜ್ಯುವೆಲ್ಲರ್ಸ್ನ ಮಾಲಕ ಅಮಿತ್, ದ.ಕ. ಜಿಲ್ಲಾ ಚಿನ್ನ ಬೆಳ್ಳಿ ಕೆಲಸಗಾರರ ಸಂಘದ ಅಧ್ಯಕ್ಷ ಕೆ. ಎಲ್. ಹರೀಶ್, ನೆಕ್ಲಾಜೆ ಶ್ರೀ ಕಾಳಿಕಾಂಬಾ ದೇವಸ್ಥಾನದ ಜೊತೆ ಮೊಕ್ತೇಸರರಾದ ಪಿ. ರವಿ ಆಚಾರ್ಯ ಪೆರ್ವಾಜೆ, ಸುರೇಶ್ ಆಚಾರ್ಯ ನಿಟ್ಟೆ, ಕುಂದಾಪುರ ಚಿನ್ನ ಬೆಳ್ಳಿ ಕೆಲಸಗಾರರ ಸಂಘದ ಅಧ್ಯಕ್ಷ ಬಿ. ಕುಶ ಕುಮಾರ್ ,ಕಾರ್ಕಳ ಕರ್ನಾಟಕ ಜ್ಯುವೆಲ್ಲರ್ಸ್ನ ಮಾಲಕರು ಹರ್ಷವರ್ಧನ ಆಚಾರ್ಯ,ಚಿನ್ನ ಬೆಳ್ಳಿ ಕೆಲಸಗಾರರ ಹಿತರಕ್ಷಣಾ ವೇದಿಕೆ ಅಧ್ಯಕ್ಷ ನವೀನ್ ಆಚಾರ್ಯ,ಕೆ. ಕರುಣಾಕರ ಆಚಾರ್ಯ ಸಾಲ್ಮರ, ಕಾರ್ಕಳ ಸಂಘದ ಗೌರವಾಧ್ಯಕ್ಷ ಕೆ. ಕಿಶೋರ್‌ಆಚಾರ್ಯ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಗೌರವ ಸಲಹೆಗಾರರಾದ ಕೆ. ಸುಧಾಕರ ಆಚಾರ್ಯ ಸ್ವಾಗತಿಸಿದರು, ಕೆ. ರತ್ನಾಕರ ಆಚಾರ್ಯ ಕಟ್ಟಿಮಾರ್ ಪ್ರಾಸ್ತಾವಿಕ, ಗೀತಾ ಚಂದ್ರ ಆಚಾರ್ಯ ಮತ್ತು ಗಣೇಶ್ ಜಾಲ್ಸೂರು ಕಾರ್ಯಕ್ರಮ ನಿರೂಪಿಸಿದರು. ಕಾರ್ಯದರ್ಶಿ ಸಂತೋಷ್ ಆಚಾರ್ಯ ವಂದಿಸಿದರು.

ಶಾಲಾ ಆವರಣದಲ್ಲಿ ಮಕ್ಕಳ ಸುರಕ್ಷತೆ ಕಡ್ಡಾಯ

ಮಂಗಳೂರು: ಶೈಕ್ಷಣಿಕ ಸಂಸ್ಥೆಗಳು ಕೇವಲ ಪಾಠ ಪ್ರವಚನಗಳಿಗೆ ಸೀಮಿತವಾಗದೆ, ಮಕ್ಕಳಿಗೆ ಸುರಕ್ಷಿತ ಮತ್ತು ಭಯಮುಕ್ತ ವಾತಾವರಣ ಕಲ್ಪಿಸುವುದು ಶಿಕ್ಷಕರ ಆದ್ಯ ಕರ್ತವ್ಯವಾಗಬೇಕು ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಕೆ.ಟಿ ತಿಪ್ಪೇಸ್ವಾಮಿ ತಿಳಿಸಿದರು. ಜಿಪಂ ಕಚೇರಿಯಲ್ಲಿ ನಡೆದ ಮಕ್ಕಳ ರಕ್ಷಣಾ ನೀತಿ ಕುರಿತ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು. ಶಾಲಾ ಅವಧಿಯ ಎಂಟು ಗಂಟೆಗಳ ಕಾಲ ಮಕ್ಕಳನ್ನು ಕಾನೂನಾತ್ಮಕ ಪೋಷಕರಾಗಿ ನೋಡಿಕೊಳ್ಳುವ ಜವಾಬ್ದಾರಿ ಶಿಕ್ಷಕರ ಮೇಲಿದೆ. ಮಕ್ಕಳ ಮೇಲೆ ನಡೆಯುವ ದೈಹಿಕ ದಂಡನೆ, ಮಾನಸಿಕ ಅಥವಾ ಲೈಂಗಿಕ ಕಿರುಕುಳದಂತಹ ಸಮಸ್ಯೆಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಶಾಲೆಗಳಲ್ಲಿ ಭಯಮುಕ್ತ ವಾತಾವರಣ ಇರಬೇಕು. ರಾಜ್ಯದಲ್ಲಿ ಹತ್ತು ವರ್ಷ ಕಳೆದರೂ ಮಕ್ಕಳ ರಕ್ಷಣಾ ನೀತಿ ಸಂಪೂರ್ಣ ಅನುಷ್ಠಾನಗೊಂಡಿಲ್ಲದ ಕಾರಣ, ಪ್ರತಿ ಶೈಕ್ಷಣಿಕ ಸಂಸ್ಥೆಯೂ ಕಡ್ಡಾಯವಾಗಿ ಮಕ್ಕಳ ಕಲ್ಯಾಣ ಸಮಿತಿಯನ್ನು ರಚಿಸಬೇಕು ಎಂದು ಅವರು ಪ್ರತಿಪಾದಿಸಿದರು. ಕೇವಲ ಅಂಕಗಳ ಮಾಪನದಲ್ಲಿ ಮಕ್ಕಳನ್ನು ಅಳೆಯದೆ ಅವರಿಗೆ ಮಾನವೀಯ ಮೌಲ್ಯಗಳನ್ನು ಬೋಧಿಸಬೇಕು ಎಂದು ಸಭೆಯಲ್ಲಿ ಚರ್ಚಿಸಲಾಯಿತು. ಜಿಲ್ಲೆಯು ಮಕ್ಕಳ ಸುರಕ್ಷತೆಯಲ್ಲಿ ಇಡೀ ರಾಜ್ಯಕ್ಕೆ ಮಾದರಿಯಾಗಬೇಕು ಎಂದು ಆಶಿಸಿದ ತಿಪ್ಪೇಸ್ವಾಮಿ ಅವರು, ಶಾಲಾ ಆವರಣದಲ್ಲಿ ನಡೆಯುವ ಅವಘಡಗಳನ್ನು ತಡೆಗಟ್ಟಲು ಹೆಚ್ಚಿನ ಭದ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚಿಸಿದರು. ಕಾರ್ಯಕ್ರಮದಲ್ಲಿ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಡಾ. ಅಕ್ಷತಾ ಆದರ್ಶ್ ಮಾತನಾಡಿ, ಶೋಷಣೆಯಿಂದಾಗಿ ಮಕ್ಕಳಲ್ಲಿ ಶಾಲೆಗಳ ಬಗ್ಗೆ ಮೂಡುತ್ತಿರುವ ಭೀತಿಯನ್ನು ಹೋಗಲಾಡಿಸಲು ಮಕ್ಕಳ ರಕ್ಷಣಾ ನೀತಿಯ ಅರಿವು ಪ್ರತಿಯೊಂದು ಶಾಲೆಯಲ್ಲೂ ಇರಬೇಕು ಎಂದು ಕಿವಿಮಾತು ಹೇಳಿದರು.

ಕಡ್ತಲ ಗ್ರಾಪಂನಲ್ಲಿ ಅಹವಾಲು ಸ್ವೀಕಾರ

ಉಡುಪಿ: ಕಡ್ತಲ ಗ್ರಾಮ ಪಂಚಾಯಿತಿ ಸಭಾಂಗಣದಲ್ಲಿ ಫೆ. 10ರಂದು ಸಾರ್ವಜನಿಕ ಕುಂದು ಕೊರತೆ ಹಾಗೂ ಅಹವಾಲು ಸ್ವೀಕಾರ ಮತ್ತು ಫಲಾನುಭವಿಗಳಿಗೆ ಸವಲತ್ತು ವಿತರಣಾ ಕಾರ್ಯಕ್ರಮ ಶಾಸಕ ವಿ. ಸುನಿಲ್ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕಾರ್ಕಳ ತಹಶೀಲ್ದಾರ್‌ಪ್ರದೀಪ್ ಆರ್., ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಪ್ರಶಾಂತ್ ಎಂ.ವಿ., ತಾಲೂಕು ಕಚೇರಿಯ ತಹಸೀಲ್ದಾರ್‌ಪ್ರದೀಪ್ ಆರ್., ವಿವಿಧ ಇಲಾಖೆಯ ತಾಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

ತೋಟಗಾರಿಕಾ ಇಲಾಖೆಯಿಂದ ಮಂಜೂರಾದ ಸವಲತ್ತನ್ನು ಫಲಾನುಭವಿಗಳಿಗೆ ಶಾಸಕರು ವಿತರಣೆ ಮಾಡಿದರು. ಗ್ರಾಮ ಪಂಚಾಯಿತಿಯ ಶೇಕಡಾ 25 ರ ನಿಧಿಯಲ್ಲಿ ಪ.ಜಾತಿ / ಪಂಗಡದ ಫಲಾನುಭವಿಗಳಿಗೆ ಸಹಾಯಧನವನ್ನು ವಿತರಿಸಲಾಯಿತು. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸುರೇಖಾ ಸ್ವಾಗತಿಸಿ, ಗ್ರಾಮ ಆಡಳಿತ ಅಧಿಕಾರಿ ಪ್ರಶಾಂತ್ ವಂದಿಸಿದರು. ಸದಸ್ಯರಾದ ಸತೀಶ್ ಪೂಜಾರಿ ನಿರೂಪಣೆ ಮಾಡಿದರು.

ಮೀನುಗಾರರ ಸಂಘದಿಂದ ರಾಜೇಂದ್ರಕುಮಾರ್‌ಗೆ ಸನ್ಮಾನ

ಮಂಗಳೂರು: ಸಮುದ್ರದ ಅಪಾಯಗಳು ಹೆಚ್ಚುತ್ತಿರುವ ಈ ಕಾಲದಲ್ಲಿ ತುರ್ತು ರಕ್ಷಣಾ ವ್ಯವಸ್ಥೆಯ ಅಗತ್ಯತೆಯನ್ನು ಮನಗಂಡು ಉಳ್ಳಾಲ ವಲಯ ನಾಡ ದೋಣಿ ಮೀನುಗಾರರ ಸಂಘ ಬೋಟ್ ಆಂಬ್ಯುಲನ್ಸ್ ಅನ್ನು ಸುಮಾರು ರೂ.16 ಲಕ್ಷ ವೆಚ್ಚದಲ್ಲಿ ನಿರ್ಮಿಸಿ, ಈಚೆಗೆ ಲೋಕಾರ್ಪಣೆ ಮಾಡಿದೆ. ಇದರ ಪ್ರಯುಕ್ತ ಎಸ್ಸಿಡಿಸಿಸಿ ಬ್ಯಾಂಕ್ ಹಾಗೂ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಅಧ್ಯಕ್ಷರಾದ ಸಹಕಾರ ರತ್ನ ಡಾ.. ಎಂ.ಎನ್.ರಾಜೇಂದ್ರ ಕುಮಾರ್‌ಅವರನ್ನು ಮಂಗಳವಾರ ಎಸ್ಸಿಡಿಸಿಸಿ ಬ್ಯಾಂಕ್ ನಲ್ಲಿ ಸಂಘದ ಪದಾಧಿಕಾರಿಗಳು ಅಭಿನಂದಿಸಿದರು. ಉಳ್ಳಾಲ ವಲಯ ನಾಡ ದೋಣಿ ಮೀನುಗಾರರ ಸಂಘಕ್ಕೆ ಎಂ.ಎನ್.ರಾಜೇಂದ್ರ ಕುಮಾರ್‌ಅವರು ನೀಡಿದ ಸಹಕಾರ ಹಾಗೂ ಸಂಘದ ಸದಸ್ಯರಿಗೆ ಈ ಹಿಂದೆ ನೀಡಿದ ಸಾಲ ಸೌಲಭ್ಯದ ಸಹಕಾರವನ್ನು ಸಂಘದ ಅಧ್ಯಕ್ಷರಾದ ಹನೀಫ್ ಸೋಲಾರ್‌ಈ ಸಂದರ್ಭದಲ್ಲಿ ಸ್ಮರಿಸಿ ಅವರನ್ನು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಂಘದ ಸಲಹೆಗಾರ ಇಸ್ಮಾಯಿಲ್ ಕೋಡಿ ಸದಸ್ಯ ಮೊಹಮ್ಮದ್ ಉಪಸ್ಥಿತರಿದ್ದರು.

ದೆಹಲಿ: ಚಂದ್ರಯಾನ-4 ಮಿಷನ್‌ಗಾಗಿ ಚಂದ್ರನ ದಕ್ಷಿಣ ಧ್ರುವದ ಬಳಿ ಲ್ಯಾಂಡಿಂಗ್ ಸ್ಥಳವನ್ನು ಇಸ್ರೋ ಗುರುತಿಸಿದೆ. ಚಂದ್ರಯಾನ-2 ಆರ್ಬಿಟರ್‌ನಿಂದ ಬಂದ ಚಿತ್ರಗಳ ಆಧಾರದ ಮೇಲೆ, ವಿಜ್ಞಾನಿಗಳು ಮಾನ್ಸ್ ಮೌಂಟನ್ (ಎಂಎಂ-4) ಪ್ರದೇಶವನ್ನು ಅತ್ಯಂತ ಸೂಕ್ತವಾದ ಲ್ಯಾಂಡಿಂಗ್ ತಾಣವೆಂದು ಗುರುತಿಸಿದ್ದಾರೆ. ಮಾನ್ಸ್ ಮೌಂಟನ್ ಚಂದ್ರನ ದಕ್ಷಿಣ ಧ್ರುವದ ಬಳಿ ಇರುವ ಸುಮಾರು 6,000 ಮೀಟರ್ ಎತ್ತರದ ಪರ್ವತವಾಗಿದೆ. ಇದರ ಶಿಖರವು ಹೆಚ್ಚಾಗಿ ಸಮತಟ್ಟಾಗಿದ್ದು, ಇಳಿಯಲು ಸೂಕ್ತವಾಗಿದೆ. ಆದರೆ, ಇಳಿಯುವ ಸ್ಥಳದ ಕುರಿತು ಅಂತಿಮ ನಿರ್ಧಾರವನ್ನು ಲಾಂಚಿಂಗ್‌ನ ಸಮೀಪದಲ್ಲಿ ತೆಗೆದುಕೊಳ್ಳಲಾಗುತ್ತದೆ. ವಿಜ್ಞಾನಿಗಳ ಪ್ರಕಾರ, ಈ ಪ್ರದೇಶವು ದೀರ್ಘಕಾಲದವರೆಗೆ ಸೂರ್ಯನ ಬೆಳಕನ್ನು ಪಡೆಯುವುದರಿಂದ ಇದು ಮುಖ್ಯವಾಗಿದೆ. ಇದಲ್ಲದೆ, ಈ ಪ್ರದೇಶದಲ್ಲಿ ನೀರಿನ ಮಂಜುಗಡ್ಡೆ ಇರಬಹುದು ಎಂದು ನಂಬಲಾಗಿದೆ.

ಚಂದ್ರಯಾನ-2ರ ಚಿತ್ರಗಳಿಂದ ಸಹಾಯ: ಚಂದ್ರಯಾನ-2 ಆರ್ಬಿಟರ್‌ನಲ್ಲಿರುವ ಹೈ ರೆಸಲ್ಯೂಷನ್ ಕ್ಯಾಮೆರಾದ ಚಿತ್ರಗಳನ್ನು ಪರಿಗಣಿಸಿ ಲ್ಯಾಂಡಿಂಗ್ ಸೈಟ್ ಅನ್ನು ನಿರ್ಧರಿಸಲು ಬಳಸಲಾಯಿತು. ಈ ಕ್ಯಾಮೆರಾ ಚಂದ್ರನ ಮೇಲ್ಮೈಯನ್ನು ಪ್ರತಿ ಪಿಕ್ಸೆಲ್‌ಗೆ ಸರಿಸುಮಾರು 32 ಸೆಂಟಿಮೀಟರ್‌ಗಳ ರೆಸಲ್ಯೂಶನ್‌ನಲ್ಲಿ ಚಿತ್ರಿಸುತ್ತದೆ, ಇದು ಸಣ್ಣ ಕುಳಿಗಳು, ಬಂಡೆಗಳು, ಇಳಿಜಾರುಗಳು ಮತ್ತು ಮೇಲ್ಮೈ ವಿನ್ಯಾಸಗಳ ಸ್ಪಷ್ಟ ಗೋಚರತೆಯನ್ನು ತಿಳಿಸುತ್ತದೆ. ಇಳಿಯಲು ಅಪಾಯಕಾರಿ ಪ್ರದೇಶಗಳನ್ನು ಮುಂಚಿತವಾಗಿ ಗುರುತಿಸಲು ಅನುವು ಮಾಡಿಕೊಡುತ್ತದೆ. ಎಂಎಂ-4 ತಾಣವನ್ನು ಅತ್ಯಂತ ಸುರಕ್ಷಿತವೆಂದು ಪರಿಗಣಿಸಲಾಗಿದ್ದು ಈ ಸ್ಥಳದಲ್ಲಿ ಸರಾಸರಿ ಇಳಿಜಾರು ಸುಮಾರು 5 ಡಿಗ್ರಿಗಳಷ್ಟಿದ್ದರೆ, ಲ್ಯಾಂಡರ್ 10 ಡಿಗ್ರಿಗಳ ವರೆಗಿನ ಇಳಿಜಾರುಗಳಲ್ಲಿ ಇಳಿಯುವ ಸಾಮರ್ಥ್ಯವನ್ನು ಹೊಂದಿದೆ. ದೊಡ್ಡ ಬಂಡೆಗಳು ಅಪರೂಪ, ಹೆಚ್ಚಿನ ಬಂಡೆಗಳು 0.3 ಮೀಟರ್‌ಗಿಂತ ಚಿಕ್ಕದಾಗಿರುವುದರಿಂದ ಲ್ಯಾಂಡಿಂಗ್ ಅಪಾಯವನ್ನು ಕಡಿಮೆ ಮಾಡುತ್ತದೆ.

ಈ ತಾಣವು ಸತತ 11 ರಿಂದ 12 ದಿನಗಳವರೆಗೆ ಸೂರ್ಯನ ಬೆಳಕನ್ನು ಪಡೆಯುವ ನಿರೀಕ್ಷೆಯಿದೆ. ಇಲ್ಲಿಂದ ಭೂಮಿಯ ರೇಡಿಯೋ ಸಂವಹನವು ಸ್ಪಷ್ಟವಾಗಿಯೇ ಉಳಿದಿದೆ. ಇದರಿಂದ ಕಾರ್ಯಾಚರಣೆಯ ಸಮಯದಲ್ಲಿ ಸಂವಹನದಲ್ಲಿ ಯಾವುದೇ ಪ್ರಮುಖ ಸಮಸ್ಯೆ ಇಲ್ಲ ಎನ್ನಲಾಗಿದೆ.

ಸವಾಲಿನ ಯೋಜನೆ: ಸ್ಟ್ಯಾಕ್ 1 ಚಂದ್ರನ ಮಾದರಿ ಸಂಗ್ರಹಕ್ಕಾಗಿ ಅಸೆಂಡರ್ ಮಾಡ್ಯೂಲ್ ಮತ್ತು ಮೇಲ್ಮೈಯಲ್ಲಿ ಚಂದ್ರನ ಮಾದರಿ ಸಂಗ್ರಹಕ್ಕಾಗಿ ಡಿಸೆಂಡರ್ ಮಾಡ್ಯೂಲ್ ಅನ್ನು ಒಳಗೊಂಡಿದೆ. ಸ್ಟ್ಯಾಕ್ 2 ಥ್ರಸ್ಟ್‌ಗಾಗಿ ಪ್ರೊಪಲ್ಷನ್ ಮಾಡ್ಯೂಲ್, ಮಾದರಿ ಹಿಡಿದಿಡಲು ವರ್ಗಾವಣೆ ಮಾಡ್ಯೂಲ್ ಮತ್ತು ಮಾದರಿಗಳನ್ನು ಭೂಮಿಗೆ ಹಿಂದಿರುಗಿಸಲು ಮರು-ಪ್ರವೇಶ ಮಾಡ್ಯೂಲ್ ಅನ್ನು ಒಳಗೊಂಡಿದೆ. ಚಂದ್ರಯಾನ-4 ಅನ್ನು ಇಲ್ಲಿಯವರೆಗಿನ ಇಸ್ರೋದ ಚಂದ್ರಯಾನ ಕಾರ್ಯಾಚರಣೆಗಳಲ್ಲಿ ಅತ್ಯಂತ ಸವಾಲಿನ ಮತ್ತು ಕ್ಲಿಷ್ಟ ಬಾಹ್ಯಾಕಾಶ ಕಾರ್ಯಾಚರಣೆ ಎಂದು ಪರಿಗಣಿಸಲಾಗಿದೆ.

₹ 2104 ಕೋಟಿ ವೆಚ್ಚದ ಯೋಜನೆ

₹2,104 ಕೋಟಿ ವೆಚ್ಚದ ಈ ಕಾರ್ಯಾಚರಣೆಯು ಚಂದ್ರನ ಶಿಲೆಗಳು ಮತ್ತು ಮಣ್ಣನ್ನು ಭೂಮಿಗೆ ಮರಳಿ ತರಲಿದೆ. ಈ ಕಾರ್ಯಾಚರಣೆಯು ಎರಡು ವಿಭಿನ್ನ ರಾಕೆಟ್‌ಗಳನ್ನು ಬಳಸುತ್ತದೆ. ಹೆವಿಲಿಫ್ಟರ್ ಎಲ್‌ವಿಎಂ-3 ಮತ್ತು ಇಸ್ರೋದ ವಿಶ್ವಾಸಾರ್ಹ ಲಾಂಚರ್ ಪಿಎಸ್‌ಎಲ್‌ವಿ ವಿಭಿನ್ನ ಪೇಲೋಡ್‌ಗಳನ್ನು ಹೊತ್ತೊಯ್ಯುತ್ತದೆ.

ದೆಹಲಿ: ಮಾನವ ನಾಗರಿಕತೆಯನ್ನು ಭೂಮಿ ಆಚೆ ಕೊಂಡೊಯ್ಯುವ ಮಹತ್ವಾಕಾಂಕ್ಷೆಯೊಂದಿಗೆ, ಚಂದ್ರನ ಮೇಲೆ ನಗರವನ್ನು ನಿರ್ಮಿಸಲು ಸ್ಪೇಸ್‌ಎಕ್ಸ್ ಸಂಸ್ಥೆ ಗಂಭೀರವಾಗಿ ಕೆಲಸ ಮಾಡುತ್ತಿದೆ ಎಂದು ಸಿಇಒ ಎಲಾನ್ ಮಸ್ಕ್ ಹೇಳಿದ್ದಾರೆ. ಮಂಗಳ ಗ್ರಹಕ್ಕೆ ಹೋಲಿಸಿದರೆ, ಚಂದ್ರನಲ್ಲಿ ಈ ಯೋಜನೆಯನ್ನು ಕಡಿಮೆ ಸಮಯದಲ್ಲಿ ಸಾಧಿಸಬಹುದು ಎಂಬ ಕಾರಣದಿಂದಲೇ ಚಂದ್ರನಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಎಲಾನ್ ಮಸ್ಕ್, ಸ್ಪೇಸ್‌ಎಕ್ಸ್ ಈಗಾಗಲೇ ಚಂದ್ರನ ಮೇಲೆ ನಗರ ನಿರ್ಮಾಣದತ್ತ ಗಮನ ಹರಿಸಿದೆ. ಈ ಗುರಿಯನ್ನು ನಾವು 10 ವರ್ಷಗಳೊಳಗೆ ಸಾಧಿಸಬಹುದು. ಆದರೆ ಮಂಗಳ ಗ್ರಹದಲ್ಲಿ ಈ ನಗರ ನಿರ್ಮಾಣಕ್ಕೆ 20 ವರ್ಷಕ್ಕಿಂತ ಹೆಚ್ಚು ಸಮಯ ಬೇಕಾಗುತ್ತದೆ ಎಂದು ತಿಳಿಸಿದ್ದಾರೆ.

- **ವಿಶ್ವವಿಖ್ಯಾತ ಉದ್ಯಮಿ, ಸ್ಪೇಸ್‌ಎಕ್ಸ್ ಮಾಲೀಕ ಎಲಾನ್ ಮಸ್ಕ್ ಕನಸಿನ ಯೋಜನೆ**
- **ಚಂದ್ರನ ಜೊತೆಜೊತೆಗೇ ಮಂಗಳನಲ್ಲೂ ನಗರ ನಿರ್ಮಿಸಲು ಮಸ್ಕ್‌ರಿಂದ ಸತತ ಶ್ರಮ!**

2027ರಲ್ಲಿ ಮಾನವರಹಿತ ಲ್ಯಾಂಡಿಂಗ್

ಸ್ಪೇಸ್‌ಎಕ್ಸ್ 2027ರ ಮಾರ್ಚ್ ವೇಳೆಗೆ ಯಾವುದೇ ಸಿಬ್ಬಂದಿ ಇಲ್ಲದೇ ಚಂದ್ರನ ಮೇಲೆ ಲ್ಯಾಂಡಿಂಗ್ ನಡೆಸುವ ಗುರಿಯನ್ನು ಹೊಂದಿದೆ. ಇದು ಮುಂದಿನ ಮಾನವ ಚಂದ್ರಯಾನಕ್ಕೆ ಮಹತ್ವದ ತಯಾರಿ ಹಂತವಾಗಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಗಗನಯಾತ್ರಿಗಳನ್ನು ಮತ್ತೆ ಚಂದ್ರನಿಗೆ ಕಳುಹಿಸುವ ಯತ್ನದಲ್ಲಿ ಅಮೆರಿಕ ಇದೀಗ ಚೀನಾದಿಂದ ಗಂಭೀರ ಸವಾಲನ್ನು ಎದುರಿಸುತ್ತಿದೆ. 1972ರಲ್ಲಿ ಅಪೊಲೋ ಕಾರ್ಯಾಚರಣೆ ಬಳಿಕ ಯಾವುದೇ ಮನುಷ್ಯ ಚಂದ್ರನ ಮೇಲಿಳಿದಿಲ್ಲ. ಅಮೆರಿಕ ತನ್ನ ಆರ್ಟೆಮಿಸ್ ಯೋಜನೆಯ ಮೂಲಕ ಮಾನವರನ್ನು ಮತ್ತೆ ಚಂದ್ರನಿಗೆ ಕಳುಹಿಸಲು ಸಿದ್ಧತೆ ನಡೆಸುತ್ತಿದ್ದರೆ, ಚೀನಾ ಸಹ ಸ್ವಂತ ಚಂದ್ರ ನಿಲ್ದಾಣ ಮತ್ತು ಮಾನವ ಯಾತ್ರೆಗಳ ಯೋಜನೆಗಳನ್ನು ವೇಗಗೊಳಿಸಿದೆ. ಎರಡೂ ರಾಷ್ಟ್ರಗಳು ಚಂದ್ರನನ್ನು ಭವಿಷ್ಯದ ಬಾಹ್ಯಾಕಾಶ ಅನ್ವೇಷಣೆ, ಸಂಪನ್ಮೂಲಗಳ ಅಧ್ಯಯನ ಹಾಗೂ ತಂತ್ರಜ್ಞಾನ ಪ್ರಾಬಲ್ಯಕ್ಕೆ ಪ್ರಮುಖ ದ್ವಾರವೆಂದು ಪರಿಗಣಿಸುತ್ತಿವೆ. ಈ ಹಿನ್ನೆಲೆ ಚಂದ್ರನ ಸುತ್ತ ಹೊಸ ರೀತಿಯ ಜಾಗತಿಕ ಸ್ಪರ್ಧೆಗೆ ವೇದಿಕೆಯಾಗುತ್ತಿದೆ.

ಮಂಗಳನ ಕುರಿತು ಯೋಜನೆ: ಚಂದ್ರ ಯೋಜನೆಯ ಜೊತೆಗೆ, ಮಂಗಳ ಗ್ರಹದಲ್ಲಿ ನಗರ ನಿರ್ಮಿಸುವ ಗುರಿಯನ್ನೂ ಸ್ಪೇಸ್‌ಎಕ್ಸ್ ಕೈಬಿಟ್ಟಿಲ್ಲ ಎಂದು ಮಸ್ಕ್ ಹೇಳಿದ್ದಾರೆ. ಮಂಗಳನಲ್ಲೂ ನಗರ ನಿರ್ಮಾಣಕ್ಕೆ ಶ್ರಮಿಸುತ್ತಿದ್ದೇವೆ. ಸುಮಾರು 5ರಿಂದ 7 ವರ್ಷಗಳಲ್ಲಿ ಆ ಪ್ರಯತ್ನ ಆರಂಭವಾಗಲಿದೆ. ಆದರೆ ಈ ಹೊತ್ತಿನ ಪ್ರಮುಖ ಆದ್ಯತೆ ನಾಗರಿಕತೆಯ ಭವಿಷ್ಯವನ್ನು ಭದ್ರಪಡಿಸುವುದು. ಆ ಕಾರಣಕ್ಕೆ ಚಂದ್ರನ ಯೋಜನೆ ವೇಗವಾಗಿ ಸಾಧ್ಯವಾಗುತ್ತದೆ ಎಂದು ಅವರು ಹೇಳಿದ್ದಾರೆ.

ಹೂಡಿಕೆದಾರರಿಗೆ ಚಂದ್ರನೇ ಆದ್ಯತೆ: ವಾಲ್ ಸ್ಟ್ರೀಟ್ ಜರ್ನಲ್ ವರದಿ ಪ್ರಕಾರ, ಸ್ಪೇಸ್‌ಎಕ್ಸ್ ತನ್ನ ಹೂಡಿಕೆದಾರರಿಗೆ ಚಂದ್ರನಿಗೆ ಸಂಬಂಧಿಸಿದ ಯೋಜನೆಗಳಿಗೇ ಮೊದಲ ಆದ್ಯತೆ ನೀಡಲಾಗುತ್ತಿದೆ ಎಂದು ತಿಳಿಸಿದೆ. ಮಂಗಳ ಗ್ರಹದ ಪ್ರಯಾಣ ಮತ್ತು ನಗರ ನಿರ್ಮಾಣ ಯೋಜನೆಗಳು ನಂತರದ ಹಂತದಲ್ಲಿ ಕೈಗೊಳ್ಳಲಾಗುತ್ತದೆ ಎಂದು ವರದಿ ಹೇಳಿದೆ.

ಚಂದ್ರನತ್ತ ಮೊದಲ ಹೆಜ್ಜೆ: ಚಂದ್ರ ಯೋಜನೆಯು ಮಂಗಳ ಗ್ರಹದ ದೀರ್ಘಾವಧಿ ಕನಸಿಗೆ ತಾಂತ್ರಿಕ ಹಾಗೂ ಕಾರ್ಯಾಚರಣಾತ್ಮಕ ಪರೀಕ್ಷಾ ವೇದಿಕೆಯಾಗಲಿದೆ. ಮಾನವ ವಾಸಸ್ಥಾನ, ಸಂಪನ್ಮೂಲ ಬಳಕೆ ಮತ್ತು ಜೀವವ್ಯವಸ್ಥೆಗಳ ಅನುಭವವನ್ನು ಚಂದ್ರನಲ್ಲಿ ಪಡೆಯುವುದರಿಂದ, ಮುಂದಿನ ದಿನಗಳಲ್ಲಿ ಮಂಗಳನತ್ತ ಹೆಜ್ಜೆ ಇಡುವುದು ಸುಲಭವಾಗಲಿದೆ ಎಂಬುದು ಮಸ್ಕ್ ಅವರ ಲೆಕ್ಕಾಚಾರ. ಚಂದ್ರನ ಮೇಲೆ ನಗರ ನಿರ್ಮಾಣದ ಸ್ಪೇಸ್‌ಎಕ್ಸ್ ಯೋಜನೆ ಕೇವಲ ವಿಜ್ಞಾನ ಕಲ್ಪನೆಯಷ್ಟೇ ಅಲ್ಲ, ಅದು ಭವಿಷ್ಯದ ಮಾನವ ನಾಗರಿಕತೆಯ ದಿಕ್ಕು ಸೂಚಿಸುವ ಮಹತ್ವದ ಹೆಜ್ಜೆಯಾಗಿದೆ. ಅಮೆರಿಕ-ಚೀನಾ ನಡುವಿನ ಬಾಹ್ಯಾಕಾಶ ಸ್ಪರ್ಧೆ, ತಂತ್ರಜ್ಞಾನ ಪ್ರಗತಿ ಮತ್ತು ಎಲಾನ್ ಮಸ್ಕ್‌ರ ಬಹು-ಗ್ರಹ ಕನಸು, ಈ ಎಲ್ಲವೂ ಸೇರಿ, ಮುಂದಿನ ದಶಕವು ಮಾನವ ಇತಿಹಾಸದಲ್ಲಿ ಹೊಸ ಬಾಹ್ಯಾಕಾಶ ಯುಗದ ಆರಂಭವಾಗುವ ಸೂಚನೆ ನೀಡುತ್ತಿದೆ.

ವಾರ್ಷಿಕ ₹1.81 ಲಕ್ಷ ಕೋಟಿ ದಾಟಿದ ವಹಿವಾಟು

ಕರ್ನಾಟಕ ಬ್ಯಾಂಕ್ ಲಾಭ 291 ಕೋಟಿ ರು.ಗೆ ಏರಿಕೆ

ಮಂಗಳೂರು: ಮಂಗಳೂರು ಮೂಲದ ಖಾಸಗಿ ವಲಯದ ಪ್ರಮುಖ ಬ್ಯಾಂಕ್ ಆದ ಕರ್ನಾಟಕ ಬ್ಯಾಂಕ್ ಪ್ರಸಕ್ತ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ಆಕರ್ಷಕ ಪ್ರಗತಿ ಸಾಧಿಸಿದೆ.

ಡಿಸೆಂಬರ್ 31, 2025ಕ್ಕೆ ಕೊನೆಗೊಂಡ ಈ ಅವಧಿಯಲ್ಲಿ ಬ್ಯಾಂಕ್ ಒಟ್ಟು ₹1,81,394.37 ಕೋಟಿಗಳಷ್ಟು ಬೃಹತ್ ವಹಿವಾಟು ನಡೆಸಿದ್ದು, ಕಳೆದ ತ್ರೈಮಾಸಿಕಕ್ಕೆ ಹೋಲಿಸಿದರೆ ಶೇ.3 ಬೆಳವಣಿಗೆ ಕಂಡಿದೆ. ಮಂಗಳೂರಿನ ಕೇಂದ್ರ ಕಚೇರಿಯಲ್ಲಿ ನಡೆದ ನಿರ್ದೇಶಕರ ಮಂಡಳಿ ಸಭೆಯಲ್ಲಿ ಬ್ಯಾಂಕಿನ ಈ ಆರ್ಥಿಕ ಸಾಧನೆಗೆ ಅನುಮೋದನೆ ನೀಡಲಾಯಿತು.

ಬ್ಯಾಂಕಿನ ಲಾಭದ ಪ್ರಮಾಣದಲ್ಲಿ ಸ್ಥಿರತೆ ಕಂಡುಬಂದಿದ್ದು, ಅಕ್ಟೋಬರ್-ಡಿಸೆಂಬರ್ ಅವಧಿಯಲ್ಲಿ ₹290.79 ಕೋಟಿ ನಿವ್ವಳ ಲಾಭ ಗಳಿಸಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ ₹283.60 ಕೋಟಿ ಲಾಭ ದಾಖಲಿಸಿತ್ತು. ವಾರ್ಷಿಕ ಆಧಾರದ ಮೇಲೆ ಬ್ಯಾಂಕಿನ ನಿವ್ವಳ ಲಾಭದಲ್ಲಿ ಶೇ 2.54ರಷ್ಟು ಏರಿಕೆ ಕಂಡಿದೆ. ಬ್ಯಾಂಕಿನ ಕಾರ್ಯಾಚರಣೆಯ ಲಾಭವು ₹451.80 ಕೋಟಿಗಳಷ್ಟಿದ್ದು, ಇದು ಕಳೆದ ವರ್ಷಕ್ಕಿಂತ ಶೇ.4.32 ಹೆಚ್ಚಳವಾಗಿದೆ.

ಠೇವಣಿ ಮತ್ತು ಮುಂಗಡಗಳ ವಿಭಾಗದಲ್ಲೂ ಬ್ಯಾಂಕ್ ಗಮನಾರ್ಹ ಸಾಧನೆ ಮಾಡಿದೆ. ಬ್ಯಾಂಕಿನ ಒಟ್ಟು ಠೇವಣಿ ಸಂಗ್ರಹವು ₹1,04,111.52 ಕೋಟಿಗಳಿಗೆ ತಲುಪಿದ್ದು, ಶೇ 4.08 ವಾರ್ಷಿಕ ಪ್ರಗತಿ ಸಾಧಿಸಿದೆ. ಸಾಲ ವಿತರಣೆಯಲ್ಲೂ ಚೇತರಿಕೆ ಕಂಡಿರುವ ಬ್ಯಾಂಕ್, ಒಟ್ಟು ₹77,282.85 ಕೋಟಿಗಳಷ್ಟು ಮುಂಗಡಗಳನ್ನು ನೀಡಿದೆ. ಪ್ರಮುಖವಾಗಿ ರಿಟೇಲ್, ಕೃಷಿ ಮತ್ತು ಎಂಎಸ್‌ಎಂಇ ವಲಯಗಳಿಗೆ ನೀಡಿದ ಸಾಲದ ಪ್ರಮಾಣವು ಬ್ಯಾಂಕಿನ ಆದಾಯ ವೃದ್ಧಿಗೆ ಪ್ರಮುಖ ಕಾರಣವಾಗಿದೆ ಎಂದು ವಿಶ್ಲೇಷಿಸಲಾಗಿದೆ. ಆಸ್ತಿ ಗುಣಮಟ್ಟದ ವಿಚಾರದಲ್ಲಿ ಬ್ಯಾಂಕ್ ಉತ್ತಮ ಸುಧಾರಣೆ ತಂದಿದೆ. ವಸೂಲಾಗದ ಸಾಲದ ಪ್ರಮಾಣವು ಗಣನೀಯವಾಗಿ ಇಳಿಕೆಯಾಗಿದೆ. ಒಟ್ಟು ವಸೂಲಾಗದ ಸಾಲದ ಪ್ರಮಾಣವು ಶೇ 3.32ಕ್ಕೆ ಇಳಿದಿದ್ದರೆ, ನಿವ್ವಳ ವಸೂಲಾಗದ ಸಾಲದ ಪ್ರಮಾಣವು ಶೇ 1.31ಕ್ಕೆ ತಗ್ಗಿದೆ. ಕಳೆದ ಸೆಪ್ಟೆಂಬರ್ ಅವಧಿಯಲ್ಲಿ ಇವು ಕ್ರಮವಾಗಿ ಶೇ 3.33 ಮತ್ತು ಶೇ 1.35ರಷ್ಟಿದ್ದವು. ಬ್ಯಾಂಕಿನ ಪ್ರೊವಿಷನ್ ಕವರೇಜ್ ಅನುಪಾತವು ಶೇ 80.90ಕ್ಕೆ ಏರಿಕೆಯಾಗಿರುವುದು ಬ್ಯಾಂಕಿನ ಆರ್ಥಿಕ ಭದ್ರತೆಯನ್ನು ಪುಷ್ಟೀಕರಿಸುತ್ತದೆ.

ಡಿಜಿಟಲ್ ರೂಪಾಂತರದ ಮೂಲಕ ಬ್ಯಾಂಕ್ ಹೊಸ ಉತ್ಪನ್ನಗಳನ್ನು ಮಾರುಕಟ್ಟೆಗೆ ಪರಿಚಯಿಸುತ್ತಿದೆ ಎಂದಿದ್ದಾರೆ. ಕಡಿಮೆ ವೆಚ್ಚದ ಠೇವಣಿಗಳನ್ನು ಆಕರ್ಷಿಸುವಲ್ಲಿ ಬ್ಯಾಂಕ್ ಯಶಸ್ವಿಯಾಗಿದ್ದು, ಈ ಅನುಪಾತವು ಶೇ 31.53ಕ್ಕೆ ಏರಿಕೆಯಾಗಿದೆ. ಮುಂದಿನ ದಿನಗಳಲ್ಲಿ ಡೇಟಾ ಅನಾಲಿಟಿಕ್ಸ್ ಸಾಧನಗಳನ್ನು ಬಳಸಿಕೊಂಡು ಗ್ರಾಹಕರಿಗೆ ಇನ್ನಷ್ಟು ವೇಗವಾದ ಮತ್ತು ಪಾರದರ್ಶಕ ಸೇವೆ ನೀಡಲು ಬ್ಯಾಂಕ್ ಉದ್ದೇಶಿಸಿದೆ.

-ರಾಘವೇಂದ್ರ ಎಸ್. ಭಟ್,
ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ

ಶಾಸಕ ರೋಹಿತ್ ಪವಾರ್ ಗಂಭೀರ ಆರೋಪ

ಅಜಿತ್ ಪವಾರ್ ಪ್ರಯಾಣಿಸಿದ ವಿಮಾನ ಪತನವಲ್ಲ, ಪಿತೂರಿ

ಮುಂಬೈ: ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರಿದ್ದ ವಿಮಾನ ಅಪಘಾತದಲ್ಲಿ ಪತನವಾಗಿದ್ದಲ್ಲ, ಅದು ಯೋಜಿತ ದಾಳಿ ಎಂದು ಶರದ್ ಪವಾರ್ ಕುಟುಂಬದ ಕುಡಿ, ಶಾಸಕ ರೋಹಿತ್ ಪವಾರ್ ಅವರು ಆರೋಪಿಸಿದರು, ಜೊತೆಗೆ ದುರ್ಘಟನೆಯ ಬಗ್ಗೆ ಹಲವು ಪ್ರಶ್ನೆಗಳನ್ನು ಎತ್ತಿದ್ದಾರೆ. ಮಂಗಳವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಜಿತ್ ಪವಾರ್ ಅವರು ದೈಹಿಕವಾಗಿ ನಮ್ಮೊಂದಿಗಿಲ್ಲ, ಆದರೆ ಅವರು ಜನರ ಮನಸ್ಸಿನಲ್ಲಿ ನೆಲೆಯೂರಿದ್ದಾರೆ. ಅವರ ಸಾವಿನ ಹಿಂದೆ ಹಲವು ಅನುಮಾನಗಳಿವೆ ಎಂದು ಶಂಕಿಸಿದರು.

ಅನುಮಾನಗಳು: ಅಜಿತ್ ಅವರ ಸಿಬ್ಬಂದಿ ಬೆಳಗ್ಗೆ 7.20ಕ್ಕೆ ಸಿದ್ಧರಾಗಿದ್ದರು. ಬಾರಾಮತಿಯಲ್ಲಿನ ಹವಾಮಾನ ಪರಿಸ್ಥಿತಿಗಳನ್ನು ಬೆಳಗ್ಗೆ 7.30ಕ್ಕೆ ಪರಿಶೀಲಿಸಲಾಯಿತು. ವಿಮಾನ ಅಪಘಾತ ಬೆಳಗ್ಗೆ 8.45ರ ನಡುವೆ ಸಂಭವಿಸಿರಬೇಕು, ಏಕೆಂದರೆ ಬೆಳಗ್ಗೆ 9 ಗಂಟೆಗೆ ಅಜಿತ್ ಪವಾರ್ ಗಂಭೀರವಾಗಿ ಗಾಯಗೊಂಡಿದ್ದಾರೆ ಎಂಬ ಸುದ್ದಿ ಹೊರಬಂದಿತು. ಬೆಳಗ್ಗೆ 9.45ಕ್ಕೆ ಅಜಿತ್ ಪವಾರ್ ಸಾವಿಗೀಡಾಗಿದ್ದಾರೆ ಎಂದು ಪ್ರಕಟಿಸಲಾಯಿತು.

ಅಪಘಾತಕ್ಕೀಡಾದ ವಿಮಾನ 2 ದಿನಗಳ ಹಿಂದೆ ಸೂರತ್‌ಗೆ ಹೋಗಿತ್ತು. ಹವಾಮಾನ ವೈಪರೀತ್ಯದಿಂದಾಗಿ ಅಪಘಾತ ಸಂಭವಿಸಿರಬೇಕು ಎಂದು ಅದರ ಮಾಲೀಕರು ಹೇಳುತ್ತಾರೆ. ದುರ್ಘಟನೆ ಸಂಭವಿಸಿದ ಸ್ಥಳದಲ್ಲಿನ ಸುತ್ತಲಿನ ಸಿಸಿಟಿವಿ ಪರಿಶೀಲನೆಯಲ್ಲಿ ಹವಾಮಾನ ಪರಿಸ್ಥಿತಿ ಅಂದು ಹೇಗಿತ್ತು ಎಂಬುದು ತಿಳಿದು ಬಂದಿದೆ ಎಂದರು.

ಹಯಗ್ರೀವನ ಹೊಸ ಗಾನ

ಬಜಾರ್ ಖ್ಯಾತಿಯ ಧನ್ವೀರ್ ಗೌಡ ನಟಿಸಿರುವ ಹಯಗ್ರೀವ ಚಿತ್ರ ಇದೇ ತಿಂಗಳು ತೆರೆಗೆ ಬರಲಿದೆ. ಅದಕ್ಕೂ ಮೊದಲೇ ಹಯಗ್ರೀವ ಹಾಡಿನಲ್ಲಿಯೇ ಸಖತ್ ಸದ್ದು ಮಾಡುತ್ತಿದೆ. ಮೊದಲನೇ ಮಾತು.. ಎಂಬ ಹಾಡು ಇದಾಗಿದ್ದು, ವಿ.ನಾಗೇಂದ್ರ ಪ್ರಸಾದ್ ಸಾಹಿತ್ಯ ಬರೆದಿರುವ ಈ ಗೀತೆಗೆ ಜೂಡಾ ಸ್ಯಾಂಡಿ ಸಂಗೀತ ಸಂಯೋಜಿಸಿದ್ದಾರೆ. ಚಂದನ್ ಶೆಟ್ಟಿ ದನಿಯಲ್ಲಿ ಹಾಡು ಮಧುರವಾಗಿ ಮೂಡಿಬಂದಿದ್ದು, ಈ ಹಾಡಿಗೆ ಭೂಷಣ್ ನೃತ್ಯ ನಿರ್ದೇಶನ ಮಾಡಿದ್ದಾರೆ. ರಘುಕುಮಾರ್ ಕಥೆ ಬರೆದು ನಿರ್ದೇಶನ ಮಾಡಿದ್ದು, ಕೆವಿಸಿ ಪ್ರೊಡಕ್ಷನ್ಸ್ ಬ್ಯಾನರ್‌ನಲ್ಲಿ ಪದ್ಮಾ ಸಮೃದ್ಧಿ ಮಂಜುನಾಥ್ ಬಂಡವಾಳ ಹೂಡಿದ್ದಾರೆ. ಬ್ಯಾಂಗಲ್ ಬಂಗಾರಿ ಖ್ಯಾತಿಯ ಸಂಜನಾ ಆನಂದ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಉಳಿದಂತೆ ಸಾಧು ಕೋಕಿಲ, ಶರತ್ ಲೋಹಿತಾಶ್ವ, ರಮೇಶ್ ಭಟ್, ಅಶ್ವಿನಿ ಗೌಡ, ಶೋಭರಾಜ್, ಸಂಗೀತಾ, ಕೃಷ್ಣ ಹೆಬ್ಬಾಳೆ, ಅಶ್ವಿನ್ ಹಾಸನ್, ಗಿಲ್ಲಿ ನಟ ಸೇರಿದಂತೆ ಹಲವು ಕಲಾವಿದರು ತಾರಾಗಣದಲ್ಲಿದ್ದಾರೆ. ಗಿರೀಶ್.ಆರ್.ಗೌಡ ಛಾಯಾಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ, ಕೆ.ರವಿವರ್ಮ, ಡಿಫರೆಂಟ್ ಡ್ಯಾನಿ ಹಾಗೂ ಅರ್ಜುನ್ ರಾಜ್ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ನಟ ದರ್ಶನ್ ಹುಟ್ಟುಹಬ್ಬದ ಅಂಗವಾಗಿ ಇದೇ 16ರಂದು ಟ್ರೇಲರ್ ರಿಲೀಸ್ ಮಾಡಲು ಚಿತ್ರತಂಡ ನಿರ್ಧರಿಸಿದೆ. ಹಯಗ್ರೀವ ಈ ಮಾಸಾಂತ್ಯಕ್ಕೆ ರಾಜ್ಯಾದ್ಯಂತ ಬಿಡುಗಡೆಯಾಗಲಿದೆ.

ಕಾಮಿಡಿ ಕಥೆಯ ಸೂಪರ್ ಹಿಟ್

ಬಿಗ್‌ಬಾಸ್ ಮನೆಗೆ ಹೋಗಿ ಬಂದ ಮೇಲೆ ಗಿಲ್ಲಿಯ ಅದೃಷ್ಟವೇ ಬದಲಾಗಿದೆ. ಗಿಲ್ಲಿ ನಟನ ಸಿನಿಮಾ ನಿರ್ದೇಶಿಸಲು ಹಲವು ನಿರ್ದೇಶಕರು ಸಿದ್ಧತೆ ನಡೆಸಿದ್ದಾರೆ. ಅದರ ಜತೆಗೆ ಈ ಹಿಂದೆ ಗಿಲ್ಲಿ ನಟಿಸಿದ್ದ ಸಿನಿಮಾಗಳು ಬಿಡುಗಡೆಯ ಹೊಸ್ತಿಲಲ್ಲಿವೆ. ಅವುಗಳಲ್ಲಿ ಸೂಪರ್ ಹಿಟ್ ಚಿತ್ರವೂ ಒಂದು. ಸಂಪೂರ್ಣ ಕಾಮಿಡಿ ಬೆರೆತ ಈ ಚಿತ್ರದ ಟೀಸರ್ ರಿಲೀಸ್ ಆಗಿದೆ.

ಸಿನಿಮಾದುದ್ದಕ್ಕೂ ಹಾಸ್ಯವೇ ಬೆರೆತಿದೆ ಎಂಬುದು ಟೀಸರ್‌ನಲ್ಲಿ ತಿಳಿಯುತ್ತದೆ. ಪಯಣದಲ್ಲಿ ಸಾಗುವ ಸ್ಟೋರಿ ಇಲ್ಲಿದ್ದು, ಸಸ್ಪೆನ್ಸ್, ಥ್ರಿಲ್ಲರ್ ಅಂಶಗಳು ಬೆರೆತಿವೆ. ಗೌರವ್ ಶೆಟ್ಟಿ ಮತ್ತು ಗಿಲ್ಲಿ ನಟ ನಾಯಕರಾಗಿ ನಟಿಸಿದ್ದು, ಶ್ವೇತಾ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಉಳಿದಂತೆ ವಿ.ನಾಗೇಂದ್ರ ಪ್ರಸಾದ್, ಗೌರವ್ ಶೆಟ್ಟಿ, ಸಾಧು ಕೋಕಿಲ, ನಾಗವರ್ಧನ್, ಪ್ರಮೋದ್ ಶೆಟ್ಟಿ, ಗೋವಿಂದೇ ಗೌಡ, ಗಿರಿ, ಟೆನ್ನಿಸ್ ಕೃಷ್ಣ, ಕರಿಸುಬ್ಬು, ವಂಶಿ, ಮಂಜಣ್ಣ, ಮಂಗಳಾ, ಮಂಗಳೂರು ಮೀನನಾಥ ಹೀಗೆ ದೊಡ್ಡ ತಾರಾ ಬಳಗವೇ ಚಿತ್ರದಲ್ಲಿದೆ. ವಿ.ನಾಗೇಂದ್ರ ಪ್ರಸಾದ್ ಅವರ ಸಹೋದರ ವಿಜಯಾನಂದ್ ಕಥೆ ಬರೆದು ಈ ಸಿನಿಮಾವನ್ನು ನಿರ್ದೇಶನ ಮಾಡಿದ್ದು, ವಿಜಯಲಕ್ಷ್ಮಿ ಎಂಟರ್‌ಪ್ರೈಸಸ್ ಬ್ಯಾನರಿನಲ್ಲಿ ಜಿ.ಉಮೇಶ್ ನಿರ್ಮಾಣ ಮಾಡಿದ್ದಾರೆ. ಆರ್.ಡಿ.ನಾಗಾರ್ಜುನ ಛಾಯಾಗ್ರಹಣ, ಶ್ರೀಕಾಂತ್ ಸಂಕಲನ, ವಿ.ನಾಗೇಂದ್ರ ಪ್ರಸಾದ್ ಸಾಹಿತ್ಯ ಮತ್ತು ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ. ಇದೇ 27ರಂದು ಸೂಪರ್ ಹಿಟ್ ರಾಜ್ಯಾದ್ಯಂತ ತೆರೆಗೆ ಬರಲಿದೆ.

ಪಯಣದಲ್ಲಿ ಸಾಗುವ ಕಥೆ ಇಲ್ಲಿದ್ದು, ಎಲ್ಲಾ ಪಾತ್ರ ಗಳು ಪ್ರಮುಖವಾಗಿವೆ. ಚಿತ್ರದ ಡೈಲಾಗ್ ಪಂಚಿಂಗ್ ಆಗಿದ್ದು, ಇಂದಿಗೂ ಅವು ನನ್ನ ಮನ ಸನ್ನು ಕಾಡುತ್ತಿವೆ. ನಾನು ಬಿಗ್‌ಬಾಸ್ ಗುಂಗಿನಿಂದ ಇನ್ನೂ ಹೊರ ಬಂದಿಲ್ಲ. ಅದರಲ್ಲಿ ಸಿಕ್ಕಿದ ಜನಪ್ರಿಯತೆ ವರ್ಣಿಸಲು ಪದಗಳೇ ಸಾಲುತ್ತಿಲ್ಲ. ಬಿಗ್‌ಬಾಸ್ ಬಳಿಕ ಸಾಕಷ್ಟು ಸಿನಿಮಾಗಳಲ್ಲಿ ನಟಿಸಲು ಅವಕಾಶಗಳು ಅರಸಿ ಬರುತ್ತಿವೆ.

-ಗಿಲ್ಲಿ ನಟ

ಹೊಸಬರ ತಂಡ ಒಳ್ಳೆಯ ಸಿನಿಮಾ ಮಾಡಿದೆ. ಸೂಪರ್ ಹಿಟ್, ಆರಂಭದಿಂದ ಕೊನೆಯ ವರೆಗೂ ನಗಿಸುತ್ತಲೇ ಸಾಗುವ ಮನರಂಜನೆ ಬೆರೆತ ಚಿತ್ರವಾಗಿದೆ. ಎಲ್ಲರೂ ಚಿತ್ರಮಂದಿರಗಳಿಗೆ ಬಂದು ಸಿನಿಮಾ ನೋಡಿ ಚಿತ್ರತಂಡವನ್ನು ಪ್ರೋತ್ಸಾಹಿಸಬೇಕು. ಇದರಿಂದ ಮತ್ತಷ್ಟು ಒಳ್ಳೆಯ ಸಿನಿಮಾಗಳು ನಿರ್ಮಾಣವಾಗಲು ಸಹಾಯವಾಗುತ್ತದೆ.

-ಸಾಧುಕೋಕಿಲ

ಅಪರೂಪದ ಪ್ರೇಮಕಥೆ ಮರಳಿ ಮನಸಾಗಿದೆ

ನಾಗರಾಜ್ ಶಂಕರ್ ನಿರ್ದೇಶನದಲ್ಲಿ ಸಿದ್ಧ ವಾಗಿರುವ ಮರಳಿ ಮನಸಾಗಿದೆ ಚಿತ್ರದ ಟ್ರೇಲರ್ ರಿಲೀಸ್ ಆಗಿದೆ. ಪ್ರೇಮ ಕಥೆಯೇ ಪ್ರಧಾನವಾಗಿರುವ ಈ ಚಿತ್ರದಲ್ಲಿ ಆ್ಯಕ್ಷನ್ ಕೂಡ ಬೆರೆತಿದೆ. ಅರ್ಜುನ್ ವೇದಾಂತ್ ನಾಯಕನಾಗಿ ನಟಿಸಿದ್ದು, ನಿರೀಕ್ಷಾ ಶೆಟ್ಟಿ ಹಾಗೂ ಸ್ಮೃತಿ ವೆಂಕಟೇಶ್ ನಾಯಕಿಯರಾಗಿ ಅಭಿನಯಿಸಿ ದ್ದಾರೆ. ಟಿ.ಎಸ್.ನಾಗಾಭರಣ, ಮಾನಸಿ ಸುಧೀರ್, ಭೋಜರಾಜ್ ವಾಮಂಜೂರ್ ಮುಂತಾದವರು ತಾರಾ ಬಳಗದಲ್ಲಿದ್ದಾರೆ.

ನಾನು ನಟಿಸಿದ್ದ ಕುಡ್ಲ ಕೆಫೆ ಚಿತ್ರ 2016ರ ಫೆಬ್ರವರಿ 12ರಂದು ಬಿಡುಗಡೆಯಾಗಿತ್ತು. ಈಗ ಹತ್ತು ವರ್ಷಗಳ ನಂತರ ಅದೇ ದಿನ ಮರಳಿ ಮನಸಾಗಿದೆ ಚಿತ್ರ ತೆರೆಗೆ ಬರುತ್ತಿದೆ. ಸಿನಿಮಾದ ಹಾಡುಗಳು ಹಾಗೂ ಟೀಸರ್ ಈಗಾಗಲೇ ಪ್ರೇಕ್ಷಕರ ಮನಗೆದ್ದಿವೆ. ಬಿಡುಗಡೆಗೂ ಮುನ್ನ ಬೆಂಗಳೂರು, ಪುತ್ತೂರು, ಉಡುಪಿ ಮುಂತಾದ ಕಡೆ ನಮ್ಮ ಸಿನಿಮಾದ ಪ್ರೀಮಿಯರ್ ಏರ್ಪಡಿಸಿ ದ್ದೆವು. ಅಲ್ಲಿ ನಮ್ಮ ಸಿನಿಮಾ ನೋಡಿದವರು ಮೆಚ್ಚಿಕೊಂಡಾಡಿದರು ಎಂದು ನಟ ವೇದಾಂತ್ ಸಂತಸದಿಂದ ನುಡಿದರು. ಮರಳಿ ಮನಸಾಗಿದೆ ನನ್ನ ಸಿನಿ ಪಯಣದ ಮೊದಲ ಚಿತ್ರ. ಇದೊಂದು ಸಾಮಾನ್ಯ ಪ್ರೇಮ ಕಥೆಯಲ್ಲ, ಉತ್ತಮ ಕಂಟೆಂಟ್‌ವುಳ್ಳ ಚಿತ್ರ ವಾಗಿದೆ. ಸಾಮಾನ್ಯ ಜನರಿಗೂ ತಲುಪುವ ಚಿತ್ರವಿದು, ಬಿಡುಗಡೆಗೂ ಮೊದಲೇ ನಮ್ಮ ಚಿತ್ರಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ನಿರ್ದೇಶಕ ನಾಗರಾಜ್ ಶಂಕರ್ ಹೇಳಿ ದರು. ವಿನು ಮನಸು ಸಂಗೀತ ನಿರ್ದೇಶನ, ಹಾಲೇಶ್ ಛಾಯಾಗ್ರಹಣ ಈ ಚಿತ್ರಕ್ಕಿದೆ. ಬೆನಕ ಟಾಕೀಸ್ ಲಾಂಛನದಲ್ಲಿ ನವೀನ್ ಕುಮಾರ್, ಮಲ್ಲಿಕಾರ್ಜುನಪ್ಪ, ನಾಗರಾಜ್ ಶಂಕರ್ ಹಾಗೂ ಆಶಿತ್ ಸುಬ್ರಹ್ಮಣ್ಯ ಒಟ್ಟಾಗಿ ಚಿತ್ರ ನಿರ್ಮಾಣ ಮಾಡಿದ್ದಾರೆ. ಮರಳಿ ಮನಸಾಗಿದೆ ಇದೇ ವಾರ ತೆರೆಗೆ ಬರಲಿದೆ

ಭೂಗತ ಲೋಕದಲ್ಲಿ ಸ್ಟಾರ್

ಹೊಸಬರೇ ಸೇರಿ ನಿರ್ಮಿಸಿ, ನಿರ್ದೇಶಿಸಿರುವ ಸ್ಟಾರ್ ಚಿತ್ರದ ಟ್ರೇಲರ್ ರಿಲೀಸ್ ಆಗಿದೆ. ಲಯನ್ ಕ್ರಿಯೇಶನ್ಸ್ ಬ್ಯಾನರಿನಲ್ಲಿ ಶರತ್ ಪ್ರಕಾಶ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದು, ಜತೆಗೆ ನಾಯಕನಾಗಿಯೂ ನಟಿಸಿದ್ದಾರೆ. ವಿಜಯ ಸೂರ್ಯ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಭೂಮಿಗೆ ಹತ್ರ... ಎಂಬ ಅಡಿಬರಹ ಈ ಚಿತ್ರಕ್ಕಿದೆ. ಸ್ಟಾರ್ ಚಿತ್ರದಲ್ಲಿ ಭೂಗತ ಲೋಕದ ಕಥೆಯಿದ್ದು, ಆ್ಯಕ್ಷನ್‌ಗೆ ಹೆಚ್ಚು ಒತ್ತು ನೀಡಲಾಗಿದೆ. ಅದರ ಜತೆಗೆ ಕೌಟುಂಬಿಕ ಕಥೆಯೂ ಬೆರೆತಿದೆ. ಶರತ್ ಪ್ರಕಾಶ್, ರಜತಾ ರಕ್ಷಾ ಹಾಗೂ ರಂಗಭೂಮಿ ಕಲಾವಿದರು ಚಿತ್ರದಲ್ಲಿ ಅಭಿನಯಿಸಿದ್ದಾರೆ. ನಾನು ಪ್ಯಾಟೆ ಮಂದಿ ಕಾಡಿಗ್ ಬಂದ್ರು ರಿಯಾಲಿಟಿ ಶೋನ ವಿನ್ನರ್ ಆಗಿದ್ದೆ. ಆ ಬಳಿಕ ಸಿನಿಮಾದಲ್ಲಿ ನಟಿಸಲು ಹಲವು ಅವಕಾಶಗಳು ಅರಸಿ ಬಂದವು. ಇಲ್ಲಿಯವರೆಗೂ ಇಪ್ಪತ್ತಕ್ಕೂ ಹೆಚ್ಚು ಚಿತ್ರಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದೆ. ನನಗೆ ಮುಖ್ಯ ಪಾತ್ರದಲ್ಲಿ ಅಭಿನಯಿಸಬೇಕು ಎಂಬ ಹಂಬಲವಿತ್ತು. ಅದೇ ಸಮಯಕ್ಕೆ ನಿರ್ದೇಶಕ ವಿಜಯ ಸೂರ್ಯ ಕಥೆ ಹೇಳಿದರು, ಸ್ಟೋರಿ ಮನಸಿಗೆ ಹಿಡಿಸಿತು. ನಿರ್ಮಾಣಕ್ಕೆ ಒಪ್ಪಿದೆ, ಜತೆಗೆ ನಾಯಕನಾಗಿಯೂ ಅಭಿನಯಿಸಿದ್ದೇನೆ. ಇಲ್ಲಿ ರೌಡಿಸಂ ಮಾತ್ರವಲ್ಲ ಅದರ ಜತೆಗೆ ತಂದೆ ಮಗಳ ಬಾಂಧವ್ಯದ ಕಥನವೂ ಬೆರೆತಿದೆ ಎಂದು ಶರತ್ ಪ್ರಕಾಶ್ ಹೇಳಿದರು. ಚಿತ್ರದಲ್ಲಿ ಮೂರು ಹಾಡುಗಳಿದ್ದು ವಿಕಾಸ್ ವಸಿಷ್ಠ ಸಂಗೀತ ಸಂಯೋಜಿಸಿದ್ದಾರೆ. ಎಪಿಎಸ್‌ಕೆ ಛಾಯಾಗ್ರಹಣ, ಶಶಿಧರ್ ಸಂಕಲನ ಈ ಚಿತ್ರಕ್ಕಿದೆ.

ಬಹು ಭಾಷೆಯಲ್ಲಿ ಅಶೋಕನ ದರ್ಶನ

ನಟ ಸತೀಶ್ ನೀನಾಸಂ ಅಭಿನಯದ ಬಹು ನಿರೀಕ್ಷಿತ ಸಿನಿಮಾ ದಿ ರೈಸ್ ಆಫ್ ಅಶೋಕ, ಫೆಬ್ರವರಿ 27ರಂದು ಪ್ರೇಕ್ಷಕರಿಗೆ ದರ್ಶನ ನೀಡಲಿದೆ. ಬಿಡುಗಡೆಗೂ ಮೊದಲೇ ಸಿನಿಮಾದ ಬಗ್ಗೆ ನಿರೀಕ್ಷೆಯೂ ಹೆಚ್ಚಿದೆ. ಈಗಾಗಲೇ ರಿಲೀಸ್ ಆಗಿರುವ ಚಿತ್ರದ ಮಾದೇವ... ಯಾಕೋ ಯಾಕೋ.. ಹಾಗೂ ಕಲ್ಯಾಣವೇ ಗೌರಿ... ಹಾಡುಗಳು ಸಿನಿಪ್ರಿಯರಿಂದ ಮೆಚ್ಚುಗೆ ಪಡೆದಿವೆ. ಇದರ ಜತೆಗೆ ಮತ್ತೊಂದು ಗೀತೆ ಬಿಡುಗಡೆಯಾಗಲಿದೆ.

ದಿ ರೈಸ್ ಆಫ್ ಅಶೋಕ ಕನ್ನಡದ ಜತೆಗೆ ತಮಿಳು ಮತ್ತು ತೆಲುಗು ಭಾಷೆಗಳಲ್ಲಿಯೂ ಬಿಡುಗಡೆಯಾಗಲಿದೆ. ಮೂರೂ ಭಾಷೆಗಳಲ್ಲಿ ಪ್ರತಿಷ್ಠಿತ ವಿತರಣಾ ಸಂಸ್ಥೆಗಳು ಈ ಚಿತ್ರವನ್ನು ಚಿತ್ರಮಂದಿರಗಳಿಗೆ ತರಲಿವೆ. ಹಾಗಾಗಿ ಅಶೋಕ, ಕರುನಾಡಿನ ಜತೆಗೆ ಪಕ್ಕದ ರಾಜ್ಯದಲ್ಲಿಯೂ ಸದ್ದು ಮಾಡಲಿದ್ದಾನೆ. ಈ ಚಿತ್ರದಲ್ಲಿ ಸತೀಶ್ ನೀನಾಸಂ ನಾಯಕನಾಗಿ ನಟಿಸಿದ್ದು, ಅದರ ಜತೆಗೆ ನಿರ್ಮಾಣದಲ್ಲಿಯೂ ಕೈಜೋಡಿಸಿದ್ದಾರೆ. ಹಾಡುಗಳಿಗೆ ಸಾಹಿತ್ಯ ಬರೆದಿದ್ದು, ಕೆಲವು ಗೀತೆಗಳಿಗೂ ದನಿಯಾಗಿದ್ದಾರೆ. ಚಿತ್ರದ ನಾಯಕಿಯಾಗಿ ಸಪ್ತಮಿ ಗೌಡ ಅಭಿನಯಿಸಿದ್ದು, ಸತೀಶ್, ಸಪ್ತಮಿ ಜೋಡಿ ಪ್ರೇಕ್ಷಕರನ್ನು ಮೋಡಿ ಮಾಡಲಿದೆ ಎಂಬ ನಿರೀಕ್ಷೆಯೂ ಇದೆ. ಬಿ.ಸುರೇಶ್, ಸಂಪತ್ ಮೈತ್ರೇಯ, ಗೋಪಾಲಕೃಷ್ಣ ದೇಶಪಾಂಡೆ, ಯಶ್ ಶೆಟ್ಟಿ ಮುಂತಾದವರು ತಾರಾಗಣದಲ್ಲಿದ್ದಾರೆ. ದಿ ರೈಸ್ ಆಫ್ ಅಶೋಕ ಚಿತ್ರವನ್ನು ವಿನೋದ್.ವಿ.ಧೋಂಡಾಳೆ ನಿರ್ದೇಶನ ಮಾಡುತ್ತಿದ್ದರು. ಅವರ ಅಗಲಿಕೆಯ ಬಳಿಕ ಮನು ಶೇಡ್ಗಾರ್ ನಿರ್ದೇಶನದ ಜವಾಬ್ದಾರಿ ವಹಿಸಿಕೊಂಡಿದ್ದಾರೆ. ಪೂರ್ಣಚಂದ್ರ ತೇಜಸ್ವಿ ಸಂಗೀತ ನಿರ್ದೇಶನ, ಲವಿತ್ ಛಾಯಾಗ್ರಹಣ ಈ ಚಿತ್ರಕ್ಕಿದೆ. ಹಾಡುಗಳು, ಸಿನಿಮಾದ ಝಲಕ್‌ಗಳಿಂದಾಗಿ ಮನಗೆದ್ದಿರುವ ರೈಸ್ ಆಫ್ ಅಶೋಕ ಚಂದನವನದ ಬಹುನಿರೀಕ್ಷಿತ ಸಿನಿಮಾವಾಗಿದೆ.

ವಿಶ್ವವಾಣಿ ಬೆಂಗಳೂರು 11-02-2026 ಬುಧವಾರ @vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಅದೃಶ್ಯ-ಅಗೋಚರ-ಸಂಪರ್ಕ ಮಾಧ್ಯಮ: ವಾಸನಾ ದ್ರವ್ಯಗಳು

ನಮಗೆ ತಿಳಿಯದಂತೆಯೇ ನಾವು ವಾಸನಾದ್ರವ್ಯಗಳನ್ನು ಉತ್ಪಾದಿಸಿ, ನಮ್ಮ ಕಣ್ಣ ಮುಂದೆಯೇ ಅವುಗಳ ಪರಿಣಾಮ ಕಾಣುತ್ತಿದ್ದರೂ, ನಾವು ಅವುಗಳನ್ನು ತಿಳಿಯದಿರಲು ಸಾಧ್ಯವಿದೆ. ಸಾಮಾನ್ಯವಾಗಿ ಒಬ್ಬರು ಆಕಳಿಸಿದಾಗ ಮತ್ತೊಬ್ಬರು ಆಕಳಿಸುವುದನ್ನು ಗಮನಿಸಿರಬಹುದು.

ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ

naasomeswara@gmail.com

ನಾಯಿ ತನ್ನ ಯಜಮಾನನನ್ನು ಸುಲಭವಾಗಿ ಕಂಡುಹಿಡಿಯುತ್ತದೆ, ಅಂತೆಯೇ ಕಳ್ಳರನ್ನು ಹಿಡಿಯುತ್ತದೆ. ಸೊಳ್ಳೆಗಳು ನಾವೆಲ್ಲೇ ಇದ್ದರೂ ನಮ್ಮನ್ನು ಹುಡುಕಿಕೊಂಡು ಬಂದು ರಕ್ತ ಹೀರುತ್ತವೆ. ಇರುವೆಗಳು ಒಂದರ ಹಿಂದೆ ಒಂದಾಗಿ ಶಿಸ್ತಿನ ಸಿಪಾಯಿಗಳಂತೆ ಹೋಗುತ್ತವೆ. ಇವನ್ನೆಲ್ಲಾ ನೋಡಿದಾಗ ತುಸು ಆಶ್ಚರ್ಯವಾಗಬಹುದು.

ಮಾನವ ಮತ್ತೊಬ್ಬ ಮಾನವನೊಂದಿಗೆ ಮಾತಿನ ಮೂಲಕ, ಪಶು-ಪಕ್ಷಿಗಳು ತಮಗೆ ಅರ್ಥವಾಗುವಂಥ ಶಬ್ದಗಳ ಮೂಲಕ ಸಂಪರ್ಕ ನಡೆಸುತ್ತವೆ. ಇವೆರಡರ ಲಭ್ಯವಿಲ್ಲದ ಕೆಲವು ಜೀವಿಗಳು ವಾಸನಾಯುಕ್ತವಾದ ಹಲವು ಸಾವಯವ ಸಂಕೀರ್ಣ ರಾಸಾಯನಿಕ ವಸ್ತುಗಳನ್ನು ಉತ್ಪಾದಿಸುವುದರ ಮೂಲಕ ಸಂಪರ್ಕ ನಡೆಸುತ್ತವೆ. ಒಂದು ಪ್ರಾಣಿ ಉತ್ಪಾದಿಸಿದ ವಾಸನೆಯನ್ನು ಮತ್ತೊಂದು ಪ್ರಾಣಿ ಘ್ರಾಣಿಸಿ ಅದರ ಅರ್ಥವನ್ನು ತಿಳಿಯಬಲ್ಲದು. ಈ ರಾಸಾಯನಿಕ ವಸ್ತುಗಳು ದೇಹದಲ್ಲಿ ಉತ್ಪಾದಿತವಾಗುವ ಕಾರಣ ದೈಹಿಕ ರಾಸಾಯನಿಕಗಳು (semio chemicals) ಎಂದೂ, ಇವುಗಳಿಂದ ನಡೆಯುವ ಸಂಪರ್ಕವನ್ನು 'ದೇಹೋ-ರಾಸಾಯನಿಕ ಸಂಪರ್ಕ' (Semio-Chemic-Communication) ಎಂದೂ ಕರೆಯಲಾಗುತ್ತದೆ. ಈ ರಾಸಾಯನಿಕ ವಸ್ತುಗಳನ್ನು ವಾಸನಾದ್ರವ್ಯಗಳೆಂದು (Pheromones) ಕರೆಯಲಾಗುತ್ತದೆ.

ವಾಸನಾದ್ರವ್ಯಗಳ ಬಗ್ಗೆ ಕೀಟಗಳಲ್ಲಿ ಹೆಚ್ಚಿನ ಅಧ್ಯಯನವನ್ನು ಮಾಡಲಾಗಿದೆ. ಈ ದ್ರವ್ಯಗಳ ಅಸ್ತಿತ್ವವನ್ನು ಇತರ ಪ್ರಾಣಿಗಳಲ್ಲಿ ಕಂಡುಹಿಡಿದಿದ್ದು, ಮಾನವರಲ್ಲಿಯೂ ನಿರೀಕ್ಷಿಸಲಾಗಿದೆ. ವಾಸನಾದ್ರವ್ಯಗಳು ನಡೆಸುವ ಕಾರ್ಯದ ಆಧಾರದ ಮೇಲೆ ಅವುಗಳನ್ನು ಲೈಂಗಿಕ ವಾಸನಾದ್ರವ್ಯ (Sex Pheromone), ಎಚ್ಚರಿಕಾ ವಾಸನಾದ್ರವ್ಯ (Alarming Pheromone), ಸಮಷ್ಟಿ ವಾಸನಾದ್ರವ್ಯ (Aggregating pheromones) ಮಾರ್ಗಸೂಚಕ ವಾಸನಾದ್ರವ್ಯ (Trial making pheromone) ಕ್ಷೇತ್ರಸೂಚಕ ವಾಸನಾದ್ರವ್ಯ (Territory marking pheromone) ವಿಕರ್ಷಕ ವಾಸನಾದ್ರವ್ಯ (repellants) ಎಂಬುದಾಗಿ ವಿಂಗಡಿಸಲಾಗಿದೆ.

ಮಾರ್ಗಸೂಚಕಗಳು: ಇರುವೆಗಳು ಒಂದರ ಹಿಂದೆ ಒಂದಾಗಿ ಶಿಸ್ತಿನ ಸಿಪಾಯಿಗಳಂತೆ ನಡೆಯುತ್ತಿರುವುದನ್ನು ನೀವು ಗಮನಿಸಿರಬಹುದು. ಅವುಗಳು ನಡೆಯುತ್ತಿರುವ ಮಾರ್ಗವನ್ನು ನಮ್ಮ ಬೆರಳಿನಿಂದ ಅಡ್ಡಡ್ಡವಾಗಿ ಒರೆಸಿಬಿಟ್ಟಾಗ ಅವು ದಾರಿ ತಿಳಿಯದೆ ಅತ್ತಿತ್ತ ಚದುರುತ್ತವೆ, ಕಾರಣ ಮಾರ್ಗಸೂಚಕಗಳು ಸಿಗದಿರುವುದು.

ಇರುವೆಯ ಹಿಂಭಾಗದಲ್ಲಿ ಕಿಬ್ಬೊಟ್ಟೆಯ ತಳದಲ್ಲಿ ವಾಸನಾ ದ್ರವ್ಯೋತ್ಪಾದಕ ಗ್ರಂಥಿಗಳಿರುತ್ತವೆ. ಉತ್ಪಾದಿತವಾದ ದ್ರವ್ಯವು ಇರುವೆಯು ನೆಲದ ಮೇಲೆ ನಡೆಯುವಾಗ ಒಂದು ಮುಳ್ಳಿನ ಮುಖಾಂತರ ಹರಿದುಕೊಂಡು ಹೋಗುತ್ತದೆ- ಲೇಖನಿಯಿಂದ ಶಾಯಿ ಹರಿಯುವ ಹಾಗೆ. ಈ ಮಾರ್ಗಸೂಚಕವು ಉತ್ಪಾದಿಸಿದ ವಾಸನೆಯನ್ನು ಗುರುತುಹಿಡಿದುಕೊಂಡು ಮತ್ತೊಂದು ಇರುವೆಯು ಮೊದಲಿನ ಇರುವೆ ಹೋಗಿರುವ ಸ್ಥಳವನ್ನು ತಲುಪಬಲ್ಲದು. ಈ ಇರುವೆ ಹೋಗುವಾಗಲೂ ಮಾರ್ಗಸೂಚಕಗಳನ್ನು ಹರಿಸಿಕೊಂಡೇ ಹೋಗುತ್ತದೆ. ಇದನ್ನನುಸರಿಸಿ ಮತ್ತೊಂದು ಇರುವೆ ಬರುತ್ತದೆ. ಈ ಕ್ರಿಯೆ ಹೀಗೆ ಅವ್ಯಾಹತವಾಗಿ ನಡೆಯುವ ಕಾರಣ ಇರುವೆಗಳು ಒಂದರ ಹಿಂದೆ ಒಂದು ನಡೆಯುವಂತೆ ಕಾಣುತ್ತದೆ.

ಒಂದು ಜೇನುನೊಣವು ಹೂಗಳಿರುವ ಸ್ಥಳವನ್ನು ಕಂಡುಹಿಡಿದುಕೊಂಡು, ಗೂಡಿಗೆ ಬರುವಾಗ ಮಾರ್ಗಸೂಚಕಗಳನ್ನು ಸಿಂಪಡಿಸಿಕೊಂಡು ಬಂದು, ಹುಟ್ಟಿನ ಸುತ್ತಲೂ ಒಂದು ರೀತಿಯ ನಾಟ್ಯವನ್ನಾಡಲಾರಂಭಿಸುತ್ತದೆ. ಆಗ ಹುಟ್ಟಿನಲ್ಲಿರುವ ಇತರ ನೊಣಗಳು ಈ ನೊಣವನ್ನು ಹಿಂಬಾಲಿಸುತ್ತವೆ. ಸಿಂಪಡಿಸಿಕೊಂಡು ಬಂದ ಮಾರ್ಗಸೂಚಕಗಳು ಹೂಗಳಿರುವ ಸ್ಥಳವನ್ನು ಸೇರಲು ಅದು ಸಹಾಯಕವಾಗುತ್ತವೆ.

ಎಚ್ಚರಿಕಾ ವಾಸನಾದ್ರವ್ಯಗಳು: ಅಪಾಯದ ಸನ್ನಿವೇಶಗಳಲ್ಲಿ ಕೀಟಗಳು ಇದನ್ನು ಉತ್ಪಾದಿಸುತ್ತವೆ. ಗೂಡಿನಲ್ಲಿರುವ ಒಂದು ಇರುವೆಯನ್ನು ಕೆದಕಿದರೆ ಸಾಕು, ಅಲ್ಲಿರುವ ಇರುವೆಗಳೆಲ್ಲಾ ಗಲಿಬಿಲಿಗೊಳ್ಳುತ್ತವೆ. ಇದಕ್ಕೆ ಕಾರಣ ಕೆಣಕಲ್ಪಟ್ಟ ಇರುವೆಯ ಎಚ್ಚರಿಕಾ ವಾಸನಾದ್ರವ್ಯ. ಇದನ್ನು ಘ್ರಾಣಿಸಿದ ಇತರ ಇರುವೆಗಳು ತಕ್ಷಣ ಅಪಾಯದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತವೆ.

ಜೇನುನೊಣ ಕೆರಳಿ ಕಚ್ಚಿದಾಗ, ಮುಳ್ಳಿನೊಡನಿರುವ ಅನೇಕ ಏಕಕೋಶ ಗ್ರಂಥಿಗಳು 'ಐಸೋ ಅಮೈಲ್ ಅಸಿಟೇಲ್' ಎಂಬ ವಾಸನಾದ್ರವ್ಯವನ್ನು ಉತ್ಪಾದಿಸುತ್ತದೆ. ಇದನ್ನು ಘ್ರಾಣಿಸಿದ ಇತರ ನೊಣಗಳು, ಅದೇ ವ್ಯಕ್ತಿಯನ್ನು, ಅದೇ ಸ್ಥಳದಲ್ಲಿ ಮುತ್ತಿ ಕಚ್ಚಲಾರಂಭಿಸುತ್ತವೆ.

ಸಮಷ್ಟಿ ವಾಸನಾದ್ರವ್ಯಗಳು: ಲೈಕಸ್ ಲೋರಿಪೆಸ್ ಎಂಬ ಜೀರುಂಡೆಯು ಇದನ್ನು ಉತ್ಪಾದಿಸುತ್ತದೆ. ಇದು ಬಿಡುಗಡೆಯಾದ ಕೂಡಲೆ, ಎಲ್ಲೆಲ್ಲಿರುವ ಜೀರುಂಡೆಗಳೆಲ್ಲ ಒಂದೆಡೆ ಕಲೆಯಲಾರಂಭಿಸುತ್ತವೆ. ಸೋಲೆನೋಪ್ಸಿಸ್ ಪೆಸ್ಸಿಮ ಎಂಬ ಜಾತಿಯ ಕೆಲಸಗಾರ ಇರುವೆ ಬಹುಶಃ ಇಂಗಾಲದ ಡೈ-ಆಕ್ಸೈಡನ್ನು ಉತ್ಪಾದಿಸಿ, ಇರುವೆಗಳನ್ನೆಲ್ಲ ಒಂದೆಡೆ ಕಲೆಯುವಂತೆ ಮಾಡುತ್ತದೆ.

ವಿಕರ್ಷಕ ವಾಸನಾದ್ರವ್ಯಗಳು: ಒಂದೇ ಜಾತಿಯ ಕೀಟಗಳ ಸಂಖ್ಯೆ, ಒಂದೇ ಕಡೆ ಹೆಚ್ಚಾದಾಗ ಇದು ಉತ್ಪಾದಿಸಲ್ಪಡುತ್ತದೆ. ಆಗ ಕೀಟಗಳು ಆ ಸ್ಥಳದಿಂದ ಬೇರೆ ಬೇರೆ ಕಡೆಗೆ ಪ್ರಯಾಣ ಮಾಡುತ್ತವೆ. ಟ್ರೈಟೋಲಿಯಂ ಕ್ಯಾಸ್ಟೆನಂ ಮತ್ತು ಟ್ರೈಟೋಲಿಯಂ ಕಾರ್‌ಫ್ಯೂಸಂ ಇದಕ್ಕೆ ಉತ್ತಮ ಉದಾಹರಣೆಗಳು.

ಇರುವೆಯು ಸತ್ತು ಕೊಳೆಯಲಾರಂಭಿಸಿದಾಗ ಒಂದು ರೀತಿಯ ವಾಸನಾದ್ರವ್ಯ ಉತ್ಪಾದನೆಯಾಗುತ್ತದೆ. ಆಗ ಕೆಲಸಗಾರ ಇರುವೆಗಳು ಸತ್ತ ಇರುವೆಯ ಹೆಣವನ್ನು ಗೂಡಿನಿಂದ ಹೊರಗಿರುವ 'ಸ್ಮಶಾನಕ್ಕೆ' ಎಳೆದುಕೊಂಡು ಬರುತ್ತವೆ. ಈ ಸತ್ತ ಇರುವೆಯಿಂದ ಹೊರತೆಗೆದ ವಾಸನಾ ದ್ರವ್ಯವನ್ನು ಬದುಕಿರುವ ಇರುವೆಯ ದೇಹಕ್ಕೆ ಬಳಿದರೆ, ಕೆಲಸಗಾರ ಇರುವೆಗಳು ಅದನ್ನು ಸತ್ತಿದೆಯೆಂದೇ ಭಾವಿಸಿ, 'ಸ್ಮಶಾನಕ್ಕೆ' ಎಳೆದು ತರುತ್ತವೆ. ಒಂದು ವೇಳೆ ಆ ಇರುವೆ ಮತ್ತೆ ಗೂಡಿನೊಳಗೆ ಪ್ರವೇಶಿಸಿತೆಂದರೆ, ಮತ್ತೆ ಅದನ್ನು ಸ್ಮಶಾನಕ್ಕೆಳೆದುಕೊಂಡು ಬಂದು ತಮ್ಮ ಕರ್ತವ್ಯ ನಿಷ್ಠೆಯನ್ನು ತೋರಿಸುತ್ತವೆ. ಇರುವೆಯ ಮೈ ಮೇಲೆ ಆ ರಾಸಾಯನಿಕ ದ್ರವ್ಯ ಇರುವವರೆಗೂ ಈ ಕ್ರಿಯೆ ನಡೆಯುತ್ತಲೇ ಇರುತ್ತದೆ. ಈ ದ್ರವ್ಯವನ್ನು ಒಂದು ಕಲ್ಲಿನ ಚೂರಿಗೆ ಬಳಿದರೂ, ಮೇಲ್ಕಂಡ ಪರಿಣಾಮವನ್ನೇ ಕಾಣಬಹುದು.

ಲೈಂಗಿಕ ವಾಸನಾದ್ರವ್ಯಗಳು: ಗಂಡು ಕೀಟ, ಹೆಣ್ಣು ಕೀಟವಿರುವ ಸ್ಥಳವನ್ನು ಗುರುತು ಹಿಡಿಯುವುದು ಲೈಂಗಿಕ ವಾಸನಾದ್ರವ್ಯಗಳ ಸಹಾಯದಿಂದ. ಇವು ಲೈಂಗಿಕಾಕರ್ಷಣೆಯನ್ನು ಮಾಡಬಲ್ಲವು. ಅಂತೆಯೇ ಕ್ರಿಯೆಗಳನ್ನೂ ಉತ್ತೇಜಿಸಬಲ್ಲವು.

ವಿಜ್ಞಾನಿಗಳು ರೇಷ್ಮೆ ಪತಂಗ (Silk moth)ಮತ್ತು ಜಿಪ್ಸಿ ಪತಂಗಗಳ (Gypsy moth) ಮೇಲೆ ಪ್ರಯೋಗ ನಡೆಸಿ, ಕ್ರಮವಾಗಿ 'ಬಾಂಬಿಕೋಲ್' ಮತ್ತು 'ಜಿಪ್ಲೂರ್' ಎಂಬ ಲೈಂಗಿಕ ವಾಸನಾದ್ರವ್ಯಗಳನ್ನು ಕಂಡುಹಿಡಿದಿದ್ದಾರೆ. ಸುಮಾರು ಐದು ಲಕ್ಷ ಜಿಪ್ಸಿ ಪತಂಗಗಳಿಂದ ಕೇವಲ 20 ಮಿಲಿ ಗ್ರಾಂ.ನಷ್ಟು ಜಿಪ್ಲೂರನ್ನು ಪಡೆಯಲಾಯಿತು. ಅಂದರೆ ಪ್ರತಿಯೊಂದು ಪತಂಗದಲ್ಲೂ 0.01 ಮೈಕ್ರೋಗ್ರಾಂ.ನಷ್ಟಿದೆಯೆಂದಾಯಿತು. ಇಷ್ಟು ಅಲ್ಪ ಪ್ರಮಾಣದ ವಾಸನಾದ್ರವ್ಯ ಸುಮಾರು ಎರಡು ಮೈಲಿಗೂ ಮಿಕ್ಕಿ ದೂರದಲ್ಲಿರುವ ಒಂದು ಬಿಲಿಯನ್ ನಷ್ಟು ಗಂಡು ಪತಂಗಗಳನ್ನು ಆಕರ್ಷಿಸಬಲ್ಲದು. ಈ ವಾಸನೆ ಎಷ್ಟು ಪ್ರಬಲವಾಗಿರುತ್ತದೆಯೆಂದರೆ, ಈ ವಾಸನಾದ್ರವ್ಯವನ್ನು ಯಾವುದಾದರೂ ಮರ ಅಥವಾ ಪ್ಲಾಸ್ಟಿಕ್ಕಿನ ಪತಂಗಗಳಿಗೆ ಸವರಿದರೆ, ಗಂಡು ಅದನ್ನೇ ನಿಜವಾದ ಹೆಣ್ಣು ಪತಂಗವೆಂದು ಗಣಿಸಿ ಅದರೊಡನೆ ಸಂಭೋಗ ಮಾಡಲೆತ್ನಿಸುತ್ತದೆ. ಇದನ್ನು ಕಂಡ ವಿಜ್ಞಾನಿಗಳು ದೊಡ್ಡ ದೊಡ್ಡ ಬಲೆಗಳಲ್ಲಿ ಈ ಲೈಂಗಿಕ ವಾಸನಾದ್ರವ್ಯಗಳನ್ನಿಟ್ಟು ಗಂಡುಗಳು ತಾವಾಗಿಯೇ ಅದರಲ್ಲಿ ಬಂದು ಬೀಳುವಂತೆ ಮಾಡುತ್ತಾರೆ. ಇದರಿಂದ ಬೆಳೆಗಳನ್ನು ನಾಶ ಮಾಡುವ ಈ ಕೀಟಗಳನ್ನು ನಿಯಂತ್ರಿಸಬಹುದಾಗಿದೆಯಲ್ಲದೆ, ಅವುಗಳ ವಂಶಾಭಿವೃದ್ಧಿ ಆಗದಂತೆ ತಡೆಗಟ್ಟಬಹುದಾಗಿದೆ.

ಜೇನು ನೊಣಗಳಲ್ಲಿ ರಾಣಿಜೇನು, ರಾಣಿ ದ್ರವ್ಯ (Queens substance) ಎಂಬ ವಾಸನಾ ದ್ರವ್ಯವನ್ನು ಉತ್ಪಾದಿಸುತ್ತದೆ. ಇದನ್ನು ಸೇವಿಸಿದಾಗ, ಕೆಲಸಗಾರ ನೊಣಗಳ ಲೈಂಗಿಕಾಂಗಗಳು ಬೆಳೆಯುವುದಿಲ್ಲ. ರಾಣಿ ನೊಣವು ಗಂಡಿನೊಡನೆ ಮಿಲನವಾಗಲು ಹಾರಿದಾಗ (Nuptial flight) ಇದು ಗಂಡು ನೊಣವನ್ನು (Drones) ಆಕರ್ಷಿಸುತ್ತದೆ.

ಡನೇಯ್ಡ್ ಗಂಡು ಚಿಟ್ಟೆ ಕುಂಚದಂಥ ಸ್ಪರ್ಶಾಂಗವನ್ನು (antenna) ಹೊಂದಿರುತ್ತದೆ. ಹಾರುವಾಗ ಹೆಣ್ಣಿನ ಸ್ಪರ್ಶಾಂಗವನ್ನು ಕುಂಚದಿಂದ ಹೊಡೆಯುತ್ತದೆ. ಈ ಹೊಡೆಯುವ ಕ್ರಿಯೆ, ಹೆಣ್ಣು ಸಂಭೋಗಕ್ಕೆ ಅಣಿಯಾಗುವವರೆಗೂ ನಡೆಯುತ್ತಲೇ ಇರುತ್ತದೆ.

ಕೀಟಗಳು ವಾಸನಾದ್ರವ್ಯೋತ್ಪಾದಕ ಗ್ರಂಥಿಗಳನ್ನು ದವಡೆಯ ಬಳಿ, ಗುದದ ಬಳಿ ಅಥವ ಮುಳ್ಳಿನಲ್ಲಿ ಹೊಂದಿದ್ದು, ಅಲ್ಲಿಂದಲೇ ವಾತಾವರಣಕ್ಕೆ ಬಿಡುಗಡೆ ಮಾಡುತ್ತವೆ. ಗಾಳಿಯಲ್ಲಿ ಆವಿಯಾಗಿ ತೇಲಿಹೋದಾಗ ಬೇರೆ ಕೀಟಗಳು, ಸ್ಪರ್ಶಾಂಗಗಳ ಮುಖಾಂತರ ಅದನ್ನು ಘ್ರಾಣಿಸಿ ಅದು ಸಾರುವ ಸಂದೇಶವನ್ನು ತಿಳಿಯುತ್ತವೆ. ಗಂಡಿನ ಸ್ಪರ್ಶಾಂಗವು ಹೆಣ್ಣಿನದಕ್ಕಿಂತ ತುಸು ಭಿನ್ನವಾಗಿರುವ ಕಾರಣ ಇದು ವಾಸನೆಯನ್ನು ತತ್‌ಕ್ಷಣ ಗ್ರಹಿಸಬಲ್ಲದು. ಕೆಲವು ವೇಳೆ ಈ ವ್ಯಾಪಾರವು ರಸನೇಂದ್ರಿಯದ (Gustatory) ಮೂಲಕವೂ ನಡೆಯಬಹುದು.

ವಾಸನಾದ್ರವ್ಯಗಳನ್ನು ಎರಡು ವಿಧವಾಗಿ ವಿಂಗಡಿಸಬಹುದು. ಒಂದು ಜಾತಿಯ ಜೀವಿಯು ಉತ್ಪಾದಿಸಿದ ವಾಸನಾದ್ರವ್ಯವನ್ನು ಅದೇ ಜಾತಿಯ ಮತ್ತೊಂದು ಜೀವಿಯು ತಿಳಿಯಲು ಸಾಧ್ಯವಿರುವಂಥವು (Intra-specific) ಮತ್ತು ಒಂದು ಜಾತಿ ಉತ್ಪಾದಿಸಿದುದನ್ನು ಇತರ ಜೀವಿಗಳೂ ತಿಳಿಯಬಲ್ಲಂಥವು (Interspecific). ಉತ್ಪಾದನೆಯಾದ ವಾಸನಾದ್ರವ್ಯವು ಬಿಡುಗಡೆಯಾದ ಕೂಡಲೇ ಪ್ರಭಾವ ಬೀರಲಾರಂಭಿಸಿದರೆ (Releaser) ಅದು ನೇರವಾಗಿ ಕೇಂದ್ರ ನರಮಂಡಲದ ಮೇಲೆ ಪ್ರಭಾವ ಬೀರುವುದರಿಂದ ಪರಿಣಾಮ ತತ್‌ಕ್ಷಣ ಉಂಟಾಗುತ್ತದೆ. ಉದಾಹರಣೆಗೆ, ಎಚ್ಚರಿಕಾ ವಾಸನಾದ್ರವ್ಯಗಳು. ಅಥವಾ ಬಿಡುಗಡೆಯಾಗಿ ಸ್ವಲ್ಪಕಾಲದ ನಂತರ ಪ್ರಭಾವ ಬೀರಲಾರಂಭಿಸಿದರೆ (primer) ಅದು ನಿರ್ನಾಳ ಗ್ರಂಥಿಗಳು (endocrine glands) ಮತ್ತು ಜನನಾಂಗಳ ಮೇಲೆ ಪ್ರಭಾವ ಬೀರುತ್ತದೆ. ಇದಕ್ಕೆ ರಾಣಿದ್ರವ್ಯ ಉತ್ತಮ ಉದಾಹರಣೆ. ಕೆಲವು ವಾಸನಾದ್ರವ್ಯಗಳು ಎರಡು ಕಾರ್ಯಗಳನ್ನೂ ಒಟ್ಟಾಗಿ ಮಾಡಬಲ್ಲವು.

ಇತರೆ ಪ್ರಾಣಿಗಳಲ್ಲಿ, ಸೀಗಡಿ, ಮೀನು, ಸಲಾಮ್ಯಾಂಡರ್, ಕಪ್ಪೆ, ಹಾವು ಮುಂತಾದ ಪ್ರಾಣಿಗಳೂ ವಾಸನಾದ್ರವ್ಯಗಳನ್ನು ಉತ್ಪಾದಿಸುತ್ತವೆ ಎನ್ನಲಾಗಿದೆ. ಕೆಲವು ಪ್ರಾಣಿಗಳು ಅತ್ಯಂತ ವಿಕಾಸ ಹೊಂದಿದ್ದರೂ, ಲೈಂಗಿಕಾಕರ್ಷಣೆಗೆ ವಾಸನಾದ್ರವ್ಯಗಳ ಮೊರೆಹೋಗುತ್ತವೆ. ಉದಾಹರಣೆಗೆ ಕಸ್ತೂರಿಮೃಗ (Musk deer) ವಾಸನಾಯುಕ್ತ ಕಸ್ತೂರಿಯನ್ನು (Muscome) ಪಡೆದಿರುತ್ತದೆ. ಇದು ಲೈಂಗಿಕಾಕರ್ಷಣೆಯನ್ನು ಅವುಗಳಲ್ಲಿ

ಉಂಟುಮಾಡುತ್ತದೆ. ಅಂತೆಯೇ ಪುನಗಿನ ಬೆಕ್ಕು (Vivera Zibetha) ಸಿವೆಟೋನ್ ಎಂಬ ವಾಸನಾ ದ್ರವ್ಯವನ್ನು ಉತ್ಪಾದಿಸುತ್ತದೆ. ಇದು ಲೈಂಗಿಕ ಮತ್ತು ಎಚ್ಚರಿಕಾ ವಾಸನಾದ್ರವ್ಯವಾಗಿ ಕಾರ್ಯನಿರ್ವಹಿಸುತ್ತದೆ. ಮೊಸಳೆಗಳೂ ಮಿಲನದ ಕಾಲದಲ್ಲಿ ವಾಸನಾದ್ರವ್ಯಗಳನ್ನು ಉತ್ಪಾದಿಸುತ್ತವೆನ್ನಲಾಗಿದೆ.

ಅಮೆರಿಕದಲ್ಲಿರುವ ಅಲಿಗೇಟರುಗಳು (ಮೊಸಳೆ ಜಾತಿಗೆ ಸೇರಿದ ಪ್ರಾಣಿ) ಕಾರಂಜಿಯ ರೂಪದಲ್ಲಿ ವಾಸನಾದ್ರವ್ಯವನ್ನು ಚಿಮ್ಮುತ್ತವೆ. ಈ ವಾಸನೆ ಮೈಲಿಗಟ್ಟಲೆ ಹರಡಿರುತ್ತದೆ. ಇವು ತಮ್ಮ ವಾಸಸ್ಥಾನವನ್ನು ಸೂಚಿಸಲು ಕ್ಷೇತ್ರ ಸೂಚಕಗಳನ್ನು (Territory marking) ಉತ್ಪಾದಿಸುತ್ತವೆ.

ಇಲಿಯ ಮೂತ್ರದಲ್ಲಿ ಪ್ರಾಥಮಿಕ ವಾಸನಾದ್ರವ್ಯಗಳಿರುವುದನ್ನು ಕಂಡುಹಿಡಿಯಲಾಗಿದೆ. ರಜಸ್ವಲೆಯಾದ ಹೆಣ್ಣುಕಪಿ, ಆಡುಗಳ ಸುತ್ತಲೂ ಇರುವ ಗಂಡು ಕಪಿ, ಆಡುಗಳು ಹೆಚ್ಚಾಗಿ ಲೈಂಗಿಕ ಪ್ರಚೋದನೆಗೊಳಗಾಗುವುದನ್ನು ಗಮನಿಸಲಾಗಿದೆ. ಇದಕ್ಕೆ ಕಾರಣ ಹೆಣ್ಣಿನಿಂದ ಉತ್ಪಾದನೆಯಾಗುತ್ತಿರಬಹುದಾದ ಲೈಂಗಿಕ ವಾಸನಾದ್ರವ್ಯವೆನ್ನಲಾಗಿದೆ.

ಮಾನವರಲ್ಲಿ: ನಾಯಿಗಳು ಒಬ್ಬ ಮನುಷ್ಯನು ಉಪಯೋಗಿಸಿದ ಕರವಸ್ತ್ರ, ಕೈಕೋಲು ಮುಂತಾದವುಗಳ ವಾಸನೆಯನ್ನು ನೋಡಿ, ಅವರನ್ನು ಹಿಡಿಯಬಲ್ಲದು (ಆದರೆ ಅವಳಿ ಮಕ್ಕಳ ವ್ಯತ್ಯಾಸವನ್ನು ಗುರುತು ಹಿಡಿಯಲಾರವು). ಅಂದರೆ, ನಾಯಿಗಳು ಹಿಡಿಯಬಲ್ಲಂಥ ಯಾವುದೋ ಒಂದು ವಾಸನಾದ್ರವ್ಯವನ್ನು ಮಾನವ ಉತ್ಪಾದಿಸುತ್ತಿದ್ದಾನೆ ಎಂದಾಯಿತಲ್ಲವೆ? ಈ ವಾಸನೆ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾವಣೆಯಾಗುತ್ತಿರುತ್ತದೆ. ಇದನ್ನು ಮನುಷ್ಯ ಗುರುತಿಸಲಾರ. ಇದು ಅವನು ಸೇವಿಸುವ ಆಹಾರ, ಉಡುವ ಬಟ್ಟೆ, ದೈನಂದಿನ ಚಟುವಟಿಕೆಗಳನ್ನು ಅನುಸರಿಸಿರುತ್ತದೆ.

ನಾವು ಎಲ್ಲೇ ಇದ್ದರೂ ನಮ್ಮನ್ನು ಹುಡುಕಿಕೊಂಡು ಬಂದು ಕಚ್ಚುವ ಸೊಳ್ಳೆಗಳು, ನಮ್ಮ ಬೆವರಿನಲ್ಲಿ ಉತ್ಪಾದನೆಯಾಗುವ ಹಲವು ರಾಸಾಯನಿಕ ವಸ್ತುಗಳ ವಾಸನೆಯನ್ನು ಗುರುತು ಹಿಡಿದುಕೊಂಡು ಬರುತ್ತವೆ. ಹಳದೀ ಜ್ವರಕಾರಕ ಸೊಳ್ಳೆಗಳು (Ades agyptei) ಬೆವರಿನಲ್ಲಿರುವ ಎಲ್-ಲ್ಯಾಕ್ಟಿಕ್ ಆಮ್ಲವನ್ನು ಗ್ರಹಿಸಿಕೊಂಡು ಬರುತ್ತವೆ. ಜತೆಗೆ ಬೆವರಿನಲ್ಲಿರುವ ಇಂಗಾಲದ ಡಯಾಕ್ಸೈಡ್ ಸಹ ಈ ಕ್ರಿಯೆಯಲ್ಲಿ ಸಹಕರಿಸುತ್ತದೆ. ಸೊಳ್ಳೆಗಳು ಗಂಡಸರಿಗಿಂತಲೂ ಹೆಂಗಸರನ್ನು ಕಾಡುವುದು ಹೆಚ್ಚು. ಕಾಡುವ ಪ್ರಮಾಣ ಆಕೆಯ ಋತುಚಕ್ರವನ್ನು (Menstrueal cycle) ಅವಲಂಬಿಸಿರುತ್ತದೆ. ಅವು ಋತುಚಕ್ರದ 13-18 ದಿವಸಗಳಲ್ಲಿ ಕಾಡುವುದು ಹೆಚ್ಚು.

ನಮಗೆ ತಿಳಿಯದಂತೆಯೇ ನಾವು ವಾಸನಾದ್ರವ್ಯಗಳನ್ನು ಉತ್ಪಾದಿಸಿ, ನಮ್ಮ ಕಣ್ಣ ಮುಂದೆಯೇ ಅವುಗಳ ಪರಿಣಾಮ ಕಾಣುತ್ತಿದ್ದರೂ, ನಾವು ಅವುಗಳನ್ನು ತಿಳಿಯದಿರಲು ಸಾಧ್ಯವಿದೆ. ಸಾಮಾನ್ಯವಾಗಿ ಒಬ್ಬರು ಆಕಳಿಸಿದಾಗ ಮತ್ತೊಬ್ಬರು ಆಕಳಿಸುವುದನ್ನು ಗಮನಿಸಿರಬಹುದು. ಆಕಳಿಸಿದಾಗ ಉತ್ಪಾದನೆಯಾಗುವ, ಆವಿಯಾಗಬಲ್ಲ ಯಾವುದಾದರೂ ವಾಸನಾದ್ರವ್ಯ ಇದಕ್ಕೆ ಕಾರಣವಾಗಿರಬಹುದೇ? ಅಂತೆಯೇ ಅಳುವಾಗ, ನಗುವಾಗ, ಸೀನುವಾಗ, ಕೆಮ್ಮುವಾಗ, ಕೆರೆಯುವಾಗ ಅನೇಕ ವಾಸನಾದ್ರವ್ಯಗಳು ಉತ್ಪಾದನೆಯಾಗುತ್ತಿರಬಹುದು. ಇದರ ಬಗ್ಗೆ ವಿವರವಾದ ಸಂಶೋಧನೆ ಅಗತ್ಯವಿದೆ.

ಮಾನವರಲ್ಲಿ ವಾಸನಾದ್ರವ್ಯವ್ಯೋತ್ಪಾದಕ ಗ್ರಂಥಿಗಳು ಇನ್ನೂ ಪ್ರಾಥಮಿಕಾವಸ್ಥೆಯಲ್ಲೇ ಇವೆಯೆನ್ನಲಾಗಿದೆ. ಇಂಥ ಗ್ರಂಥಿಗಳು, ಮಾನವರಲ್ಲಿ ತಲೆಯಿಂದ ಕಾಲಿನವರೆಗೂ ಹರಡಿವೆ. ಕಂಕುಳ ಗ್ರಂಥಿಗಳು, ಸ್ತನ ತೊಟ್ಟಿನ ಸುತ್ತಲಿರುವ ಕೆಂಪಾದ ಪ್ರದೇಶದಲ್ಲಿರುವ ಗ್ರಂಥಿಗಳು, ತುಟಿಯಲ್ಲಿನ ಗ್ರಂಥಿಗಳು, ಲೈಂಗಿಕಾಂಗಗಳ ಸುತ್ತಲಿರುವ ಗ್ರಂಥಿಗಳು, ಕುತ್ತಿಗೆ ಸುತ್ತಲಿರುವ ಗ್ರಂಥಿಗಳು, ಶ್ರವಣನಳಿಕೆಯಲ್ಲಿನ ಗುಗ್ಗುತ್ಪಾದಕ ಗ್ರಂಥಿಗಳು, ಕಣ್ಣು ರೆಪ್ಪೆಯಲ್ಲಿನ ಗ್ರಂಥಿಗಳು ಇವುಗಳಲ್ಲಿ ಮುಖ್ಯವಾದವು. ಇಲ್ಲಿ ನಾವು ಗಮನಿಸಬಹುದಾದ ಒಂದು ಅಂಶವೆಂದರೆ ಭಾರತೀಯ ಪ್ರಾಚೀನ ಕಾಮಶಾಸ್ತ್ರಜ್ಞರಾದ ವಾತ್ಸಾಯನ, ನಂದಿಕೇಶ, ಸಾಣಿಕಾಪುತ್ರ ಮುಂತಾದವರು ಮೇಲೆ ತಿಳಿಸಿದ ಅಂಗಾಂಗಗಳಿಗೆ ಪ್ರಾಮುಖ್ಯವನ್ನು ನೀಡಿದ್ದು, ಅವುಗಳನ್ನು ಕಾಮೋತ್ತೇಜಕ ಅಂಗಾಂಗಗಳೆಂದು ಪರಿಗಣಿಸಿರುವುದು. ಇವುಗಳಿಂದ ಉತ್ಪಾದನೆಯಾಗುವ ವಾಸನೆಯು ಗಂಡಸರಲ್ಲಿ ಕಾಮವನ್ನು ಕೆರಳಿಸುತ್ತದೆ. ಅಂತೆಯೇ ದೇಹದ ವಾಸನೆಯ ಆಧಾರದ ಮೇಲೆ ಅವರು ಮಾನವರನ್ನು 4 ಮುಖ್ಯ ಗುಂಪುಗಳನ್ನಾಗಿ ವಿಂಗಡಿಸಿ, ಕೆಲವು ಪ್ರಭೇದಗಳನ್ನೂ ಮಾಡಿದ್ದಾರೆ. ಈ ಅಂಶಗಳನ್ನು ಕುರಿತು ಇಂದಿನ ವಿಜ್ಞಾನಿಗಳು ವಿವರವಾದ ಸಂಶೋಧನೆಗಳನ್ನು ಮಾಡಿದಲ್ಲಿ ವಾಸನಾ ದ್ರವ್ಯಗಳ ಬಗ್ಗೆ ಮತ್ತಷ್ಟು ತಿಳಿಯಬಹುದಾಗಿದೆ.

ನೋವು ಶಮನಕ್ಕೆ ಆಂತರಿಕ ಹಾಗೂ ಸಾಮಾಜಿಕ ಬೆಂಬಲ

• ಮಾಯಾ ಬಾಲಚಂದ್ರ

ನೋವು ಸಹಿಸುವ ಮನುಷ್ಯನ ಗುಣವನ್ನು ಮನೋವೈಜ್ಞಾನಿಕ ನೆಲೆಯಲ್ಲಿ ನೋಡಿದರೆ, ಅದು ಕೇವಲ ದೈಹಿಕ ಸಾಮರ್ಥ್ಯವಲ್ಲ; ಅದು, ಮನಸ್ಸು, ಅನುಭವ, ಅರ್ಥೈಸುವಿಕೆಗಳ ಸಂಕಲನ ಎನಿಸುತ್ತದೆ. ಮನೋವಿಜ್ಞಾನದಲ್ಲಿ ನೋವು ಎಂದರೆ ದೇಹದ ಸಂಕೇತದ ಜತೆಗೆ ಮನಸ್ಸಿನ ವ್ಯಾಖ್ಯಾನ. ಒಂದೇ ನೋವು ಒಬ್ಬರಿಗೆ ಅಸಹನೀಯವಾಗಬಹುದು, ಇನ್ನೊಬ್ಬರಿಗೆ ಸಹನೀಯವಾಗಬಹುದು.

ನೋವಿಗೆ ಮನುಷ್ಯ ಕೊಡುವ ಅರ್ಥವೇ ಅದರ ತೀವ್ರತೆಯನ್ನು ನಿರ್ಧರಿಸುತ್ತದೆ. ಇದು ನನ್ನ ಬೆಳವಣಿಗೆಯ ಭಾಗ ಎಂದುಕೊಂಡರೆ, ನೋವು ಕಡಿಮೆಯಾದ ಅನುಭವವಾಗುತ್ತದೆ. ಇದು ಅನ್ಯಾಯ ಎಂದುಕೊಂಡರೆ, ನೋವು ಹೆಚ್ಚು ಅನುಭವಕ್ಕೆ ಬರುತ್ತದೆ. ವಿಕ್ಟರ್ ಫ್ರಾಂಕಲ್ ಅವರ 'ಲೋಗೊಥೆರಪಿ' ಪ್ರಕಾರ ಅರ್ಥ ಕಂಡುಕೊಂಡ ನೋವು ಸಹನೀಯ. ನೋವಿನ ಮೇಲೆಯೇ ಮನಸ್ಸು ಕೇಂದ್ರೀಕೃತವಾದರೆ, ಆಗ ನೋವು ಹೆಚ್ಚಾದಂತೆ ಅನಿಸುತ್ತದೆ. ಮನೋನಿಯಂತ್ರಣ (Cognitive Control)ದಿಂದ ನೋವು ಕಡಿಮೆ ಪ್ರಮಾಣದಲ್ಲಿ ಅನುಭವಕ್ಕೆ ಬರುತ್ತದೆ. ಇದಕ್ಕಾಗಿ ಬೇರೆ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದೊಂದು ಉಪಾಯ. ಇದನ್ನು Attention Theory of Pain ಎನ್ನುತ್ತಾರೆ. ಹಿಂದೆ ನೋವನ್ನು ಎದುರಿಸಿ, ಜಯಿಸಿದ ಅನುಭವವಿದ್ದರೆ, ಆತ್ಮವಿಶ್ವಾಸ ಹೆಚ್ಚುತ್ತದೆ. ನಾನು ಇದನ್ನು ಸಹಿಸಬಲ್ಲೆ ಎಂಬ ನಂಬಿಕೆ ಬರುತ್ತದೆ. ಇದೇ Psychological Resilience.

ಒಂಟಿತನದಲ್ಲಿ ನೋವು ಭಾರಿಯಾಗಿರುತ್ತದೆ. ಆದರೆ, 'ನಿನ್ನ ಜತೆಗೆ ನಾವಿದ್ದೇವೆ' ಎಂಬ ಮಾತೇ ನೋವಿನ ತೀವ್ರತೆಯನ್ನು ಕಡಿಮೆ ಮಾಡುತ್ತದೆ. ಇದು ಸಾಮಾಜಿಕ ಬೆಂಬಲ (Social Support). ಇದನ್ನು Buffering Effect ಎನ್ನುತ್ತದೆ ಮನೋವಿಜ್ಞಾನ.

ನೋವು ಸಹಿಸುವ ಗುಣವು ಮಾನಸಿಕ ಬೆಳವಣಿಗೆಯ ಸೂಚಕ. ಇಲ್ಲೊಂದು ವಿಷಯ ಗಮನಿಸಬೇಕು, ನೋವನ್ನು ಸಹಿಸುವುದು ಎಂದರೆ, ನೋವನ್ನು ನಿರ್ಲಕ್ಷಿಸುವುದಲ್ಲ, ಬದಲಿಗೆ ನೋವಿನ ನಡುವೆಯೂ ಮನಸ್ಸನ್ನು ಸ್ಥಿರವಾಗಿಟ್ಟುಕೊಳ್ಳುವುದು. ಸಹನೆ, ಆತ್ಮಬಲ, ವಾಸ್ತವಿಕತೆಯ ಸ್ವೀಕಾರದಿಂದ ಮಾತ್ರ ಇದು ಸಿದ್ಧಿಸಲು ಸಾಧ್ಯ. ಭಾರತೀಯ ಚಿಂತನೆಯಲ್ಲಿ, ದುಃಖವು ಅನುಭವದ ಭಾಗವಾದರೆ, ಸಹನೆಯು ಜ್ಞಾನೋದಯದ ಹಾದಿ. ಭಗವದ್ಗೀತೆಯ 'ಸಮದುಃಖಸುಖಂ ಧೀರಂ' ತತ್ವ ಇದನ್ನೇ ಹೇಳುತ್ತದೆ. ನೋವು ಸಾಮಾನ್ಯವಾಗಿ ದೇಹಕ್ಕಾದಂತೆ ಕಾಣಿಸಿಕೊಂಡರೂ, ತತ್ವಶಾಸ್ತ್ರದಲ್ಲಿ ಅದು ಅಸ್ತಿತ್ವದ (existence) ಪ್ರಶ್ನೆಯಾಗಿ ಹೊರಹೊಮ್ಮುತ್ತದೆ. ನೋವು ನನಗೆ ಆಗುತ್ತಿದೆ ಎಂಬ ಭಾವದಿಂದ ಆರಂಭವಾಗಿ, ನಾನು ಯಾರು? ಎಂಬ ಆತ್ಮಚಿಂತನೆಗೆ ದಾರಿಯಾಗುತ್ತದೆ. ಇಲ್ಲಿಯೇ ನೋವು, 'ಅನುಭವ' ದಿಂದ 'ಅರ್ಥ'ಕ್ಕೆ ಪರಿವರ್ತಿತವಾಗುತ್ತದೆ. ಇಲ್ಲಿ ಸಹನೆಯು ಸಚೇತನ ಸ್ವೀಕಾರ (conscious acceptance)ವಾಗಿ ಶಕ್ತಿ ನೀಡುತ್ತದೆ. ನಮ್ಮ ನಿಯಂತ್ರಣದಲ್ಲಿರುವ ನಮ್ಮ ಆಲೋಚನಾ ಲಹರಿಯನ್ನು ಪ್ರಜ್ಞಾಪೂರ್ವಕವಾಗಿ ಉಪಯುಕ್ತ ದಾರಿಯ ಕಡೆಗೆ ತೆಗೆದುಕೊಂಡು ಹೋಗುವುದು ಮತ್ತು ನಮ್ಮ ನಿಯಂತ್ರಣದಲ್ಲಿ ಇಲ್ಲದ ಪ್ರಕ್ರಿಯೆಗಳ ಬಗ್ಗೆ ಸ್ಥಿತಪ್ರಜ್ಞತೆ ಬೆಳೆಸಿಕೊಳ್ಳುವುದನ್ನೇ ಮೂಲಸಿದ್ಧಾಂತವಾಗಿಟ್ಟುಕೊಂಡಿರುವ ಸ್ಟೋಯಿಕ್ ತತ್ವಶಾಸ್ತ್ರ ಈ ಸಂಗತಿಯನ್ನು ಸರಳವಾಗಿ ಹೇಳುತ್ತದೆ. ಅದರ ಪ್ರಕಾರ ನೋವು ನಿನ್ನ ಮೇಲೆ ನಡೆಯುವುದಿಲ್ಲ; ನೀನು ನೋವಿಗೆ ಹೇಗೆ ಪ್ರತಿಕ್ರಿಯಿಸುತ್ತೀಯೋ ಅದರಿಂದಲೇ ನೋವಿನ ಪ್ರಮಾಣ ನಿರ್ಧಾರವಾಗುತ್ತದೆ. ಸ್ಟೋಯಿಕ್ ತತ್ವಶಾಸ್ತ್ರವು ಭಾರತೀಯ ಚಿಂತನೆಯ ನಿತ್ಯಾನಿತ್ಯ ವಿವೇಕದ ಪ್ರತಿರೂಪವೂ ಹೌದು.

ದುರಾಸೆಯೆಂಬ ದುರ್ಗುಣ

• ರಂಗನಾಥ್ ಗುಡಿಮನಿ, ಸಿದ್ದಾಪುರ

ಈ ವಸುಂಧರ ತುಂಬಾ ಸುಂದರ. ಅದರಲ್ಲಿಯೂ ಜೀವನ ಎಲ್ಲಕ್ಕಿಂತಲೂ ಸುಂದರ. ಮನುಷ್ಯನಿಗೆ ಸಹಜವಾಗಿ ಹುಟ್ಟಿನಿಂದ ಸಾಯುವವರೆಗೂ ಅನೇಕ ಬಗೆಯ ಸದ್ಗುಣ, ದುರ್ಗುಣಗಳು ರಕ್ತಗತವಾಗಿ ಅಂಟಿಕೊಂಡು ಬಂದಿರುತ್ತವೆ. ಕಾಮ, ಕ್ರೋಧ, ಮೋಹ, ಲೋಭ, ಮದ, ಮತ್ಸರ ಎನ್ನುವ ಬೇಡವಾದ ಗುಣಗಳು ನಮ್ಮಲ್ಲಿ ತುಂಬಿ ತುಳುಕುತ್ತಿರುತ್ತವೆ. ಈ ಆರು ಮಂದಿಗಿಂತ ತುಂಬಾ ಅಪಾಯಕಾರಿ ಎಂದರೆ ಅದು ನಮ್ಮ ದುರಾಸೆ. ಒಂದೇ ಮಾತಲ್ಲಿ ಹೇಳಬೇಕೆಂದರೆ ಅತಿಯಾದ ಆಸೆಯೇ ದುರಾಸೆ. ಇದು ನಮ್ಮನ್ನು ವ್ಯಾಪಕ ದುಃಖಿತರನ್ನಾಗಿಸಿ, ದುರಹಂಕಾರಿಯನ್ನಾಗಿ ಮಾರ್ಪಡಿಸುತ್ತದೆ.

ಮನುಷ್ಯನಲ್ಲಿ ಆಸೆಗಳು ಇರಬೇಕು, ಆದರೆ ದುರಾಸೆ ಇರಬಾರದು. ಆಸೆಯೇ ದುಃಖಕ್ಕೆ ಮೂಲವಾದರೆ, ದುರಾಸೆಯು ನಮ್ಮ ದುರಂತಕ್ಕೆ ಮೂಲ ಕಾರಣವಾಗುವುದು. ಅತಿಯಾದ ಆಸ್ತಿ, ಸಂಪತ್ತು, ಅಂತಸ್ತುಗಳೇ ನಮ್ಮಲ್ಲಿ ಇಲ್ಲಸಲ್ಲದ ಹಪಾಪಿಗಳನ್ನು ಹುಟ್ಟು ಹಾಕುತ್ತವೆ. ದುರಾಸೆಯಿಂದ ನಮ್ಮೊಳಗಿನ ಮಾನವೀಯ ಮೌಲ್ಯ ಗಳೆಲ್ಲವೂ ಮಣ್ಣುಪಾಲಾಗಿ ಇಂಥ ದುರಾಸೆಗೆ ಗೌರವಕ್ಕಿಂತ ಅಗೌರವ, ಸೌಭಾಗ್ಯಕ್ಕಿಂತ ದೌರ್ಭಾಗ್ಯ, ಒಳ್ಳೆಯದಕ್ಕಿಂತ ಕೆಟ್ಟದ್ದೇ ಹೆಚ್ಚಾಗಿ ಸಂಭವಿ ಸುವುದು. ದುರಾಸೆ ಎನ್ನುವ ವಿಷವೃಕ್ಷವನ್ನು ಬೇರು ಸಮೇತ ಕಿತ್ತು ಹಾಕಿ ದಾಗಲೇ ಸುಖ, ಶಾಂತಿ, ನೆಮ್ಮದಿಗಳ ಜತೆಗೆ ಜೀವನದಲ್ಲಿ ಅಗಾಧವಾದ ಪರಿವರ್ತನೆ ಆಗುವುದು. ದುರಾಸೆಯು ಪ್ರತಿಯೊಬ್ಬ ವ್ಯಕ್ತಿ ಮತ್ತು ಸಮಾಜಕ್ಕೆ ಮಾರಕವಾದ ದುರ್ಗುಣ. ದುರಾಸೆ ಉಳ್ಳವರ ಮಾತುಗಳು ಹೆಚ್ಚಾಗಿ ಮಲಿನವಾಗಿರುತ್ತವೆ. ಇದರಿಂದಾಗಿ ನಮ್ಮ ಎಲ್ಲ ಬಗೆಯ ಪರಿಶುದ್ಧ ಸಂಬಂಧಗಳು ಅಸ್ತವ್ಯಸ್ತವಾಗಿ, ಸಾಮಾಜಿಕ ಸಾಮರಸ್ಯ ಸಂಪೂರ್ಣ ನಾಶವಾಗಿಬಿಡುತ್ತದೆ. ದುರಾಸೆ ಇರದವರೇ ಇಲ್ಲಿ ಪರಮ ಸುಖಿಗಳು. ಅಕಸ್ಮಾತ್ ದುರಾಸೆಯ ಮಡಿಲು ಸೇರಿದ್ದೆ ನಿಜವಾದಲ್ಲಿ ದುಃಖದ ಕಡಲು ತುಂಬಿ ಹರಿಯುವುದು ಖಚಿತ. ನಾವು ಎಲ್ಲರಿಗಿಂತ ಎತ್ತರೆತ್ತರಕ್ಕೆ ಬೆಳೆಯಬೇಕೆಂದರೆ ದುರಾಸೆಯನ್ನು ಕಾಲಡಿಯಲ್ಲಿಯೇ ಬಿಟ್ಟು ಬಿಡಬೇಕು. ಇಂಥ ದುರಾಸೆಯ ಬುತ್ತಿಯನ್ನು ನೆತ್ತಿಯ ಮೇಲೆ ಎಲ್ಲೆಂದರಲ್ಲಿ ಹೊತ್ತುಕೊಂಡು ಸುತ್ತಾಡಿದರೆ ಅದು ಎಲ್ಲರೆದುರು ಅವಮಾನದ ಮಳೆಗರೆಯುತ್ತದೆ. ಈ ನೆಲದ ನಿಷ್ಕಾಮ ಸಂತರು, ಶರಣರು ತಮ್ಮ ಜೀವನಪರ್ಯಂತ ದುರಾಸೆಯನ್ನು ದೂರತಳ್ಳಿ ಬದುಕಿದರು. ಬದುಕಿಗೆ ಮತ್ತಷ್ಟು ಮೆರುಗು ತಂದು, ಮನುಷ್ಯ ಸಂಕುಲಕ್ಕೆ ಮಾದರಿಯಾದರು ಎಂಬುದನ್ನು ಮರೆಯದಿರೋಣ..

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

2. ಗುರುತು ಪರಿಚಯವಿಲ್ಲದವನು (5)
6. ಅನಿವಾರ್ಯವಾಗಿ ನೀಡಿದ ಬೀಳ್ಕೊಡುಗೆ (3)
8. ಅರ್ಧಚಂದ್ರಾಕೃತಿಯ ರಚನೆಯಿದು (3)
10. ಸೇವಕನೊಂದಿಗೆ ಬಂದಿರುವ ಹೂವು (4)
11. ಆ ಪರಿ ನಡೆದಿದೆ ಮದುವೆ (4)
13. ಅಷ್ಟ ಸರ್ಪಗಳಲ್ಲಿ ಒಂದು (3)
15. ಮರಿಬಿದ್ದಿರುವ ಪ್ರಪಾತ (3)
17. ಆಕಸ್ಮಿಕವಾಗಿ ಕೇಳುವುದನ್ನು ಧ್ವನಿಸುವ ನುಡಿಗಟ್ಟು (5)

ಮೇಲಿಂದ ಕೆಳಕ್ಕೆ

1. ಹಣವಿಲ್ಲದೆ ದೀನಳಾದವಳು (3)
2. ಅವನನ್ನು ಯಾರೂ ಗೆಲ್ಲಲಾಗದು (3)
3. ಖಾಲಿಯಾಗಿರುವ ಕೈ (4)
4. ಈ ಆತುರ ಅತಿಯಾಯಿತು (3)
5. ಒರಟಲ್ಲದುದು ತಲೆಕೆಳಗಾಗಿದೆ (3)
7. ವ್ಯರ್ಥವಾಗಿ ತಿರುಗು ಎನ್ನುವ ನುಡಿಗಟ್ಟು (5)
9. ದೊಡ್ಡಮಟ್ಟದ ನಾಶ (5)
12. ಇದು ಯಾವ ಬಗೆಯ ಚುರುಕು (4)
13. ಉತ್ತರ ಹಾಗೂ ಪಶ್ಚಿಮ ದಿಕ್ಕಿನ ನಡುವಿನದ್ದು (3)
14. ಗಾಳಿ ಬೆಳಕಿನ ಅನುಕೂಲಕ್ಕೆ ಮಾಡಿರುವ ಬೆಳಕಿಂಡಿ (3)
15. ಹೆತ್ತಮ್ಮನಿಗೆ ಪ್ರೀತಿಯ ವಿಷಯದಲ್ಲಿ ಈ ಅಂಗ ಸ್ವಲ್ಪ ಜಾಸ್ತಿಯೇ ಗೊತ್ತಿರುತ್ತದೆ! (3)
16. ರೀತಿಯೊಂದಿಗೆ ಬಂದಿರುವ ಜೋಡಿಪದ (3)

ಸರಿಯುತ್ತರಗಳು

ಸದ್ದಿಲ್ಲದೆ ನೂರಾರು ಜೀವಗಳನ್ನು ಉಳಿಸಿದ ನೀರಜಾ ಭಾನೋಟ್

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

1986ರ ಸೆಪ್ಟೆಂಬರ್ 5ರ ಮುಂಜಾನೆ. ಕರಾಚಿ ವಿಮಾನ ನಿಲ್ದಾಣದ ರನ್‌ವೇ ಮೇಲೆ 'ಪ್ಯಾನ್ ಆಮ್ 73' ವಿಮಾನ ನಿಂತಿತ್ತು. ಮುಂಬೈನಿಂದ ಫ್ರಾಂಕ್‌ಫರ್ಟ್ ಮೂಲಕ ನ್ಯೂಯಾರ್ಕ್‌ಗೆ ಹೊರಡಬೇಕಿದ್ದ ಆ ವಿಮಾನದಲ್ಲಿ ನೂರಾರು ಪ್ರಯಾಣಿಕರಿದ್ದರು. ಅಂದು ಆ ವಿಮಾನದಲ್ಲಿ ಹಿರಿಯ ಪರ್ಸರ್ (ವಿಮಾನ ಪರಿಚಾರಕಿ) ಯಾಗಿ ಕರ್ತವ್ಯದಲ್ಲಿದ್ದವರು 22 ವರ್ಷದ ಭಾರತೀಯ ಯುವತಿ ನೀರಜಾ ಭಾನೋಟ್. ಅಂದು ಮುಂಜಾನೆ ನಡೆದ ಆ ಘಟನೆ ನೀರಜಾರ ಹೆಸರನ್ನು ಇತಿಹಾಸದಲ್ಲಿ ಅಜರಾಮರಗೊಳಿಸುತ್ತವೆ ಎಂದು ಯಾರೂ ಊಹಿಸಿರಲಿಲ್ಲ.

ವಿಮಾನ ನಿಲ್ದಾಣದಲ್ಲಿ ನಿಂತಿದ್ದ ವಿಮಾನಕ್ಕೆ ನಾಲ್ವರು ಸಶಸ್ತ್ರ ಪ್ಯಾಲೆಸ್ತೀನಿಯನ್ ಉಗ್ರರು ನುಗ್ಗಿದರು. ವಿಮಾನವನ್ನು ಸೈಪ್ರಸ್‌ಗೆ ಕೊಂಡೊಯ್ಯಬೇಕೆಂದು ಅವರು ಆಗ್ರಹಿಸಿದರು. ವಿಮಾನದ ಒಳಗೆ ಆತಂಕ ಮನೆಮಾಡಿತ್ತು, ಅಂಥ ಸಮಯದಲ್ಲೂ ನೀರಜಾ ಸಮಯಪ್ರಜ್ಞೆ ಮೆರೆದರು. ಅವರು ರಹಸ್ಯವಾಗಿ ಹೈಜಾಕ್ ಸಂಕೇತವನ್ನು ಪೈಲಟ್‌ಗಳಿಗೆ ರವಾನಿಸಿದರು. ಇದರಿಂದಾಗಿ ಪೈಲಟ್‌ಗಳು ಕಾಕ್‌ಪಿಟ್‌ನಿಂದ ತಪ್ಪಿಸಿಕೊಳ್ಳಲು ಸಾಧ್ಯವಾಯಿತು. ವಿಮಾನವನ್ನು ಹಾರಿಸಲು ಪೈಲಟ್‌ಗಳೇ ಇಲ್ಲದಂತಾದಾಗ, ವಿಮಾನವು ನೆಲದ ಮೇಲೆಯೇ ಉಳಿಯುವಂತಾಯಿತು. ನಿರಜಾ ಅವರ ಈ ಒಂದು ನಿರ್ಧಾರ ಸಾವಿರಾರು ಜೀವಗಳನ್ನು ಕಾಪಾಡಿತು.

ಮುಂದಿನ 17 ಗಂಟೆಗಳ ಕಾಲ ವಿಮಾನದ ಒಳಗಿದ್ದ ಪ್ರಯಾಣಿಕರು ಮೃತ್ಯುವಿನ ನೆರಳಿನಲ್ಲಿ ಕಳೆದರು. ಈ ಸಂಕಷ್ಟದ ಸಮಯದಲ್ಲಿ ನೀರಜಾ ಪ್ರತಿಯೊಬ್ಬ ಪ್ರಯಾಣಿಕನಿಗೂ ಧೈರ್ಯ ತುಂಬುತ್ತಾ, ಅವರಿಗೆ ಆಹಾರ ಮತ್ತು ನೀರನ್ನು ನೀಡುತ್ತಾ ಓಡಾಡುತ್ತಿದ್ದರು. ಉಗ್ರರು ಅಮೆರಿಕನ್ ಪ್ರಜೆಗಳನ್ನು ಗುರಿಯಾಗಿಸಲು ಅವರ ಪಾಸ್‌ಪೋರ್ಟ್‌ಗಳನ್ನು ಸಂಗ್ರಹಿಸಲು ಸೂಚಿಸಿದಾಗ, ನೀರಜಾ ಜಾಣ್ಮೆಯಿಂದ ಅನೇಕ ಪಾಸ್‌ಪೋರ್ಟ್‌ಗಳನ್ನು ಸೀಟಿನ ಕೆಳಗೆ ಮತ್ತು ಕಸದ ಬುಟ್ಟಿಯಲ್ಲಿ ಅಡಗಿಸಿಟ್ಟರು. ಇದು ಅವರ ಜೀವಕ್ಕೇ ಅಪಾಯ ತರುವ ಕೆಲಸವಾಗಿತ್ತು, ಆದರೂ ಅವರು ಅಂಜಲಿಲ್ಲ. ಸಮಯ ಕಳೆದಂತೆ ಉಗ್ರರಲ್ಲಿ ತಾಳ್ಮೆ ಕಡಿಮೆಯಾಯಿತು. ವಿಮಾನದ ಒಳಗಿನ ವಿದ್ಯುತ್ ಸಂಪರ್ಕ ಕಡಿತಗೊಂಡಾಗ ಉಗ್ರರು ಏಕಾಏಕಿ ಗುಂಡಿನ ದಾಳಿ ಮತ್ತು ಗ್ರೆನೇಡ್ ದಾಳಿ ನಡೆಸಲಾರಂಭಿಸಿದರು. ಆ ಕ್ಷಣದಲ್ಲಿ ನೀರಜಾ ಮನಸ್ಸು ಮಾಡಿದ್ದರೆ ಮೊದಲು ತಾವೇ ಹೊರಹಾರಿ ಪ್ರಾಣ ಉಳಿಸಿಕೊಳ್ಳಬಹುದಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಅವರು ತುರ್ತು ನಿರ್ಗಮನ ದ್ವಾರವನ್ನು ತೆರೆದು, ಪ್ರಯಾಣಿಕರು ಹೊರಹೋಗಲು ದಾರಿಮಾಡಿಕೊಟ್ಟರು.

ಗುಂಡುಗಳು ಹಾರುತ್ತಿದ್ದರೂ ನೀರಜಾ ತಲೆ ಕೆಡಿಸಿಕೊಳ್ಳಲಿಲ್ಲ. ಮೂವರು ಮಕ್ಕಳಿಗೆ ಗುಂಡು ತಗಲದಂತೆ ಅವರು ತಮ್ಮ ದೇಹವನ್ನೇ ಗುರಾಣಿಯಾಗಿ ಅಡ್ಡ ಹಿಡಿದರು. ಆ ವೇಳೆ ಉಗ್ರರ



ಗುಂಡುಗಳಿಗೆ ನೀರಜಾ ಬಲಿಯಾದರು. ಆ ದಾಳಿಯಲ್ಲಿ ನೀರಜಾ ಸೇರಿದಂತೆ 20 ಜನರು ಪ್ರಾಣ ಕಳೆದುಕೊಂಡರು, ಆದರೆ ಉಳಿದ ನೂರಾರು ಪ್ರಯಾಣಿಕರು ನೀರಜಾ ಅವರ ಅಪ್ರತಿಮ ಧೈರ್ಯದಿಂದಾಗಿ ಬದುಕುಳಿದರು. ಇಂದು ಬದುಕಿರುವ ಆ ಪ್ರತಿಯೊಬ್ಬ ಪ್ರಯಾಣಿಕನೂ ತಾನು ಇಂದು ಉಸಿರಾಡುತ್ತಿರುವುದು ಆ ಅಪರಿಚಿತ ಯುವತಿಯ ತ್ಯಾಗದಿಂದ ಎಂದು ಸ್ಮರಿಸುತ್ತಾರೆ. ನೀರಜಾ ಭಾನೋಟ್ ಅವರ ಈ ಸಾಹಸಕ್ಕಾಗಿ ಭಾರತ ಸರಕಾರವು ಅವರಿಗೆ ಅತ್ಯುನ್ನತ ಶೌರ್ಯ ಪ್ರಶಸ್ತಿಯಾದ 'ಅಶೋಕ ಚಕ್ರ'ವನ್ನು ಮರಣೋತ್ತರವಾಗಿ ನೀಡಿ ಗೌರವಿಸಿತು. ಈ ಪ್ರಶಸ್ತಿಯನ್ನು ಪಡೆದ ಅತ್ಯಂತ ಕಿರಿಯ ವ್ಯಕ್ತಿ ನೀರಜಾ. ಪಾಕಿಸ್ತಾನ ಮತ್ತು ಅಮೆರಿಕ ದೇಶಗಳು ಸಹ ಅವರ ತ್ಯಾಗವನ್ನು ಗೌರವಿಸಿವೆ. ನೀರಜಾ ಕೇವಲ ತಮ್ಮ ವೃತ್ತಿಯನ್ನು ನಿರ್ವಹಿಸಲಿಲ್ಲ, ಜತೆಗೆ ಮಾನವೀಯತೆಯ ಪರಮೋಚ್ಚ ಕರ್ತವ್ಯವನ್ನೂ ನಿಭಾಯಿಸಿದರು.

ಧೈರ್ಯ ಎನ್ನುವುದು ಬರೀ ಕೂಗಾಡುವುದಲ್ಲ, ಸಂಕಷ್ಟದ ಸಮಯದಲ್ಲಿ ಶಾಂತವಾಗಿ ನಿಂತು ಸರಿಯಾದ ನಿರ್ಧಾರ ತೆಗೆದುಕೊಳ್ಳುವುದು. ಸಂಕಷ್ಟ ಬಂದಾಗ ಸಹಜವಾಗಿ ನಾವು ನಮ್ಮ ಉಳಿವಿನ ಬಗ್ಗೆ ಯೋಚಿಸುತ್ತೇವೆ. ಕೆಲವೊಮ್ಮೆ ತಮ್ಮ ಮಕ್ಕಳನ್ನೇ ಕೈಬಿಟ್ಟು ಹೊರಟುಬಿಡುವ ತಂದೆ-ತಾಯಿಗಳೂ ಇದ್ದಾರೆ. ಆದರೆ ಗುರುತು ಪರಿಚಯ ಇಲ್ಲದ ನೂರಾರು ಜೀವಗಳನ್ನು ಉಳಿಸಲು ತಮ್ಮ ಪ್ರಾಣವನ್ನೇ ಪಣವಾಗಿಟ್ಟ ನೀರಜಾ ಬದುಕು, ತ್ಯಾಗ ನಮಗೆಲ್ಲ ಪ್ರೇರಣೆಯಾಗಲಿ. ಸಂಕಷ್ಟದಲ್ಲಿರುವವರಿಗೆ ಸಾಂತ್ವನ ನೀಡುವಷ್ಟು ಮಾನವೀಯತೆಯಾದರೂ ಉಳಿಯಲಿ.

ನೀವೂ ಬರೆಯಬಹುದು

ನಮ್ಮ ವಿಳಾಸ

ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

e-mail: vishwavanimagazine@gmail.com

ಟಿ-20 ಮಹೋತ್ಸವ ವಿಶ್ವಕಪ್ 2026

ಭಾರತ ಶ್ರೀಲಂಕಾ
ಫೆಬ್ರವರಿ 7ರಿಂದ ಮಾರ್ಚ್ 8

ICC MEN'S T20 WORLD CUP INDIA & SRI LANKA 2026

ಒಂದ್ ಕಪ್ ಮಾತು

ಅನಗತ್ಯ ದಾಖಲೆ ಬರೆದ ಗ್ಲೆನ್ ಫಿಲಿಪ್ಸ್

ಚೆನ್ನೈ: ಮಂಗಳವಾರ ಯುಎಇ ವಿರುದ್ಧದ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡದ ಆಲ್‌ರೌಂಡರ್ ಗ್ಲೆನ್ ಫಿಲಿಪ್ಸ್ ಅತ್ಯಂತ ದುಬಾರಿಯಾಗುವ ಮೂಲಕ ಅನಗತ್ಯ ದಾಖಲೆಗಳನ್ನು ಹೆಗಲೇರಿಸಿ ಕೊಂಡಿದ್ದಾರೆ. 18ನೇ ಓವರ್‌ನಲ್ಲಿ ಕ್ರೀಸ್‌ನಲ್ಲಿದ್ದ ಮಯಾಂಕ್ ಕುಮಾರ್ ಅವರು ಎರಡು ಮತ್ತು ಮೂರನೇ ಎಸೆತಗಳಲ್ಲಿ ಕ್ರಮವಾಗಿ ಸಿಕ್ಸರ್ ಹಾಗೂ ಬೌಂಡರಿ ಯನ್ನು ಬಾರಿಸಿದ್ದರು. ನಾಯಕ ಮೊಹಮ್ಮದ್ ವಸೀಮ್ ನಾಲ್ಕನೇ ಎಸೆತದಲ್ಲಿ ಬೌಂಡರಿ ಬಾರಿಸಿದ್ದರು ಹಾಗೂ ಆ ಎಸೆತ ನೋ ಬಾಲ್ ಆಗಿತ್ತು. ನಂತರ ಫ್ರಿ ಹಿಟ್ ಎಸೆತದಲ್ಲಿ ವಸೀಮ್ ಸಿಕ್ಸರ್ ಸಿಡಿಸಿದ್ದರು. ಅದರ ಜತೆಗೆ ಎರಡು ವೈಡ್‌ಗಳು ಹಾಗೂ ಒಂದು ನೋ ಬಾಲ್ ಬೌಲ್ ಮಾಡಿದ್ದರು. ಆ ಮೂಲಕ ಆ ಓವರ್‌ನಲ್ಲಿ ಗ್ಲೆನ್ ಫಿಲಿಪ್ಸ್ ಒಟ್ಟು 27 ರನ್‌ಗಳನ್ನು ನೀಡಿದ್ದರು. ಫಿಲಿಪ್ಸ್ ಅದೇ ಪಂದ್ಯದಲ್ಲಿ ಮತ್ತೊಂದು ಅನಗತ್ಯ ದಾಖಲೆಯನ್ನೂ ತಮ್ಮ ಹೆಸರಿಗೆ ಸೇರಿಸಿಕೊಂಡಿದ್ದಾರೆ. ಪೂರ್ಣ ಸದಸ್ಯ ರಾಷ್ಟ್ರದ ಬೌಲರ್ ಆಗಿ, ಸಹಭಾಗಿ (ಅಸೋಸಿಯೇಟ್) ತಂಡದ ಬ್ಯಾಟರ್‌ರಿಂದ ಒಂದೇ ಓವರ್‌ನಲ್ಲಿ ಪೂರ್ಣ ಸದಸ್ಯ ರಾಷ್ಟ್ರದ ವಿರುದ್ಧ ಅತೀ ಹೆಚ್ಚು ರನ್‌ಗಳನ್ನು ಒಪ್ಪಿಸಿದ ಬೌಲರ್ ಎಂಬ ಅನಗತ್ಯ ದಾಖಲೆಯನ್ನು ಅವರು ಹೆಗಲೇರಿಸಿಕೊಂಡಿದ್ದಾರೆ.

ಪಾಕಿಸ್ತಾನ ವಿರುದ್ಧ ಕಿಡಿಕಾರಿದ ಅಫ್ರಿದಿ

ಕೊಲಂಬೊ: ಭಾರತದ ವಿರುದ್ಧ ಪಂದ್ಯ ಆಡಲು ಒಪ್ಪಿಕೊಂಡು, ಯುಟರ್ನ್ ಹೊಡೆದ ಪಾಕಿಸ್ತಾನ ಕ್ರಿಕೆಟ್ ಬೋರ್ಡ್ ನಿರ್ಧಾರಕ್ಕೆ ವ್ಯಾಪಕ ಟೀಕೆ ಮತ್ತು ವ್ಯಂಗ್ಯ ವ್ಯಕ್ತವಾಗುತ್ತಿದೆ. ಪಾಕಿಸ್ತಾನದ ಟಿವಿಯೊಂದರ ಚರ್ಚಾ ಕ್ರಾರ್ಯಕ್ರಮ ವೊಂದರಲ್ಲಿ ಭಾಗವಹಿಸಿದ್ದ ಪಾಕ್ ತಂಡದ ಮಾಜಿ ನಾಯಕ ಶಹೀದ್ ಅಫ್ರಿದಿ, ಪಿಸಿಬಿ ನಿರ್ಧಾರದ ವಿರುದ್ಧ ಕಿಡಿಕಾರಿದ್ದಾರೆ. 'ಯೂಟರ್ನ್ ತೆಗೆದುಕೊಳ್ಳುವ ಹಾಗಿದ್ದರೆ, ಇಷ್ಟೊಂದು ನಾಟಕ ಯಾಕೆ ಮಾಡಿದ್ದೀರಿ, ಪಿಸಿಬಿಯು ಬಿಸಿಸಿಐ ಮುಂದೆ ಮಂಡಿಯೂರಿದೆ' ಎಂದು ಅಫ್ರಿದಿ ಟೀಕಿಸಿದ್ದಾರೆ.

ಬಾಸ್ ಡಿ ಲೀಡೆ ಆಲ್‌ರೌಂಡರ್ ಆಟ | ನಮೀಬಿಯಾಕ್ಕೆ ಸೋಲು

ನೆದರ್ಲೆಂಡ್‌ಗೆ ಭರ್ಜರಿ ಗೆಲುವು

ದೆಹಲಿ: ಬಾಸ್ ಡಿ ಲೀಡೆ ಅವರ ಆಲ್‌ರೌಂಡ್ ಆಟದ ನೆರವಿನಿಂದ ನೆದರ್ಲೆಂಡ್ ತಂಡ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಗೆಲುವಿನ ಖಾತೆ ತೆರೆದಿದೆ. ಮಂಗಳವಾರ ನಡೆದ ಪಂದ್ಯದಲ್ಲಿ ನಮೀಬಿಯಾ ಎದುರು 7 ವಿಕೆಟ್ ಅಂತರದ ಗೆಲುವು ಸಾಧಿಸಿ, ತಂಡದ ಸೂಪರ್-8 ರೇಸ್ ಅನ್ನು ಇನ್ನೂ ಜೀವಂತವಾಗಿರಿಸಿದೆ.

ಇಲ್ಲಿನ ಅರುಣ್ ಜೇಟ್ಲಿ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ನೆದರ್ಲೆಂಡ್ ಬೌಲಿಂಗ್ ಆಯ್ದುಕೊಂಡಿತು. ಬ್ಯಾಟಿಂಗ್ ಆಹ್ವಾನ ಪಡೆದ ನಮೀಬಿಯಾ 8 ವಿಕೆಟ್‌ಗೆ 156 ರನ್ ಬಾರಿಸಿತು. ಆ ಮೊತ್ತವನ್ನು ಬೆಂಬತ್ತಿದ ನೆದರ್ಲೆಂಡ್ 18 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 159 ರನ್ ಗಳಿಸಿ ಗೆಲುವನ್ನು ತನ್ನದಾಗಿಸಿಕೊಂಡಿತು. ನೆದರ್ಲೆಂಡ್‌ಗೆ ಇದು ಎರಡನೇ ಪಂದ್ಯವಾಗಿತ್ತು. ಇದಕ್ಕೂ ಮುನ್ನ ಪಾಕಿಸ್ತಾನ ವಿರುದ್ಧ ಸೋಲು ಕಂಡಿತ್ತು.

ನೆದರ್ಲೆಂಡ್‌ಗೆ ಬಾಸ್ ಡಿ ಲೀಡೆ ಅವರು ಅಜೇಯ ಅರ್ಧಶತಕ ಬಾರಿಸಿ ನೆರವಾದರು. ಬಿರುಸಿನ ಬ್ಯಾಟಿಂಗ್ ನಡೆಸಿದ ಅವರು 48 ಎಸೆತಗಳಲ್ಲಿ 4 ಸೊಗಸಾದ ಸಿಕ್ಸರ್ ಮತ್ತು 5 ಬೌಂಡರಿ ನೆರವಿನಿಂದ ಅಜೇಯ 72 ರನ್ ಬಾರಿಸಿದರು. ಮತ್ತೊಂದು ತುದಿಯಲ್ಲಿ ಮೈಕೆಲ್ ಲೆವಿಟ್(28) ಮತ್ತು ಕಾಲಿನ್ ಅಕರ್ಮನ್(32) ಉತ್ತಮ ಜತೆ ನೀಡಿದರು. ಬ್ಯಾಟಿಂಗ್ ಮಾತ್ರವಲ್ಲದೆ ಬೌಲಿಂಗ್‌ನಲ್ಲಿಯೂ ಮಿಂಚಿದ ಬಾಸ್ ಡಿ ಲೀಡೆ 2 ವಿಕೆಟ್ ಪಡೆದರು. ಅವರ ಈ ಪ್ರದರ್ಶನಕ್ಕೆ ಪಂದ್ಯಶ್ರೇಷ್ಠ ಪ್ರಶಸ್ತಿ ಒಲಿಯಿತು, ಉಳಿದಂತೆ ಲೋಗನ್ ವ್ಯಾನ್ ಬೀಕ್ 2 ವಿಕೆಟ್ ಪಡೆದರು.

ಅದಕ್ಕೂ ಮುನ್ನ ಬ್ಯಾಟಿಂಗ್ ನಡೆಸಿದ ನಮೀಬಿಯಾ ಪರ ಆರಂಭಿಕ ಬ್ಯಾಟರ್ ಜಾನ್ ಫ್ರೈಲಿಂಕ್ ಮತ್ತು ಜಾನ್ ನಿಕೋಲ್ ಲಾಫ್ಟಿ ಹೊರತುಪಡಿಸಿ ಉಳಿದವರಿಂದ ಉತ್ತಮ ನೆರವು ಲಭಿಸಲಿಲ್ಲ. ಇದು ತಂಡದ ದೊಡ್ಡ ಮೊತ್ತಕ್ಕೆ ಹಿನ್ನಡೆಯಾಯಿತು. ಜಾನ್ ನಿಕೋಲ್ ಲಾಫ್ಟಿ 42 ರನ್ ಬಾರಿಸಿದರೆ, ಜಾನ್ ಫ್ರೈಲಿಂಕ್ 30 ರನ್ ಗಳಿಸಿದರು. ಉಳಿದಂತೆ ಜೆ.ಜೆ ಸ್ಮಿತ್ 22 ರನ್ ಕೊಡುಗೆ ನೀಡಿದರು. ತಂಡದ ಪರ 5 ಮಂದಿ ಒಂದಂಕಿಗೆ ಸೀಮಿತರಾದರು. ನಮೀಬಿಯಾ ಪರ ಬರ್ನಾರ್ಡ್ ಸ್ಕೋಲ್ಟ್ಜ್, ರೂಬೆನ್ ಟ್ರಂಪೆಲ್‌ಮನ್ ಮತ್ತು ಜಾನ್ ನಿಕೋಲ್ ಲಾಫ್ಟಿ ತಲಾ ಒಂದೊಂದು ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರ್
ನಮೀಬಿಯಾ: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 156(ಜಾನ್ ನಿಕೋಲ್ ಲಾಫ್ಟಿ 42, ಜಾನ್ ಫ್ರೈಲಿಂಕ್ 30, ಬಾಸ್ ಡಿ ಲೀಡೆ 20ಕ್ಕೆ 2, ವ್ಯಾನ್ ಬೀಕ್ 13 ಕ್ಕೆ 2.
ನೆದರ್ಲೆಂಡ್: 18 ಓವರ್‌ಗಳಲ್ಲಿ 3 ವಿಕೆಟ್‌ಗೆ 159 (ಬಾಸ್ ಡಿ ಲೀಡೆ 79-ಅಜೇಯ, ಕಾಲಿನ್ ಅಕರ್ಮನ್ 32, ಬರ್ನಾರ್ಡ್ ಸ್ಕೋಲ್ಟ್ಜ್ 27ಕ್ಕೆ 1).
ಪಂದ್ಯಶ್ರೇಷ್ಠ: ಬಾಸ್ ಡಿ ಲೀಡೆ.

ಬಾಸ್ ಡಿ ಲೀಡೆ ಆಲ್‌ರೌಂಡ್ ಪ್ರದರ್ಶನ

ಆರಂಭಿಕ ಆಟಗಾರ ಸಾಹಿಬ್‌ಜಾದಾ ಫರ್ಹಾನ್ ಅರ್ಧ ಶತಕ | ಪಾಕಿಸ್ತಾನಕ್ಕೆ 2ನೇ ಜಯ

ಅಮೆರಿಕ ವಿರುದ್ಧ ಪಾಕ್‌ಗೆ ಗೆಲುವು

ಕೊಲಂಬೊ: ಇಲ್ಲಿನ ಸಿಂಹಳೀಸ್ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಮಂಗಳವಾರ ನಡೆದ ವಿಶ್ವಕಪ್ ಪಂದ್ಯದಲ್ಲಿ ಪಾಕಿಸ್ತಾನ ತಂಡವು ಅಮೆರಿಕವನ್ನು 32 ರನ್‌ಗಳಿಂದ ಮಣಿಸಿದೆ.

ಮೊದಲು ಬ್ಯಾಟ್ ಮಾಡಿದ ಪಾಕಿಸ್ತಾನವು 9 ವಿಕೆಟ್‌ಗೆ 190 ರನ್ ಗಳಿಸಿದರೆ, ಗುರಿ ಬೆಂಬತ್ತಿದ ಅಮೆರಿಕ 8 ವಿಕೆಟ್ ನಷ್ಟಕ್ಕೆ 158 ರನ್ ಗಳಿಸಲಷ್ಟೇ ಶಕ್ತವಾಯಿತು.

ಟಾಸ್ ಗೆದ್ದ ಅಮೆರಿಕ ಮೊದಲು ಫೀಲ್ಡಿಂಗ್ ಆಯ್ದುಕೊಂಡಿತು. ಬ್ಯಾಟಿಂಗ್‌ಗೆ ಇಳಿದ ಪಾಕ್ ಆರಂಭಿಕ ಆಟಗಾರರಾದ ಸೈಮ್ ಅಯೂಬ್ ಮತ್ತು ಸಾಹಿಬ್‌ಜಾದಾ ಫರ್ಹಾನ್ ತಂಡಕ್ಕೆ ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್‌ಗೆ ಈ ಜೋಡಿ 54 ರನ್ ಕಲೆ ಹಾಕಿತು. 17 ಬಾಲ್‌ಗಳಲ್ಲಿ 19 ರನ್ ಗಳಿಸಿದ್ದ ಸೈಮ್ ಅಯೂಬ್ ವ್ಯಾನ್ ಸ್ಕಾಲ್ವಿಕ್ ಬೌಲಿಂಗ್‌ನಲ್ಲಿ ಔಟ್ ಆದರು.

ಆದರೆ ಆ ಬಳಿಕ ಕ್ರೀಸ್‌ಗೆ ಬಂದ ಪಾಕ್ ನಾಯಕ ಸಲ್ಮಾನ್ ಅಲಿ ಅಘಾ ಅವರು ಬರೀ 1 ರನ್ ಗಳಿಸಿದ್ದ ವೇಳೆ ವಿಕೆಟ್ ಒಪ್ಪಿಸಿದರು. ನಂತರ ಬ್ಯಾಟಿಂಗ್‌ಗೆ ಬಂದ ಬಾಬರ್ ಅಜಮ್ ಅವರು, ಆರಂಭಿಕ ಆಟಗಾರ ಫರ್ಹಾನ್ ಜತೆ ಸೇರಿ ತಂಡಕ್ಕೆ ಸ್ವಲ್ಪ ಮಟ್ಟಿಗೆ ಆಧಾರಸ್ತಂಭ ಎನಿಸಿದರು. ಅಜಮ್ 32 ಬಾಲ್‌ಗಳಿಂದ 46 ರನ್ ಗಳಿಸಿ ಔಟ್ ಆದರು.

ಸಾಹಿಬ್‌ಜಾದಾ ಫರ್ಹಾನ್ 41 ಬಾಲ್‌ಗಳಿಂದ 73 ರನ್ ಗಳಿಸಿದ್ದ ವೇಳೆ ಹರ್ಮೀತ್ ಸಿಂಗ್ ಬೌಲಿಂಗ್‌ನಲ್ಲಿ ಸಂಜಯ್ ಕೃಷ್ಣಮೂರ್ತಿಗೆ ಕ್ಯಾಚ್ ನೀಡಿ ಔಟ್ ಆದರು. ಶಾದಾಬ್ ಖಾನ್ 12 ಬಾಲ್‌ಗಳಲ್ಲಿ 30 ಗಳಿಸುವಲ್ಲಿ ಸಫಲರಾದರು. ಆದರೆ ಆ ಬಳಿಕ ಪಾಕಿಸ್ತಾನ ತಂಡದ ವಿಕೆಟ್‌ಗಳು ತರಗೆಲೆಯಂತೆ ಉದುರಿದವು. ಫಹೀಮ್ ಅಶ್ರಫ್ 2 ಬಾಲ್‌ಗಳನ್ನು ಎದುರಿಸಿ ಕೇವಲ 1 ರನ್, ಉಸ್ಮಾನ್ ಖಾನ್ ಕೇವಲ 1 ಬಾಲ್ ಎದುರಿಸಿ ಯಾವುದೇ ರನ್ ಗಳಿಸದೆ ತಮ್ಮ ವಿಕೆಟ್ ಕಳೆದುಕೊಂಡರು. ಅಬ್ರಾರ್ ಅಹ್ಮದ್ ಯಾವುದೇ ರನ್ ಗಳಿಸಲಾದರೆ ಔಟ್ ಆದರೆ, ಶಾಹೀನ್ ಅಫ್ರಿದಿ 4 ಬಾಲ್‌ಗಳನ್ನು ಎದುರಿಸಿ 9 ರನ್ ಗಳಿಸಿದರು.

191 ರನ್ ಬೆಂಬತ್ತಿದ ಅಮೆರಿಕ 42 ರನ್ ಆಗುವಷ್ಟರಲ್ಲಿ 13 ರನ್ ಗಳಿಸಿದ್ದ ಆ್ಯಂಡ್ರೀಸ್ ಗೌಸ್ ಅವರ ವಿಕೆಟ್ ಕಳೆದುಕೊಂಡಿತು. ಆ ಬಳಿಕ ತಂಡದ ನಾಯಕ ಮೊನಾಂಕ್ ಪಟೇಲ್ ಕೇವಲ 3 ರನ್ ಮಾಡಿದ್ದ ವೇಳೆ ವಿಕೆಟ್ ಕಳೆದುಕೊಂಡರು. ಮಿಲಿಂದ್ ಕುಮಾರ್ 22 ಬಾಲ್‌ಗಳಲ್ಲಿ 29 ರನ್ ಗಳಿಸುವಲ್ಲಿ ಶಕ್ತರಾದರು. ಆರಂಭಿಕ ಆಟಗಾರ ಶಯನ್ ಜಹಾಂಗೀರ್ 34 ಬಾಲ್‌ಗಳನ್ನು ಎದುರಿಸಿ 49 ರನ್ ಗಳಿಸುವ ಮೂಲಕ ಅಮೆರಿಕ ತಂಡವನ್ನು ರನ್ ಕುಸಿತದಿಂದ ಪಾರು ಮಾಡಲೆತ್ನಿಸಿದ್ದರು. ಸಂಜಯ್ ಕೃಷ್ಣಮೂರ್ತಿ ಯಾವುದೇ ರನ್ ಗಳಿಸಲು ವಿಫಲರಾದರು. ಹರ್ಮೀತ್ ಸಿಂಗ್ 5 ಬಾಲ್ ಎದುರಿಸಿ 6 ರನ್ ಮತ್ತು ಮೊಹಮ್ಮದ್ ಮೊಹ್ಸಿನ್ ಯಾವುದೇ ರನ್ ಗಳಿಸದೆ ಔಟ್ ಆದರು. ಶುಭಮ್ ರಂಜನೆ 10 ಬಾಲ್‌ಗಳಲ್ಲಿ 16 ರನ್ ಗಳಿಸಿ ಅಜೇಯರಾಗುಳಿದರು.

ಟಿ.ವಿ ಜಾಹೀರಾತು ದರ ಗಗನಕ್ಕೆ | ಕೊಲಂಬೊ ಪ್ರಯಾಣದ ವಿಮಾನ ದರವೂ ಏರಿಕೆ

ಭಾರತ-ಪಾಕ್ ಪಂದ್ಯ: ಬಹು ಬೇಡಿಕೆ ಸೃಷ್ಟಿ

ದೆಹಲಿ: ವಿಶ್ವಕಪ್‌ನಲ್ಲಿ ಭಾರತ ವಿರುದ್ಧದ ಪಂದ್ಯದ ಬಹಿಷ್ಕರಿಸಿರುವ ಪಾಕಿಸ್ತಾನ ತನ್ನ ನಿರ್ಧಾರದಿಂದ ಹಿಂದೆ ಸರಿದ ಬೆನ್ನಲ್ಲೇ ಪಂದ್ಯದ ವೇಳೆಯ ಟಿ.ವಿ ಪ್ರಸಾರ ಜಾಹೀರಾತು ದರ ಗಗನಕ್ಕೇರಿದೆ. ಪ್ರತೀ 10-ಸೆಕೆಂಡ್ ಸ್ಲಾಟ್‌ಗಳ ಮೌಲ್ಯ ಬರೋಬ್ಬರಿ 40 ಲಕ್ಷದವರೆಗೆ ಏರಬಹುದು ಎಂದು ಅಂದಾಜಿಸಲಾಗಿದೆ. ಪಂದ್ಯ ನಡೆಯದಿದ್ದರೆ ಕೋಟ್ಯಂತರ ಜಾಹೀರಾತು ನಷ್ಟದ ಆತಂಕ ಪ್ರಸಾರಕರಿಗೆ ಎದುರಾಗಿತ್ತು. ಒಂದು ಅಂದಾಜಿನ ವರದಿ ಪ್ರಕಾರ, ಪ್ರಸಾರಕ ಜಿಯೋಸ್ಟಾರ್, ಭಾರತ ಮತ್ತು ಪಾಕ್ ಒಂದೇ ಪಂದ್ಯದಿಂದ ಜಾಹೀರಾತು ಆದಾಯದಲ್ಲಿ ಬರೋಬ್ಬರಿ 250 ಕೋಟಿಯವರೆಗೆ ಗಳಿಸಬಹುದು ಎನ್ನಲಾಗಿದೆ.

ಪಾಕಿಸ್ತಾನ ಸರಕಾರವು ಸೋಮವಾರ ರಾಷ್ಟ್ರೀಯ ತಂಡಕ್ಕೆ ಭಾರತದ ವಿರುದ್ಧ ಟಿ20 ಪಂದ್ಯ ಆಡಲು ಅನುಮತಿ ನೀಡಿದ್ದು, ಪಂದ್ಯ ವೇಳಾಪಟ್ಟಿಯನ್ನು ಗೌರವಿಸುವುದಾಗಿ ಸ್ಪಷ್ಟಪಡಿಸಿದೆ. ಪಂದ್ಯ ಬಹಿಷ್ಕಾರದಿಂದ ಪಾಕಿಸ್ತಾನಕ್ಕೆ ಎದುರಾಗಬಹುದಾದ ಸಂಭಾವ್ಯ ಹಣಕಾಸು ಪರಿಣಾಮಗಳ ಬಗ್ಗೆ ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಎಚ್ಚರಿಕೆ ನೀಡಿದ ಹಿನ್ನೆಲೆಯಲ್ಲಿ, ಸರಕಾರದ ಸೂಚನೆಯಂತೆ ಪಾಕಿಸ್ತಾನ ತನ್ನ ನಿಲುವು ಬದಲಿಸಿದೆ. ಟೂರ್ನಿಯಲ್ಲಿ ಉಭಯ ತಂಡಗಳೂ ಉತ್ತಮವಾಗಿ ಆಡಿ ಗೆಲುವು ಸಾಧಿಸಿದರೆ ಮೂರು ಬಾರಿ ಮುಖಾಮುಖಿಯಾಗುವ ಅವಕಾಶವಿದೆ.

ವಿಮಾನ ದರವೂ ಏರಿಕೆ: ಭಾರತ-ಪಾಕಿಸ್ತಾನ ವಿಶ್ವಕಪ್ ಪಂದ್ಯಕ್ಕೆ ವಿಮಾನಗಳನ್ನು ಪಡೆಯಲು ಧಾವಿಸುವ ಕ್ರಿಕೆಟ್ ಅಭಿಮಾನಿಗಳು ತೀವ್ರ ವಿಮಾನ ದರ ಏರಿಕೆಯನ್ನು ಎದುರಿಸುತ್ತಿದ್ದಾರೆ. ಪಂದ್ಯ ದೃಢಪಡಿಸಿದ ಕೆಲವೇ ನಿಮಿಷಗಳಲ್ಲಿ ಮುಂಬೈನಿಂದ ಕೊಲಂಬೊಗೆ ಹೋಗುವ ಪ್ರಯಾಣ ದರವು ರು. 10,000ರಷ್ಟು ಹೆಚ್ಚಾಗಿದೆ.

ಫೆಬ್ರವರಿ 15ರಂದು ನಡೆಯಲಿರುವ ಬಹುನಿರೀಕ್ಷಿತ ಪಂದ್ಯಕ್ಕೆ ಅಭಿಮಾನಿಗಳ ಉತ್ಸಾಹವು ಉತ್ತುಂಗಕ್ಕೇರಿದೆ. ಈ ನಡುವೆಯೇ ಮುಂಬೈ-ಕೊಲಂಬೊ-ಮುಂಬೈ ರೌಂಡ್ ಟ್ರಿಪ್‌ಗೆ ಈಗ ಸುಮಾರು 60,000 ರು. ವೆಚ್ಚವಾಗುತ್ತದೆ. ಈ ಘೋಷಣೆಯು ತಕ್ಷಣವೇ ಪ್ರಯಾಣ ಮತ್ತು ಕೊಲಂಬೊ ವಸತಿ ಬುಕಿಂಗ್ ದರದ ಹೆಚ್ಚಳಕ್ಕೂ ಕಾರಣವಾಯಿತು. ಹೈವೋಲ್ಟೇಜ್ ಪಂದ್ಯ ಎಂದೇ ಹೆಸರುವಾಸಿಯಾದ ಭಾರತ-ಪಾಕಿಸ್ತಾನ ಪೈಪೋಟಿಯು ಶ್ರೀಲಂಕಾಕ್ಕೆ ಹತ್ತಾರು ಸಾವಿರ ಪ್ರೇಕ್ಷಕರನ್ನು ಆಕರ್ಷಿಸುವ ನಿರೀಕ್ಷೆಯಿದೆ. ಒಟ್ಟಿನಲ್ಲಿ ಕ್ರಿಕೆಟ್ ಅಭಿಮಾನಿಗಳಲ್ಲಿ ರೋಚಕ ವಾತಾವರಣವನ್ನು ಸೃಷ್ಟಿಸುತ್ತದೆ. ಪಾಕ್ ತಂಡದ ನಾಯಕನ ಹೇಳಿಕೆ: 'ಎರಡೂ ದೇಶಗಳು ಆಟವನ್ನು ಬೆಳೆಸುವಲ್ಲಿ ತಮ್ಮಿಂದ ಸಾಧ್ಯವಾದಷ್ಟು ಪಾತ್ರವನ್ನು ಸಂಪೂರ್ಣವಾಗಿ ನಿರ್ವಹಿಸಲು ಅವಕಾಶ ನೀಡಬೇಕು ಮತ್ತು ರಾಜಕೀಯದ ಕಾರಣದಿಂದಾಗಿ ಕ್ರಿಕೆಟ್ ಅನ್ನು ಎಂದಿಗೂ ನಿಲ್ಲಿಸಬಾರದು. ಭಾರತ-ಪಾಕಿಸ್ತಾನ ಪಂದ್ಯದ ಬಗ್ಗೆ ಯಾವುದೇ ಸನ್ನಿವೇಶ ಉದ್ಭವಿಸಿ ದರೂ, ಯಾವಾಗಲೂ ಸಮಗ್ರತೆ ಮತ್ತು ಆಟದ ಉತ್ಸಾಹವನ್ನು ಉನ್ನತ ಮಟ್ಟದಲ್ಲಿ ಇಟ್ಟುಕೊಳ್ಳ ಬೇಕು. ಈ ಪಂದ್ಯವನ್ನು ಆಡಿದಾಗಲೆಲ್ಲಾ ಸಂಪೂರ್ಣ ಕ್ರೀಡಾ ಮನೋಭಾವದಿಂದ ಆಡಬೇಕು' ಎಂದು ಪಾಕ್ ತಂಡದ ನಾಯಕ ಸಲ್ಮಾನ್ ಆಘಾ ಹೇಳಿದ್ದಾರೆ.

ಐಸಿಸಿಗೆ ಬಿಸಿಸಿಐ ಶ್ಲಾಘನೆ

ಸಮಸ್ಯೆಯನ್ನು ಪರಿಹರಿಸಿ, ಕ್ರಿಕೆಟ್ ಅನ್ನು ಮತ್ತೆ ಮುಂಚೂಣಿಗೆ ತಂದಿದ್ದಕ್ಕಾಗಿ ಐಸಿಸಿ ನಿಜಕ್ಕೂ ಪ್ರಶಂಸೆ ಭಾಜನವಾಗಿದೆ ಎಂದು ಬಿಸಿಸಿಐ ಮುಖ್ಯಸ್ಥ ರಾಜೀವ್ ಶುಕ್ಲಾ ಹೇಳಿದ್ದಾರೆ. 'ಐಸಿಸಿ ಮಟ್ಟಿಗೆ ಇದು ಒಂದು ದೊಡ್ಡ ಸಾಧನೆ. ಪ್ರಯತ್ನ ಕೈಗೊಂಡು, ಪಾಕಿಸ್ತಾನವನ್ನು ಆಡಲು ಸಾಧ್ಯವಾಗಿಸಿದಕ್ಕಾಗಿ ಐಸಿಸಿಗೆ ಧನ್ಯವಾದ ಹೇಳಲು ಬಯಸುತ್ತೇನೆ. ಇದು ನಮಗೆಲ್ಲರಿಗೂ ಒಳ್ಳೆಯ ವಿಷಯ ಹಾಗೂ ಈ ವಿಶ್ವಕಪ್ ಕೂಡ ದೊಡ್ಡ ಯಶಸ್ಸಿನ ಕಥೆಯಾಗಲಿದೆ' ಎಂದಿದ್ದಾರೆ.

ರೋಕೊ ಹಿಂಬಡ್ತಿಗೆ ಕಾರಣಗಳು ಅನೇಕ

ದೆಹಲಿ: ಕ್ರಿಕೆಟ್ ದಿಗ್ಗಜರಾದ ವಿರಾಟ್ ಕೊಹ್ಲಿ ಹಾಗೂ ರೋಹಿತ್ ಶರ್ಮಾ ಅವರು ಮಂಗಳವಾರ ಬಿಸಿಸಿಐ ಪ್ರಕಟಿಸಿದ 2025-26ರ ಸಾಲಿನ ಕೇಂದ್ರ ಗುತ್ತಿಗೆ ಪಟ್ಟಿಯಲ್ಲಿ ಭಾರಿ ಹಿನ್ನಡೆಯನ್ನು ಅನುಭವಿಸಿದ್ದಾರೆ. ಎ+ಗ್ರೇಡ್‌ನಿಂದ ಈ ಇಬ್ಬರೂ ಬಿ ಗ್ರೇಡ್‌ಗೆ ಹಿಂಬಡ್ತಿ ಪಡೆದಿದ್ದಾರೆ. ಇದರ ಪರಿಣಾಮವಾಗಿ ಕೊಹ್ಲಿ ಹಾಗೂ ರೋಹಿತ್ ಇಬ್ಬರ ಸಂಬಳದಲ್ಲಿ ಶೇ 57ರಷ್ಟು ಕಡಿತವಾಗಿದೆ. ಈ ಬದಲಾವಣೆಗೂ ಮುನ್ನ ದೀರ್ಘಾವಧಿ ಕಾಲ ಜಸ್ಪ್ರೀತ್ ಬುಮ್ರಾ, ರವೀಂದ್ರ ಜಡೇಜಾ ಅವರೊಂದಿಗೆ ಕೊಹ್ಲಿ, ರೋಹಿತ್ ?ಎ+ ದರ್ಜೆಯಲ್ಲಿದ್ದರು. ಇದೀಗ ಬುಮ್ರಾ ಹಾಗೂ ಜಡೇಜಾ ಕೂಡ ಎ ದರ್ಜೆಗೆ ಇಳಿದಿದ್ದಾರೆ. ಬುಮ್ರಾ ಹಾಗೂ ಜಡೇಜಾ ಜತೆಗೆ ಇದೀಗ ಶುಭಮನ್ ಗಿಲ್ ಎ ದರ್ಜೆಗೆ ಪ್ರಗತಿ ಕಂಡಿದ್ದಾರೆ.

ವಿರಾಟ್ ಕೊಹ್ಲಿ ಹಾಗೂ ರೋಹಿತ್ ಶರ್ಮಾ ಸೇರಿ ಒಟ್ಟು 7 ಮಂದಿ ಆಟಗಾರರು ಬಿ ದರ್ಜೆಯಲ್ಲಿ ಸ್ಥಾನ ಪಡೆದಿದ್ದು, ಒಟ್ಟು 16 ಮಂದಿ ಆಟಗಾರರು ಸಿ ದರ್ಜೆಯಲ್ಲಿದ್ದಾರೆ. ನಿಗದಿತ ಅವಧಿಯಲ್ಲಿ ಅಗತ್ಯವಿರುವ ಕನಿಷ್ಠ ಸಂಖ್ಯೆಯ ಪಂದ್ಯಗಳನ್ನು ಅವರು ಪೂರೈಸಿದರೆ, ಹೆಚ್ಚಿನ ಆಟಗಾರರಿಗೂ ಅನುಪಾತದ ಆಧಾರದ ಮೇಲೆ ಗ್ರೇಡ್ ನೀಡಬಹುದು.

ಹಿಂಬಡ್ತಿ ಪಡೆಯಲು ಕಾರಣಗಳು: ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿದ ಬಳಿಕ ವಿರಾಟ್ ಕೊಹ್ಲಿ ಹಾಗೂ ರೋಹಿತ್ ಶರ್ಮಾ ಅವರ ಪಾಲಿಗೆ 2025-26 ಮೊದಲ ಸೀಸನ್ (2025 ಅಕ್ಟೋಬರ್ 1 ರಿಂದ 2026ರ ಸೆಪ್ಟೆಂಬರ್ 31) ಆಗಿದೆ. ಈ ಇಬ್ಬರೂ ಬ್ಯಾಟ್ಸ್‌ಮನ್‌ಗಳು ಸದ್ಯ 50 ಓವರ್‌ಗಳ ಸ್ವರೂಪದಲ್ಲಿ ಮಾತ್ರ ಸಕ್ರಿಯರಾಗಿದ್ದಾರೆ. ಟಿ20 ಹಾಗೂ ಟೆಸ್ಟ್ ಕ್ರಿಕೆಟ್‌ಗೆ ಈಗಾಗಲೇ ಈ ಇಬ್ಬರೂ ವಿದಾಯ ಹೇಳಿದ್ದಾರೆ. ಬಿಸಿಸಿಐನ ಅಗ್ರ ದರ್ಜೆಯಲ್ಲಿ ಸ್ಥಾನ ಪಡೆಯಲು ಅಗತ್ಯವಾದ ಮಾನದಂಡಗಳನ್ನು ಇವರು ಹೊಂದಿಲ್ಲ. ಈ ಕಾರಣದಿಂದಲೇ ಕೊಹ್ಲಿ ಮತ್ತು ರೋಹಿತ್ ಶರ್ಮಾ ಬಿ ದರ್ಜೆಗೆ ಇಳಿದಿದ್ದಾರೆ.

ಒಂದು ಪಂದ್ಯ ಗೆದ್ದಿರುವ ಹರಿಣಗಳಿಗೆ ಮತ್ತೆ ಜಯದ ನಿರೀಕ್ಷೆ | ಪಂದ್ಯದಲ್ಲಿ ಅಫಘಾನಿಸ್ತಾನಕ್ಕೆ ಪುಟಿದೇಳುವಾಸೆ

ಇಂದು ದ.ಆಫ್ರಿಕಾ-ಅಫ್ಘಾನ್ ಹಣಾಹಣಿ

ವಡೋದರ: ಬುಧವಾರ ಇಲ್ಲಿ ಡಿ ಗುಂಪಿನ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು ಅಫಘಾನಿಸ್ತಾನವನ್ನು ಎದುರಿಸಲಿದೆ. ಈಗಾಗಲೇ ದ.ಆಫ್ರಿಕಾ ತಂಡವು ಒಂದು ಪಂದ್ಯವನ್ನು ಆಡಿದ್ದು, ಅದರಲ್ಲಿ ಗೆಲುವಿನ ನಗು ಬೀರಿದ್ದರೆ, ಅಫಘಾನಿಸ್ತಾನ ತಾನು ಆಡಿರುವ ಮೊದಲ ಪಂದ್ಯದಲ್ಲೇ ಪರಾಭವ ಕಂಡಿದೆ.

ಇವೆರಡೂ ತಂಡಗಳ ಮಧ್ಯೆ ಬುಧವಾರ ನಡೆಯುವ ಪಂದ್ಯ ಸ್ಪರ್ಧೆಯಿಂದ ಕೂಡುವ ಸಾಧ್ಯತೆ ಇದೆ. ಐಡೆನ್ ಮಾರ್ಕ್ರಮ್ ಮುನ್ನಡೆಸುವ ದ. ಆಫ್ರಿಕಾ ತಂಡದಲ್ಲಿ ಆರಂಭಿಕ ಬ್ಯಾಟ್ಸ್‌ಮನ್ ಕ್ವಿಂಟನ್ ಡಿ ಕಾಕ್ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಅದೇ ರೀತಿ ರಿಯಾನ್ ರಿಕಲ್ಟನ್ ಕೂಡಾ ಈ ವಿಶ್ವಕಪ್‌ನ ಮೊದಲ ಪಂದ್ಯದಲ್ಲಿ ಮಿಂಚಿದ್ದಾರೆ. ಡೇವಿಡ್ ಮಿಲ್ಲರ್ ಕೂಡಾ ಅಗತ್ಯ ಪರಿಸ್ಥಿತಿ ಬಂದ ವೇಳೆ ಮಿಂಚಬಲ್ಲ ಆಟಗಾರರಾಗಿದ್ದಾರೆ.

ಹಾಗೆಯೇ ಹರಿಣಗಳ ಪೈಕಿ ಬೌಲಿಂಗ್‌ನಲ್ಲಿ ಜೇಸನ್ ಸ್ಮಿತ್, ಕೇಶವ್ ಮಹಾರಾಜ್ ಮುಂತಾದವರು ತಮ್ಮ ಚಾಕಚಕ್ಯತೆಯಿಂದ ಮಿಂಚಬಲ್ಲ ಬೌಲರ್‌ಗಳಾಗಿದ್ದಾರೆ. ಕಗಿಸೋ ರಬಡಾ ಆಲ್‌ರೌಂಡ್ ಪ್ರದರ್ಶನ ನೀಡಬಲ್ಲ ಆಟಗಾರರಾಗಿದ್ದು, ಕಾರ್ಬಿನ್ ಬಾಷ್ ಕೂಡಾ ಪಂದ್ಯದ ಪರಿಸ್ಥಿತಿಗೆ ತಕ್ಕಂತೆ ಮಿಂಚಬಲ್ಲವರಾಗಿದ್ದಾರೆ.

ರಶೀದ್ ಖಾನ್ ನಾಯಕತ್ವದ ಅಫಘಾನಿಸ್ತಾನ ತಂಡವು ದುರ್ಬಲ ತಂಡವೇನಲ್ಲ. ತಂಡದ ಬ್ಯಾಟರ್‌ಗಳಾದ ಇಬ್ರಾಹಿಂ ಜದ್ರಾನ್, ಸಿದ್ದಿಕುಲ್ಲಾ ಅಟಲ್ ಮತ್ತು ಕೀಪರ್ ರಹಮ್ಮುಲ್ಲಾ ಕೂಡಾ ಬ್ಯಾಟಿಂಗ್‌ನಲ್ಲಿ ಚಾಕಚಕ್ಯತೆಯನ್ನು ಹೊಂದಿದ್ದಾರೆ. ಮೊಹಮ್ಮದ್ ಇಶಾಖ್, ನೂರ್ ಮೊಹಮ್ಮದ್ ಮುಂತಾದ ಅಫಘಾನಿಸ್ತಾನದ ಬೌಲರ್‌ಗಳು ಅನಿವಾರ್ಯ ಸಂದರ್ಭದಲ್ಲಿ ಎದುರಾಳಿ ಬ್ಯಾಟ್ಸ್‌ಮ್ಯಾನ್‌ಗಳನ್ನು ಕಟ್ಟಿ ಹಾಕುವ ಸಾಮರ್ಥ್ಯ ಹೊಂದಿದವರಾಗಿದ್ದಾರೆ.

ಹಾಗಾಗಿ ಬುಧವಾರ ಇಲ್ಲಿ ನಡೆಯುವ ಪಂದ್ಯದಲ್ಲಿ ಎರಡೂ ಕಡೆಯ ತಂಡಗಳಿಗೂ ಗೆಲ್ಲುವ ಅವಕಾಶಗಳಿವೆ. ದಕ್ಷಿಣ ಆಫ್ರಿಕಾ ಇಲ್ಲವೇ ಅಫಘಾನಿಸ್ತಾನ ತಂಡಗಳ ಪೈಕಿ ಯಾವ ತಂಡ ಮೇಲುಗೈ ಸಾಧಿಸಲಿದೆ ಎಂಬುದು ನಿಜಕ್ಕೂ ಕುತೂಹಲಕಾರಿಯಾಗಿದೆ.

ಇಂದಿನ ಪಂದ್ಯಗಳು
ದ. ಆಫ್ರಿಕಾ-ಅಫಘಾನಿಸ್ತಾನ
ಬೆ.11 -ಅಹಮದಾಬಾದ್
ಆಸ್ಟ್ರೇಲಿಯಾ-ಐರ್ಲೆಂಡ್
ಮ.3 -ಕೊಲಂಬೊ
ಇಂಗ್ಲೆಂಡ್-ವೆಸ್ಟ್ ಇಂಡೀಸ್
ರಾ.7 -ಮುಂಬೈ

ಟೆಸ್ಟ್ ಜೆರ್ಸಿಯನ್ನು ಕೈಬರಹದ ಟಿಪ್ಪಣಿಯೊಂದಿಗೆ ಮ್ಹಾತ್ರೆಗೆ ನೀಡಿದ ಕ್ರಿಕೆಟ್ ದಿಗ್ಗಜ

ಆಯುಷ್‌ಗೆ ತೆಂಡೂಲ್ಕರ್ ಉಡುಗೊರೆ

ಮುಂಬೈ: ಕಿರಿಯರ ವಿಶ್ವಕಪ್ ಗೆಲುವಿನ ನಾಯಕ ಆಯುಷ್ ಮ್ಹಾತ್ರೆ ಅವರಿಗೆ ಕ್ರಿಕೆಟ್ ದಂತಕಥೆ ಸಚಿನ್ ತೆಂಡೂಲ್ಕರ್ ತಮ್ಮ ಟೆಸ್ಟ್ ಜೆರ್ಸಿಯನ್ನು ವಿಶೇಷ ಸ್ಮರಣಿಕೆಯಾಗಿ ನೀಡಿದ್ದಾರೆ.

ಭಾರತಕ್ಕೆ ಮರಳಿದ ನಂತರ, ಮ್ಹಾತ್ರೆ ಕ್ರಿಕೆಟ್ ದಂತಕಥೆ ಸಚಿನ್ ತೆಂಡೂಲ್ಕರ್ ಅವರನ್ನು ಭೇಟಿ ಮಾಡಿದರು. ಈ ವೇಳೆ ಸಚಿನ್ ಉಡುಗೊರೆಯನ್ನು ನೀಡಿ ಗೌರವಿಸಿದರು. ಸಚಿನ್ ತಮ್ಮ ಟೆಸ್ಟ್ ಜೆರ್ಸಿಯನ್ನು ಕೈಬರಹದ ಟಿಪ್ಪಣಿಯೊಂದಿಗೆ ಮ್ಹಾತ್ರೆಗೆ ನೀಡಿದರು. ಸಚಿನ್ ತನ್ನ ಅಂತಿಮ ಸರಣಿಯಲ್ಲಿ ಧರಿಸಿದ್ದ ಜೆರ್ಸಿ ಇದಾಗಿದ್ದು, ಹಿರಿಯ ತಂಡಕ್ಕೆ ಮುನ್ನಡೆಯಲು ಮ್ಹಾತ್ರೆಗೆ ಈ ಜೆರ್ಸಿ ಪ್ರೇರಣೆಯಾಗಲಿ ಎಂದು ಹೇಳಿದರು.

'ಕಷ್ಟಪಟ್ಟು ಕೆಲಸ ಮಾಡುತ್ತಲೇ ಇರಿ, ಗಮನಹರಿಸಿ ಅಭ್ಯಾಸ ಮಾಡುತ್ತಲೇ ಇರಿ. ಏನೇ ಇರಲಿ, ಸಾಕಷ್ಟು ಗೊಂದಲಗಳು ಇರುತ್ತವೆ' ಎಂದು ಸಚಿನ್ ವೀಡಿಯೊದಲ್ಲಿ ಮ್ಹಾತ್ರೆ ಅವರಿಗೆ ತಿಳಿಸಿದ್ದಾರೆ. ಮ್ಹಾತ್ರೆ ಅವರ ಜೆರ್ಸಿಯಲ್ಲಿ ಸಚಿನ್, 'ಪ್ರಿಯ ಆಯುಷ್, ನಿಮ್ಮ ವೃತ್ತಿಜೀವನದಲ್ಲಿ ಎಲ್ಲಾ ಯಶಸ್ಸು ಸಿಗಲಿ ಎಂದು ಹಾರೈಸುತ್ತೇನೆ' ಎಂದು ವಿಶೇಷ ಸಂದೇಶವನ್ನು ಬರೆದಿದ್ದಾರೆ.

'ನಾನು ನಿಮ್ಮನ್ನು ಪರದೆಯ ಮೂಲಕ ನೋಡುತ್ತಾ ಬೆಳೆದೆ. ಇಂದು ನಾನು ನಿಮ್ಮ ಮನೆಯಲ್ಲಿ ನಿಂತಿದ್ದೇನೆ, ನಿಮ್ಮ ಪ್ರಯಾಣದ ಒಂದು ತುಣುಕನ್ನು ನನ್ನ ಕೈಯಲ್ಲಿ ಹಿಡಿದುಕೊಂಡಿದ್ದೇನೆ. ಧನ್ಯವಾದಗಳು ಸರ್, ಈ ಗೌರವಕ್ಕೆ... ನೀವು ವರ್ಷಗಳಿಂದ ಭಾರತೀಯ ಕ್ರಿಕೆಟ್ ಅನ್ನು ಹೊತ್ತಿದ್ದ ಗೌರವದಿಂದ ನಾನು ಇದನ್ನು ಹೊತ್ತುಕೊಳ್ಳುತ್ತೇನೆ' ಎಂದು ಮ್ಹಾತ್ರೆ ಹೇಳಿದ್ದಾರೆ.

ಕಳೆದ ವಾರ ಜಿಂಬಾಬ್ವೆಯಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು ಸೋಲಿಸುವ ಮೂಲಕ ಭಾರತ ಅಂಡರ್-19 ತಂಡವು ವಿಶ್ವಕಪ್ ಪ್ರಶಸ್ತಿಯನ್ನು ಗೆದ್ದುಕೊಂಡಿತ್ತು. ಈ ಗೆಲುವು ಭಾರತಕ್ಕೆ ಟೂರ್ನಿಯಲ್ಲಿ ದಾಖಲೆಯ ಆರನೇ ಪ್ರಶಸ್ತಿಯಾಗಿತ್ತು.

ಯುಎಇ ಬೌಲರ್‌ಗಳನ್ನು ಬೆಂಡೆತ್ತಿದ್ದ ನ್ಯೂಜಿಲೆಂಡ್‌ನ ಟಿಮ್ ಸೀಫರ್ಟ್-ಫಿನ್ ಅಲೆನ್

ಯುಎಇ ವಿರುದ್ಧ ಕಿವೀಸ್‌ಗೆ ಭರ್ಜರಿ ಜಯ

ಚೆನ್ನೈ: ಇಲ್ಲಿನ ಎಂ.ಎ ಚಿದಂಬರಂ ಕ್ರೀಡಾಂಗಣದಲ್ಲಿ ವಿಶ್ವಕಪ್ ಗ್ರೂಪ್ ಡಿ ಪಂದ್ಯದಲ್ಲಿ ಯುಎಇ ವಿರುದ್ಧ ನ್ಯೂಜಿಲೆಂಡ್ 10 ವಿಕೆಟ್‌ಗಳ ಭರ್ಜರಿ ಗೆಲುವು ಸಾಧಿಸಿತು.

ಟಾಸ್ ಗೆದ್ದ ಯುಎಇ ಮೊದಲು ಬ್ಯಾಟಿಂಗ್ ಆಯ್ದುಕೊಂಡು 6 ವಿಕೆಟ್ ನಷ್ಟಕ್ಕೆ 173 ರನ್ ಗಳಿಸಿತು. ಗುರಿ ಬೆನ್ನಟ್ಟಿದ್ದ ನ್ಯೂಜಿಲೆಂಡ್ ಆರಂಭಿಕರಾದ ಟಿಮ್ ಸೀಫರ್ಟ್ ಮತ್ತು ಫಿನ್ ಅಲೆನ್ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನ ನೀಡಿದರು. ಟಿಮ್ ಸೀಫರ್ಟ್ ಮತ್ತು ಫಿನ್ ಅಲೆನ್ ಅದ್ಭುತ ಇನ್ನಿಂಗ್ಸ್ ನೆರವಿನಿಂದ ನ್ಯೂಜಿಲೆಂಡ್ 16ನೇ ಓವರ್‌ನಲ್ಲಿ ಗೆಲುವು ಸಾಧಿಸಿತು. ಟಿ20 ವಿಶ್ವಕಪ್ ಇತಿಹಾಸದಲ್ಲಿ ವಿಕೆಟ್ ಕಳೆದುಕೊಳ್ಳದೆ ಅತಿ ದೊಡ್ಡ ರನ್ ಚೇಸ್ ಇದಾಗಿದೆ.

ಮೊದಲು ಬ್ಯಾಟಿಂಗ್ ಮಾಡಿದ ಯುಎಇ ಕಳಪೆ ಆರಂಭವನ್ನು ಪಡೆಯಿತು. ಆರ್ಯನ್ಶ್ ಶರ್ಮಾ 12 ರನ್ ಗಳಿಸಿ ವಿಕೆಟ್ ಕಳೆದುಕೊಂಡರು. ನಂತರ ನಾಯಕ ಮೊಹಮ್ಮದ್ ವಾಸಿಮ್ ಮತ್ತು ಆಲಿಶನ್ ಸರಾಫು ಎರಡನೇ ವಿಕೆಟ್‌ಗೆ 107 ರನ್‌ಗಳ ಭರ್ಜರಿ ಜತೆಯಾಟವನ್ನು ಆಡುವ ಮೂಲಕ ಇನ್ನಿಂಗ್ಸ್ ಅನ್ನು ಸ್ಥಿರಗೊಳಿಸಿದರು. ಸರಾಫು 47 ಎಸೆತಗಳಲ್ಲಿ ಎರಡು ಸಿಕ್ಸರ್‌ಗಳು ಮತ್ತು ಐದು ಬೌಂಡರಿಗಳನ್ನು ಒಳಗೊಂಡಂತೆ 55 ರನ್ ಗಳಿಸಿ ಔಟಾದರು.

ನಾಯಕನ ಅರ್ಧಶತಕ: ನಾಯಕ ವಾಸಿಮ್ ಮತ್ತು ಮಯಾಂಕ್ ಕುಮಾರ್ 4ನೇ ವಿಕೆಟ್‌ಗೆ 40 ರನ್‌ಗಳ ಜತೆಯಾಟವನ್ನು ಹಂಚಿಕೊಂಡರು. ಮಯಾಂಕ್ 12 ಎಸೆತಗಳಲ್ಲಿ 21 ರನ್ ಗಳಿಸಿ ಒಂದು ಸಿಕ್ಸರ್ ಮತ್ತು ಎರಡು ಬೌಂಡರಿಗಳನ್ನು ಬಾರಿಸಿದರು. ವಾಸಿಮ್ ಕೊನೆಯವರೆಗೂ ಅಜೇಯರಾಗಿ ಉಳಿದರು. ವಾಸಿಮ್ 45 ಎಸೆತಗಳಲ್ಲಿ ಮೂರು ಸಿಕ್ಸರ್ ಮತ್ತು ನಾಲ್ಕು ಬೌಂಡರಿಗಳನ್ನು ಬಾರಿಸಿದರು. ಹರ್ಷಿತ್ ಕೌಶಿಕ್ ಎರಡು ಮತ್ತು ಶೋಯೆಬ್ ಖಾನ್ ಏಳು ರನ್ ಗಳಿಸಿ ಔಟಾದರು.

ದಾಖಲೆ ಜೊತೆಯಾಟ: ಗುರಿಯನ್ನು ಬೆನ್ನಟ್ಟಲು ಬಂದ ನ್ಯೂಜಿಲೆಂಡ್ ತಂಡ ಪವರ್ ಪ್ಲೇಯಲ್ಲಿಯೇ ಯುಎಇಯನ್ನು ಪಂದ್ಯದಿಂದ ಹೊರದಬ್ಬಿತು. ಫಿನ್ ಅಲೆನ್-ಟಿಮ್ ಸೀಫರ್ಟ್ ಜೋಡಿ ಮೊದಲ 6 ಓವರ್‌ಗಳಲ್ಲಿ 78 ರನ್ ಗಳಿಸಿತು. ಇದಾದ ನಂತರವೂ ಈ ಜೋಡಿ ಆರ್ಭಟ ನಿಲ್ಲಿಸಲಿಲ್ಲ. ಸ್ಫೋಟಕ ಬ್ಯಾಟಿಂಗ್ ಮಾಡಿದ ಈ ಜೋಡಿ ಕೇವಲ 15 ಓವರ್‌ಗಳಲ್ಲಿ ಗುರಿಯನ್ನು ತಲುಪಿತು. ಟಿಮ್ ಸೀಫರ್ಟ್ ಕೊನೆಯವರೆಗೂ ಅಜೇಯರಾಗಿ ಉಳಿದು 42 ಎಸೆತಗಳಲ್ಲಿ 89 ರನ್ ಗಳಿಸಿದರೆ, ಫಿನ್ ಅಲೆನ್ ಕೂಡ 50 ಎಸೆತಗಳಲ್ಲಿ 5 ಬೌಂಡರಿ ಮತ್ತು 5 ಸಿಕ್ಸರ್‌ಗಳ ಸಹಾಯದಿಂದ 84 ರನ್ ಗಳಿಸಿ ಕಿವೀಸ್ ತಂಡಕ್ಕೆ ಸುಲಭ ಗೆಲುವು ತಂದುಕೊಟ್ಟರು.

ಗುರುವಾರ ನಡೆಯಲಿರುವ ನಮೀಬಿಯಾ ವಿರುದ್ಧದ ಭಾರತದ ಪಂದ್ಯ | ತಂಡದಲ್ಲಿ ಬದಲಾವಣೆ ಖಚಿತ

ಭಾರತದ ಮೂವರಿಗೆ ವಿಶ್ರಾಂತಿ ಸಾಧ್ಯತೆ

ದೆಹಲಿ: ಟಿ20 ವಿಶ್ವಕಪ್ ಟೂರ್ನಿಯಲ್ಲಿ ಅಮೆರಿಕ ವಿರುದ್ಧ ಗೆಲುವು ಸಾಧಿಸುವ ಮೂಲಕ ತನ್ನ ಅಭಿಯಾನ ಆರಂಭಿಸಿರುವ ಭಾರತವು ಇದೀಗ ಗುರುವಾರ ದೆಹಲಿಯ ಅರುಣ್ ಜೇಟ್ಲಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿರುವ ನಮೀಬಿಯಾ ವಿರುದ್ಧದ ಎರಡನೇ ಪಂದ್ಯಕ್ಕೆ ಸಜ್ಜಾಗುತ್ತಿದೆ. ಮೊದಲ ಪಂದ್ಯದಲ್ಲಿ ಭಾರತ ತಂಡ 3 ಬದಲಾವಣೆಗಳೊಂದಿಗೆ ಕಣಕ್ಕಿಳಿದಿತ್ತು. ವಾಷಿಂಗ್ಟನ್ ಸುಂದರ್, ಜಸ್‌ಪ್ರೀತ್ ಬುಮ್ರಾ ಹಾಗೂ ಸಂಜು ಸ್ಯಾಮ್ಸನ್ ಆಡುವ ಹನ್ನೊಂದರ ಬಳಗದಿಂದ ಹೊರಗುಳಿದಿದ್ದರು. ಎರಡನೇ ಪಂದ್ಯದಲ್ಲೂ ಭಾರತ ತಂಡದಲ್ಲಿ ಇನ್ನು ಕೆಲ ಬದಲಾವಣೆಗಳಾಗುವ ಸಾಧ್ಯತೆಯಿದೆ.

ನಮೀಬಿಯಾ ವಿರುದ್ಧದ ಪಂದ್ಯಕ್ಕೆ ವಾಷಿಂಗ್ಟನ್ ಸುಂದರ್ ಅವರು ತಂಡಕ್ಕೆ ಮರುಳುವುದಾಗಿ ನಾಯಕ ಸೂರ್ಯಕುಮಾರ್ ಯಾದವ್ ಖಚಿತಪಡಿಸಿದ್ದಾರೆ. ಸುಂದರ್, ತಂಡಕ್ಕೆ ಕಮ್‌ಬ್ಯಾಕ್ ಮಾಡಿದರೆ ಆ ಸ್ಥಾನದ ಬದಲಾವಣೆಯೂ ಖಚಿತ. ಇದರ ನಡುವೆ ನಮೀಬಿಯಾ ವಿರುದ್ಧದ ಪಂದ್ಯದಿಂದ ವೇಗಿ ಅರ್ಷದೀಪ್ ಸಿಂಗ್, ಅಕ್ಷರ್ ಪಟೇಲ್ ಮತ್ತು ವರುಣ್ ಚಕ್ರವರ್ತಿಗೆ ವಿಶ್ರಾಂತಿ ನೀಡಬಹುದು ಎನ್ನಲಾಗುತ್ತಿದೆ.

ಅರ್ಷದೀಪ್ ಸಿಂಗ್: ಟೀಮ್ ಇಂಡಿಯಾ ಪರಿಣಾಮಕಾರಿ ಎಡಗೈ ವೇಗಿ ಅರ್ಷದೀಪ್ ಸಿಂಗ್ ಅವರ ನಿರೀಕ್ಷಿತ ಪ್ರದರ್ಶನದ ಹೊರತಾಗಿಯೂ, ಅವರು ತಂಡದಿಂದ ಹೊರಗೂಳಿಯುವ ಸಾಧ್ಯತೆಯಿದೆ. ಅವರು ಯುಎಇ ವಿರುದ್ಧದ ಮೊದಲ ಪಂದ್ಯದಲ್ಲಿ ಎರಡು ವಿಕೆಟ್ ಪಡೆದು ಗಮನ ಸೆಳೆದಿದ್ದರು. ಆದರೆ ಅನಾರೋಗ್ಯದ ಕಾರಣಕ್ಕೆ ಅಮೆರಿಕ ವಿರುದ್ಧದ ಪಂದ್ಯದಿಂದ ವಿಶ್ರಾಂತಿ ಪಡೆದಿದ್ದ ಟೀಮ್ ಇಂಡಿಯಾ ಪ್ರಮುಖ ವೇಗಿ ಜಸ್ಪ್ರೀತ್ ಬುಮ್ರಾ ತಂಡಕ್ಕೆ ಮರಳಲು ಸಜ್ಜಾಗಿರುವುದರಿಂದ ಆಯ್ಕೆ ಸಮಿತಿ ಈ ನಿರ್ಧಾರ ಮಾಡಬಹುದು ಎನ್ನಲಾಗಿದೆ.

ಅಕ್ಷರ್ ಪಟೇಲ್: ಟಿ20 ವಿಶ್ವಕಪ್ ಪ್ರಾರಂಭವಾಗುವ ಕೆಲವೇ ವಾರಗಳ ಮೊದಲು ನಾಗ್ಪುರದಲ್ಲಿ ನಡೆದಿದ್ದ ನ್ಯೂಜಿಲೆಂಡ್ ವಿರುದ್ಧದ ಮೊದಲ ಟಿ20 ಪಂದ್ಯದಲ್ಲಿ ಅಕ್ಷರ್ ಪಟೇಲ್ ಎಡಗೈ ತೋರುಬೆರಳಿನ ಗಾಯಕ್ಕೆ ತುತ್ತಾಗಿದ್ದರು. ಬಳಿಕ ಒಂದು ಪಂದ್ಯದಿಂದ ಹೊರಗುಳಿದು ಸರಣಿಯ ಅಂತಿಮ ಹಾಗೂ ಮೂರನೇ ಪಂದ್ಯಕ್ಕೆ ತಂಡಕ್ಕೆ ಮರಳಿ ಮೂರು ವಿಕೆಟ್ ಪಡೆದಿದ್ದರು. ಗಾಯದ ನಡುವೆಯೂ ವಾಷಿಂಗ್ಟನ್ ಸುಂದರ್ ಅವರ ಅಲಭ್ಯತೆಯ ಕಾರಣ ಅಕ್ಷರ್ ಪಟೇಲ್ ಯುಎಇ ವಿರುದ್ಧದ ಮೊದಲ ಪಂದ್ಯದಲ್ಲಿ ಕಣಕ್ಕಿಳಿದಿದ್ದರು. ಇದೀಗ ಸುಂದರ್ ಅವರು ಚೇತರಿಸಿಕೊಂಡು ತಂಡಕ್ಕೆ ಮರಳುವುದರಿಂದ ಅಕ್ಷರ್‌ಗೆ ವಿಶ್ರಾಂತಿ ಸಿಗಬಹುದು.

ಅಭಿಷೇಕ್ ಶರ್ಮಾಗೆ ಅನಾರೋಗ್ಯ?

ಯುಎಇ ವಿರುದ್ಧದ ಮೊದಲ ಪಂದ್ಯದಲ್ಲಿ ಶೂನ್ಯಕ್ಕೆ ಔಟಾಗಿದ್ದ ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾ ಅನಾರೋಗ್ಯದ ಕಾರಣ ಆ ಪಂದ್ಯದಲ್ಲಿ ಫೀಲ್ಡಿಂಗ್ ಮಾಡಿರಲಿಲ್ಲ, ಬದಲಾಗಿ ಸಂಜು ಸ್ಯಾಮ್ಸನ್ ಅವರು ಮೈದಾನದಲ್ಲಿ ಫೀಲ್ಡಿಂಗ್ ವೇಳೆ ಕಾಣಿಸಿಕೊಂಡಿದ್ದರು. ಅಭಿಷೇಕ್ ಅನಾರೋಗ್ಯದ ಬಗ್ಗೆ ಯಾವುದೇ ಹೆಚ್ಚಿನ ಮಾಹಿತಿ ಹೊರಬಿದ್ದಿಲ್ಲ. ಒಂದು ವೇಳೆ ಅಭಿಷೇಕ್ ಅನಾರೋಗ್ಯದಿಂದ ಚೇತರಿಸಿಕೊಳ್ಳದಿದ್ದಲ್ಲಿ ಅವರ ಸ್ಥಾನದಲ್ಲಿ ನಮೀಬಿಯಾ ವಿರುದ್ಧ ಸಂಜು ಸ್ಯಾಮ್ಸನ್ ಕಣಕ್ಕಿಳಿಯುವ ಸಾಧ್ಯತೆ ಇದೆ.

ವರುಣ್ ಚಕ್ರವರ್ತಿ: ಕಳೆದ ಪಂದ್ಯದಲ್ಲಿ ಒಂದು ವಿಕೆಟ್ ಪಡೆದಿದ್ದ ಸ್ಪಿನ್ನರ್ ವರುಣ್ ಚಕ್ರವರ್ತಿಯವರು ತಂಡದಲ್ಲಿ ಎಕ್ಸ್ ಫ್ಯಾಕ್ಟರ್ ಆಗಿ ಉಳಿದಿದ್ದಾರೆ, ಈ ಕಾರಣದಿಂದಾಗಿ ಅವರು ಹೊರಗುಳಿದು ಕುಲ್‌ದೀಪ್ ಯಾದವ್ ಅವರಿಗೆ ನಮೀಬಿಯಾ ವಿರುದ್ಧದ ಪಂದ್ಯದಲ್ಲಿ ಅವಕಾಶ ನೀಡಬಹುದು.